BIBLE STORIES.

ದೇವವಾಕ್ಯದ್ವಿಪಂಚಾಶತಿ.

2.

NEW TESTAMENT.

ನವನಿರ್ಧಾರ.

ಮಂಗಳೂರಿನ ಮಿಶ್ಶನ್ ಛಾಪಖಾನೆ.

4th Edition.] ೧೮೫೭. [4000 *Copies.*

ಹೊಸ ಒಡಂಬಡಿಕೆಯ ಕಥೆಗಳು.

---

೧. ಜಕರೀಯನಿಗೂ ಮರೀಯಳಿಗೂ ಆದ ಶುಭವಾರ್ತೆಗಳು.

ಯೋಹಾನನ ಜನನ.

(ಲೂಕ್. ೧, ೫–೮೦.)

ಯೆಹೂದದ ಅರಸನಾದ ಹೆರೋದನ ದಿನಗಳಲ್ಲಿ ಜಕರೀಯನೆಂಬ ಒಬ್ಬ ಯಾಜಕನು ಇದ್ದನು. ಅವನ ಹೆಂಡತಿಯ ಹೆಸರು ಎಲೀಸಬೇಥ್. ಅವರಿಬ್ಬರೂ ಕರ್ತನ ಯೆಲ್ಲಾ ಕಟ್ಟಳೆಗಳಲ್ಲಿ ತಪ್ಪಿಲ್ಲದವರಾಗಿ ನಡದು ಕೊಂಡರು. ಇದಲ್ಲದೆ ಅವರಿಗೆ ಮಕ್ಕಳು ಇದ್ದಿಲ್ಲ; ಮತ್ತು ಅವರಿಬ್ಬರೂ ದಿನ ಗತಿಸಿದವರಾಗಿದ್ದರು. ಹೀಗಿರಲಾಗಿ ಜಕರೀಯನು ಯೆರೂಸಲೇಮಿನ ದೇವಾಲಯದಲ್ಲಿ ಯಾಜಕಸೇವೆ ಮಾಡುತ್ತಿರುವಾಗ, ಕರ್ತನ ಮಂದಿರದಲ್ಲಿ ಪ್ರವೇಶಿಸಿ, ಧೂಪ ಅರ್ಪಿಸುತ್ತಿದ್ದನು. ಮತ್ತು ಜನರ ಸಮೂಹವೆಲ್ಲಾ ಧೂಪಾರ್ಪಣೆಯ ಹೊತ್ತಿನಲ್ಲಿ ಹೊರಗೆ ಪ್ರಾರ್ಥನೆ ಮಾಡುತ್ತಿತ್ತು. ಆಗ ಕರ್ತನ ದೂತನು ಧೂಪಪೀಠದ ಬಲಪಾರ್ಶ್ವದಲ್ಲಿ ನಿಂತು, ಜಕರೀಯನಿಗೆ ಕಾಣಿಸಿ ಕೊಂಡನು. ಜಕರೀಯನು ಅವನನ್ನು ನೋಡಿ, ಕಳವಳ ಪಟ್ಟನು. ಆಗ ದೂತನು ಅವನಿಗೆ ಹೇಳಿದ್ದು,—ಜಕರೀಯನೇ, ಭಯ ಪಡ ಬೇಡ! ಯಾಕಂದರೆ ದೇವರು

ನಿನ್ನ ವಿಜ್ಞಾಪನೆಯನ್ನು ಕೇಳಿದ್ದಾನೆ, ಮತ್ತು ನಿನ್ನ ಹೆಂಡತಿಯಾದ ಎಲೀಸಬೇಥಳು ನಿನಗೆ ಮಗನನ್ನು ಹೆರುವಳು. ಅವನಿಗೆ ಯೋಹಾನನೆಂಬ ಹೆಸರನ್ನು ಇಡಬೇಕು. ಅವನು ಇಸ್ರಾಯೇಲನ ಮಕ್ಕಳಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು; ಕರ್ತನಿಗೆ ಆಯತ್ತವಾಗಿರುವ ಪ್ರಜೆಯನ್ನು ಸಿದ್ಧ ಮಾಡುವದಕ್ಕೆ ಎಲೀಯನ ಆತ್ಮದಲ್ಲಿಯೂ ಬಲದಲ್ಲಿಯೂ ಆತನ ಮುಂದೆ ಹೋಗುವನು. ಜಕರೀಯನು ದೂತನಿಗೆ—ನಾನು ಯಾತರಿಂದ ಇದನ್ನು ತಿಳುಕೊಳ್ಳಲಿ? ಅಂದನು. ದೂತನು ಅವನಿಗೆ ಹೇಳಿದ್ದು,—ನಾನು ದೇವರ ಮುಂದೆ ನಿಂತುಕೊಳ್ಳುವ ಗಬ್ರಿಯೇಲನು; ಇವುಗಳನ್ನು ನಿನಗೆ ತಿಳಿಸುವ ಹಾಗೆ ದೇವರು ನನ್ನನ್ನು ಕಳುಹಿಸಿದ್ದಾನೆ; ಮತ್ತು ನನ್ನ ವಾಕ್ಯಗಳನ್ನು ನೀನು ನಂಬದೆ ಹೋದದರಿಂದ, ಇವು ಆಗುವ ದಿನದ ವರೆಗೂ ನೀನು ಮೌನವಾಗಿದ್ದು ಮಾತಾಡಲಾರದೆ ಇರುವಿ.—ಜಕರೀಯನು ಹೊರಗೆ ಬಂದಾಗ, ಜನರ ಸಂಗಡ ಮಾತಾಡಲಾರದೆ ಇದ್ದು, ಅವರಿಗೆ ಸೌಜ್ಞೆ ಮಾಡಿ, ಅವನು ಮೂಕನಾಗಿಯೇ ಇದ್ದನು. ಅವನ ಸೇವೆಯ ದಿವಸಗಳು ಪೂರ್ಣವಾದ ಮೇಲೆ, ತನ್ನ ಮನೆಗೆ ಹೋದನು.



ಆರನೇ ತಿಂಗಳಲ್ಲಿ ಗಬ್ರಿಯೇಲನೆಂಬ ದೂತನು ಗಲಿಲಾಯದ ನಜರೇತೆಂಬ ಪಟ್ಣಕ್ಕೆ, ವೊಬ್ಬ ಕನ್ನಿಕೆಯ ಬಳಿಗೆ ದೇವರಿಂದ ಕಳುಹಿಸಲ್ಪಟ್ಟನು. ಆ ಕನ್ನಿಕೆಯ ಹೆಸರು ಮರೀಯಳು. ದೂತನು ಅವಳ ಬಳಿಗೆ ಪ್ರವೇಶಿಸಿ,—

ಕೃಪೆ ಹೊಂದಿದವಳೇ, ಶುಭವಾಗಲಿ! ಕರ್ತನು ನಿನ್ನ ಸಂಗಡ ಇದ್ದಾನೆ, ಅಂದನು. ಮರೀಯಳು ದೂತನನ್ನು ನೋಡಿ, ಅವನ ಮಾತಿಗೆ ತಳವಳ ಪಟ್ಟು, —ಇದು ಯೆಂಥಾ ವಂದನೆ? ಯೆಂದು ಆಲೋಚನೆ ಮಾಡಿಕೊಂಡಿರುವಾಗ, ದೂತನು ಅವಳಿಗೆ ಹೇಳಿದ್ದೇನಂದರೆ, —ಮರೀಯಳೇ, ಭಯ ಪಡಬೇಡ! ದೇವರ ಬಳಿಯಲ್ಲಿ ಕೃಪೆ ಹೊಂದಿದ್ದೀ; ಇಗೋ, ಮಗನನ್ನು ಹೆರುವಿ; ಆತನಿಗೆ ಯೇಸು ಯೆಂಬ ಹೆಸರಿಡಬೇಕು. ಆತನು ದೊಡ್ಡವನಾಗಿದ್ದು, ಮಹೋನ್ನತನ ಮಗನೆಂದು ಕರಿಯಲ್ಪಡುವನು; ಮತ್ತು ಕರ್ತನಾದ ದೇವರು ಆತನಿಗೆ ದಾವೀದನ ಸಿಂಹಾಸನವನ್ನು ಕೊಡುವನು; ಆತನು ಯಾಕೋಬನ ಮನೆಯನ್ನು ಯೆಂದೆಂದಿಗೂ ಆಳುವನು; ಮತ್ತು ಆತನ ರಾಜ್ಯಕ್ಕೆ ಅಂತ್ಯವು ಇರದು. ಮರೀಯಳು ದೂತನಿಗೆ—ಇದು ಹ್ಯಾಗೆ? ಯೆನಲು, ದೂತನು ಅವಳಿಗೆ ಹೇಳಿದ್ದೇನಂದರೆ, —ಪರಿಶುದ್ಧಾತ್ಮವು ನಿನ್ನ ಮೇಲೆ ಬರುವದು, ಮತ್ತು ಮಹೋನ್ನತನ ಬಲವು ನಿನ್ನ ಮೇಲೆ ನೆರಳಾಗುವದು; ಆದದರಿಂದ ಹುಟ್ಟುವ ಪರಿಶುದ್ಧವಾದದ್ದು ದೇವರ ಮಗನೆಂದು ಕರಿಯಲ್ಪಡುವದು. ಮತ್ತು ಇಗೋ ನಿನ್ನ ನೆಂಟಳಾದ ಎಲೀಸಬೇತಳು ಸಹಾ ತನ್ನ ಮುಪ್ಪಿನಲ್ಲಿ ಮಗನನ್ನು ಹೆರುವಳು. ಯಾಕಂದರೆ ದೇವರ ಬಳಿಯಲ್ಲಿ ಯಾವ ಕಾರ್ಯವಾದರೂ ಅಸಾಧ್ಯವಲ್ಲಾ. ಅದಕ್ಕೆ ಮರೀಯಳು—ಇಗೋ, ನಾನು ಕರ್ತನ ದಾಸಿ; ನಿನ್ನ ಮಾತಿನ ಮೇರೆಗೆ ನನಗಾಗಲಿ! ಅಂದಳು. ಆಗ ದೂತನು ಅವಳನ್ನು ಬಿಟ್ಟು ಹೋದನು.

ಆ ದಿವಸಗಳಲ್ಲಿ ಮರೀಯಳು ಯೆದ್ದು, ಬೆಟ್ಟದ ಸೀಮೆಗೆ ಯೆಹೂದದ ಪಟ್ಟಣಕ್ಕೆ ಬೇಗ ಹೋಗಿ, ಜಕರೀಯನ ಮನೆಯಲ್ಲಿ ಪ್ರವೇಶಿಸಿ, ಎಲೀಸಬೇತಳನ್ನು ವಂದಿಸಿದಳು. ಎಲೀಸಬೇತಳು ಮರೀಯಳ ವಂದನೆ ಕೇಳಿದಾಗ, ಪರಿಶುದ್ಧಾತ್ಮದಿಂದ ತುಂಬಿದವಳಾಗಿ, ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, —ನೀನು ಸ್ತ್ರೀಯರಲ್ಲಿ ಆಶೀರ್ವದಿಸಲ್ಪಟ್ಟವಳು; ನನ್ನ ಕರ್ತನ ತಾಯಿಯು ನನ್ನ ಬಳಿಗೆ ಬಂದದ್ದು ನನಗೆ ಹ್ಯಾಗೆ ಉಂಟಾಯಿತು? ಆಗ ಮರೀಯಳು ಹೇಳಿದ್ದೇನಂದರೆ, —ನನ್ನ ಪ್ರಾಣವು ಕರ್ತನನ್ನು ಮಹಿಮೆ ಪಡಿಸು

ತ್ತದೆ; ನನ್ನ ಆತ್ಮವು ನನ್ನ ರಕ್ಷಕನಾದ ದೇವರಲ್ಲಿ ಆನಂದ ಗೊಂಡದೆ. ಯಾಕಂದರೆ ತನ್ನ ದಾಸಿಯ ದೀನತ್ವದ ಮೇಲೆ ದೃಷ್ಟಿ ಇಟ್ಟಿದ್ದಾನೆ; ಇದರ ನಿಮಿತ್ತವಾಗಿ, ಇಂದಿನಿಂದ ಸಕಲ ತಲಾಂತರಗಳು ನನ್ನನ್ನು ಭಾಗ್ಯವಂತಳೆಂದು ಹೇಳುವವು; ಯಾಕಂದರೆ ಬಲವುಳ್ಳವನು ನನಗೆ ಮಹಾ ಕಾರ್ಯಗಳನ್ನು ಮಾಡಿದ್ದಾನೆ; ಆತನ ಹೆಸರು ಪರಿಶುದ್ಧವಾದದ್ದು.—ಆ ಮೇಲೆ ಮರಿಯಳು ಹೆಚ್ಚುಕಡಿಮೆ ಮೂರು ತಿಂಗಳು ಎಲೀಸಬೇಥಳ ಸಂಗಡ ಇದ್ದು, ನಜರೇತಿಗೆ ತಿರುಗಿ ಹೋದಳು.

ಇದಲ್ಲದೆ ಎಲೀಸಬೇಥಳಿಗೆ ಹೆರುವ ಕಾಲ ಪೂರ್ಣವಾದಾಗ, ಮಗನನ್ನು ಹೆತ್ತಳು. ಆಗ ನೆರಮನೆಯವರೂ, ಅವಳ ನೆಂಟರೂ, ಕರ್ತನು ಅವಳಲ್ಲಿ ತನ್ನ ಕರುಣೆಯನ್ನು ಅಧಿಕ ಮಾಡಿದ್ದಾನೆಂದು ಕೇಳಿ, ಅವಳ ಸಂಗಡ ಸಂತೋಷಿಸಿದರು. ಯೆಂಟನೇ ದಿವಸದಲ್ಲಿ ಅವರು ಕೂಸಿಗೆ ಸುನ್ನತಿ ಮಾಡುವದಕ್ಕೆ ಬಂದು, ಅದಕ್ಕೆ ತಂದೆಯ ಹೆಸರಾಗಿರುವ ಜಕರೀಯನೆಂಬ ಹೆಸರಿಟ್ಟರು. ಆಗಲವನ ತಾಯಿಯು—ಹಾಗಲ್ಲ, ಯೋಹಾನನೆಂಬ ಹೆಸರಾಗಬೇಕು! ಅಂದಾಗ, ಅವರು ಅವಳಿಗೆ—ನಿನ್ನ ನೆಂಟರಲ್ಲಿ ಈ ಹೆಸರಿನಿಂದ ಕರಿಯಲ್ಪಟ್ಟವನು ವಾಬ್ಬನೂ ಇಲ್ಲ, ಯೆಂದು ಹೇಳಿದರು. ಇದಲ್ಲದೆ ಅವನಿಗೆ ಯಾವ ಹೆಸರಿಡ ಬೇಕೆಂದು, ತಂದೆಗೆ ಸೌಜ್ಞೆ ಮಾಡಿದರು. ಆಗಲವನು ಹಲಿಗೆ ಕೇಳಿಕೊಂಡು,—ಅವನ ಹೆಸರು ಯೋಹಾನನೇ! ಯೆಂದು ಬರದನು. ಅದಕ್ಕೆ ಯೆಲ್ಲರೂ ಆಶ್ಚರ್ಯ ಪಟ್ಟರು. ಸಂಗಡಲೇ ಜಕರೀಯನ ನಾಲಿಗೆ ಸಡ್ಲಾಗಿ, ಅವನು ದೇವರನ್ನು ಸ್ತುತಿಸಿ ಮಾತಾಡಿದನು.

ಮತ್ತು ಜಕರೀಯನು ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಪ್ರವಾದಿಸಿ ಹೇಳಿದ್ದೇನಂದರೆ,—ಇಸ್ರಾಯೇಲ ದೇವರಾದ ಕರ್ತನು ಸ್ತುತಿಸ ತಕ್ಕವನು! ಯಾಕಂದರೆ ಆತನು ತನ್ನ ಜನಾಂಗವನ್ನು ದರ್ಶಿಸಿ, ಅದಕ್ಕೆ ವಿಮೋಚನೆ ಮಾಡಿದ್ದಾನೆ. ಲೋಕಾದಿಯಿಂದಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ತಾನು ಮಾತಾಡಿದ ಹಾಗೆ, ನಮ್ಮ ಶತ್ರುಗಳಿಂದ ನಮ್ಮನ್ನು ರಕ್ಷಿಸಿ, ನಮ್ಮ ತಂದೆಯಾದ ಅಬ್ರಹಾಮನಿಗೆ ಇಟ್ಟುಕೊಂಡ ಆಣೆಯನ್ನು ಜ್ಞಾಪಕ ಮಾ

ದಿಕೊಂಡು, ನಾವು ನಿರ್ಭಯವಾಗಿ ಪರಿಶುದ್ಧತ್ವದಲ್ಲಿಯೂ ನೀತಿಯಲ್ಲಿಯೂ ನಮ್ಮ ಜೀವದ ದಿವಸಗಳೆಲ್ಲಾ ಆತನನ್ನು ಸೇವಿಸುವ ಹಾಗೆ ನಮಗೆ ಕೊಟ್ಟಿದ್ದಾನೆ.

ಇದಲ್ಲದೆ ಕೂಸು ಬೆಳೆದು, ಆತ್ಮದಲ್ಲಿ ಬಲಗೊಂಡು, ಅದು ಇಸ್ರಾಯೇಲಿಗೆ ತೋರಿ ಬರುವ ದಿವಸದ ಪರ್ಯಂತರ ಅರಣ್ಯದಲ್ಲಿ ಇತ್ತು.

---

೨. ಯೇಸುವಿನ ಜನನ.

(ಮತ್ತ. ೧, ೧೮–೨೫. ಲೂಕ. ೨, ೧–೨೦.)

ಯೇಸು ಕ್ರಿಸ್ತನ ಜನನ ಹೀಗಾಯಿತು, — ಆತನ ತಾಯಿಯಾದ ಮರಿಯಳು ಯೋಸೇಫನಿಗೆ ನೇಮಕ ಮಾಡಲ್ಪಟ್ಟಿರಲಾಗಿ, ಅವರು ಕೂಡುವದಕ್ಕಿಂತ ಮುಂಚೆ, ಇಗೋ, ಕರ್ತನ ದೂತನು ಸ್ವಪ್ನದಲ್ಲಿ ಅವನಿಗೆ ಪ್ರತ್ಯಕ್ಷವಾಗಿ ಹೇಳಿದ್ದೇನಂದರೆ, — ದಾವೀದನ ಮಗನಾದ ಯೋಸೇಫನೇ, ನಿನ್ನ ಹೆಂಡತಿಯಾದ ಮರಿಯಳನ್ನು ಅಂಗೀಕರಿಸುವದಕ್ಕೆ ಭಯ ಪಡ ಬೇಡ; ಯಾಕಂದರೆ ಅವಳು ಮಗನನ್ನು ಹೆರುವಳು; ನೀನು ಆತನ ಹೆಸರನ್ನು ಯೇಸುವೆಂದು ಕರಿಯ ಬೇಕು; ಯಾಕಂದರೆ ಆತನು ತನ್ನ ಜನಾಂಗವನ್ನು ಅವರ ಪಾಪಗಳೊಳಗಿಂದ ರಕ್ಷಿಸುವನು.

ಆ ದಿವಸಗಳಲ್ಲಿ ಆದದ್ದೇನಂದರೆ, — ಲೋಕವೆಲ್ಲಾ ಲೆಖ್ಖ ಬರಿಸಿಕೊಳ್ಳಬೇಕೆಂದು, ಕೈಸರನಾದ ಔಗುಸ್ತನಿಂದ ಆಜ್ಞೆ ಹೊರಟಿತು. ಲೆಖ್ಖ ಬರಿಸಿಕೊಳ್ಳುವದಕ್ಕೆ ಯೆಲ್ಲರೂ ತಮ್ಮ ತಮ್ಮ ಪಟ್ಣಗಳಿಗೆ ಹೋದರು. ಆಗ ಯೋಸೇಫನು ಸಹಾ, ದಾವೀದನ ಮನೆಯವನು ಆಗಿದ್ದದರಿಂದ, ಗಲಿಲಾಯದಿಂದ, ನಜರೇತ್ ಪಟ್ಣದಿಂದ, ಯೆಹೂದಕ್ಕೆ, ಬೆಥ್ಲೆಹೇಮೆಂಬ ದಾವೀದನ ಪಟ್ಣಕ್ಕೆ, ತನಗೆ ನೇಮಕ ಮಾಡಲ್ಪಟ್ಟ ಹೆಂಡತಿಯಾದ ಮರಿಯಳ ಸಂಗಡ, ಬರಿಸಿಕೊಳ್ಳುವದಕ್ಕೆ ಯೇರಿ ಹೋದನು. ಅವರು ಅಲ್ಲಿ ಇದ್ದಾಗ, ಅವಳು

ತನ್ನ ಚೊಚ್ಚಲ ಮಗನನ್ನು ಹೆತ್ತು, ಅವನನ್ನು ಬಟ್ಟೆಯಲ್ಲಿ ಸುತ್ತಿ, ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ, ಗೋದಲಿಯಲ್ಲಿ ಮಲಗಿಸಿದಳು. ಇದಲ್ಲದೆ ಅದೇ ಸೀಮೆಯಲ್ಲಿ ಕುರುಬರು, ರಾತ್ರಿಯಲ್ಲಿ ತಮ್ಮ ಮಂದೆಯನ್ನು ಕಾಯುತ್ತಾ, ಹೊಲದಲ್ಲಿ ಇದ್ದರು. ಆಗ ಇಗೋ, ಕರ್ತನ ದೂತನು ಅವರ ಬಳಿಯಲ್ಲಿ ನಿಂತನು; ಕರ್ತನ ಮಹಿಮೆಯು ಅವರ ಸುತ್ತ ಪ್ರಕಾಶಿಸಿತು; ಮತ್ತು ಅ



ವರು ಭಯ ಪಟ್ಟರು. ಆಗ ದೂತನು ಅವರಿಗೆ ಹೇಳಿದ್ದೇನಂದರೆ,—ಭಯ ಪಡ ಬೇಡಿರಿ! ಯಾಕಂದರೆ ಇಗೋ, ಜನರಿಗೆಲ್ಲಾ ಉಂಟಾಗುವ ಮಹಾ ಸಂತೋಷವನ್ನು ನಿಮಗೆ ಪ್ರಸಂಗಿಸುತ್ತೇನೆ; ಯೇನಂದರೆ ಈ ಹೊತ್ತು ಕರ್ತನಾದ ಕ್ರಿಸ್ತನೆಂಬ ರಕ್ಷಕನು ದಾವೀದನ ಪಟ್ಟಣದಲ್ಲಿ ನಿಮಗೆ ಹುಟ್ಟಿದ್ದಾನೆ. ಮತ್ತು ಇದೇ ನಿಮಗೆ ಗುರ್ತು,—ಕೂಸು ಬಟ್ಟೆಯಲ್ಲಿ ಸುತ್ತಲ್ಪಟ್ಟು, ಗೋದಲಿಯಲ್ಲಿ ಮಲಗಿರುವದನ್ನು ಕಂಡುಕೊಳ್ಳುವಿರಿ. ಕೂಡಲೇ ಪರಲೋಕಸೈನ್ಯದ ಸಮೂಹವು ದೂತನ ಸಂಗಡ ಇತ್ತು; ಅವರು ದೇವರನ್ನು ಹೊಗಳಿ,—ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯು! ಭೂಮಿಯ ಮೇಲೆ ಸಮಾಧಾನವು! ಮನುಷ್ಯರಲ್ಲಿ ದಯವು! ಅಂದರು.

ದೂತರು ಅವರನ್ನು ಬಿಟ್ಟು ಪರಲೋಕಕ್ಕೆ ಹೋದ ಮೇಲೆ, ಕುರುಬರಾದ ಜನರು ವೊಬ್ಬರಿಗೊಬ್ಬರು—ನಾವು ಬೆತ್ಲೆಹೇಮಿಗೆ ಹೋಗಿ, ಕರ್ತನು ನಮಗೆ ತಿಳಿಸಿದಂಥಾ, ಸಂಭವಿಸಿದಂಥಾ, ಈ ಕಾರ್ಯವನ್ನು ನೋಡುವಾ! ಯೆಂದು ಹೇಳಿ, ಬೇಗ ಬಂದು, ಮರಿಯಳನ್ನೂ, ಯೋಸೇಫನನ್ನೂ, ಗೋದಲಿಯಲ್ಲಿ ಮಲಗಿರುವ ಕೂಸನ್ನೂ ಕಂಡರು. ಕಂಡ ಮೇಲೆ, ಈ ಕೂಸಿನ ವಿಷಯ ತಮಗೆ ಹೇಳಿದ ಮಾತನ್ನು ಪ್ರಕಟ ಮಾಡಿದರು. ಆಗ ಕೇಳಿದವರೆ

ಲ್ಲರು ಕುರುಬರು ತಮಗೆ ಹೇಳಿದ ಮಾತುಗಳಿಗೆ ಆಶ್ಚರ್ಯ ಪಟ್ಟರು. ಆದರೆ ಮರಿಯಳು ಈ ಮಾತುಗಳನ್ನೆಲ್ಲಾ ತನ್ನ ಹೃದಯದಲ್ಲಿ ಆಲೋಚಿಸಿ ಇಟ್ಟುಕೊಂಡಳು. ಕುರುಬರು ತಾವು ಕೇಳಿ ನೋಡಿದ ಯೆಲ್ಲವುಗಳ ವಿಷಯ ದೇವರನ್ನು ಮಹಿಮೆ ಪಡಿಸುತ್ತಾ, ಹೊಗಳುತ್ತಾ, ತಿರುಗಿ ಹೋದರು.

ಮತ್ತು ಕೂಸಿಗೆ ಸುನ್ನತಿ ಮಾಡುವದಕ್ಕೆ ಯೆಂಟು ದಿವಸಗಳು ತುಂಬಿದ ಮೇಲೆ, ಯೇಸುವೆಂಬ ಹೆಸರನ್ನು ಅದಕ್ಕೆ ಇಟ್ಟರು.

ಮತ್ತು ನಾಲ್ವತ್ತು ದಿವಸಗಳು ತುಂಬಿದ ಮೇಲೆ, ಮೋಶೆಯ ನ್ಯಾಯ ಪ್ರಮಾಣದ ಪ್ರಕಾರ ಕೂಸನ್ನು ಕರ್ತನಿಗೆ ಒಪ್ಪಿಸುವದಕ್ಕೂ, ಬಲಿ ಅರ್ಪಿಸುವದಕ್ಕೂ, ಆತನನ್ನು ಯೆರೂಸಲೇಮಿಗೆ ತಕ್ಕೊಂಡು ಹೋದರು. ಮತ್ತು ಇಗೋ, ಸಿಮೆಯೋನನೆಂಬ ಒಬ್ಬ ಮನುಷ್ಯನು ಯೆರೂಸಲೇಮಿನಲ್ಲಿ ಇದ್ದು, ಇಸ್ರಯೇಲನ ಆದರಣೆಯನ್ನು ಯೆದುರುನೋಡುತ್ತಿದ್ದನು. ಇದಲ್ಲದೆ ಅವನು ಕರ್ತನ ಕ್ರಿಸ್ತನನ್ನು ನೋಡುವದಕ್ಕಿಂತ ಮುಂಚೆ ಮರಣವನ್ನು ನೋಡುವದಿಲ್ಲವೆಂದು, ಪರಿಶುದ್ಧಾತ್ಮದಿಂದ ಅವನಿಗೆ ದೈವೋತ್ತರ ಉಂಟಾಗಿತ್ತು. ಇವನು ಆತ್ಮದಿಂದ ದೇವಾಲಯಕ್ಕೆ ಬಂದನು. ಮತ್ತು ತಂದೆ ತಾಯಿಗಳು ಕೂಸಾದ ಯೇಸುವನ್ನು ಒಳಗೆ ತಂದಾಗ, ಇವನು ಅದನ್ನು ತನ್ನ ಕೈಗಳಲ್ಲಿ ತಕ್ಕೊಂಡು, ದೇವರನ್ನು ಸ್ತುತಿಸಿ ಹೇಳಿದ್ದೇನಂದರೆ,—ಪ್ರಭುವೇ! ಈಗ ನಿನ್ನ ವಾಕ್ಯದ ಪ್ರಕಾರ ನಿನ್ನ ದಾಸನನ್ನು ಸಮಾಧಾನವಾಗಿ ಕಳುಹಿಸಿ ಬಿಡುತ್ತೀ; ನೀನು ಯೆಲ್ಲಾ ಜನಗಳ ಸಮ್ಮುಖದಲ್ಲಿ ಸಿದ್ಧ ಮಾಡಿದಂಥಾ, ಜನಾಂಗಗಳಿಗೆ ಪ್ರಕಟಣೆಯಾದ ಬೆಳಕೂ ನಿನ್ನ ಜನಾಂಗವಾದ ಇಸ್ರಯೇಲನ ಮಹಿಮೆಯೂ ಆದಂಥಾ ನಿನ್ನ ರಕ್ಷಣೆಯನ್ನು ನನ್ನ ಕಣ್ಣುಗಳು ಕಂಡವೆ. ಯೋಸೇಫನೂ ಆತನ ತಾಯಿಯೂ ಆತನ ವಿಷಯ ಹೇಳಿದವುಗಳಿಗೆ ಆಶ್ಚರ್ಯ ಪಟ್ಟಾಗ, ಸಿಮೆಯೋನನು ಅವರನ್ನು ಆಶೀರ್ವದಿಸಿ, ಮರಿಯಳಿಗೆ ಹೇಳಿದ್ದೇನಂದರೆ,—ಇಗೋ, ಇತನು ಅನೇಕರ ಬೀಳುವಿಕೆಗೂ ಯೇಳುವಿಕೆಗೂ, ಜನರು ವಿರೋಧವಾಗಿ ಮಾತಾಡುವ ಗುರ್ತಿಗಾಗಿಯೂ ಇಡಲ್ಪಡುತ್ತಾನೆ. ಮತ್ತು ನಿನ್ನ ಪ್ರಾಣವನ್ನು ಕತ್ತಿ ತಿವಿಯುವದು; ಹೀಗೆ ಅನೇಕ ಹೃದಯಗಳ

ಆಲೋಚನೆಗಳು ಪ್ರತ್ಯಕ್ಷವಾಗುವವು.

ಇದಲ್ಲದೆ ಪ್ರವಾದಿನಿಯಾದ ಅನ್ನಳು ಇದ್ದಳು. ಇವಳು ಹೆಚ್ಚುಕಡಿಮೆ ಯೆಂಬತ್ತನಾಲ್ಕು ವರ್ಷದ ವಿಧವೆಯಾಗಿದ್ದು, ಉಪವಾಸಗಳಿಂದಲೂ ಬಿನ್ನಹಗಳಿಂದಲೂ ರಾತ್ರಿ ಹಗಲು ಸೇವಿಸುತ್ತಾ, ದೇವಾಲಯವನ್ನು ಬಿಟ್ಟು ಹೋಗದೆ ಇದ್ದಳು. ಈಕೆ ಅದೇ ಘಳಿಗೆಯಲ್ಲಿ ಹತ್ತರ ಬಂದು, ಕರ್ತನನ್ನು ಸ್ತುತಿಸಿ, ಯೆರೂಸಲೇಮಿನಲ್ಲಿ ವಿಮೋಚನೆಯನ್ನು ಯೆದುರುನೋಡುವವರೆಲ್ಲರ ಸಂಗಡ ಆತನ ವಿಷಯ ಮಾತಾಡಿದಳು.

---

೩. ಮೂಡಣದ ಜ್ಞಾನಿಗಳು. ಹನ್ನೆರಡು ವರುಷದ ಯೇಸು.

(ಮತ್ತ. ೨, ೧—೨೩. ಲೂಕ. ೨, ೪೦—೫೨.)

ಯೇಸು ಅರಸನಾದ ಹೆರೋದನ ದಿನಗಳಲ್ಲಿ ಯೆಹೂದದ ಬೆಥ್ಲೆಹೇಮಿನಲ್ಲಿ ಹುಟ್ಟಿದಾಗ, ಇಗೋ, ಜ್ಞಾನಿಗಳು ಮೂಡಣದಿಂದ ಯೆರೂಸಲೇಮಿಗೆ ಬಂದು,—ಯೆಹೂದ್ಯರಿಗೆ ಅರಸನಾಗಿ ಹುಟ್ಟಿದವನು ಯೆಲ್ಲಿ? ಯಾಕಂದರೆ ಮೂಡಣದಲ್ಲಿ ಆತನ ನಕ್ಷತ್ರವನ್ನು ನೋಡಿ, ಆತನಿಗೆ ನಮಸ್ಕರಿಸ ಬಂದೆವು, ಅಂದರು. ಇದನ್ನು ಕೇಳಿ, ಅರಸನಾದ ಹೆರೋದನು ಯೆರೂಸಲೇಮೆಲ್ಲಾ ಸಹಿತವಾಗಿ ಕಳವಳ ಪಟ್ಟು, ಯೆಲ್ಲಾ ಪ್ರಧಾನ ಯಾಜಕರನ್ನೂ ಜನರ ಶಾಸ್ತ್ರಿಗಳನ್ನೂ ಕೂಡ ಕರೆಸಿ,—ಕ್ರಿಸ್ತನು ಯೆಲ್ಲಿ ಹುಟ್ಟುವನು? ಯೆಂದು ಅವರ ಹತ್ತರ ವಿಚಾರಿಸಿದನು. ಅವರು ಅವನಿಗೆ—ಯೆಹೂದದ ಬೆಥ್ಲೆಹೇಮಿನಲ್ಲಿಯೇ; ಯಾಕಂದರೆ—ಯೆಹೂದ ದೇಶದ ಬೆಥ್ಲೆಹೇಮೇ, ನೀನು ಯೆಹೂದದ ಅಧಿಪತಿಗಳಲ್ಲಿ ಯೆಷ್ಟು ಮಾತ್ರವೂ ಸಣ್ಣದಲ್ಲಾ; ಯಾಕಂದರೆ ನಿನ್ನಿಂದಲೇ ನನ್ನ ಜನಾಂಗವಾದ ಇಸ್ರಯೇಲನ್ನು ಆಳುವ ಅಧಿಪತಿಯು ಹೊರಡುವನೆಂದು, ಪ್ರವಾದಿಯ ಮುಖಾಂತರ (ಮಿಕ. ೫, ೧.) ಬರದದೆ, ಅಂದರು. ಆಗ ಹೆರೋದನು ಅಂತರಂಗವಾಗಿ ಜ್ಞಾನಿಗಳನ್ನು ಕರೆಸಿ, ನಕ್ಷತ್ರ

ವು ಕಾಣಿಸಿದ ಕಾಲವನ್ನು ಅವರ ಹತ್ತರ ಜಾಗ್ರತೆಯಾಗಿ ವಿಚಾರಿಸಿ, —ನೀವು ಹೋಗಿ, ಆ ಕೂಸನ್ನು ಕುರಿತು ಜಾಗ್ರತೆಯಾಗಿ ಪರಿಶೋಧಿಸಿರಿ; ಕಂಡುಕೊಂಡರೆ, ನಾನು ಸಹ ಬಂದು, ಅದಕ್ಕೆ ನಮಸ್ಕರಿಸುವ ಹಾಗೆ ನನಗೆ ತಿಳಿಸಿರಿ! ಯೆಂದು ಹೇಳಿ, ಅವರನ್ನು ಬೆತ್ಲೆಹೇಮಿಗೆ ಕಳುಹಿಸಿದನು. ಅವರು ಅರಸನ ಮಾತನ್ನು ಕೇಳಿ, ಹೊರಟರು; ಮತ್ತು ಇಗೋ, ಅವರು ಮೂಡಣದಲ್ಲಿ ಕಂಡ ನಕ್ಷತ್ರವು, ಕೂಸು ಇದ್ದ ಸ್ಥಳದ ಮೇಲೆ ಬಂದು ನಿಲ್ಲುವ ತನಕ, ಅವರ ಮುಂದೆ ನಡೆಯಿತು. ಅವರು ನಕ್ಷತ್ರವನ್ನು ನೋಡಿ, ಅತಿಸಂತೋಷದಿಂದ ಸಂತೋಷ ಪ



ಟ್ಟರು. ಮತ್ತು ಮನೆಯೊಳಗೆ ಬಂದು, ಕೂಸನ್ನು ತಾಯಿಯಾದ ಮರಿಯಳ ಬಳಿಯಲ್ಲಿ ಕಂಡು, ಅಡ್ಡ ಬಿದ್ದು, ಅದಕ್ಕೆ ನಮಸ್ಕರಿಸಿ, ತಮ್ಮ ಬೊಕ್ಕಸಗಳನ್ನು ಬಿಚ್ಚಿ, ಅದಕ್ಕೆ ಚಿನ್ನವನ್ನೂ ಧೂಪವನ್ನೂ ಬೋಳವನ್ನೂ ಕಾಣಿಕೆಗಳಾಗಿ ಅರ್ಪಿಸಿದರು. ಮತ್ತು ಹೆರೋದನ ಬಳಿಗೆ ತಿರಿಗಿ ಹೋಗ ಬಾರದೆಂದು ಸ್ವಪ್ನದಲ್ಲಿ ದೈವೋತ್ತರ ಹೊಂದಿ, ಬೇರೆ ಮಾರ್ಗವಾಗಿ ತಮ್ಮ ದೇಶಕ್ಕೆ ಹೋದರು.



ಅವರು ಹೋದ ಮೇಲೆ, ಇಗೋ, ಕರ್ತನ ದೂತನು ಸ್ವಪ್ನದಲ್ಲಿ ಯೋಸೇಫನಿಗೆ ಪ್ರತ್ಯಕ್ಷವಾಗಿ,—ನೀನು ಯೆದ್ದು, ಕೂಸನ್ನೂ ಅದರ ತಾಯಿಯನ್ನೂ ತೆಗೆದುಕೊಂಡು, ಐಗುಪ್ತಕ್ಕೆ ಓಡಿ ಹೋಗಿ, ನಾನು ನಿನಗೆ ಹೇಳುವ ತನಕ ಅಲ್ಲಿ ಇರು; ಯಾಕಂದರೆ ಹೆರೋದನು ಅದನ್ನು ನಾಶನ ಮಾಡುವದಕ್ಕೆ ಕೂಸನ್ನು ಹುಡುಕುವನು, ಅಂದನು. ಆಗ ಅವನು ಯೆದ್ದು, ಕೂಸನ್ನೂ ಅದರ ತಾಯಿಯನ್ನೂ ರಾತ್ರಿಯಲ್ಲಿ ತೆಗೆದುಕೊಂಡು, ಐಗುಪ್ತಕ್ಕೆ ಹೊರಟು, ಹೆರೋದನು ತೀರಿ ಹೋಗುವ ಪರ್ಯಂತರ ಅಲ್ಲೇ ಇದ್ದನು.



ಆಗ ಹೆರೋದನು, ತಾನು ಜ್ಞಾನಿಗಳಿಂದ ಮೋಸ ಹೋದೆನೆಂದು ತಿಳಿದು, ಬಹಳವಾಗಿ ಕೋಪಗೊಂಡು, ಆಳುಗಳನ್ನು ಕಳುಹಿಸಿ, ತಾನು ಜ್ಞಾನಿಗಳಿಂದ ಜಾಗ್ರತೆಯಾಗಿ ಶೋಧಿಸಿದ ಕಾಲದ ಪ್ರಕಾರ, ಬೆಥ್ಲೆಹೇಮಿನಲ್ಲಿಯೂ ಅದರ ಸಮಸ್ತ ಪ್ರಾಂತ್ಯಗಳಲ್ಲಿಯೂ ಯೆರಡು ವರ್ಷವೂ ಅದಕ್ಕೊಳಗಾಗಿಯೂ ಇದ್ದ ಯೆಲ್ಲಾ ಮಕ್ಕಳನ್ನು ಕೊಂದು ಹಾಕಿಸಿದನು.

ಆದರೆ ಹೆರೋದನು ತೀರಿ ಹೋದ ಮೇಲೆ, ಇಗೋ, ಐಗುಪ್ತದಲ್ಲಿ ಕರ್ತನ ದೂತನು ಸ್ವಪ್ನದಲ್ಲಿ ಯೋಸೇಫನಿಗೆ ಪ್ರತ್ಯಕ್ಷವಾಗಿ,—ನೀನು ಯೆದ್ದು, ಕೂ

ಸನ್ನೂ ಅದರ ತಾಯಿಯನ್ನೂ ತೆಗೆದುಕೊಂಡು, ಇಸ್ರಾಯೇಲ ದೇಶಕ್ಕೆ ಹೋಗು; ಯಾಕಂದರೆ ಕೂಸಿನ ಪ್ರಾಣವನ್ನು ಹುಡುಕಿದವರು ಸತ್ತು ಹೋದರು, ಅಂದನು. ಆಗಲವನು ಯೆದ್ದು, ಕೂಸನ್ನೂ ಅದರ ತಾಯಿಯನ್ನೂ ತೆಗೆದು ಕೊಂಡು, ಇಸ್ರಾಯೇಲ ದೇಶಕ್ಕೆ ಬಂದನು. ಆದರೆ ಸ್ವಪ್ನದಲ್ಲಿ ದೈವೋತ್ತರ ಹೊಂದಿ, ಗಲಿಲಾಯದ ಮೇರೆಗಳಿಗೆ ಹೋದನು. ಮತ್ತು ಬಂದು, ನಜರೇತೆಂಬ ಪಟ್ಣದಲ್ಲಿ ವಾಸ ಮಾಡಿದನು. ಮತ್ತು ಕೂಸು ಬೆಳೆದು, ಜ್ಞಾನದಿಂದ ತುಂಬಿ, ಆತ್ಮದಲ್ಲಿ ಬಲಗೊಂಡಿತು. ಮತ್ತು ದೇವರ ಕೃಪೆಯು ಅದರ ಮೇಲೆ ಇತ್ತು.

ಇದಲ್ಲದೆ ಯೇಸುವಿನ ತಂದೆತಾಯಿಗಳು ವರುಷ ವರುಷಕ್ಕೆ ಪಸ್ಕ ಹಬ್ಬದಲ್ಲಿ ಯೆರೂಸಲೇಮಿಗೆ ಹೋಗುತ್ತಿದ್ದರು. ಹೀಗಿರಲಾಗಿ ಆತನು ಹನ್ನೆರಡು ವರುಷದವನಾದಾಗ, ಅವರು ಹಬ್ಬದ ಮರ್ಯಾದೆಯ ಪ್ರಕಾರ ಯೆರೂಸಲೇಮಿಗೆ ಯೇರಿ ಹೋಗಿ, ದಿನಗಳನ್ನು ತೀರಿಸಿ, ತಿರಿಗಿ ಹೋಗುವಾಗ, ಹುಡುಗನಾದ ಯೇಸು, ಯೋಸೇಫನಿಗೂ ಆತನ ತಾಯಿಗೂ ತಿಳಿಯದೆ, ಯೆರೂಸಲೇಮಿನಲ್ಲಿ ನಿಂತನು. ಇವರು, ಆತನು ಗುಂಪಿನಲ್ಲಿದ್ದಾನೆಂದು ನೆನಸಿ, ಒಂದು ದಿನದ ಹಾದಿ ನಡೆದು, ನೆಂಟರಲ್ಲಿಯೂ ಪರಿಚಿತರಲ್ಲಿಯೂ ಆತನನ್ನು ಹುಡುಕಿದರು. ಆತನನ್ನು ಕಾಣದೆ ಇದ್ದದರಿಂದ, ಹುಡುಕುತ್ತಾ ಯೆರೂಸಲೇಮಿಗೆ ತಿರಿಗಿ ಬಂದರು. ಮೂರು ದಿವಸಗಳ ಮೇಲೆ ದೇವಾಲಯದೊಳಗೆ ಬೋಧಕರ ಮಧ್ಯದಲ್ಲಿ ಕೂತುಕೊಂಡು, ಅವರನ್ನು ಕೇಳುತ್ತಾ, ಅವರಿಗೆ ಪ್ರಶ್ನೆ ಮಾಡುತ್ತಾ ಇರುವ ಆತನನ್ನು ಕಂಡುಕೊಂಡರು. ಆತನನ್ನು ಕೇಳುವವರೆಲ್ಲರು ಆತನ ವಿವೇಕಕ್ಕೂ ಉತ್ತರಗಳಿಗೂ ಆಶ್ಚರ್ಯ ಪಟ್ಟರು. ಅವರು ಆತನನ್ನು ನೋಡಿ, ಭ್ರಮೆಗೊಂಡು, ಆತನ ತಾಯಿ ಆತನಿಗೆ—ಮಗನೇ, ಯಾಕೆ ನಮಗೆ ಹೀಗೆ ಮಾಡಿದಿ? ಇಗೋ, ನಿನ್ನ ತಂದೆಯೂ ನಾನೂ ವ್ಯಥೆಯಿಂದ ನಿನ್ನನ್ನು ಹುಡುಕಿದೆವು, ಅಂದಳು. ಆತನು ಅವರಿಗೆ—ನೀವು ನನ್ನನ್ನು ಹುಡುಕಿದ್ದೇನು? ನನ್ನ ತಂದೆಯದರಲ್ಲಿ ನಾನು ಇರಬೇಕೆಂದು, ನಿಮಗೆ ತಿಳಿಯಲಿಲ್ಲವೋ? ಅಂದನು. ಆದರೆ ಅವರು ಆತನು ತಮಗೆ ಹೇ



ಳಿದ ಮಾತನ್ನು ಗ್ರಹಿಸಲಿಲ್ಲ. ಮತ್ತು ಆತನು ಅವರ ಸಂಗಡ ಇಳಿದು, ನಜರೇತಿಗೆ ಹೋಗಿ, ಅವರಿಗೆ ವಿಧೇಯನಾಗಿದ್ದನು. ಮತ್ತು ಆತನ ತಾಯಿಯು ಈ ಮಾತುಗಳನ್ನೆಲ್ಲಾ ತನ್ನ ಹೃದಯದಲ್ಲಿ ಇಟ್ಟುಕೊಂಡಳು. ಇದಲ್ಲದೆ ಯೇಸು ಜ್ಞಾನದಲ್ಲಿಯೂ, ನೀಳದಲ್ಲಿಯೂ, ದೇವರ ಮತ್ತು ಮನುಷ್ಯರ ಮುಂದೆ ಕೃಪೆಯಲ್ಲಿಯೂ ಹೆಚ್ಚಿದನು.

---

೪. ಯೇಸುವಿನ ಸ್ನಾನವೂ, ಶೋಧನೆಯೂ.

(ಮತ್ಥ. ೩, ೧—೧೭. ೪, ೧—೧೧. ಮಾರ್ಕ. ೧, ೧—೧೩.
ಲೂಕ. ೩, ೧—೨೨. ೪, ೧—೧೩.)

ಕೈಸರನಾದ ತಿಬೇರ್ಯನು ಆಳಿದ ಹದಿನೈದನೇ ವರುಷದಲ್ಲಿ, ಪೊಂತ್ಯ ಪಿಲಾತನು ಯೆಹೂದಕ್ಕೆ ಅಧಿಪತಿಯೂ, ಹೆರೋದನು ಗಲಿಲಾಯಕ್ಕೆ ಚತುರಧಿಪತಿಯೂ ಆಗಿರುವಾಗ, ಅರಣ್ಯದಲ್ಲಿ ಜಕರ್ಯನ ಮಗನಾದ ಯೋಹಾನನಿಗೆ ದೇವರ ವಾಕ್ಯ ಉಂಟಾಯಿತು. ಮತ್ತು ಅವನು ಪಾಪಗಳ ಪರಿಹಾರಕ್ಕಾಗಿರುವ ಮಾನಸಾಂತರದ ಸ್ನಾನವನ್ನು ಸಾರುತ್ತಾ, ಯೊರ್ದಾನಿನ ಸುತ್ತಲಿರುವಯೆಲ್ಲಾ ದೇಶಕ್ಕೆ ಬಂದು, ಹೇಳಿದ್ದೇನಂದರೆ, — ಮಾನಸಾಂತರ ಪಡಿರಿ, ಯಾಕಂದರೆ ಪರಲೋಕರಾಜ್ಯವು ಸಮೀಪವಾಯಿತು! ಈ ಯೋಹಾನನಿಗೆ ಒಂಟೆ

ಯ ಕೂದಲಿನ ವಸ್ತ್ರವೂ, ಅವನ ನಡುವಿನ ಸುತ್ತು ತೊಗಲಿನ ನಡುಕಟ್ಟೂ ಇದ್ದವು. ಮಿಡಿತೆಗಳೂ ಕಾಡಜೇನೂ ಅವನ ಆಹಾರವಾಗಿದ್ದವು.

ಆಗ ಯೆರೂಸಲೇಮೂ, ಸಮಸ್ತ ಯೆಹೂದವೂ, ಯೊರ್ದಾನಿನ ಸುತ್ತಲಿರುವ ಸಮಸ್ತ ದೇಶವೂ, ಅವನ ಬಳಿಗೆ ಹೊರಟು ಹೋಗಿ, ತಮ್ಮ ಪಾಪಗಳನ್ನು ಅರಿಕೆ ಮಾಡಿ, ಅವನಿಂದ ಯೊರ್ದಾನಿನಲ್ಲಿ ಸ್ನಾನ ಹೊಂದಿದರು. ಆದರೆ ಅವನು ಫರಿಸಾಯರಲ್ಲಿಯೂ ಸದ್ದುಕಾಯರಲ್ಲಿಯೂ ಅನೇಕರು ತನ್ನ ಸ್ನಾನಕ್ಕೆ ಬರುವದನ್ನು ನೋಡಿ, ಅವರಿಗೆ ಹೇಳಿದ್ದೇನಂದರೆ, — ಸರ್ಪಜಾತಿಯವರೇ, ಬರುವ ಕೋಪಕ್ಕೆ ತಪ್ಪಿಸಿಕೊಳ್ಳ ನಿಮಗೆ ತೋರಿಸಿದವನ್ಯಾರು? ಹಾಗಾದರೆ ಮಾನಸಾಂತರಕ್ಕೆ ತಕ್ಕ ಫಲಗಳನ್ನು ಕೊಡಿರಿ! ಮತ್ತು ಅಬ್ರಹಾಮನು ನಮಗೆ ತಂದೆಯಾಗಿದ್ದಾನೆಂದು, ನಿಮ್ಮೊಳಗೆ ಹೇಳಿಕೊಳ್ಳುವದಕ್ಕೆ ನೆನಸ ಬೇಡಿರಿ. ಯಾಕಂದರೆ ದೇವರು ಕಲ್ಲುಗಳಿಂದ ಅಬ್ರಹಾಮನಿಗೆ ಮಕ್ಕಳನ್ನು ಯೆಬ್ಬಿಸ ಬಲ್ಲನೆಂದು ನಿಮಗೆ ಹೇಳುತ್ತೇನೆ. ಮತ್ತು ಈಗಲೇ ಮರಗಳ ಬೇರಿಗೆ ಕೊಡಲಿ ಇಟ್ಟದೆ; ಆದದರಿಂದ ಒಳ್ಳೇ ಫಲ ಕೊಡದ ಮರಗಳೆಲ್ಲಾ ಕಡಿಯಲ್ಪಟ್ಟು, ಬೆಂಕಿಯಲ್ಲಿ ಹಾಕಲ್ಪಡುವವು.

ಆಗ ಯೇಸು, ಹೆಚ್ಚುಕಡಿಮೆ ಮೂವತ್ತನೇ ವರುಷ ಆರಂಭಿಸಿದವನಾಗಿ, ಗಲಿಲಾಯದಿಂದ ಯೊರ್ದಾನಿಗೆ ಯೋಹಾನನ ಬಳಿಗೆ, ಅವನಿಂದ ಸ್ನಾನ ಹೊಂದುವದಕ್ಕೆ ಬಂದನು. ಆದರೆ ಯೋಹಾನನು — ನಿನ್ನಿಂದ ಸ್ನಾನ ಹೊಂದುವದು ನನಗೆ ಅಗತ್ಯವಿರಲಾಗಿ, ನೀನು ನನ್ನ ಬಳಿಗೆ ಬರುತ್ತೀಯೋ? ಯೆಂ



ದು ಹೇಳಿ, ಆತನನ್ನು ತಡೆದನು. ಆದರೆ ಯೇಸು ಅವನಿಗೆ ಪ್ರತ್ಯುತ್ತರ ವಾಗಿ, — ಈಗ ಬಿಡು! ಯಾಕಂದರೆ ಹೀಗೆ ಸಮಸ್ತ ನೀತಿಯನ್ನು ಈಡೇರುವದು ನಮಗೆ ಯೋಗ್ಯವಾಗಿದೆ, ಯೆಂದು ಹೇಳಿದಾಗ, ಆತನನ್ನು ಬಿಟ್ಟನು. ಮತ್ತು ಯೇಸು ಸ್ನಾನವನ್ನು ಹೊಂದಿ, ಸಂಗಡಲೇ ನೀರಿನಿಂದ ಯೇರಿ ಬರಲು, ಇಗೋ, ಆತನು ಪ್ರಾರ್ಥನೆ ಮಾಡುತ್ತಿರುವಾಗ, ಆಕಾಶಗಳು ಆತನಿಗೆ ತೆರೆಯಲ್ಪಟ್ಟವು; ಮತ್ತು ದೇವರ ಆತ್ಮವು ಪಾರಿವಾಳದ ಹಾಗೆ ಇಳಿದು, ತನ್ನ ಮೇಲೆ ಬರುವದನ್ನು ನೋಡಿದನು. ಮತ್ತು ಆಕಾಶದಿಂದ — ಈತನೇ ನನ್ನ ಪ್ರಿಯ ಮಗನು; ಈತನಲ್ಲಿ ಆನಂದ ಪಡುತ್ತೇನೆ! ಯೆಂಬ ಶಬ್ದ ಉಂಟಾಯಿತು.

ಆದರೆ ಯೇಸು ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಯೊರ್ದಾನಿನಿಂದ ತಿರುಗಿಕೊಂಡಾಗ, ಆತ್ಮದಿಂದ ಅರಣ್ಯಕ್ಕೆ ನೆಯ್ಯಲ್ಪಟ್ಟು, ನಾಲ್ವತ್ತು ದಿವಸ ಪಿಶಾಚನಿಂದ ಶೋಧಿಸಲ್ಪಟ್ಟನು. ಮತ್ತು ಮೃಗಗಳ ಸಂಗಡ ಇದ್ದನು. ಆ ದಿವಸಗಳಲ್ಲಿ ಆತನು ಯೇನೂ ಉಣ್ಣಲಿಲ್ಲ. ಅವು ಮುಗಿದ ಮೇಲೆ, ಹಸಿದನು. ಆಗ ಶೋಧಕನು ಆತನ ಬಳಿಗೆ ಬಂದು, — ನೀನು ದೇವರ ಮಗನಾಗಿದ್ದರೆ, ಈ ಕಲ್ಲುಗಳು ರೊಟ್ಟಿಗಳಾಗುವಹಾಗೆ ಹೇಳು, ಅಂದನು. ಆತನು ಪ್ರತ್ಯುತ್ತರವಾಗಿ, — ರೊಟ್ಟಿಯಿಂದ ಮಾತ್ರವಲ್ಲ, ದೇವರ ಬಾಯೊಳಗಿಂದ ಹೊರಡುವ ಪ್ರತಿ ವಾಕ್ಯದಿಂದ ಮನುಷ್ಯನು ಬದುಕುವನೆಂದು (೫ ಮೋಶೆ. ೮, ೩.) ಬರದದೆ, ಅಂದನು. ಆಗ ಪಿಶಾಚನು ಆತನನ್ನು (ಯೆರೂಸಲೇಮು ಯೆಂಬ) ಪರಿಶುದ್ಧ ಪಟ್ಣಕ್ಕೆ ಕರಕೊಂಡು ಹೋಗಿ, ದೇವಾಲಯದ ಶಿಖರದ ಮೇಲೆ ನಿಲ್ಲಿಸಿ, ಆತನಿಗೆ — ನೀನು ದೇವರ ಮಗನಾಗಿದ್ದರೆ, ಕೆಳಗೆ ಬೀಳು; ಯಾಕಂದರೆ — ಆತನು ತನ್ನ ದೂತರಿಗೆ ನಿನ್ನ ವಿಷಯವಾಗಿ ಆಜ್ಞಾಪಿಸುವನು; ನೀನು ನಿನ್ನ ಪಾದವನ್ನು ಕಲ್ಲಿಗೆ ತಗಲಿಸದ ಹಾಗೆ, ತಮ್ಮ ಕೈಗಳಲ್ಲಿ ನಿನ್ನನ್ನು ಯೆತ್ತಿಕೊಳ್ಳುವರು, ಯೆಂದು (ಕೀರ್ತ. ೯೧, ೧೧. ೧೨.) ಬರದದೆ, ಅಂದನು. ಯೇಸು ಅವನಿಗೆ — ನಿನ್ನ ದೇವರಾದ ಕರ್ತನನ್ನು ಶೋಧಿಸಬೇಡ! ಯೆಂಬುವದು ಸಹಾ (೫ ಮೋಶೆ. ೬, ೧೬.) ಬರದದೆ, ಅಂದನು. ಮ

ತ್ತು ಪಿಶಾಚನು ಆತನನ್ನು ಬಹಳ ಯೆತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ, ಆತನಿಗೆ ವೊಂದು ನಿಮಿಷದಲ್ಲಿ ಲೋಕದ ರಾಜ್ಯಗಳಂನೆಲ್ಲಾ ತೋರಿಸಿದನು. ಮತ್ತು ಪಿಶಾಚನು ಆತನಿಗೆ—ಈ ಯೆಲ್ಲಾ ಅಧಿಕಾರವನ್ನೂ ಅವುಗಳ ಮಹಿಮೆಯನ್ನೂ ನಿನಗೆ ಕೊಡುವೆನು; ಯಾಕಂದರೆ ಅದು ನನಗೆ ವೊಪ್ಪಿಸಲ್ಪಟ್ಟದೆ; ಮತ್ತು ಮನಸ್ಸು ಬಂದವನಿಗೆ ಅದನ್ನು ಕೊಡುತ್ತೇನೆ; ಆದದರಿಂದ ನೀನು ನನ್ನ ಮುಂದೆ ನಮಸ್ಕರಿಸಿದರೆ, ಯೆಲ್ಲಾ ನಿನ್ನದಾಗಿರುವದು, ಅಂದಾಗ, ಯೇಸು ಅವನಿಗೆ—ಸೈತಾನನೇ, ನನ್ನ ಹಿಂದೆ ಹೋಗು! ಯಾಕಂದರೆ ನಿನ್ನ ದೇವರಾದ ಕರ್ತನಿಗೆ ನಮಸ್ಕರಿಸಿ, ಆತನನ್ನು ಮಾತ್ರ ಆರಾಧಿಸ ಬೇಕೆಂದು (೫ ಮೋಶೆ. ೬, ೧೩. ೧೪.) ಬರದದೆ, ಅಂದನು.—ಪಿಶಾಚನು ಶೋಧನೆಯಂನೆಲ್ಲಾ ಮುಗಿಸಿ, ಸ್ವಲ್ಪ ಕಾಲ ಆತನನ್ನು ಬಿಟ್ಟು ಹೋದನು. ಮತ್ತು ಇಗೋ, ದೂತರು ಬಂದು, ಆತನಿಗೆ ಸೇವೆ ಮಾಡಿದರು.

---

೫. ಯೋಹಾನನ ಸಾಕ್ಷಿ. ಯೇಸುವಿನ ಮೊದಲನೇ ಶಿಷ್ಯರು. ಕಾನದಲ್ಲಿ ಮದುವೆ.

(ಯೋ. ೧, ೧೯–೫೧. ೨, ೧–೧೨.)

ಯೋಹಾನನ ಸಾಕ್ಷಿಯು ಇದೇ,—ನೀನು ಯಾರೆಂದು ಅವನನ್ನು ಕೇಳುವದಕ್ಕೆ, ಯೆಹೂದ್ಯರು ಯೆರೂಸಲೇಮಿನಿಂದ ಯಾಜಕರನ್ನೂ ಲೇವ್ಯರನ್ನೂ ಕಳುಹಿಸಿದಾಗ, ಅವನು ಬೊಂಕದೆ, ಅರಿಕೆ ಮಾಡಿ,—ನಾನು ಕ್ರಿಸ್ತನಲ್ಲವೆಂದು, ಅರಿಕೆ ಮಾಡಿದನು. ಅವರು—ಹಾಗಾದರೆ ಯೇನು? ನೀನು ಎಲೀಯನಾಗಿದ್ದಿಯೋ? ಯೆಂದು ಕೇಳಿದರು. ಅಲ್ಲಾ, ಅಂದನು. ಆಗ ಅವನಿಗೆ—ನೀನು ಯಾರು? ನಮ್ಮನ್ನು ಕಳುಹಿಸಿದವರಿಗೆ ನಾವು ಉತ್ತರ ಕೊಡುವ ಹಾಗೆ, ನಿನ್ನ ವಿಷಯ ಯೇನು ಹೇಳುತ್ತೀ? ಅನ್ನಲು,—ನಾನು, ಪ್ರವಾದಿಯಾದ ಯೆಶಾಯನು ಹೇಳಿದ ಪ್ರಕಾರ, ಆತನ ಮಾರ್ಗವನ್ನು ನೆಟ್ಟಗೆ ಮಾಡಿರಿ! ಯೆಂ

ದು ಅರಣ್ಯದಲ್ಲಿ ಕೂಗುವವನ ಶಬ್ದವಾಗಿದ್ದೇನೆ, ಅಂದನು. ಮತ್ತು ಅವನನ್ನು ಕೇಳಿ,—ಹಾಗಾದರೆ ನೀನು ಕ್ರಿಸ್ತನಲ್ಲದೆ, ಎಲೀಯನಲ್ಲದೆ ಇದ್ದರೆ, ಯಾಕೆ ಸ್ನಾನ ಕೊಡುತ್ತೀ? ಯೆಂದು ಅವನಿಗೆ ಹೇಳಿದರು. ಯೋಹಾನನು ಅವರಿಗೆ ಹೇಳಿದ್ದೇನಂದರೆ,—ನಾನು ನೀರಿನಿಂದ ಮಾನಸಾಂತರಕ್ಕಾಗಿ ಸ್ನಾನ ಕೊಡುತ್ತೇನೆ; ಆದರೆ ನೀವು ಅರಿಯದವನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; ಆತನು ನನ್ನ ಹಿಂದೆ ಬಂದು, ನನಗೆ ಮುಂದಿನವನಾಗಿದ್ದಾನೆ; ಆತನ ಪಾದರಕ್ಷೆಯ ಬಾರನ್ನು ಬಿಚ್ಚುವದಕ್ಕೆ ನಾನು ಯೋಗ್ಯನಲ್ಲ. ಆತನು ಪರಿಶುದ್ಧಾತ್ಮದಿಂದಲೂ ಬೆಂಕಿಯಿಂದಲೂ ನಿಮಗೆ ಸ್ನಾನ ಕೊಡುವನು; ಆತನ ಕೈಯಲ್ಲಿ ಆತನ ಮೊರವದೆ; ಆತನು ತನ್ನ ಕಣವನ್ನು ಶುಚಿ ಮಾಡಿ, ತನ್ನ ಗೋಧಿಯನ್ನು ಕಣಜದಲ್ಲಿ ಕೂಡಿಸಿ ಇಟ್ಟು, ಹೊಟ್ಟನ್ನು ಆರದ ಬೆಂಕಿಯಿಂದ ಸುಟ್ಟು ಬಿಡುವನು.

ಮರುದಿವಸ ಯೋಹಾನನು ತನ್ನ ಬಳಿಗೆ ಬರುವ ಯೇಸುವನ್ನು ನೋಡಿ, ಹೇಳಿದ್ದೇನಂದರೆ,—ಇಗೋ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿಯು! ನನ್ನ ಹಿಂದೆ ಒಬ್ಬ ಮನುಷ್ಯನು ಬರುತ್ತಾನೆ; ಆತನು ನನಗೆ ಮುಂದಿನವನಾಗಿದ್ದಾನೆ; ಯಾಕಂದರೆ ನನಗೆ ಮುಂಚೆ ಇದ್ದನು, ಯೆಂದು ನಾನು ಹೇಳಿದವನು ಈತನೇ.

ಮರುದಿವಸ ತಿರಿಗಿ ಯೋಹಾನನು ಅವನ ಶಿಷ್ಯರಲ್ಲಿ ಇಬ್ಬರ ಸಂಗಡ ನಿಂತಿರಲಾಗಿ, ನಡೆಯುತ್ತಾ ಇರುವ ಯೇಸುವನ್ನು ನೋಡಿ,—ಇಗೋ, ದೇವರ ಕುರಿಮರಿ! ಅಂದಾಗ, ಆ ಇಬ್ಬರು ಶಿಷ್ಯರು ಅವನು ಮಾತಾಡುವದನ್ನು ಕೇಳಿ, ಯೇಸುವನ್ನು ಹಿಂಬಾಲಿಸಿದರು. ಆದರೆ ಯೇಸು ತಿರುಗಿಕೊಂಡು, ಅವರು ಹಿಂಬಾಲಿಸುವದನ್ನು ನೋಡಿ, ಅವರಿಗೆ—ಯೇನು ಹುಡುಕುತ್ತೀರಿ? ಅನ್ನಲು, ಆತನಿಗೆ—ರಬ್ಬಿಯೇ, ಯೆಲ್ಲಿ ವಾಸಿಸುತ್ತೀ? ಅಂದರು. ರಬ್ಬಿ ಅಂದರೆ, ಬೋಧಕನು. ಆತನು ಅವರಿಗೆ—ಬಂದು ನೋಡಿರಿ! ಅಂದಾಗ, ಅವರು ಬಂದು, ಆ ದಿವಸ ಆತನ ಸಂಗಡ ವಾಸಿಸಿದರು. ಆ ಇಬ್ಬರಲ್ಲಿ ಅಂದ್ರೇಯನು ಒಬ್ಬನಾಗಿದ್ದನು. ಇವನು ಮೊದಲು ತನ್ನ ಸಹೋದರನಾದ ಸೀಮೋನನ್ನು ಕಂಡು,

ಅವನಿಗೆ—ಮೆಸ್ಸೀಯನನ್ನು ಕಂಡುಕೊಂಡಿದ್ದೇವೆ, ಅಂದನು. ಮೆಸ್ಸೀಯನು ಅಂದರೆ, ಅಭಿಷಿಕ್ತನು. ಮತ್ತು ಅವನನ್ನು ಯೇಸುವಿನ ಬಳಿಗೆ ಕರಕೊಂಡು ಬಂದನು. ಯೇಸು ಅವನನ್ನು ದೃಷ್ಟಿಸಿ,—ನೀನು ಯೋನನ ಮಗನಾದ ಸೀಮೋನನಾಗಿದ್ದೀ; ನೀನು ಕೇಫನೆಂದು ಕರೆಯಲ್ಪಡುವಿ, ಅಂದನು. ಅದರ ಅರ್ಥವೇನಂದರೆ, ಬಂಡೆ.

ಮರುದಿವಸ ಯೇಸು ಗಲಿಲಾಯಕ್ಕೆ ಹೊರಟು ಹೋಗ ಬೇಕೆಂದಿರುವಾಗ, ಫಿಲಿಪ್ಪನನ್ನು ಕಂಡು, ಅವನಿಗೆ—ನನ್ನನ್ನು ಹಿಂಬಾಲಿಸು! ಅಂದನು. ಫಿಲಿಪ್ಪನು ನಥಾನಯೇಲನನ್ನು ಕಂಡು, ಅವನಿಗೆ—ಯಾವನ ವಿಷಯ ನ್ಯಾಯಪ್ರಮಾಣದಲ್ಲಿ ಮೋಶೆಯೂ ಪ್ರವಾದಿಗಳೂ ಬರದರೋ, ಆ ನಜರೇತಿನವನಾದ ಯೋಸೇಫನ ಮಗನಾದ ಯೇಸುವನ್ನು ಕಂಡುಕೊಂಡಿದ್ದೇವೆ, ಅಂದನು. ನಥಾನಯೇಲನು ಅವನಿಗೆ—ಒಳ್ಳೇದೇನಾದರೂ ನಜರೇತಿನಿಂದ ಹುಟ್ಟಬಹುದೋ? ಅಂದಾಗ, ಫಿಲಿಪ್ಪನು ಅವನಿಗೆ—ಬಂದು ನೋಡು! ಅಂದನು. ಯೇಸು ತನ್ನ ಬಳಿಗೆ ಬರುವ ನಥಾನಯೇಲನನ್ನು ನೋಡಿ, ಅವನ ವಿಷಯ—ಇಗೋ, ನಿಜವಾದ ಇಸ್ರಯೇಲ್ಯನು; ಅವನಲ್ಲಿ ಕಪಟವಿಲ್ಲ! ಅಂದನು. ನಥಾನಯೇಲನು ಆತನಿಗೆ—ನನ್ನನ್ನು ಯೆಲ್ಲಿಂದ ಅರಿತಿದ್ದೀ? ಅನ್ನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ,—ಫಿಲಿಪ್ಪನು ನಿನ್ನನ್ನು ಕರೆಯುವದಕ್ಕಿಂತ ಮುಂಚೆ, ನೀನು ಅಂಜೂರದ ಮರದ ಕೆಳಗೆ ಇದ್ದಾಗ, ನಿನ್ನನ್ನು ನೋಡಿದೆನು, ಅಂದನು. ನಥಾನಯೇಲನು ಆತನಿಗೆ—ರಬ್ಬಿಯೇ, ನೀನು ದೇವರ ಮಗನು! ನೀನು ಇಸ್ರಯೇಲಿನ ಅರಸನು! ಅಂದನು. ಯೇಸು ಅವನಿಗೆ—ಅಂಜೂರದ ಮರದ ಕೆಳಗೆ ನಿನ್ನನ್ನು ನೋಡಿದೆನೆಂದು ನಾನು ನಿನಗೆ ಹೇಳಿದದರಿಂದ, ವಿಶ್ವಾಸಿಸುತ್ತೀಯೋ? ಇವುಗಳಿಗಿಂತ ದೊಡ್ಡವುಗಳನ್ನು ನೋಡುವಿ! ಅಂದನು.

ಮತ್ತು ಮೂರನೇ ದಿವಸದಲ್ಲಿ ಗಲಿಲಾಯದ ಕಾನದಲ್ಲಿ ಒಂದು ಮದುವೆ ಆಯಿತು. ಯೇಸುವಿನ ತಾಯಿ ಅಲ್ಲಿ ಇದ್ದಳು. ಇದಲ್ಲದೆ ಯೇಸುವೂ ಆತನ ಶಿಷ್ಯರೂ ಮದುವೆಗೆ ಕರೆಯಲ್ಪಟ್ಟರು. ಆಗ ದ್ರಾಕ್ಷೆರಸ ಕಡಿ

ಮೆಯಾಗಲಾಗಿ, ಯೇಸುವಿನ ತಾಯಿ ಆತನಿಗೆ—ಅವರಿಗೆ ದ್ರಾಕ್ಷಾರಸ ಇಲ್ಲ, ಅಂದಳು. ಯೇಸು ಅವಳಿಗೆ—ಸ್ತ್ರೀಯೇ, ನನಗೂ ನಿನಗೂ ಯೇನು? ನನ್ನ ಘಳಿಗೆ ಇನ್ನೂ ಬರಲಿಲ್ಲ, ಅಂದನು. ಆತನ ತಾಯಿ ಸೇವಕರಿಗೆ—ಆತನು ನಿಮಗೆ ಯೇನು ಹೇಳುವನೋ, ಅದನ್ನು ಮಾಡಿರಿ! ಅಂದಳು. ಇದಲ್ಲದೆ ಆರು ಕಲ್ಲಿನ ತೊಟ್ಟಿಗಳು ಅಲ್ಲಿ ಇದ್ದವು. ಯೇಸು ಅವರಿಗೆ—ತೊಟ್ಟಿಗಳಲ್ಲಿ ನೀರು ತುಂಬಿಸಿರಿ, ಅಂದನು. ಅವರು ಅವುಗಳನ್ನು ಕಂಠದ ಮಟ್ಟಿಗೂ ತುಂಬಿಸಿದರು. ಆಗಲಾತನು ಅವರಿಗೆ—ಈಗ ತೋಡಿ, ಔತಣದ ಪಾರುಪತ್ಯಗಾರನಿಗೆ ತಕ್ಕೊಂಡು ಹೋಗಿರಿ, ಅಂದಾಗ, ತಕ್ಕೊಂಡು ಹೋದರು. ಔತಣದ ಪಾರುಪತ್ಯಗಾರನು ದ್ರಾಕ್ಷಾರಸವಾದ ನೀರನ್ನು ರುಚಿ ನೋಡಿದಾಗ, ಯೆಲ್ಲಿಂದ ಬಂತೆಂದು ಅವನಿಗೆ ತಿಳಿಯಲಿಲ್ಲ; ಆದರೆ ನೀರು ತೋಡಿದ ಸೇವಕರಿಗೆ ತಿಳಿದಿತ್ತು. ಹೀಗಿರಲಾಗಿ ಔತಣದ ಪಾರುಪತ್ಯಗಾರನು ಮದಲಿಂಗನನ್ನು ಕರದು, ಅವನಿಗೆ—ಮನುಷ್ಯರೆಲ್ಲರು ಮೊದಲು ಒಳ್ಳೇ ದ್ರಾಕ್ಷಾರಸವನ್ನು, ಮತ್ತ ಯೇರಿದ ಮೇಲೆ ಕಡಿಮೆಯಾದದ್ದನ್ನು ಇಡುತ್ತಾರೆ. ಆದರೆ ನೀನು ಒಳ್ಳೇ ದ್ರಾಕ್ಷಾರಸವನ್ನು ಈಗಿನ ವರೆಗೂ ಇಟ್ಟುಕೊಂಡಿದ್ದೀ, ಅಂದನು.—ಈ ಪ್ರಕಾರ ಯೇಸು ಲಕ್ಷಣಗಳ ಈ ಆರಂಭವನ್ನು ಗಲಿಲಾಯದ ಕಾನದಲ್ಲಿ ಮಾಡಿ, ತನ್ನ ಮಹಿಮೆಯನ್ನು ಪ್ರಕಟ ಮಾಡಿದನು; ಮತ್ತು ಆತನ ಶಿಷ್ಯರು ಆತನಲ್ಲಿ ವಿಶ್ವಾಸವಿಟ್ಟರು.

---

೬. ದೇವಾಲಯದ ಮೊದಲನೇ ಶುದ್ಧೀಕರಣ. ನಿಕಾದೇಮನು. ಯೋಹಾನನ ಕಡೇ ಸಾಕ್ಷಿ.

(ಯೋಹಾ. ೨, ೧೩—೨೫. ೩, ೧—೩೬.)

ಮತ್ತು ಯೆಹೂದ್ಯರ ಪಸ್ಕ ಸಮೀಪವಾಗಿತ್ತು. ಯೇಸು ಯೆರೂಸಲೇಮಿಗೆ ಯೇರಿ ಹೋಗಿ, ದೇವಾಲಯದಲ್ಲಿ ದನ ಕುರಿ ಪಾರಿವಾಳ ಮಾರುವವ

ರನ್ನೂ ಕೂತಿರುವ ಚಿನಿವಾರರನ್ನೂ ಕಂಡು, ಹಗ್ಗಗಳಿಂದ ಸಣ್ಣ ಕೊರಡೆ ಮಾಡಿ, ಅವರೆಲ್ಲರನ್ನು ದೇವಾಲಯದೊಳಗಿಂದ ಹೊರಡಿಸಿ, ಪಾರಿವಾಳ ಮಾರುವವರಿಗೆ—ಇವುಗಳನ್ನು ಇಲ್ಲಿಂದ ತಕ್ಕೊಂಡು ಹೋಗಿರಿ! ನನ್ನ ತಂದೆಯ ಮನೆಯನ್ನು ವ್ಯಾಪಾರದ ಮನೆ ಮಾಡಬೇಡಿರಿ! ಅಂದನು. ಆಗ ಯೆಹೂದ್ಯರು ಆತನಿಗೆ ಪ್ರತ್ಯುತ್ತರವಾಗಿ,—ನೀನು ಇವುಗಳನ್ನು ಮಾಡುವದಕ್ಕೆ ನಮಗೆ ಯಾವ ಲಕ್ಷಣ ತೋರಿಸುತ್ತೀ? ಅಂದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ,—ಈ ಮಂದಿರವನ್ನು ಕೆಡವಿ ಬಿಡಿರಿ! ಮೂರು ದಿವಸಗಳಲ್ಲಿ ಅದನ್ನು ಯೆಬ್ಬಿಸುವೆನು, ಅಂದನು. ಅದಕ್ಕೆ ಯೆಹೂದ್ಯರು—ನಾಲ್ವತ್ತಾರು ವರುಷಗಳಲ್ಲಿ ಈ ಮಂಧಿರವು ಕಟ್ಟಲ್ಪಟ್ಟಿತು; ನೀನು ಮೂರು ದಿವಸಗಳಲ್ಲಿ ಅದನ್ನು ಯೆಬ್ಬಿಸುವಿಯೋ? ಅಂದರು. ಆದರೆ ಆತನು ತನ್ನ ಶರೀರವೆಂಬ ಮಂದಿರದ ವಿಷಯವಾಗಿ ಹೇಳುತ್ತಿದ್ದನು.

ಆತನು ಪಸ್ಕಕಾಲದ ಹಬ್ಬದಲ್ಲಿ ಯೆರೂಸಲೇಮಿನಲ್ಲಿರುವಾಗ, ಅನೇಕರು ಆತನು ಮಾಡಿದ ಲಕ್ಷಣಗಳನ್ನು ನೋಡಿ, ಆತನ ಹೆಸರಿನಲ್ಲಿ ವಿಶ್ವಾಸವಿಟ್ಟರು. ಮತ್ತು ಫರಿಸಾಯರಲ್ಲಿ ಯೆಹೂದ್ಯರ ಅಧಿಪತಿಯಾದ ನಿಕಾದೇಮನೆಂಬ ಒಬ್ಬ ಮನುಷ್ಯನಿದ್ದನು. ಇವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು, ಆತನಿಗೆ—ರಬ್ಬಿಯೇ! ನೀನು ದೇವರ ಬಳಿಯಿಂದ ಬಂದ ಬೋಧಕನೆಂದು ಬಲ್ಲೆವು; ಹ್ಯಾಗಂದರೆ ದೇವರು ಅವನ ಸಂಗಡ ಇದ್ದ ಹೊರತು, ನೀನು ಮಾಡುವ ಈ ಲಕ್ಷಣಗಳನ್ನು ಯಾವನೂ ಮಾಡಲಾರನು, ಅಂದನು. ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ನಿಶ್ಚಯನಿಶ್ಚಯವಾಗಿ ನಿನಗೆ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದ ಹೊರತು, ದೇವರ ರಾಜ್ಯದಲ್ಲಿ ಪ್ರವೇಶಿಸಲಾರನು. ಮಾಂಸದಿಂದ ಹುಟ್ಟಿದ್ದು ಮಾಂಸವೇ; ಆತ್ಮದಿಂದ ಹುಟ್ಟಿದ್ದು ಆತ್ಮವೇ. ನೀವು ಮೇಲಿನಿಂದ ಹುಟ್ಟಬೇಕೆಂದು ನಿನಗೆ ಹೇಳಿದದರಿಂದ, ಆಶ್ಚರ್ಯ ಪಡಬೇಡ. ಗಾಳಿಯು ಮನಸ್ಸಿದ್ದಲ್ಲಿ ಬೀಸುತ್ತದೆ; ಅದರ ಶಬ್ದವನ್ನು ಕೇಳುತ್ತೀ; ಆದರೆ ಯೆಲ್ಲಿಂದ ಬರುತ್ತದೋ, ಯೆಲ್ಲಿಗೆ ಹೋಗುತ್ತದೋ, ನೀನರಿಯೆ. ಆತ್ಮ

ದಿಂದ ಹುಟ್ಟಿದವರೆಲ್ಲರು ಹಾಗೆಯೇ ಇದ್ದಾರೆ. ನಿಕಾದೇಮನು ಪ್ರತ್ಯುತ್ತರವಾಗಿ,—ಇವು ಹ್ಯಾಗೆ ಆಗಬಹುದು? ಅಂದಾಗ, ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ನೀನು ಇಸ್ರಾಯೇಲಿಗೆ ಬೋಧಕನಾಗಿದ್ದು, ಇವುಗಳನ್ನು ತಿಳಿಯದೇ ಇದ್ದೀಯೋ? ನಿಶ್ಚಯನಿಶ್ಚಯವಾಗಿ ನಿನಗೆ ಹೇಳುತ್ತೇನೆ, ತಿಳಿದಿದ್ದನ್ನು ಮಾತಾಡುತ್ತೇವೆ; ನೋಡಿದ್ದಕ್ಕೆ ಸಾಕ್ಷಿ ಕೊಡುತ್ತೇವೆ; ಆದರೆ ನೀವು ನಮ್ಮ ಸಾಕ್ಷಿ ತಕ್ಕೊಳ್ಳುವದಿಲ್ಲಾ. ಇದಲ್ಲದೆ ಮೋಶೆಯು ಅರಣ್ಯದಲ್ಲಿ ಹ್ಯಾಗೆ ಸರ್ಪವನ್ನು ಯೆತ್ತಿದನೋ, ಹಾಗೆಯೇ ಮನುಷ್ಯನ ಮಗನು, ಆತನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯಜೀವವನ್ನು ಹೊಂದುವ ಹಾಗೆ, ಯೆತ್ತಲ್ಪಡ ಬೇಕು. ಯಾಕಂದರೆ ಆತನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯಜೀವವನ್ನು ಹೊಂದುವ ಹಾಗೆ, ಒಬ್ಬನಾಗಿ ಹುಟ್ಟಿದ ತನ್ನ ಮಗನನ್ನು ಕೊಡುವಷ್ಟು ಪ್ರೀತಿಯನ್ನು ದೇವರು ಲೋಕದ ಮೇಲೆ ಇಟ್ಟನು. ಯಾಕಂದರೆ ಲೋಕವು ಆತನಿಂದ ರಕ್ಷಿಸಲ್ಪಡುವ ಹಾಗೆ, ದೇವರು ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದನು. ಆದರೆ ವಿಶ್ವಾಸಿಸದವನಿಗೆ, ದೇವರ ಒಬ್ಬನಾಗಿ ಹುಟ್ಟಿದ ಮಗನ ಹೆಸರಿನಲ್ಲಿ ವಿಶ್ವಾಸಿಸದ ಕಾರಣ, ಆಜ್ಞೆನಿರ್ಣಯವಾಯಿತು. ಆಜ್ಞೆನಿರ್ಣಯವು ಇದೇ,—ಬೆಳಕು ಲೋಕಕ್ಕೆ ಬಂದಿದ್ದರೂ, ಮನುಷ್ಯರು, ಅವರ ಕ್ರಿಯೆಗಳು ಕೆಟ್ಟವಾಗಿರುವ ಕಾರಣ, ಬೆಳಕಿಗಿಂತ ಕತ್ತಲೆಯನ್ನು ಹೆಚ್ಚಾಗಿ ಪ್ರೀತಿ ಮಾಡಿದ್ದಾರೆ.

ಇವುಗಳಾದ ಮೇಲೆ ಯೇಸು, ಆತನ ಶಿಷ್ಯರು ಸಹಿತವಾಗಿ, ಯೆಹೂದ ದೇಶದಲ್ಲಿ ಕಾಲಕ್ಷೇಪ ಮಾಡಿ, ಶಿಷ್ಯರು ಸ್ನಾನ ಕೊಟ್ಟರು. ಹೀಗಿರಲಾಗಿ ಯೋಹಾನನ ಶಿಷ್ಯರು ಇವನ ಬಳಿಗೆ ಬಂದು,—ರಬ್ಬಿಯೇ! ನಿನ್ನ ಸಂಗಡ ಯೊರ್ದಾನಿನ ಆಚೆಯಲ್ಲಿ ಇದ್ದವನು, ನೀನು ಸಾಕ್ಷಿ ಕೊಟ್ಟವನು, ಯಾವನೋ, ಇಗೋ, ಆತನು ಸ್ನಾನ ಕೊಡುತ್ತಾನೆ; ಮತ್ತು ಯೆಲ್ಲರು ಆತನ ಬಳಿಗೆ ಬರುತ್ತಾರೆ, ಅಂದಾಗ, ಯೋಹಾನನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ಪರಲೋಕದಿಂದ ಅವನಿಗೆ ಕೊಡಲ್ಪಟ್ಟ ಹೊರತು, ಮನುಷ್ಯನು ಯಾವದನ್ನೂ ಹೊಂದಲಾರನು. ನಾನು ಕ್ರಿಸ್ತನಲ್ಲಾ, ಆತನ ಮುಂದಾಗಿ ಕಳುಹಿಸಲ್ಪಟ್ಟವನೆಂದು, ನಾ

ನು ಹೇಳಿದ್ದಕ್ಕೆ ನೀವೇ ನನಗೆ ಸಾಕ್ಷಿಗಳಾಗಿದ್ದೀರಿ. ಮದಲಗಿತ್ತಿ ಉಂಟಾದವನೇ ಮದಲಿಂಗನು; ಆದರೆ ಮದಲಿಂಗನ ಸ್ನೇಹಿತನು ನಿಂತು, ಆತನನ್ನು ಕೇಳಿ, ಮದಲಿಂಗನ ಶಬ್ದಕ್ಕೆ ಅತಿ ಸಂತೋಷ ಪಡುತ್ತಾನೆ. ಈ ನನ್ನ ಸಂತೋಷವು ಸಂಪೂರ್ಣವಾಯಿತು. ಆತನು ಬೆಳೆಯ ಬೇಕು; ನಾನು ಕಡಿಮೆ ಆಗ ಬೇಕು. ಪರಲೋಕದಿಂದ ಬರುವವನು ಯೆಲ್ಲರ ಮೇಲೆ ಇದ್ದಾನೆ. ತಾನು ನೋಡಿ ಕೇಳಿದ್ದಕ್ಕೆ ಸಾಕ್ಷಿ ಕೊಡುತ್ತಾನೆ. ಆತನಲ್ಲಿ ವಿಶ್ವಾಸವಿಡುವವನಿಗೆ ನಿತ್ಯ ಜೀವ ಉಂಟು; ಆದರೆ ಆತನಿಗೆ ವಿಧೇಯವಾಗದವನು ಜೀವವನ್ನು ನೋಡುವದಿಲ್ಲಾ, ಆದರೆ ದೇವರ ಕೋಪವು ಅವನ ಮೇಲೆ ನೆಲೆಯಾಗಿರುತ್ತದೆ.

ಆದರೆ ಚತುರಧಿಪತಿಯಾದ ಹೆರೋದನು, ತನ್ನ ಸಹೋದರನಾದ ಫಿಲಿಪ್ಪನ ಹೆಂಡತಿಯಾದ ಹೆರೋದ್ಯಳನ್ನು ಮದುವೆ ಮಾಡಿಕೊಂಡದರಿಂದ, ಯೋಹಾನನು ಅವನಿಗೆ — ನೀನು ನಿನ್ನ ಸಹೋದರನ ಹೆಂಡತಿಯನ್ನು ಇಟ್ಟುಕೊಳ್ಳುವದು ನ್ಯಾಯವಲ್ಲಾ, ಯೆಂದು ಹೇಳಿ, ಅವನು ಮಾಡಿದ ಯೆಲ್ಲಾ ದುಷ್ಕ್ರಿಯೆಗಳ ವಿಷಯವಾಗಿ ಗದರಿಸಿದನು. ಆಗ ಹೆರೋದನು ಕಳುಹಿಸಿ, ಯೋಹಾನನನ್ನು ಹಿಡಿದು, ಶೆರೆಯಲ್ಲಿ ಕಟ್ಟಿ ಹಾಕಿಸಿದನು.

---

೭. ಸಮಾರ್ಯಳು.

(ಯೋ. ೪, ೧–೪೪.)

ಯೇಸು ಯೆಹೂದವನ್ನು ಬಿಟ್ಟು, ಗಲಿಲಾಯಕ್ಕೆ ತಿರಿಗಿ ಹೋದನು. ಆದರೆ ಆತನು ಸಮಾರ್ಯವೆಂಬ ಸೀಮೆಯನ್ನು ಹಾದು ಹೋಗ ಬೇಕಾದದರಿಂದ, ಸಿಖಾರೆಂಬ ಸಮಾರ್ಯದ ಪಟ್ಟಣಕ್ಕೆ ಬಂದನು. ಅಲ್ಲಿ ಯಾಕೋಬನ ಭಾವಿ ಇತ್ತು. (೧ ಮೋಶೆ. ೩೩, ೧೯.) ಆದದರಿಂದ ಯೇಸು ಮಾರ್ಗಾಯಾಸ ಪಟ್ಟು, ಭಾವಿಯ ಬಳಿಯಲ್ಲಿ ಕೂತುಕೊಂಡನು. ಹೊತ್ತುಕಡಿಮೆ ಆರನೇ ತಾಸಾಗಿತ್ತು.

ಆಗ ಸಮಾರ್ಯದವಳಾದ ವೊಬ್ಬ ಸ್ತ್ರೀಯು ನೀರು ಶೇದುವದಕ್ಕೆ ಬಂದಳು. ಯೇಸು ಅವಳಿಗೆ—ನನಗೆ ಕುಡಿಯ ಕೊಡು, ಅಂದನು. ಯಾಕಂದರೆ ಆತನ ಶಿಷ್ಯರು ಆಹಾರವನ್ನು ಕೊಂಡುಕೊಳ್ಳುವ ಬಗ್ಗೆ ಪಟ್ಟಣಕ್ಕೆ ಹೋಗಿದ್ದರು. ಹೀಗಿರಲಾಗಿ ಆ ಸಮಾರ್ಯದವಳಾದ ಸ್ತ್ರೀ ಆತನಿಗೆ — ಯೆಹೂದ್ಯನಾದ ನೀನು ಸಮಾರ್ಯಸ್ತ್ರೀಯಾದ ನನ್ನಿಂದ ಕುಡಿಯ ಕೇಳುವದೇನು? ಯೆಹೂದ್ಯ



ರಿಗೂ ಸಮಾರ್ಯರಿಗೂ ಬಳಿಕೆ ಇಲ್ಲವಲ್ಲಾ? ಅಂದಳು. ಯೇಸು ಪ್ರತ್ಯುತ್ತರವಾಗಿ ಅವಳಿಗೆ ಹೇಳಿದ್ದು,—ನೀನು ದೇವರ ವರವನ್ನೂ, ನಿನಗೆ ಕುಡಿಯ ಕೊಡೆಂದು ನಿನಗೆ ಹೇಳುವವನು ಯಾರೆಂಬುವದನ್ನೂ ತಿಳಿದರೆ, ನೀನು ಅವನನ್ನು ಬೇಡಿಕೊಳ್ಳುತ್ತಿದ್ದಿ, ಮತ್ತು ನಿನಗೆ ಜೀವವುಳ್ಳ ನೀರನ್ನು ಕೊಡುತ್ತಿದ್ದನು. ಸ್ತ್ರೀಯು ಆತನಿಗೆ—ಅಯ್ಯಾ, ಶೇದುವದಕ್ಕೆ ನಿನಗೇನೂ ಇಲ್ಲಾ; ಮತ್ತು ಬಾವಿ ಆಳವಾಗಿದೆ; ಆದಕಾರಣ ಜೀವವುಳ್ಳ ನೀರು ನಿನಗೆ ಯೆಲ್ಲಿಂದ ಬರುವದು? ನಮಗೆ ಈ ಬಾವಿಯನ್ನು ಕೊಟ್ಟು, ಅದರಲ್ಲಿ ಕುಡಿದ ನಮ್ಮ ತಂದೆಯಾದ ಯಾಕೋಬನಿಗಿಂತ ನೀನು ದೊಡ್ಡವನಾಗಿದ್ದೀಯೋ? ಅನ್ನಲು, ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ಈ ನೀರು ಕುಡಿಯುವವರೆಲ್ಲರು ತಿರಿಗಿ ದಾಹಗೊಳ್ಳುವರು. ಆದರೆ ನಾನು ಕೊಡುವ ನೀರು ಕುಡಿಯುವವನು ಯೆಂದೆಂದಿಗೂ ದಾಹಗೊಳ್ಳುವದಿಲ್ಲಾ; ಆದರೆ ನಾನು ಅವನಿಗೆ ಕೊಡುವ ನೀರು ಅವನಲ್ಲಿ ನಿ

ತ್ಯ ಜೀವಕ್ಕೆ ಹಾರಿಯುವ ನೀರಿನ ಬುಗ್ಗೆಯಾಗುವದು. ಸ್ತ್ರೀಯು ಆತನಿಗೆ—
ಅಯ್ಯಾ, ನಾನು ದಾಹಗೊಳ್ಳದೆ, ತೇದುವದಕ್ಕೆ ಇಲ್ಲಿಗೆ ಬಾರದೆ ಇರುವ ಹಾ
ಗೆ, ನನಗೆ ಆ ನೀರನ್ನು ಕೊಡು! ಅಂದಳು. ಅವಳಿಗೆ ಯೇಸು—ನೀನು
ಹೋಗಿ, ನಿನ್ನ ಗಂಡನನ್ನು ಕರಕೊಂಡು, ಇಲ್ಲಿಗೆ ಬಾ! ಅಂದನು. ಸ್ತ್ರೀಯು
ಪ್ರತ್ಯುತ್ತರವಾಗಿ,—ನನಗೆ ಗಂಡನಿಲ್ಲಾ, ಅಂದಳು. ಯೇಸು ಅವಳಿಗೆ—ನಿನ
ಗೆ ಗಂಡನಿಲ್ಲವೆಂದು ಸರಿಯಾಗಿ ಹೇಳಿದ್ದೀ; ಯಾಕಂದರೆ ನಿನಗೆ ಐದು ಮಂ
ದಿ ಗಂಡಂದಿರು ಇದ್ದರು; ಮತ್ತು ಈಗ ನಿನಗೆ ಇರುವವನು ನಿನ್ನ ಗಂಡನ
ಲ್ಲಾ; ಇದು ನಿಜವಾಗಿ ಹೇಳಿದ್ದೀ, ಅಂದನು. ಸ್ತ್ರೀಯು ಆತನಿಗೆ—ಅ
ಯ್ಯಾ, ನೀನು ಪ್ರವಾದಿಯಾಗಿದ್ದೀ ಯೆಂದು ನೋಡುತ್ತೇನೆ; ನಮ್ಮ ಪಿತೃಗಳು
ಈ ಬೆಟ್ಟದಲ್ಲಿ ಆರಾಧಿಸಿದರು; ಆದರೆ ನೀವು—ಆರಾಧಿಸ ಬೇಕಾದ ಸ್ಥಳವು
ಯೆರೂಸಲೇಮಿನಲ್ಲಿ ಅದೆ, ಯೆಂದು ಹೇಳುತ್ತೀರಿ, ಅಂದಳು. ಯೇಸು ಅ
ವಳಿಗೆ ಹೇಳಿದ್ದು,—ಸ್ತ್ರೀಯೇ, ನನ್ನನ್ನು ನಂಬು, ನೀವು ಈ ಬೆಟ್ಟದಲ್ಲಿಯಾ
ದರೂ, ಯೆರೂಸಲೇಮಿನಲ್ಲಿಯಾದರೂ ತಂದೆಯನ್ನು ಆರಾಧಿಸದೆ ಇರುವ
ಕಾಲ ಬರುತ್ತದೆ. ನೀವು ಅರಿಯದೆ ಇಗುವದನ್ನು ಆರಾಧಿಸುತ್ತೀರಿ; ನಾವು
ಅರಿತಿರುವದನ್ನು ಆರಾಧಿಸುತ್ತೇವೆ; ಯಾಕಂದರೆ ರಕ್ಷಣೆಯು ಯೆಹೂದ್ಯರಿಂ
ದ ಉಂಟಾಗಿದೆ. ಆದರೆ ಸತ್ಯವಾಗಿ ಆರಾಧಿಸುವವರು ತಂದೆಯನ್ನು ಆ
ತ್ಮದಿಂದಲೂ ಸತ್ಯದಿಂದಲೂ ಆರಾಧಿಸುವ ತಾಸು ಬರುತ್ತದೆ, ಮತ್ತು ಈಗ
ಲೇ ಅದೆ. ಯಾಕಂದರೆ ತಂದೆಯು ತನ್ನನ್ನು ಈ ಪ್ರಕಾರ ಆರಾಧಿಸುವವರ
ನ್ನು ಇಚ್ಛಯಿಸುತ್ತಾನೆ. ದೇವರು ಆತ್ಮವು; ಮತ್ತು ಆತನನ್ನು ಆರಾಧಿಸುವ
ವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು. ಸ್ತ್ರೀಯು ಆತನಿ
ಗೆ—ಕ್ರಿಸ್ತನೆಂಬ ಮೆಸ್ಸೀಯನು ಬರುತ್ತಾನೆಂದು ಬಲ್ಲೆನು; ಆತನು ಬಂದಾ
ಗ, ನಮಗೆ ಯೆಲ್ಲವುಗಳನ್ನು ತಿಳಿಸುವನು, ಅನ್ನಲು, ಯೇಸು ಅವಳಿಗೆ—ನಿ
ನ್ನ ಸಂಗಡ ಮಾತಾಡುವ ನಾನು ಅವನೇ, ಅಂದನು. ಆಗ ಸ್ತ್ರೀಯು ತನ್ನ
ಕೊಡವನ್ನು ಬಿಟ್ಟು, ಪಟ್ಣಕ್ಕೆ ಹೋಗಿ, ಜನರಿಗೆ—ಬನ್ನಿರಿ! ನಾನು ಮಾಡಿದವು
ಗಳನ್ನೆಲ್ಲಾ ನನಗೆ ಹೇಳಿದ ಮನುಷ್ಯನನ್ನು ನೋಡಿರಿ! ಈತನು ಕ್ರಿಸ್ತನಲ್ಲ

ವನೋ? ಅಂದಾಗ, ಅವರು ಪಟ್ಟಣದಿಂದ ಹೊರಟು, ಆತನ ಬಳಿಗೆ ಬಂದರು.

ಅಷ್ಟರೊಳಗೆ ಶಿಷ್ಯರು ಆತನಿಗೆ—ರಬ್ಬಿಯೇ, ಊಟ ಮಾಡು! ಯೆಂದು ಆತನನ್ನು ಬೇಡಿಕೊಂಡರು. ಆದರೆ ಆತನು ಅವರಿಗೆ—ನೀವು ಅರಿಯದ ಆಹಾರವು ನನಗೆ ಉಣ್ಣುವದಕ್ಕೆ ಉಂಟು, ಅಂದನು. ಆದದರಿಂದ—ಯಾರಾದರೂ ಆತನಿಗೆ ಊಟಕ್ಕೆ ತಂದರೋ? ಯೆಂದು ಶಿಷ್ಯರು ತಮ್ಮೊಳಗೆ ಹೇಳಿಕೊಂಡರು. ಯೇಸು ಅವರಿಗೆ ಹೇಳಿದ್ದು,—ನನ್ನನ್ನು ಕಳುಹಿಸಿದವನ ಚಿತ್ತವನ್ನು ಮಾಡಿ, ಆತನ ಕೆಲಸವನ್ನು ತೀರಿಸುವದೇ ನನ್ನ ಆಹಾರವಾಗಿದೆ.

ಆ ಪಟ್ಟಣದವರಾದ ಸಮಾರ್ಯರಲ್ಲಿ ಅನೇಕರು,—ನಾನು ಮಾಡಿದವುಗಳನ್ನೆಲ್ಲಾ ನನಗೆ ಹೇಳಿದ್ದಾನೆ, ಯೆಂದು ಸಾಕ್ಷಿ ಕೊಟ್ಟ ಸ್ತ್ರೀಯ ಮಾತಿಗೋಸ್ಕರ ಆತನಲ್ಲಿ ವಿಶ್ವಾಸವಿಟ್ಟರು. ಆದದರಿಂದ ಸಮಾರ್ಯರು ಆತನ ಬಳಿಗೆ ಬಂದು, ತಮ್ಮ ಸಂಗಡ ಇರ ಬೇಕೆಂದು ಆತನನ್ನು ಬೇಡಿ ಕೊಂಡರು. ಆಗಲಾತನು ಯೆರಡು ದಿವಸ ಅಲ್ಲಿ ಇದ್ದನು. ಆಗ ಇನ್ನೂ ಅನೇಕರು ಆತನ ವಾಕ್ಯಕ್ಕೋಸ್ಕರ ವಿಶ್ವಾಸಿಸಿ, ಆ ಸ್ತ್ರೀಗೆ—ಇನ್ನೂ ನಾವು ನಿನ್ನ ಮಾತಿಗೋಸ್ಕರ ವಿಶ್ವಾಸಿಸುವವರಲ್ಲಾ; ಯಾಕಂದರೆ ನಮಗೆ ನಾವೇ ಕೇಳಿ, ಈತನೇ ನಿಜವಾಗಿ ಲೋಕದ ರಕ್ಷಕನಾದ ಕ್ರಿಸ್ತನೆಂದು ಬಲ್ಲೆವು; ಅಂದರು.—ಆ ಯೆರಡು ದಿವಸಗಳಾದ ಮೇಲೆ ಯೇಸು ಅಲ್ಲಿಂದ ಹೊರಟು, ಗಲಿಲಾಯಕ್ಕೆ ಹೋದನು.

---

೮. ಪ್ರಧಾನಿಯ ಮಗನು. ಕಪೆರ್ನವೂಮಿನಲ್ಲಿ ಮಾಡಿದ ಮೊದಲನೇ ಅದ್ಭುತಗಳು.

(ಯೋ. ೪, ೪೬—೫೪. ಮತ್ತ. ೪, ೧೨—೧೭. ಮಾರ್ಕ. ೧, ೨೧—೩೮. ಲೂಕ. ೪, ೩೧—೪೪.)

ಯೇಸು ಗಲಿಲಾಯಕ್ಕೆ ಬಂದಾಗ, ಆತನು ಯೆರೂಸಲೇಮಿನಲ್ಲಿ ಹಬ್ಬದಲ್ಲಿ ಮಾಡಿದವುಗಳನ್ನೆಲ್ಲಾ ನೋಡಿದ ಗಲಿಲಾಯದವರು ಆತನನ್ನು ಅಂಗೀ

ಕರಿಸಿದರು. ಈ ಪ್ರಕಾರ ಯೇಸು ತಾನು ನೀರನ್ನು ದ್ರಾಕ್ಷೆರಸವಾಗ ಮಾಡಿದ ಗಲಿಲಾಯದ ಕಾನಕ್ಕೆ ತಿರಿಗಿ ಬಂದನು. ಆಗ ಕಪೆರ್ನವೂಮಿನಲ್ಲಿ ರೋಗಿಷ್ಟ ಮಗನು ಇದ್ದ ಒಬ್ಬ ಪ್ರಧಾನಿಯು ಇದ್ದನು. ಅವನು ಯೇಸು ಯೆಹೂದದಿಂದ ಗಲಿಲಾಯಕ್ಕೆ ಬಂದ ವರ್ತಮಾನವನ್ನು ಕೇಳಿ, ಆತನ ಬಳಿಗೆ ಹೋಗಿ,—ಇಳಿದು ಬಂದು, ನನ್ನ ಮಗನನ್ನು ಸ್ವಸ್ಥ ಮಾಡ ಬೇಕು, ಯೆಂದು ಆತನನ್ನು ಬೇಡಿಕೊಂಡನು. ಯೇಸು ಅವನಿಗೆ—ನೀವು ಲಕ್ಷಣಗಳನ್ನೂ ಅದ್ಭುತಗಳನ್ನೂ ನೋಡಿದ ಹೊರತು ವಿಶ್ವಾಸಿಸುವದೇ ಇಲ್ಲ, ಅಂದನು. ಪ್ರಧಾನಿಯು ಆತನಿಗೆ,—ಕರ್ತನೇ, ನನ್ನ ಮಗನು ಸಾಯುವದಕ್ಕೆ ಮುಂಚೆ ಇಳಿದು ಬಾ, ಅನ್ನಲು, ಅವನಿಗೆ ಯೇಸು—ಹೋಗು! ನಿನ್ನ ಮಗನು ಬದುಕುತ್ತಾನೆ, ಅಂದನು. ಆ ಮನುಷ್ಯನು, ಯೇಸು ತನಗೆ ಹೇಳಿದ ವಾಕ್ಯವನ್ನು ನಂಬಿ, ಹೋದನು. ಅವನು ಇನ್ನೂ ಇಳಿದು ಹೋಗುತ್ತಿರುವಾಗ, ಅವನ ದಾಸರು ಅವನ ಯೆದುರಿಗೆ ಬಂದು,—ನಿನ್ನ ಮಗನು ಬದುಕುತ್ತಾನೆ, ಅಂದರು. ಆದದರಿಂದ—ಯೆಷ್ಟನೇ ತಾಸಿನಲ್ಲಿ ಅವನಿಗೆ ಲಘುವಾಯಿತು? ಯೆಂದು ಅವರಲ್ಲಿ ವಿಚಾರಿಸಲು, ಅವನಿಗೆ—ನಿನ್ನೆ, ಯೇಳನೇ ತಾಸಿನಲ್ಲಿ ಜ್ವರವು ಅವನನ್ನು ಬಿಟ್ಟು ಹೋಯಿತು, ಅಂದರು. ಆಗ ಅವನು ತನ್ನ ಮನೆಯೆಲ್ಲಾ ಸಹಿತವಾಗಿ ವಿಶ್ವಾಸಿಸಿದನು.

ಮತ್ತು ಯೊರ್ದಾನಿನ ಆಚೆಯಿಂದ ಸಮುದ್ರಕ್ಕೆ ಹೋಗುವ ಮಾರ್ಗದಲ್ಲಿ ಇರುವ ಜೆಬುಲೋನ್ ದೇಶವೂ, ನೆಫ್ತಲೀಮ್ ದೇಶವೂ, ಜನಾಂಗಗಳ ಗಲಿಲಾಯವೂ, ಕತ್ತಲೆಯಲ್ಲಿ ಕೂದ್ರುವ ಜನರೂ, ದೊಡ್ಡ ಬೆಳಕನ್ನು ನೋಡಿದರು; ಮರಣದ ದೇಶದಲ್ಲಿಯೂ ನೆರಳಿನಲ್ಲಿಯೂ ಕೂದ್ರುವವರಿಗೆ ಬೆಳಕು ಹುಟ್ಟಿತು ಯೆಂಬದಾಗಿ, ಪ್ರವಾದಿಯಾದ ಯೆಶಾಯನ ಮುಖಾಂತರ ಹೇಳಿದ ಮಾತು (ಯೆಶ್. ೯, ೧.) ಈಡೇರುವ ಹಾಗೆ, ಯೇಸು ನಜರೇತನ್ನು ಬಿಟ್ಟು, ಜೆಬುಲೋನ್ ನೆಫ್ತಲೀಮ್ ಮೇರೆಗಳಲ್ಲಿ (ಗೆನೆಜರೇತ್ ಸರೋವರ ಯೆಂಬ) ಗಲಿಲಾಯದ ಸಮುದ್ರಕ್ಕೆ ಸಮೀಪವಾದ ಕಪೆರ್ನವೂಮಿಗೆ ಬಂದು ವಾಸಮಾಡಿದನು. ಅಂದಿನಿಂದ ಯೇಸು—ಮಾನಸಾಂತರ ಪಡಿರಿ! ಸ

ವಾರ್ತೆಯಲ್ಲಿ ವಿಶ್ವಾಸವಿಡಿರಿ! ಯಾಕಂದರೆ ಪರಲೋಕರಾಜ್ಯವು ಸಮೀಪವಾಯಿತು! ಯೆಂದು ಹೇಳಿ, ಸಾರಲಾರಂಭಿಸಿದನು.

ಮತ್ತು ಆತನು ಸಬ್ಬಥಿನಲ್ಲಿ ಕಪೆರ್ನೌಮಿನ ಸಭಾಮನೆಗೆ ಹೋಗಿ, ಬೋಧಿಸಿದನು. ಮತ್ತು ಆತನ ಬೋಧನೆಗೆ ಆಶ್ಚರ್ಯಪಟ್ಟರು; ಯಾಕಂದರೆ ಶಾಸ್ತ್ರಿಗಳ ಹಾಗಲ್ಲ, ಅಧಿಕಾರ ಉಂಟಾದವನ ಹಾಗೆ ಅವರನ್ನು ಬೋಧಿಸುತ್ತಿದ್ದನು. ಇದಲ್ಲದೆ ಅವರ ಸಭಾಮನೆಯಲ್ಲಿ ಅಶುದ್ಧಾತ್ಮವುಳ್ಳ ವೊಬ್ಬ ಮನುಷ್ಯನು ಇದ್ದನು. ಅವನು ಘಟ್ಟಿಯಾಗಿ ಕೂಗಿದ್ದೇನಂದರೆ,—ನಜರೇತಿನವನಾದ ಯೇಸುವೇ, ಬಿಡು! ನಮಗೂ ನಿನಗೂ ಯೇನು? ನಮ್ಮನ್ನು ನಾಶಮಾಡ ಬಂದಿಯೋ? ನೀನು ಯಾರೆಂದು ಬಲ್ಲೆನು, ದೇವರ ಪರಿಶುದ್ಧನೇ! ಆಗ ಯೇಸು ಅದನ್ನು ಗದರಿಸಿ,—ಮೌನವಾಗಿರು! ಅವನೊಳಗಿಂದ ಹೊರಡು! ಅಂದನು. ಅಶುದ್ಧಾತ್ಮವು ಅವನನ್ನು ವೊದ್ದಾಡಿಸಿ, ಮಹಾ ಶಬ್ದದಿಂದ ಕೂಗಿ, ಅವನೊಳಗಿಂದ ಹೊರಟಿತು. ಮತ್ತು ಯೆಲ್ಲರೂ ಅತ್ಯಾಶ್ಚರ್ಯಪಟ್ಟು,—ಇದು ಯೇನು? ಈ ಹೊಸ ಬೋಧನೆ ಯೇನು? ಆತನು ಅಶುದ್ಧಾತ್ಮಗಳಿಗೂ ಅಧಿಕಾರದಿಂದ ಅಪ್ಪಣೆ ಕೊಡುತ್ತಾನೆ; ಅವು ಆತನಿಗೆ ವಿಧೇಯವಾಗಿವೆ, ಯೆಂದು ತಮ್ಮಲ್ಲಿ ತರ್ಕಿಸಿಕೊಂಡರು. ಸಂಗಡಲೇ ಆತನ ಸುದ್ದಿಯು ಗಲಿಲಾಯದ ಸುತ್ತಲಿರುವ ದೇಶಕ್ಕೆಲ್ಲಾ ಹಬ್ಬಿತು.

ಆಗಲೇ ಸಭಾಮನೆಯೊಳಗಿಂದ ಹೊರಟು, ಯೇಸು ಯಾಕೋಬ್ ಯೋಹಾನರ ಸಂಗಡ ಸೀಮೋನ್ ಅಂದ್ರೇಯರ ಮನೆಗೆ ಬಂದನು. ಆದರೆ ಸೀಮೋನನ ಅತ್ತೆ ಜ್ವರದಲ್ಲಿ ಬಿದ್ದಿರಲಾಗಿ, ಸಂಗಡಲೇ ಅವಳನ್ನು ಕುರಿತು ಆತನಿಗೆ ಹೇಳಿದರು. ಆತನು ಹತ್ತರ ಬಂದು, ಅವಳ ಕೈ ಹಿಡಿದು, ಅವಳನ್ನು ಯೆಬ್ಬಿಸಿದನು. ಆಗಲೇ ಜ್ವರವು ಅವಳನ್ನು ಬಿಟ್ಟಿತು; ಮತ್ತು ಅವರಿಗೆ ಸೇವೆ ಮಾಡಿದಳು.

ಆದರೆ ಸಾಯಂಕಾಲವಾಗಿ, ಸೂರ್ಯನು ಮುಣುಗಿದಾಗ, ಅವರು ಅಸೌಖ್ಯವಾಗಿಯೂ, ದೆವ್ವ ಹಿಡಿದವರಾಗಿಯೂ ಇರುವವರೆಲ್ಲರನ್ನು ಆತನ ಬಳಿಗೆ ತಂದರು. ಇದಲ್ಲದೆ ಪಟ್ಣವೆಲ್ಲಾ ಬಾಗಲಿನ ಬಳಿಯಲ್ಲಿ ಕೂಡಿ ಬಂದಿತ್ತು.

ಆಗಲಾತನು ನಾನಾ ರೋಗಗಳಿಂದ ಅಸೌಖ್ಯವಾಗಿರುವ ಅನೇಕರನ್ನು ಸ್ವಸ್ಥ ಮಾಡಿ, ಅನೇಕ ದೆವ್ವಗಳನ್ನು ಹೊರಡಿಸಿ, ದೆವ್ವಗಳು ಆತನನ್ನು ಅರಿತಿರುವದರಿಂದ, ಅವುಗಳನ್ನು ಮಾತಾಡಗೊಡಿಸಲಿಲ್ಲ.

ಬೆಳಿಗ್ಗೆ ಇನ್ನೂ ಬಹಳ ಕತ್ತಲೆ ಇರುವಾಗ, ಆತನು ಯೆದ್ದು, ಹೊರಟು, ಅರಣ್ಯ ಸ್ಥಳಕ್ಕೆ ಹೋಗಿ, ಅಲ್ಲಿ ಪ್ರಾರ್ಥನೆ ಮಾಡಿದನು. ಮತ್ತು ಸೀಮೋನನೂ, ಅವನ ಸಂಗಡ ಇದ್ದವರೂ ಆತನನ್ನು ಹಿಂದಟ್ಟಿ, ಆತನನ್ನು ಕಂಡು, – ಯೆಲ್ಲರೂ ನಿನ್ನನ್ನು ಹುಡುಕುತ್ತಾರೆ, ಯೆಂದು ಆತನಿಗೆ ಹೇಳಿದಾಗ, ಆತನು ಅವರಿಗೆ – ನಾನು ಅಲ್ಲಿಯೂ ಸಾರುವ ಹಾಗೆ ಸಮೀಪವಾಗಿರುವ ಊರುಗಳಿಗೆ ಹೋಗುವಾ; ಯಾಕಂದರೆ ಅದಕ್ಕಾಗಿ ಹೊರಟು ಬಂದಿದ್ದೇನೆ, ಅಂದನು. ಆಗಲಾತನು ಗಲಿಲಾಯವೆಲ್ಲದರಲ್ಲಿ ಅವರ ಸಭೆಮನೆಗಳಲ್ಲಿ ಸಾರುತ್ತಾ, ದೆವ್ವಗಳನ್ನು ಹೊರಡಿಸುತ್ತಾ, ಬಂದನು.

---

೯. ಐದು ಮಂದಿ ಶಿಷ್ಯರನ್ನು ಕರದದ್ದು.
ಪಕ್ಷವಾಯುವಿನವನು.

(ಮತ್ಥ. ೪, ೧೮–೨೨. ೯, ೧–೧೭. ಮಾರ್ಕ. ೧, ೧೬–೨೦. ೨, ೧–೨೨. ಲೂಕ. ೫, ೧–೧೧. ೧೭–೩೯.)

ಸಮೂಹವು ದೇವರ ವಾಕ್ಯವನ್ನು ಕೇಳುವದಕ್ಕೆ ಆತನ ಮೇಲೆ ಬಿದ್ದುಕೊಂಡಿರುವಾಗ, ಯೇಸು ಗೆನೆಜರೇತ್ ಸರೋವರದ ಬಳಿಯಲ್ಲಿ ನಿಂತಿದ್ದನು. ಆಗಲಾತನು ಸೀಮೋನನದಾಗಿರುವ ಒಂದು ಹಡಗದಲ್ಲಿ ಯೇರಿ, ದಡದಿಂದ ಸ್ವಲ್ಪ ದೂರ ನೂಕಬೇಕೆಂದು ಅವನನ್ನು ಬೇಡಿಕೊಂಡು, ಕೂತು, ಹಡಗದೊಳಗಿಂದ ಸಮೂಹಗಳನ್ನು ಬೋಧಿಸಿದನು. ಮಾತಾಡಿ ತೀರಿಸಿದ ಮೇಲೆ, – ಆಳವಾದ ಸ್ಥಳಕ್ಕೆ ನಡಿಸಿ, ಮೀನುಬೇಟೆಗೆ ನಿಮ್ಮ ಬಲೆಗಳನ್ನು ಇಳಿಸಿರಿ, ಅಂದನು. ಸೀಮೋನನು ಪ್ರತ್ಯುತ್ತರವಾಗಿ, – ಅಯ್ಯಾ, ನಾವು ರಾತ್ರಿಯೆಲ್ಲಾ ಕಷ್ಟ ಮಾಡಿದರೂ, ಯೇನೂ ಶಿಗಲಿಲ್ಲ; ಆದಾಗ್ಯೂ ನಿನ್ನ ಮಾತಿನ

ಮೇರೆಗೆ ಬಲೆ ಇಳಿಸುತ್ತೇನೆ, ಯೆಂದು ಆತನಿಗೆ ಹೇಳಿದನು. ಅದನ್ನು ಮಾಡಿ, ಮೀನುಗಳ ದೊಡ್ಡ ಸಮೂಹವನ್ನು ಕೂಡಿಸಿದರು. ಮತ್ತು ಅವರ ಬಲೆ ಹರಿದು ಹೋಯಿತು. ಆಗಲವರು ಬೇರೆ ಹಡಗದಲ್ಲಿದ್ದ ಜತೆಗಾರರಿಗೆ, ಬಂದು, ತಮಗೆ ಸಹಾಯ ಮಾಡಬೇಕೆಂದು ಸನ್ನೆ ಮಾಡಿದರು. ಅವರು ಬಂದ ಮೇಲೆ, ಯೆರಡು ಹಡಗಗಳನ್ನೂ, ಅವು ಮುಣುಗುವಷ್ಟು ತುಂಬಿಸಿದರು. ಸೀಮೋನ್ ಪೇತ್ರನು ಅದನ್ನು ನೋಡಿ, ಯೇಸುವಿನ ಮೊಣಕಾಲುಗಳ ಮುಂದೆ ಬಿದ್ದು, —ಕರ್ತನೇ, ನನ್ನನ್ನು ಬಿಟ್ಟು ಹೋಗು! ಪಾಪಿಯಾದ ಮನುಷ್ಯನಾಗಿದ್ದೇನೆ, ಅಂದನು. ಯಾಕಂದರೆ ಅವರು ಹಿಡಿದ ಮೀನುಗಳ ರಾಶಿಯ ನಿಮಿತ್ತ ಅವನಿಗೂ ಅವನ ಸಂಗಡಲಿದ್ದವರೆಲ್ಲರಿಗೂ ದಿಗಿಲು ಹುಟ್ಟಿತು. ಸೀಮೋನನ ಪಾಲುಗಾರರಾದ ಜೆಬೆದಾಯನ ಮಕ್ಕಳಾದ ಯಾಕೋಬನಿಗೂ ಯೋಹಾನನಿಗೂ ಅದೇ ಪ್ರಕಾರವಾಯಿತು. ಆಗ ಯೇಸು ಸೀಮೋನನಿಗೂ ಅವನ ಸಹೋದರನಾದ ಅಂದ್ರೇಯನಿಗೂ —ಭಯ ಪಡಬೇಡ; ನನ್ನ ಹಿಂದೆ ಬನ್ನಿರಿ! ನಿಮ್ಮನ್ನು ಮನುಷ್ಯರನ್ನು ಹಿಡಿಯುವವರಾಗ ಮಾಡುವೆನು, ಅಂದನು. ಮತ್ತು ಅವರು ಹಡಗವನ್ನು ದಡಕ್ಕೆ ತಂದು, ಯೆಲ್ಲಾ ಬಿಟ್ಟು, ಆತನನ್ನು ಹಿಂಬಾಲಿಸಿದರು. ಅಲ್ಲಿಂದ ಮುಂದೆ ಹೋಗಿ, ಯಾಕೋಬನೂ ಅವನ ಸಹೋದರನಾದ ಯೋಹಾನನೂ ಹಡಗದಲ್ಲಿ ತಮ್ಮ ತಂದೆಯಾದ ಜೆಬೆದಾಯನ ಸಂಗಡ ತಮ್ಮ ಬಲೆಗಳನ್ನು ನೆಟ್ಟಗೆ ಮಾಡುವದನ್ನು ಕಂಡು, ಅವರನ್ನು ಕರದನು. ಸಂಗಡಲೇ ಅವರು ಹಡಗವನ್ನೂ ತಮ್ಮ ತಂದೆಯನ್ನೂ ಬಿಟ್ಟು, ಆತನನ್ನು ಹಿಂಬಾಲಿಸಿದರು.

ಕೆಲವು ದಿವಸಗಳಾದ ಮೇಲೆ, ಯೇಸು ತಿರಿಗಿ ಕಪೆರ್ನಹೂಮಿನಲ್ಲಿ ಪ್ರವೇಶಿಸಿದನು. ಮತ್ತು ಆತನು ಮನೆಯಲ್ಲಿ ಇದ್ದಾನೆಂದು ಸುದ್ದಿ ಆದಾಗಲೇ, ಬಾಗಲಿನ ಸಮೀಪದಲ್ಲಿ ಆದರೂ ಸ್ಥಳ ಸಾಲದ ಹಾಗೆ, ಅನೇಕರು ಕೂಡಿಕೊಳ್ಳಲು, ಅವರಿಗೆ ವಾಕ್ಯವನ್ನು ಹೇಳಿದನು. ಆಗ ನಾಲ್ಕು ಜನರು ಒಬ್ಬ ಪಕ್ಷವಾಯುವಿನವನನ್ನು ಮಂಚದ ಮೇಲೆ ಹೊತ್ತುಕೊಂಡು, ಆತನ ಬಳಿಗೆ ತೆಗದುಕೊಂಡು ಬಂದರು. ಸಮೂಹದ ನಿಮಿತ್ತ ಆತನ ಸಮೀಪ



ಕ್ಕೆ ಬರಲಾರದೆ, ಆತನು ಇದ್ದ ಮನೆಯ ಮೇಲೆ ಯೇರಿ, ಹೆಂಚುಗಳನ್ನು ತೆಗೆದು, ತಾರದು, ಆ ಪಕ್ಷವಾಯುವಿನವನು ಬಿದ್ದಿರುವ ಮಂಚವನ್ನು ಯೇಸುವಿನ ಮುಂದಕ್ಕೆ ಇಳಿಸಿದರು. ಆತನು ಅವರ ವಿಶ್ವಾಸವನ್ನು ನೋಡಿ, ಆ ಪಕ್ಷವಾಯುವಿನವನಿಗೆ—ಮಗನೇ, ಧೈರ್ಯವಾಗಿರು! ನಿನ್ನ ಪಾಪಗಳು ನಿನಗೆ ಮನ್ನಿಸಲ್ಪಟ್ಟವೆ, ಅಂದನು. ಆದರೆ ಶಾಸ್ತ್ರಿಗಳಲ್ಲಿ ಕೆಲವರು ಅಲ್ಲಿ ಕೂತುಕೊಂಡು,—ಇವನು ಯಾಕೆ ಹೀಗೆ ದೂಷಣೆ ಹೇಳುತ್ತಾನೆ? ದೇವರೊಬ್ಬನೇ ಹೊರತು ಪಾಪಗಳನ್ನು ಮನ್ನಿಸ ಶಕ್ತನು ಯಾರು? ಯೆಂದು ತಮ್ಮ ಹೃದಯಗಳಲ್ಲಿ ಆಲೋಚಿಸುತ್ತಿದ್ದರು. ಸಂಗಡಲೇ ಯೇಸು ಹೀಗೆ ತಂಮಲ್ಲಿ ಆಲೋಚಿಸುತ್ತಾರೆಂದು ತನ್ನ ಆತ್ಮದಲ್ಲಿ ತಿಳುಕೊಂಡು, ಅವರಿಗೆ ಹೇಳಿದ್ದೇನಂದರೆ,—ನೀವು ಯಾಕೆ ನಿಮ್ಮ ಹೃಯಗಳಲ್ಲಿ ಕೆಟ್ಟವುಗಳನ್ನು ಆಲೋಚಿಸಿಕೊಳ್ಳುತ್ತೀರಿ? ಯಾವದು ಸುಲಭ? ನಿನ್ನಪಾಪಗಳು ಮನ್ನಿಸಲ್ಪಟ್ಟವೆ ಯೆಂದು ಹೇಳುವದೋ? ಇಲ್ಲವೆ ಯೆದ್ದು ತಿರುಗಾಡು ಯೆಂದು ಹೇಳುವದೋ? ಆದರೆ ಭೂಮಿಯ ಮೇಲೆ ಪಾಪಗಳನ್ನು ಮನ್ನಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾರ ಉಂಟೆಂದು ನೀವು ತಿಳಿಯುವ ಹಾಗೆ, ಅವನು ಪಕ್ಷವಾಯುವಿನವನಿಗೆ,—ಯೆದ್ದು, ನಿನ್ನ ಮಂಚ ಯೆತ್ತಿ, ನಿನ್ನ ಮನೆಗೆ ಹೋಗೆಂದು

ನಿನಗೆ ಹೇಳುತ್ತೇನೆ! ಅಂದನು. ಸಂಗಡಲೇ ಆವನು ಯೆದ್ದು, ತಾನು ಮಲಗಿದ್ದ ಮಂಚವನ್ನು ಯೆತ್ತಿ, ದೇವರನ್ನು ಮಹಿಮೆ ಪಡಿಸುತ್ತಾ ತನ್ನ ಮನೆಗೆ ಹೋದನು. ಅದಕ್ಕೆ ಯೆಲ್ಲರೂ ಭ್ರಮಿಸಿ, ಮನುಷ್ಯರಿಗೆ ಇಂಥಾ ಅಧಿಕಾರ ಕೊಟ್ಟ ದೇವರನ್ನು ಮಹಿಮೆ ಪಡಿಸಿ,—ನಾವು ಇಂಥಾದನ್ನು ಯೆಂದೂ ನೋಡಲಿಲ್ಲಾ! ಯೆಂದು ಹೇಳಿದರು.

ಇವುಗಳಾದ ಮೇಲೆ ಯೇಸು ಹೊರಟು, ಸುಂಕಕ್ಕೆ ಕೂತುಕೊಂಡ ಮಥ್ಥಾಯನೆಂಬ ಸುಂಕದವನನ್ನು ನೋಡಿ, ಅವನಿಗೆ—ನನ್ನನ್ನು ಹಿಂಬಾಲಿಸು! ಅಂದನು. ಅವನು ಯೆಲ್ಲಾ ಬಿಟ್ಟು, ಯೆದ್ದು, ಆತನನ್ನು ಹಿಂಬಾಲಿಸಿದನು. ಆಮೇಲೆ ಮಥ್ಥಾಯನು ತನ್ನ ಮನೆಯಲ್ಲಿ ಆತನಿಗೆ ದೊಡ್ಡ ಔತಣವನ್ನು ಮಾಡಿಸಿದನು. ಮತ್ತು ಆತನು ಊಟಕ್ಕೆ ಕೂತಿರುವಾಗ, ಇಗೋ, ಬಹು ಮಂದಿ ಸುಂಕದವರೂ ಪಾಪಿಗಳೂ ಬಂದು, ಯೇಸುವಿನ ಮತ್ತು ಆತನ ಶಿಷ್ಯರ ಸಂಗಡ ಕೂತುಕೊಂಡರು. ಆಗ ಶಾಸ್ತ್ರಿಗಳೂ ಫರಿಸಾಯರೂ ಆತನ ಶಿಷ್ಯರಿಗೆ—ನಿಮ್ಮ ಬೋಧಕನು ಸುಂಕದವರ ಮತ್ತು ಪಾಪಿಷ್ಟರ ಸಂಗಡ ಉಂಡು ಕಡಿಯುವದೇನು? ಯೆಂದು ಗುಣುಗುಟ್ಟಿದರು. ಯೇಸು ಅದನ್ನು ಕೇಳಿ, ಅವರಿಗೆ ಹೇಳಿದ್ದೇನಂದರೆ,—ಆರೋಗ್ಯವಾಗಿರುವವರಿಗಲ್ಲಾ, ಕ್ಷೇಮವಿಲ್ಲದವರಿಗೆ ವೈದ್ಯನು ಬೇಕು! ನೀತಿವಂತರನ್ನಲ್ಲಾ, ಪಾಪಿಷ್ಟರನ್ನು ಮಾನಸಾಂತರಕ್ಕೆ ಕರೆಯ ಬಂದೆನು, ಅಂದನು.

---

೧೦. ಯಯೀರನ ಮಗಳನ್ನು ಯೆಬ್ಬಿಸಿದ್ದು ಮೊದಲಾದ ಅದ್ಭುತಗಳು. ಯೆರಡು ವಿಶ್ರಾಂತಿ ದಿವಸಗಳು.

(ಮಥ್. ೯, ೧೮—೨೪. ೧೨, ೧—೧೪. ಮಾರ್ಕ. ೫, ೨೨—೪೩. ೨, ೨೩—೨೮. ೩, ೧—೬. ಲೂಕ. ೮, ೪೧—೫೬. ೬, ೧—೧೧.)

ಮತ್ತು ಇಗೋ, ಸಭೆಮನೆಯ ಯಜಮಾನರಲ್ಲಿ ಒಬ್ಬನಾಗಿರುವ ಯಯೀರನೆಂಬವನು ಬಂದು, ಅವನ ಪಾದಗಳ ಮುಂದೆ ಬಿದ್ದು,—ನನ್ನ ಚಿಕ್ಕ ಮಗ

ಳು ತೀರಿ ಹೋಗುವ ಹಾಗಿದ್ದಾಳೆ; ಅವಳು ಸ್ವಸ್ಥವಾಗುವ ಹಾಗೆ, ನೀನು ಬಂದು, ಅವಳ ಮೇಲೆ ನಿನ್ನ ಕೈ ಇಡು! ಯೆಂದು ಆತನನ್ನು ಬಹಳವಾಗಿ ಬೇಡಿಕೊಂಡನು. ಆಗ ಯೇಸು ಅವನ ಸಂಗಡ ಹೋದನು. ಮತ್ತು ಬಹು ಸಮೂಹವು ಆತನನ್ನು ಹಿಂಬಾಲಿಸಿ, ಆತನನ್ನು ಇರಿಕಿಸುತ್ತಿತ್ತು.—ಆಗ ಹನ್ನೆರಡು ವರುಷದಿಂದ ರೋಗಿಯಾಗಿ, ಅನೇಕ ವೈದ್ಯರಿಂದ ಬಹು ಶ್ರಮೆ ಪಟ್ಟು, ತನಗಿದ್ದದ್ದಂನೆಲ್ಲಾ ವೆಚ್ಚ ಮಾಡಿದಾಗ್ಯೂ, ಯೇನೂ ಪ್ರಯೋಜನ ಹೊಂದದೆ ಇದ್ದ ವೊಬ್ಬ ಸ್ತ್ರೀಯು ಹಿಂದಗಡೆ ಬಂದು, ಆತನ ವಸ್ತ್ರದ ಶೆರಗನ್ನು ಮುಟ್ಟಿದಳು. ಯಾಕಂದರೆ—ಆತನ ವಸ್ತ್ರವನ್ನು ಮಾತ್ರ, ಮುಟ್ಟಿದರೆ, ಸ್ವಸ್ಥವಾಗುವೆನು, ಯೆಂದು ತನಲ್ಲಿ ಅಂದುಕೊಂಡಳು. ಸಂಗಡಲೇ ಗುಣವಾದೆನೆಂದು ಶರೀರದಲ್ಲಿ ತಿಳಿದು ಕೊಂಡಳು. ಆದರೆ ಯೇಸು ತಿರುಗಿಕೊಂಡು,—ಯಾರು ನನ್ನ ವಸ್ತ್ರಗಳನ್ನು ಮುಟ್ಟಿದರು? ಅಂದನು. ಆತನ ಶಿಷ್ಯರು ಆತನಿಗೆ—ಸಮೂಹವು ನಿನ್ನನ್ನು ಇರಿಕಿಸುವದನ್ನು ನೋಡಿ, ಯಾರು ನನ್ನನ್ನು ಮುಟ್ಟಿದರು ಯೆಂದು ಹೇಳುತ್ತಿಯೋ? ಅಂದರು. ಆದರೆ ಯೇಸು—ನನ್ನನ್ನು ಯಾರೋ ಮುಟ್ಟಿದರು, ಯಾಕಂದರೆ ಬಲವು ನನ್ನಿಂದ ಹೊರಟಿತೆಂದು ತಿಳಿದಿದ್ದೇನೆ, ಅಂದಾಗ, ಆ ಸ್ತ್ರೀಯು, ತಾನು ಮರೆಯಾಗಿರಲಿಲ್ಲವೆಂದು ತಿಳಿದುಕೊಂಡು, ನಡುಗುತ್ತಾ ಬಂದು, ಆತನ ಮುಂದೆ ಬಿದ್ದು, ತಾನು ಆತನನ್ನು ಮುಟ್ಟಿದ ಕಾರಣವನ್ನೂ, ಸಂಗಡಲೇ ವಾಶಿಯಾದದ್ದನ್ನೂ, ಜನರೆಲ್ಲರ ಮುಂದೆ ಆತನಿಗೆ ತಿಳಿಸಿದಳು. ಆದರೆ ಆತನು ಅವಳಿಗೆ—ಮಗಳೇ, ಧೈರ್ಯವಾಗಿರು; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ; ಸಮಾಧಾನವಾಗಿ ಹೋಗು! ಅಂದನು. ಆತನು ಇನ್ನೂ ಮಾತಾಡುತ್ತಿರುವಾಗ, ಸಭೆಮನೆಯ ಯಜಮಾನನ ಕಡೆಯವರಲ್ಲಿ ವೊಬ್ಬನು ಬಂದು,—ನಿನ್ನ ಮಗಳು ಸತ್ತಿದ್ದಾಳೆ; ಬೋಧಕನನ್ನು ಬೇಸರಗೊಳ್ಳಿಸ ಬೇಡ! ಯೆಂದು ಅವನಿಗೆ ಹೇಳಿದನು. ಯೇಸು ಅದನ್ನು ಕೇಳಿ, ಅವನಿಗೆ—ಭಯ ಪಡ ಬೇಡ! ವಿಶ್ವಾಸ ಮಾತ್ರವಿರಲಿ, ಆಗ ರಕ್ಷಿಸಲ್ಪಡುವಳು! ಅಂದನು. ಮತ್ತು ಅವನ ಮನೆಗೆ ಬಂದು, ಗುಬಾರನ್ನೂ, ಬಹಳವಾಗಿ ಅತ್ತು ಕೂಗುವವರ

ನ್ನು ನೋಡಿ, ಒಳಗೆ ಹೋಗಿ, —ನೀವು ಗುಬಾರು ಮಾಡಿ, ಅಳುವದೇನು? ಹುಡುಗಿಯು ಸಾಯಲಿಲ್ಲ; ನಿದ್ದೆ ಮಾಡುತ್ತಾಳೆ! ಯೆಂದು ಅವರಿಗೆ ಹೇಳಿದನು. ಆಗಲಾತನಿಗೆ ಹಾಸ್ಯ ಮಾಡಿದರು. ಆದರೆ ಆತನು ಯೆಲ್ಲರನ್ನು ಹೊರಗೆ ಹಾಕಿ, ಪೇತ್ರನೂ ಯಾಕೋಬನೂ ಯೋಹಾನನೂ ಹುಡುಗಿಯ ತಂದೆತಾಯಿಗಳೂ, ಇವರೇ ಹೊರತು ಯಾವನನ್ನೂ ಒಳಗೆ ಹೋಗಗೊಡಿಸಲಿಲ್ಲ. ಮತ್ತು ಹುಡುಗಿ ಮಲಗಿರುವಲ್ಲಿಗೆ ಪ್ರವೇಶಿಸಿ, ಹುಡುಗಿಯ ಕೈ ಹಿಡಿದು, ಅವಳಿಗೆ—ತಲಿಥಾಕೂಮಿ! ಅಂದನು. ಅದರ ಅರ್ಥವೇನಂದರೆ, —ಹುಡುಗಿಯೇ, ಯೇಳೆಂದು ನಿನಗೆ ಹೇಳುತ್ತೇನೆ. ಸಂಗಡಲೇ ಹುಡುಗಿಯು ಯೆದ್ದು, ತಿರುಗಾಡಿದಳು; ಯಾಕಂದರೆ ಹನ್ನೆರಡು ವರುಷದವಳಾಗಿದ್ದಳು. ಮತ್ತು ಯೇಸು ಅವಳಿಗೆ ಊಟಕ್ಕೆ ಕೊಡಬೇಕೆಂದು ಅಪ್ಪಣೆ ಕೊಟ್ಟನು. ಈ ಸುದ್ದಿ ಆ ದೇಶದಲ್ಲೆಲ್ಲಾ ಹಬ್ಬಿತು.

ಮತ್ತು ಯೇಸು ಅಲ್ಲಿಂದ ಹೋಗುವಾಗ, ಇಬ್ಬರು ಕುರುಡರು ಆತನನ್ನು ಹಿಂಬಾಲಿಸಿ, —ದಾವೀದನ ಮಗನೇ, ನಮ್ಮನ್ನು ಕರುಣಿಸು! ಯೆಂದು ಕೂಗಿದರು. ಆತನು ಮನೆಗೆ ಬರುವಾಗ, ಕುರುಡರು ಆತನ ಬಳಿಗೆ ಬಂದರು. ಯೇಸು ಅವರಿಗೆ—ಇದನ್ನು ಮಾಡ ಬಲ್ಲೆನೆಂದು ನಂಬುತ್ತೀರೋ? ಅಂದನು. ಅವರು ಆತನಿಗೆ—ಹೌದು, ಕರ್ತನೇ! ಅಂದರು. ಆಗಲಾತನು ಅವರ ಕಣ್ಣುಗಳನ್ನು ಮುಟ್ಟಿ, —ನಿಮ್ಮ ವಿಶ್ವಾಸದ ಪ್ರಕಾರ ನಿಮಗೆ ಆಗಲಿ! ಅಂದನು. ಆಗಲವರ ಕಣ್ಣುಗಳು ತೆರೆಯಲ್ಪಟ್ಟವು. —ಅವರು ಹೊರಡುತ್ತಿರುವಾಗ, ಇಗೋ, ದೆವ್ವ ಹಿಡಿದ ಒಬ್ಬ ಮೂಕ ಮನುಷ್ಯನನ್ನು ಆತನ ಬಳಿಗೆ ತಂದರು. ದೆವ್ವ ಹೊರಡಿಸಲ್ಪಟ್ಟ ಮೇಲೆ, ಮೂಕನು ಮಾತಾಡಿದನು. ಆಗ ಸಮೂಹಗಳು, —ಇಸ್ರಯೇಲಿನಲ್ಲಿ ಯೆಂದಾದರೂ ಹೀಗೆ ಕಾಣಿಸಲಿಲ್ಲವೆಂದು, ಆಶ್ಚರ್ಯ ಪಟ್ಟವು.

ಆ ಕಾಲದಲ್ಲಿ ಯೇಸು ಸಬ್ಬಥಿನಲ್ಲಿ ಪೈರಿನ ಹೊಲಗಳನ್ನು ಹಾದು ಹೋಗುವಾಗ, ಆತನ ಶಿಷ್ಯರು ಹಸಿದು, ತೆನೆಗಳನ್ನು ಕಿತ್ತು, ತಿನ್ನಲಾರಂಭಿಸಿದರು. ಆದರೆ ಫರಿಸಾಯರು ನೋಡಿ, ಆತನಿಗೆ, —ಇಗೋ, ನಿನ್ನ ಶಿಷ್ಯರು

ಸಬ್ಬಥಿನಲ್ಲಿ ಮಾಡ ಬಾರದ್ದನ್ನು ಮಾಡುತ್ತಾರೆ, ಅಂದರು. ಆತನು ಅವರಿಗೆ,—ದಾವೀದನು ಹಸಿದಾಗ, ಅವನು ದೇವರ ಮನೆಯಲ್ಲಿ ಪ್ರವೇಶಿಸಿ, ಯಾಜಕರು ಮಾತ್ರವೇ ಹೊರ್ತು ತಿನ್ನ ಬಾರದ ಸಮ್ಮುಖದ ರೊಟ್ಟಿಗಳನ್ನು ತಿಂದನೆಂದು ನೀವು ವೋದಲಿಲ್ಲವೋ? ಇಲ್ಲವೆ ಸಬ್ಬಥುಗಳಲ್ಲಿ ಯಾಜಕರು ದೇವಾಲಯದಲ್ಲಿ ಸಬ್ಬಥನ್ನು ಭಂಗ ಮಾಡಿ, ಅಪರಾಧವಿಲ್ಲದೆ ಇದ್ದಾರೆಂದು ನ್ಯಾಯಪ್ರಮಾಣದಲ್ಲಿ ವೋದಲಿಲ್ಲವೋ? ಆದರೂ ನಿಮಗೆ ಹೇಳುತ್ತೇನೆ,—ದೇವಾಲಯಕ್ಕಿಂತ ದೊಡ್ಡವನು ಇಲ್ಲಿ ಇದ್ದಾನೆ. ಮನುಷ್ಯನು ಸಬ್ಬಥಿಗೋಸ್ಕರವಲ್ಲ, ಸಬ್ಬಥು ಮನುಷ್ಯನಿಗೋಸ್ಕರ ಉಂಟಾಯಿತು. ಹೀಗಿರಲಾಗಿ ಮನುಷ್ಯನ ಮಗನು ಸಬ್ಬಥಿಗೂ ಕರ್ತನಾಗಿದ್ದಾನೆ.

ಇದಲ್ಲದೆ ಮತ್ತೊಂದು ಸಬ್ಬಥಿನಲ್ಲಿ ಆತನು ಸಭೆಮನೆಯಲ್ಲಿ ಪ್ರವೇಶಿಸಿ, ಬೋಧಿಸಲಾಗಿ, ಬಲಗೈ ವೊಣಗಿದ ವೊಬ್ಬ ಮನುಷ್ಯನು ಅಲ್ಲಿ ಇದ್ದನು. ಆದರೆ ಫರಿಸಾಯರು—ಆತನು ಸಬ್ಬಥಿನಲ್ಲಿ ವಾಸಿ ಮಾಡುವನೇನೋ? ಆತನಿಗೆ ಹೊಂಚಿಕೊಂಡು,—ಸಬ್ಬಥುಗಳಲ್ಲಿ ಸ್ವಸ್ಥ ಮಾಡ ಬಹುದೋ? ಯೆಂದು ಆತನನ್ನು ಕೇಳಿದರು. ಆತನು ಅವರಿಗೆ—ಸಬ್ಬಥಿನಲ್ಲಿ ವೊಳ್ಳೇದನ್ನು ಮಾಡುವದೋ, ಕೆಟ್ಟದ್ದನ್ನು ಮಾಡುವದೋ, ಪ್ರಾಣವನ್ನು ರಕ್ಷಿಸುವದೋ, ಕೊಲ್ಲುವದೋ, ಯಾವದು ನ್ಯಾಯ? ಅಂದನು. ಆದರೆ ಅವರು ಸುಮ್ಮನಿದ್ದರು. ಆಗಲಾತನು ಅವರಿಗೆ—ನಿಮ್ಮೊಳಗೆ ಯಾವ ಮನುಷ್ಯನು ವೊಂದೇ ಕುರಿ ಉಂಟಾದವನಾಗಿ, ಅದು ಸಬ್ಬಥಿನಲ್ಲಿ ಕುಣಿಯಲ್ಲಿ ಬಿದ್ದರೆ, ಅದನ್ನು ಹಿಡಿದು ಯೆತ್ತದೆ ಇರುವನು? ಹಾಗಾದರೆ ಕುರಿಗಿಂತ ಮನುಷ್ಯನು ಯೆಷ್ಟೋ ಹೆಚ್ಚಾಗಿದ್ದಾನೆ! ಆದಕಾರಣ ಸಬ್ಬಥಿನಲ್ಲಿ ವೊಳ್ಳೇದನ್ನು ಮಾಡ ಬಹುದು, ಅಂದನು. ಆಗಲಾತನು ಅವರ ಹೃದಯದ ಕಾಠಿಣ್ಯದ ನಿಮಿತ್ತ ಮಹಾ ದುಖ್ಖ ಪಟ್ಟು, ಕೋಪದಿಂದ ಸುತ್ತಲೂ ಅವರನ್ನು ನೋಡಿ, ಆ ಮನುಷ್ಯನಿಗೆ—ನಿನ್ನ ಕೈ ಚಾಚು! ಅಂದನು. ಚಾಚಿದಾಗ ಅವನ ಕೈ ಮತ್ತೊಂದರ ಹಾಗೆ ಸ್ವಸ್ಥವಾಯಿತು.

---

೧೧. ಹನ್ನೆರಡು ಅಪೊಸ್ತಲರನ್ನು ನೇಮಿಸಿದ್ದು.

ಪರ್ವತಪ್ರಸಂಗ.

(ಲೂಕ. ೬, ೧೨–೪೯. ಮಥ. ೫–೭.)

ಆ ದಿವಸಗಳಲ್ಲಿ ಯೇನಾಯಿತಂದರೆ, — ಆತನು ಪ್ರಾರ್ಥನೆ ಮಾಡುವದಕ್ಕೆ ಹೊರಟು, ಒಂದು ಬೆಟ್ಟಕ್ಕೆ ಹೋಗಿ, ಅಲ್ಲಿ ಪ್ರಾರ್ಥನೆಯಲ್ಲಿ ರಾತ್ರಿಯೆಲ್ಲಾ ಕಳೆದನು. ಬೆಳಗಾದ ಮೇಲೆ ಆತನು ತನ್ನ ಶಿಷ್ಯರನ್ನು ಕರೆದು, ಅವರಲ್ಲಿ ಹನ್ನೆರಡು ಮಂದಿಯನ್ನು ಆದುಕೊಂಡು, ಅವರಿಗೆ ಅಪೊಸ್ತಲರೆಂದು ಹೆಸರಿಟ್ಟನು. ಅವರು ಯಾರಂದರೆ, — ಆತನು ಪೇತ್ರನೆಂದು ಕರೆದ ಸೀಮೋನನು, ಅವನ ಸಹೋದರನಾದ ಅಂದ್ರೇಯನು; ಯಾಕೋಬನು, ಅವನ ಸಹೋದರನಾದ ಯೋಹಾನನು; ಫಿಲಿಪ್ಪನು; ಬಾರ್ತೊಲೊಮಾಯನೆಂಬ ನಥಾನಯೇಲನು; ಮತ್ಥಾಯನೆಂಬ ಲೇವಿಯು; ಥೋಮನು; ಅಲ್ಫಾಯನ ಮಗನಾದ ಯಾಕೋಬನು; ಜೆಲೋತನೆಂಬ ಸೀಮೋನನು; ಯಾಕೋಬನ ಮಗನಾದ ಯೂದನು; ಮತ್ತು ದ್ರೋಹಿಯಾದ ಇಸ್ಕರಿಯೋತೆಂಬ ಯೂದನು. ಆ ಮೇಲೆ ಆತನು ಅವರ ಸಂಗಡ ಇಳಿದು, ತನ್ನ ಶಿಷ್ಯರ ಸಮೂಹವೂ, ಸಮಸ್ತ ಯೆಹೂದದಿಂದಲೂ ಯೆರುಸಲೇಮಿನಿಂದಲೂ ತೂರ್ ಸೀದೋನಗಳ ಸಮುದ್ರತೀರದಿಂದಲೂ, ಆತನನ್ನು ಕೇಳುವದಕ್ಕೂ ತಮ್ಮ ರೋಗಗಳು ಗುಣವಾಗುವದಕ್ಕೂ ಬಂದ ದೊಡ್ಡ ಜನಸಮೂಹವೂ ಸಹಿತವಾಗಿ, ಬೈಲುಸ್ಥಳದಲ್ಲಿ ನಿಂತುಕೊಂಡನು. ಮತ್ತು ಆತನಿಂದ ಬಲವು ಹೊರಟು, ಯೆಲ್ಲರನ್ನು ಗುಣ ಮಾಡಿದದರಿಂದ, ಸಮೂಹವೆಲ್ಲಾ ಆತನನ್ನು ಮುಟ್ಟ ಹುಡುಕಿತು. ಇದಲ್ಲದೆ ಆತನು ಕೂತುಕೊಂಡಾಗ, ತನ್ನ ಕಣ್ಣುಗಳನ್ನು ತನ್ನ ಶಿಷ್ಯರ ಕಡೆಗೆ ಯೆತ್ತಿ, ತನ್ನ ಬಾಯಿ ತೆರದು, ಅವರಿಗೆ ಬೋಧಿಸಿ ಹೇಳಿದ್ದೇನಂದರೆ, —

ಆತ್ಮದಲ್ಲಿ ದೀನರು ಭಾಗ್ಯವಂತರು, ಯಾಕಂದರೆ ಪರಲೋಕರಾಜ್ಯವು ಅವರದಾಗಿದೆ. ದುಖ್ಖ ಪಡುವವರು ಭಾಗ್ಯವಂತರು, ಯಾಕಂದರೆ ಅವರು ಆದರಣೆ ಹೊಂದುವರು. ಶಾಂತರು ಭಾಗ್ಯವಂತರು, ಯಾಕಂದರೆ ಅವರು ಭೂ

ಮಿಯನ್ನು ಬಾಧ್ಯವಾಗಿ ಹೊಂದುವರು. ನೀತಿಗೋಸ್ಕರ ಹಸಿದು ದಾಹ ಪಡುವವರು ಭಾಗ್ಯವಂತರು, ಯಾಕಂದರೆ ಅವರು ತೃಪ್ತಿ ಹೊಂದುವರು. ಕರುಣೆಯುಳ್ಳವರು ಭಾಗ್ಯವಂತರು, ಯಾಕಂದರೆ ಅವರು ಕರುಣಿಸಲ್ಪಡುವರು. ಶುದ್ಧ ಹೃದಯವುಳ್ಳವರು ಭಾಗ್ಯವಂತರು, ಯಾಕಂದರೆ ಅವರು ದೇವರನ್ನು ನೋಡುವರು. ಸಮಾಧಾನ ಮಾಡುವವರು ಭಾಗ್ಯವಂತರು, ಯಾಕಂದರೆ ಅವರು ದೇವರ ಮಕ್ಕಳೆಂದು ಕರೆಯಲ್ಪಡುವರು. ನೀತಿಗೋಸ್ಕರ ಹಿಂಸೆ ಪಡುವವರು ಭಾಗ್ಯವಂತರು, ಯಾಕಂದರೆ ಪರಲೋಕರಾಜ್ಯವು ಅವರದಾಗಿದೆ. ನನ್ನ ನಿಮಿತ್ತ ನಿಮ್ಮನ್ನು ನಿಂದಿಸಿ, ಹಿಂಸಿಸಿ, ಸುಳ್ಳಾಗಿ ನಿಮಗೆ ವಿರೋಧವಾಗಿಯೆಲ್ಲಾ ಕೆಟ್ಟ ಮಾತುಗಳನ್ನು ಹೇಳಿದರೆ, ನೀವು ಭಾಗ್ಯವಂತರಾಗಿದ್ದೀರಿ. ಸಂತೋಷಿಸಿರಿ, ಹರ್ಷಿಸಿರಿ; ಯಾಕಂದರೆ ಪರಲೋಕದಲ್ಲಿ ನಿಮ್ಮ ಪ್ರತಿಫಲ ಬಹಳವದೆ.

ನೀವು ಭೂಮಿಗೆ ಉಪ್ಪಾಗಿದ್ದೀರಿ! ಆದರೆ ಉಪ್ಪು ನಿಸ್ಸಾರವಾದರೆ, ಯಾತರಿಂದ ಸಾರ ಹೊಂದೀತು? ಹೊರಗೆ ಹಾಕಲ್ಪಟ್ಟು, ಮನುಷ್ಯರಿಂದ ತುಳಿಯಲ್ಪಡುವದಕ್ಕೆ ಹೊರತು, ಮತ್ತಾವದಕ್ಕೂ ಆಗದು.—ನೀವು ಲೋಕಕ್ಕೆ ಬೆಳಕಾಗಿದ್ದೀರಿ! ಬೆಟ್ಟದ ಮೇಲಿರುವ ಪಟ್ಟಣವು ಮರೆಯಾಗಿರಲಾರದು. ಮತ್ತು ದೀಪ ಹಚ್ಚಿ, ಅದನ್ನು ಬಳ್ಳದ ಕೆಳಗೆ ಅಲ್ಲ, ದೀಪಸ್ತಂಭದ ಮೇಲೆ ಇಡುತ್ತಾರೆ; ಆಗಲದು ಮನೆಯಲ್ಲಿರುವವರೆಲ್ಲರಿಗೆ ಬೆಳಕು ಕೊಡುವದು. ಅದೇ ಮೇರೆಗೆ ಅವರು ನಿಮ್ಮ ಸತ್ಕ್ರಿಯೆಗಳನ್ನು ನೋಡಿ, ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಮಹಿಮೆ ಪಡಿಸುವ ಹಾಗೆ, ಮನುಷ್ಯರ ಮುಂದೆ ನಿಮ್ಮ ಬೆಳಕು ಪ್ರಕಾಶಿಸಲಿ!

ನ್ಯಾಯಪ್ರಮಾಣವನ್ನಾದರೂ, ಪ್ರವಾದಿಗಳನ್ನಾದರೂ ತೆಗದು ಹಾಕುವದಕ್ಕೆ ಬಂದೆನೆಂದು ನೆನಸ ಬೇಡಿರಿ! ತೆಗದು ಹಾಕುವದಕ್ಕಲ್ಲಾ, ಈಡೇರಿಸುವದಕ್ಕೆ ಬಂದೆನು. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಆಕಾಶವೂ ಭೂಮಿಯೂ ಗತಿಸಿ ಹೋಗುವ ಪರ್ಯಂತರ, ನ್ಯಾಯಪ್ರಮಾಣದಲ್ಲಿಂದ ಒಂದು ಸೊನ್ನೆಯಾದರೂ, ಒಂದು ಗುಡುಸಾದರೂ, ಯೆಲ್ಲಾ ಆಗುವ ಮಟ್ಟಿ

ಗೂ ಗತಿಸಿ ಪೋಗದು. ಮತ್ತು ನಿಮಗೆ ಪೇಳುತ್ತೇನೆ,—ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತ ಅತ್ಯಧಿಕವಾಗಿದ್ದ ಪೊರ್ತು, ಪರಲೋಕರಾಜ್ಯದಲ್ಲಿ ಪ್ರವೇಶಿಸಲಾರಿರಿ!

ಆತನು ತನ್ನ ಶಿಷ್ಯರಿಗೆ ತಕ್ಕ ನೀತಿಯನ್ನೂ, ಆ ನೀತಿಯ ಫಲವನ್ನೂ ಮೂಲವನ್ನೂ ಸಹಾಯವನ್ನೂ, ಆ ಪರ್ವತಪ್ರಸಂಗದಲ್ಲಿ (ಮತ್ಥ. ಸಂಧಿ ೫, ೬, ೭.) ವಿವರಿಸಿದ ಮೇಲೆ, ಆತನು ಪೇಳಿದ್ದೇನಂದರೆ,—ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಿರಿ! ಯಾಕಂದರೆ ನಾಶಕ್ಕೆ ಹೋಗುವ ಬಾಗಲು ಅಗಲವು, ಮಾರ್ಗ ವಿಸ್ತಾರವು; ಆದದರಿಂದ ಪ್ರವೇಶಿಸುವವರು ಬಹಳ ಮಂದಿ; ಯಾಕಂದರೆ ಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ಮಾರ್ಗ ಸಣ್ಣದು; ಅದನ್ನು ಕಂಡುಕೊಳ್ಳುವವರು ಸ್ವಲ್ಪ ಮಂದಿ.—ನನ್ನ ವಾಕ್ಯಗಳನ್ನು ಕೇಳಿ ಮಾಡುವವನ್ಯಾವನೋ, ಅವನನ್ನು ತನ್ನ ಮನೆಯನ್ನು ಬಂಡೆಯ ಮೇಲೆ ಕಟ್ಟಿದ ಬುದ್ಧಿಯುಳ್ಳ ಮನುಷ್ಯನಿಗೆ ಸಮಾನ ಮಾಡುವೆನು. ಮಳೆ ಬಿತ್ತು, ಹೊಳೆಗಳು ಬಂದವು; ಗಾಳಿಗಳು ಬೀಸಿ, ಆ ಮನೆಯನ್ನು ಬಡಿದವು; ಆದರೆ ಅಸ್ತಿವಾರವು ಬಂಡೆಯ ಮೇಲೆ ಇದ್ದದರಿಂದ, ಅದು ಬೀಳಲಿಲ್ಲ. ಮತ್ತು ಈ ನನ್ನ ವಾಕ್ಯಗಳನ್ನು ಕೇಳಿ ಮಾಡದವನು ಯಾವನೋ, ಅವನು ಮರಳಿನ ಮೇಲೆ ತನ್ನ ಮನೆಯನ್ನು ಕಟ್ಟಿದ ಹುಚ್ಚಮನುಷ್ಯನಿಗೆ ಸಮಾನ ಮಾಡಲ್ಪಡುವನು. ಮಳೆ ಬಿತ್ತು, ಪೊಳೆಗಳುಬಂದವು; ಗಾಳಿಗಳು ಬೀಸಿ, ಆ ಮನೆಯನ್ನು ಬಡಿದವು; ಆಗ ಅದು ಬಿತ್ತು, ಅದರ ಬೀಳುವಿಕೆಯು ದೊಡ್ಡದಾಗಿತ್ತು.

ಯೇಸು ಈ ವಾಕ್ಯಗಳನ್ನು ಮುಗಿಸಿದಾಗ, ಸಮೂಹಗಳು ಆತನ ಬೋಧನೆಗೆ ಆಶ್ಚರ್ಯಪಟ್ಟವು; ಯಾಕಂದರೆ ಆತನು ಶಾಸ್ತ್ರಿಗಳ ಹಾಗಲ್ಲ, ಅಧಿಕಾರ ಉಂಟಾದವನ ಹಾಗೆಯೇ ಅವರಿಗೆ ಬೋಧಿಸುತ್ತಿದ್ದನು.

---

೧೨. ಕುಷ್ಟರೋಗಿ. ಶತಾಧಿಪತಿಯ ದಾಸನು. ನಾಯಿನದ ಯೌವನಸ್ಥನು. ಯೋಹಾನನ ಶಿಷ್ಯರು.


(ಮತ್ತ್. ೮, ೧–೧೩. ೧೧, ೨–೧೯. ಮಾರ್ಕ. ೧, ೪೦–೪೫.
ಲೂಕ್. ೭, ೧೨–೧೬. ೭, ೧–೩೫.)

ಯೇಸು ಬೆಟ್ಟದಿಂದ ಇಳಿದಾಗ, ಬಹು ಸಮೂಹಗಳು ಆತನನ್ನು ಹಿಂಬಾಲಿಸಿದವು. ಮತ್ತು ಇಗೋ, ವೊಬ್ಬ ಕುಷ್ಟರೋಗಿಯು ಬಂದು, ಆತನಿಗೆ ನಮಸ್ಕರಿಸಿ,—ಕರ್ತನೇ, ನಿನಗೆ ಮನಸ್ಸಿದ್ದರೆ, ನನ್ನನ್ನು ಶುದ್ಧ ಮಾಡಬಲ್ಲಿ! ಯೆಂದು ಬೇಡಿಕೊಂಡನು. ಯೇಸು ಅಂತಃಕರಣ ಪಟ್ಟು, ಕೈ ಚಾಚಿ, ಅವನನ್ನು ಮುಟ್ಟಿ,—ಮನಸ್ಸುಂಟು, ಶುದ್ಧವಾಗು! ಅಂದನು. ಸಂಗಡಲೇ ಅವನ ಕುಷ್ಟವು ಶುದ್ಧವಾಯಿತು.

ಮತ್ತು ಯೇಸು ಕಪೆರ್ನವೂಮಿನಲ್ಲಿ ಪ್ರವೇಶಿಸಿದನು. ಮತ್ತು ವೊಬ್ಬ ಶತಾಧಿಪತಿಗೆ ಪ್ರಿಯನಾಗಿರುವ ದಾಸನು ಸಾಯಲಾಗಿದ್ದನು. ಅವನು ಯೇಸುವಿನ ಸಮಾಚಾರವನ್ನು ಕೇಳಿ, ಬಂದು, ತನ್ನ ದಾಸನನ್ನು ಗುಣ ಮಾಡಬೇಕೆಂದು ಆತನನ್ನು ಬೇಡಿಕೊಂಡು, ಆತನ ಬಳಿಗೆ ಯೆಹೂದ್ಯರ ಹಿರಿಯರನ್ನು ಕಳುಹಿಸಿದನು. ಇವರು ಯೇಸುವಿನ ಬಳಿಗೆ ಬಂದು, ಆತನನ್ನು ಬಹಳವಾಗಿ ಬೇಡಿಕೊಂಡು,—ನೀನು ಅವನಿಗೆ ಇದನ್ನು ಮಾಡುವ ಹಾಗೆ ಅವನು ಯೋಗ್ಯನು; ಯಾಕಂದರೆ ನಮ್ಮ ಜನಾಂಗವನ್ನು ಪ್ರೀತಿ ಮಾಡುತ್ತಾನೆ, ಮತ್ತು ಅವನೇ ನಮಗೆ ಸಭೆಮನೆಯನ್ನು ಕಟ್ಟಿಸಿದ್ಧಾನೆ, ಅಂದರು. ಆಗ ಯೇಸು ಅವರ ಸಂಗಡ ಹೋದನು. ಆತನು ಮನೆಗೆ ಇನ್ನು ಸ್ವಲ್ಪ ದೂರ ಇರುವಾಗ, ಶತಾಧಿಪತಿಯು ಸ್ನೇಹಿತರನ್ನು ಆತನ ಬಳಿಗೆ ಕಳುಹಿಸಿ,—ಕರ್ತನೇ, ಬೇಸರಗೊಳ್ಳ ಬೇಡ! ಯಾಕಂದರೆ ನೀನು ನನ್ನ ಮಾಳಿಗೆಯ ಕೆಳಗೆ ಪ್ರವೇಶಿಸುವ ಹಾಗೆ, ನಾನು ಯೋಗ್ಯನಲ್ಲ. ಆದದರಿಂದ ನಾನು ನಿನ್ನ ಬಳಿಗೆ ಬರುವದಕ್ಕೆ ಸಹ ನನ್ನನ್ನು ಅಯೋಗ್ಯನೆಂದು ಯೆಣಿಸಿಕೊಂಡೆನು; ಆದರೆ ಮಾತನ್ನು ಹೇಳಿದರೆ, ನನ್ನ ಆಳು ಗುಣವಾಗುವನು. ಯಾಕಂದರೆ ನಾನು ಸಹ ಅಧಿಕಾರಕ್ಕೊಳಗಾಗಿದ್ದ ಮನುಷ್ಯನಾಗಿದ್ಧೇನೆ;

ನನ್ನ ಕೈ ಕೆಳಗೆ ರಾಣುವೆಯವರಿದ್ದಾರೆ; ಮತ್ತು ಇವನಿಗೆ ಹೋಗೆಂದರೆ, ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಅಂದರೆ, ಬರುತ್ತಾನೆ; ಮತ್ತು ನನ್ನ ದಾಸನಿಗೆ ಇದನ್ನು ಮಾಡಂದರೆ, ಮಾಡುತ್ತಾನೆ. ಇವುಗಳನ್ನು ಯೇಸು ಕೇಳಿ, ಅವನಿಗೆ ಆಶ್ಚರ್ಯಪಟ್ಟು, ತಿರುಗಿಕೊಂಡು, ತನ್ನನ್ನು ಹಿಂಬಾಲಿಸುವ ಸಮೂಹಕ್ಕೆ — ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಇಸ್ರಾಯೇಲಿನಲ್ಲಿಯೂ ಇಷ್ಟು ದೊಡ್ಡ ವಿಶ್ವಾಸವನ್ನು ಕಾಣಲಿಲ್ಲ; ಮತ್ತು ನಿಮಗೆ ಹೇಳುತ್ತೇನೆ, — ಮೂಡಣದಿಂದಲೂ ಪಡುವಲಿಂದಲೂ ಅನೇಕರು ಬಂದು, ಅಬ್ರಹಾಮ್ ಇಸಾಕ್ ಯಾಕೋಬರ ಸಂಗಡ ಪರಲೋಕರಾಜ್ಯದಲ್ಲಿ ಕೂಡ್ರುವರು. ಮತ್ತು ಯೇಸು ಶತಾಧಿಪತಿಗೆ, — ಹೋಗು, ನೀನು ವಿಶ್ವಾಸಿಸಿದ ಹಾಗೆ ನಿನಗೆ ಆಗಲಿ! ಅಂದನು. ಅದೇ ಘಳಿಗೆಯಲ್ಲಿ ಅವನ ಆಳು ಸ್ವಸ್ಥವಾದನು.

ಮರುದಿವಸದಲ್ಲಿ ಯೇಸು ನಾಯಿನೆಂಬ ಪಟ್ಟಣಕ್ಕೆ ಹೋದನು. ಮತ್ತು ಆತನು ಪಟ್ಟಣದ ಬಾಗಲಿಗೆ ಸಮೀಪಿಸುವಾಗ, ಅಗೋ, ತನ್ನ ತಾಯಿಗೆ ಒಬ್ಬನೇ ಮಗನಾದ ಒಬ್ಬ ಸತ್ತವನನ್ನು ಹೊರಗೆ ತಂದರು; ಮತ್ತು ಅವಳು ವಿಧವೆಯಾಗಿದ್ದಳು. ಮತ್ತು ಬಹು ಸಮೂಹವು ಅವಳ ಸಂಗಡ ಇತ್ತು; ಕರ್ತನು ಅವಳನ್ನು ನೋಡಿ, ಅವಳ ಮೇಲೆ ಅಂತಃಕರಣವಿಟ್ಟು, ಅವಳಿಗೆ — ಅಳಬೇಡ! ಅಂದನು. ಮತ್ತು ಆತನು ಹತ್ತರ ಬಂದು, ಪೆಟ್ಟಿಗೆಯನ್ನು ಮುಟ್ಟಿದಾಗ, ಹೊರುವವರು ನಿಂತರು. ಆಗ ಆತನು — ಯೌವನಸ್ಥನೇ,



ಯೇಳೆಂದು ನಿನಗೆ ಹೇಳುತ್ತೇನೆ! ಅಂದನು. ಆಗ ಸತ್ತವನು ಕೂತುಕೊಂ

ಡು, ಮಾತಾಡಲಾರಂಭಿಸಿದನು. ಆತನು ಅವನನ್ನು ಅವನ ತಾಯಿಗೆ ಕೊಟ್ಟನು. ಆಗ ಯೆಲ್ಲರನ್ನು ಭಯ ಹಿಡಿದಿತು, ಅವರು ದೇವರನ್ನು ಮಹಿಮೆ ಪಡಿಸಿ,—ಮಹಾ ಪ್ರವಾದಿಯು ನಮ್ಮಲ್ಲಿ ಯೆದ್ದಿದ್ದಾನೆ, ಮತ್ತು ದೇವರು ತನ್ನ ಜನರನ್ನು ದರ್ಶಿಸಿದ್ದಾನೆ, ಅಂದರು.

ಆದರೆ ಯೋಹಾನನು ಸೆರೆಮನೆಯಲ್ಲಿ ಕ್ರಿಸ್ತನ ಕ್ರಿಯೆಗಳನ್ನು ಕೇಳಿ, ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ,—ಬರುವವನು ನೀನೋ? ಬೇರೊಬ್ಬನನ್ನು ಯೆದುರುನೋಡಬೇಕೋ? ಯೆಂದು ಆತನಿಗೆ ಹೇಳಿಸಿದನು. ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದು,—ಹೋಗಿ, ನೀವು ಕೇಳುವವುಗಳನ್ನೂ ನೋಡುವವುಗಳನ್ನೂ ಯೋಹಾನನಿಗೆ ತಿಳಿಸಿರಿ! ಕುರುಡರು ದೃಷ್ಟಿ ಹೊಂದುತ್ತಾರೆ, ಕುಂಟರು ನಡಿಯುತ್ತಾರೆ, ಕುಷ್ಠರೋಗಿಗಳು ಶುಚಿಯಾಗುತ್ತಾರೆ, ಕಿವಡರು ಕೇಳುತ್ತಾರೆ, ಸತ್ತವರು ಯೆಬ್ಬಿಸಲ್ಪಡುತ್ತಾರೆ, ಬಡವರಿಗೆ ಸುವಾರ್ತೆ ಪ್ರಸಂಗಿಸಲ್ಪಡುತ್ತದೆ; ಮತ್ತು ನನ್ನಲ್ಲಿ ಆತಂಕ ಹೊಂದದವನೇ ಭಾಗ್ಯವಂತನು.

---


೧೩. ಮೂವತ್ತೆಂಟು ವರುಷದ ರೋಗಿಷ್ಟನು. ಪಾಪಿಷ್ಟಳು. ಕುರುಡಮೂಕನು. ಯೇಸುವಿನ ತಾಯಿಯೂ ಸಹೋದರರೂ.

(ಯೋ. ೫. ಲೂ. ೭, ೩೬—೫೦. ೧೧, ೧೪—೨೮. ೮, ೧೯—೨೧. ಮತ್ತ. ೧೨, ೨೨—೫೦. ಮಾರ್ಕ. ೩, ೨೦—೩೫.)

ಇವುಗಳಾದ ತರುವಾಯ ಯೆಹೂದ್ಯರ ಹಬ್ಬವಿರಲಾಗಿ, ಯೇಸು ಯೆರೂಸಲೇಮಿಗೆ ಯೇರಿ ಹೋದನು. ಯೆರೂಸಲೇಮಿನಲ್ಲಿ ಬೇಥೆಸ್ದ ಯೆಂದು ಕರೆಯಲ್ಪಟ್ಟ, ಐದು ಮಂಟಪಗಳುಳ್ಳ ಕೊಳ ಇತ್ತು. ಆ ಮಂಟಪಗಳಲ್ಲಿ ವ್ಯಾಧಿಯುಳ್ಳವರೂ ಕುರುಡರೂ ಕುಂಟರೂ ಮೈ ಒಣಗಿದವರೂ ಬಹು ಸಮೂಹವಾಗಿ ಬಿದ್ದು, ನೀರು ಕದಲುವದಕ್ಕೆ ಕಾದುಕೊಂಡಿದ್ದರು. ಯಾಕಂದರೆ ಆಗಾಗ್ಯೆ ಒಬ್ಬ ದೂತನು ಕೊಳದೊಳಗೆ ಇಳಿದು ಬಂದು, ನೀರನ್ನು ಕ

ದಲಿಸುತ್ತಿದ್ದನು. ನೀರು ಕದಲಿಸಲ್ಪಟ್ಟ ಮೇಲೆ ಮೊದಲು ಹೊಳೆಗೆ ಇಳಿದವನು, ಯಾವ ರೋಗದಲ್ಲಿ ಬಿದ್ದಿದ್ದರೂ, ಸ್ವಸ್ಥವಾಗುವನು. ಹೀಗಿರಲಾಗಿ ಮೂವತ್ತೆಂಟು ವರುಷದಿಂದ ವ್ಯಾಧಿಯುಳ್ಳ ಒಬ್ಬ ಮನುಷ್ಯನು ಅಲ್ಲಿ ಇದ್ದನು. ಇವನು ಬಿದ್ದಿರುವದನ್ನು ಯೇಸು ನೋಡಿ, ಹೀಗೆಯೇ ಬಹುಕಾಲದಿಂದಿದ್ದಾನೆಂದು ತಿಳಿದು, ಅವನಿಗೆ—ಸ್ವಸ್ಥವಾಗ ಬೇಕೋ? ಅಂದಾಗ, ವ್ಯಾಧಿಯುಳ್ಳವನು ಆತನಿಗೆ ಪ್ರತ್ಯುತ್ತರವಾಗಿ,—ಕರ್ತನೇ, ನೀರು ಕದಲಿಸಲ್ಪಡುವಾಗ, ನನ್ನನ್ನು ಕೊಳದೊಳಗೆ ಹಾಕುವ ಮನುಷ್ಯನು ನನಗಿಲ್ಲ; ಆದರೆ ನಾನು ಬರುವಷ್ಟರಲ್ಲಿ ಮತ್ತೊಬ್ಬನು ನನಗೆ ಮುಂಚೆ ಇಳಿಯುತ್ತಾನೆ, ಅಂದನು. ಯೇಸು ಅವನಿಗೆ,—ಯೆದ್ದು, ನಿನ್ನ ಮಂಚ ಯೆತ್ತಿಕೊಂಡು, ನಡಿ! ಅಂದನು. ಸಂಗಡಲೇ ಆ ಮನುಷ್ಯನು ಸ್ವಸ್ಥವಾಗಿ, ತನ್ನ ಮಂಚ ಯೆತ್ತಿಕೊಂಡು, ನಡದನು. ಇವುಗಳಾದ ಮೇಲೆ ಯೇಸು ಅವನನ್ನು ದೇವಾಲಯದಲ್ಲಿ ಕಂಡು, ಅವನಿಗೆ—ಇಗೋ, ಸ್ವಸ್ಥವಾದಿ; ನಿನಗೆ ಹೆಚ್ಚಾದ ಕೇಡು ಆಗದ ಹಾಗೆ, ಇನ್ನು ಮೇಲೆ ಪಾಪ ಮಾಡಬೇಡ! ಅಂದನು.

ಇದಲ್ಲದೆ ಫರಿಸಾಯರಲ್ಲಿ ಒಬ್ಬನು, ತನ್ನ ಸಂಗಡ ಊಟ ಮಾಡ ಬೇಕೆಂದು ಆತನನ್ನು ಬೇಡಿಕೊಂಡಾಗ, ಇಗೋ, ಪಟ್ಟಣದಲ್ಲಿರುವ ಪಾಪಿಷ್ಠಳಾದ ಒಬ್ಬ ಸ್ತ್ರೀಯು, ಆತನು ಫರಿಸಾಯನ ಮನೆಯಲ್ಲಿ ಊಟಕ್ಕೆ ಕೂತಿದ್ದಾನೆಂದು ತಿಳಿದು, ತೈಲದ ಚಂದ್ರಕಾಂತಶಿಲಾ ಭರಣಿಯನ್ನು ತೆಗೆದುಕೊಂಡು, ಆತನ ಪಾದಗಳ ಹಿಂದುಗಡೆಯಲ್ಲಿ ನಿಂತು, ಅಳುತ್ತಾ, ತನ್ನ ಕಣ್ಣೀರಿನಿಂದ ಆತನ ಪಾದಗಳನ್ನು ತೊಯಿಸಲಾರಂಭಿಸಿ, ತನ್ನ ತಲೆಕೂದಲಿಂದ ಅವುಗಳನ್ನು ಒ



ರಸಿ, ಆತನ ಪಾದಗಳಿಗೆ ಮುದ್ದಿಟ್ಟು, ತೈಲ ಹಚ್ಚಿದಳು. ಆದರೆ ಆತನನ್ನು ಕರೆದ ಫರಿಸಾಯನು ಅದನ್ನು ನೋಡಿ,—ಈತನು ಪ್ರವಾದಿಯಾಗಿದ್ದರೆ, ತನ್ನನ್ನು ಮುಟ್ಟುವ ಸ್ತ್ರೀಯು ಯೆಂಥವಳೆಂದು ತಿಳುಕೊಳ್ಳುವನು; ಯಾಕಂದರೆ ಅವಳು ಪಾಪಿಷ್ಟಳು! ಯೆಂದು ತನ್ನೊಳಗೆ ಅಂದುಕೊಂಡನು. ಆಗ ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ಸಾಲಕೊಟ್ಟ ಒಬ್ಬನಿಗೆ ಇಬ್ಬರು ಸಾಲಗಾರರಿದ್ದರು; ಒಬ್ಬನು ಐನೂರು ಹಣ, ಮತ್ತೊಬ್ಬನು ಐವತ್ತು ಕೊಡಬೇಕಾಗಿತ್ತು. ಆದರೆ ಕೊಡುವದಕ್ಕೆ ಅವರಿಗೆ ಇಲ್ಲದದರಿಂದ, ದಯಮಾಡಿ, ಇಬ್ಬರಿಗೂ ಬಿಟ್ಟನು. ಆದದರಿಂದ ಅವರಲ್ಲಿ ಯಾವನು ಹೆಚ್ಚಾಗಿ ಅವನನ್ನು ಪ್ರೀತಿ ಮಾಡುವನು? ಹೇಳು! ಫರಿಸಾಯನು ಪ್ರತ್ಯುತ್ತರವಾಗಿ,—ಯಾವನಿಗೆ ದಯಮಾಡಿ ಹೆಚ್ಚು ಬಿಟ್ಟನೋ, ಅವನೇ ಯೆಂದು ನೆನಸುತ್ತೇನೆ, ಅಂದಾಗ, ಆತನು ಅವನಿಗೆ—ಸರಿಯಾಗಿ ತೀರಿಸಿದಿ! ಯೆಂದು ಹೇಳಿ, ಆ ಸ್ತ್ರೀಯ ಕಡೆಗೆ ತಿರುಗಿಕೊಂಡು, ಅವನಿಗೆ—ಈ ಸ್ತ್ರೀಯನ್ನು ನೋಡುತ್ತೀಯೋ? ನಿನಗೆ ಹೇಳುತ್ತೇನೆ, ಬಹಳವಾಗಿರುವ ಅವಳ ಪಾಪಗಳು ಮನ್ನಿಸಲ್ಪಟ್ಟವೆ, ಯಾಕಂದರೆ ಅವಳು ಬಹಳ ಪ್ರೀತಿ ಮಾಡಿದ್ದಾಳೆ; ಆದರೆ ಯಾವನಿಗೆ ಸ್ವಲ್ಪ ಮನ್ನಿಸಲ್ಪಟ್ಟದೆಯೋ, ಅವನು ಸ್ವಲ್ಪ ಪ್ರೀತಿ ಮಾಡುತ್ತಾನೆ. ಆಗಲವಳಿಗೆ—ನಿನ್ನ ಪಾಪಗಳು ಮನ್ನಿಸಲ್ಪಟ್ಟವೆ; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ; ಸಮಾಧಾನವಾಗಿ ಹೋಗು! ಅಂದನು.

ತರುವಾಯ ಯೇಸು ಗಲಿಲಾಯದಲ್ಲಿ ಸಾರುತ್ತಾ, ದೇವರ ರಾಜ್ಯದ ಸುವಾರ್ತೆ ಪ್ರಸಂಗಿಸುತ್ತಾ, ಪಟ್ಣ ಗ್ರಾಮಗಳನ್ನು ಸಂಚರಿಸಿದನು. ಮತ್ತು ದುರಾತ್ಮಗಳಿಂದಲೂ ರೋಗಗಳಿಂದಲೂ ಸ್ವಸ್ಥವಾದ ಕೆಲವು ಹೆಂಗಸರು ಆತನ ಸಂಗಡ ಇದ್ದರು! ಯಾರಂದರೆ—ಏಳು ದೆವ್ವಗಳು ಹೊರಡಿಸಲ್ಪಟ್ಟ ಮಗ್ದಲದವಳಾದ ಮರಿಯಳೂ, ಹೆರೋದನ ಉಗ್ರಾಣದವನಾದ ಕೂಜನ ಹೆಂಡತಿಯಾದ ಯೋಹಾನಳೂ, ಸುಸನ್ನಳೂ, ಬೇರೆ ಅನೇಕರೂ, ಇವರು ತಮಗುಂಟಾದವುಗಳಿಂದ ಆತನಿಗೆ ಸೇವೆ ಮಾಡುತ್ತಿದ್ದರು.

ಆಗ ದೆವ್ವ ಹಿಡಿದ ಒಬ್ಬ ಕುರುಡಮೂಕನು ಆತನ ಬಳಿಗೆ ತರಲ್ಪ

ಟ್ಟನು. ಆತನು ಅವನನ್ನು ವಾಸಿ ಮಾಡಿದದರಿಂದ, ಕುರುಡಮೂಕನು ಮಾತಾಡಿ ನೋಡಿದನು. ಆಗ ಸಮೂಹಗಳೆಲ್ಲಾ ಭ್ರಮೆಗೊಂಡು,—ಈತನು ದಾವೀದನ ಮಗನಲ್ಲವೇ? ಅಂದರು. ಆದರೆ ಫರಿಸಾಯರು ಅದನ್ನು ಕೇಳಿ,—ಈತನು ದೆವ್ವಗಳ ಅಧಿಕಾರಿಯಾದ ಬೆಲ್ಜೆಬೂಬನಿಂದ ಹೊರತು ದೆವ್ವಗಳನ್ನು ಹೊರಡಿಸುವದಿಲ್ಲಾ, ಅಂದರು. ಯೇಸು ಅವರ ಆಲೋಚನೆಗಳನ್ನು ತಿಳಿದು, ಅವರಿಗೆ ಹೇಳಿದ್ದೇನಂದರೆ,—ಯಾವ ರಾಜ್ಯವಾದರೂ ತನ್ನಲ್ಲಿ ಭೇದವಾದರೆ, ಹಾಳಾಗುತ್ತದೆ; ಹೀಗಿರಲಾಗಿ ಸೈತಾನನು ಸೈತಾನನನ್ನು ಹೊರಡಿಸಿದರೆ, ತನ್ನಲ್ಲಿ ಭೇದವಾಗಿರುವನು; ಹಾಗಾದರೆ ಅವನ ರಾಜ್ಯವು ನಿಲ್ಲುವದು ಹ್ಯಾಗೆ? ಆದರೆ ನಾನು ದೇವರ ಆತ್ಮದಿಂದ ದೆವ್ವಗಳನ್ನು ಹೊರಡಿಸಿದರೆ, ದೇವರ ರಾಜ್ಯವು ನಿಮ್ಮಲ್ಲಿ ಬಂತಲ್ಲಾ?

ಆತನು ಇನ್ನೂ ಸಮೂಹಗಳ ಸಂಗಡ ಮಾತಾಡುವಾಗ, ಒಬ್ಬನು ಆತನಿಗೆ—ಇಗೋ, ನಿನ್ನ ತಾಯಿಯೂ ಸಹೋದರರೂ ಹೊರಗೆ ನಿಂತುಕೊಂಡು, ನಿನ್ನ ಸಂಗಡ ಮಾತಾಡ ಹುಡುಕುತ್ತಾರೆ, ಅಂದನು. ಆದರೆ ಆತನು ಅವನಿಗೆ—ನನ್ನ ತಾಯಿ ಯಾರು? ನನ್ನ ಸಹೋದರರು ಯಾರು? ಅಂದನು. ಮತ್ತು ತನ್ನ ಶಿಷ್ಯರ ಕಡೆಗೆ ತನ್ನ ಕೈ ಚಾಚಿ,—ಇಗೋ, ನನ್ನ ತಾಯಿಯೂ, ನನ್ನ ಸಹೋದರರೂ! ಯಾಕಂದರೆ ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವನ್ಯಾವನೋ, ಅವನೇ ನನ್ನ ಸಹೋದರನೂ ಸಹೋದರಿಯೂ ತಾಯಿಯೂ ಆಗಿದ್ದಾನೆ, ಅಂದನು.

---

೧೪. ಯೇಳು ಸಾಮ್ಯಗಳು.

(ಮತ್ತ್. ೧೩, ೧—೫೨. ಮಾರ್ಕ. ೪, ೧—೩೪. ಲೂಕ್. ೮, ೪—೧೫.)

ಆ ದಿವಸದಲ್ಲಿ ಯೇಸು ಮನೆಯಿಂದ ಹೊರಟು ಹೋಗಿ, ಸಮುದ್ರದ ಹತ್ತರ ಕೂತುಕೊಂಡನು. ಮತ್ತು ಬಹು ಸಮೂಹಗಳು ಆತನ ಬಳಿಗೆ ಕೂಡಿ

ಬಂದದರಿಂದ, ಆತನು ಹಡಗವನ್ನೇರಿ ಕೂತುಕೊಂಡನು; ಸಮೂಹವೆಲ್ಲಾ ಧಡದಲ್ಲಿ ನಿಂತಿತು. ಆಗಲಾತನು ಅವರ ಸಂಗಡ ಸಾಮ್ಯಗಳಿಂದ ಅನೇಕ ಮಾತುಗಳನ್ನಾಡಿ, ಹೇಳಿದ್ದೇನಂದರೆ,—

೧.) ಇಗೋ, ಬಿತ್ತುವವನು ಬಿತ್ತ ಹೊಱಟನು. ಅವನು ಬಿತ್ತುವಾಗ, ಕೆಲವು ಮಾರ್ಗದ ಹತ್ತರ ಬಿತ್ತು; ಪಕ್ಷಿಗಳು ಬಂದು, ಅದನ್ನು ತಿಂದು ಬಿಟ್ಟವು. ಬೇರೆ ಕೆಲವು ಬಹಳ ಮಣ್ಣು ಇಲ್ಲದ ಬಂಡೇಸ್ಥಳಗಳಲ್ಲಿ ಬಿತ್ತು; ಅದಕ್ಕೆ ಆಳವಾದ ಮಣ್ಣು ಇಲ್ಲದಕಾರಣ, ಸಂಗಡಲೇ ಮೊಳೆಯಿತು; ಆದರೆ ಸೂರ್ಯನು ಮೂಡಿದಾಗ, ಅದು ಬೆಂದು, ಅದಕ್ಕೆ ಬೇರು ಇಲ್ಲದದರಿಂದ, ಒಣಗಿ ಹೋಯಿತು. ಬೇರೆ ಕೆಲವು ಮುಳ್ಳುಗಳ ಮೇಲೆ ಬಿತ್ತು; ಮುಳ್ಳುಗಳು ಬೆಳೆದು, ಅದನ್ನು ಅಣಗಿಸಿದವು. ಬೇರೆ ಕೆಲವು ಒಳ್ಳೇ ಭೂಮಿಯ ಮೇಲೆ ಬಿದ್ದು, ಒಂದು ನೂರಷ್ಟು, ಒಂದು ಅರವತ್ತಷ್ಟು, ಒಂದು ಮೂವತ್ತಷ್ಟು ಫಲ ಕೊಟ್ಟಿತು. ಕೇಳುವದಕ್ಕೆ ಕಿವಿಗಳುಳ್ಳವನು ಕೇಳಲಿ!—ಆಗ ಶಿಷ್ಯರು ಹತ್ತರ ಬಂದು,—ಯಾಕೆ ಸಾಮ್ಯಗಳಿಂದ ಅವರ ಸಂಗಡ ಮಾತಾಡುತ್ತಿ? ಯೆಂದು ಆತನಿಗೆ ಹೇಳಿದರು. ಆದರೆ ಆತನು ಅವರಿಗೆ ಹೇಳಿದ್ದು,—ಪರಲೋಕರಾಜ್ಯದ ಮರ್ಮಗಳನ್ನು ತಿಳಿಯುವದು ನಿಮಗೆ ಕೊಡಲ್ಪಟ್ಟದೆ, ಅವರಿಗೆ ಕೊಡಲ್ಪಡಲಿಲ್ಲಾ. ಆದದರಿಂದ ನೀವು ಬಿತ್ತುವವನ ಸಾಮ್ಯವನ್ನು ಕೇಳಿರಿ! ಬೀಜವು ದೇವರ ವಾಕ್ಯವು. ವಾಕ್ಯವನ್ನು ಕೇಳಿ, ಗ್ರಹಿಸದೆ ಇರುವ ಪ್ರತಿಮನುಷ್ಯನ ಹೃದಯದಲ್ಲಿ ಬಿತ್ತಿದ್ದನ್ನು ದುಷ್ಟನು ಬಂದು ಕಿತ್ತುಕೊಳ್ಳುತ್ತಾನೆ; ಮಾರ್ಗದ ಹತ್ತರ ಬಿತ್ತಲ್ಪಟ್ಟವನು ಇವನೇ. ಬಂಡೇಸ್ಥಳದಲ್ಲಿ ಬಿತ್ತಲ್ಪಟ್ಟವನು ಯಾರಂದರೆ,—ವಾಕ್ಯವನ್ನು ಕೇಳಿ, ಸಂಗಡಲೇ ಸಂತೋಷದಿಂದ ಅದನ್ನು ಅಂಗೀಕರಿಸುವವನಾಗಿದ್ದಾನೆ; ಆದರೆ ತನ್ನಲ್ಲಿ ಬೇರು ಇಲ್ಲದವನಾಗಿ, ವಾಕ್ಯದ ನಿಮಿತ್ತ ಉಪದ್ರವಾದರೂ ಹಿಂಸೆಯಾದರೂ ಉಂಟಾಗಲು, ಸಂಗಡಲೇ ಆತಂಕ ಪಡುತ್ತಾನೆ. ಮುಳ್ಳುಗಳಲ್ಲಿ ಬಿತ್ತಲ್ಪಟ್ಟವನು ಯಾರಂದರೆ,—ವಾಕ್ಯವನ್ನು ಕೇಳುವವನಾಗಿದ್ದಾನೆ; ಆದರೆ ಈ ಲೋಕದ ಚಿಂತೆಯೂ ಐಶ್ವರ್ಯದ ಮೋಸವೂ ವಾಕ್ಯವನ್ನು ಅಣಗಿಸುವದರಿಂದ, ನಿಷ್ಫಲ

ವಾಗುತ್ತಾನೆ. ಒಳ್ಳೇ ಭೂಮಿಯಲ್ಲಿ ಬಿತ್ತಲ್ಪಟ್ಟವನು ಯಾರಂದರೆ,—ವಾಕ್ಯವ
ನ್ನು ಕೇಳಿ, ಒಳ್ಳೇ ಸದ್ಗುಣವುಳ್ಳ ಹೃದಯದಲ್ಲಿ ಇಟ್ಟುಕೊಂಡು, ತಾಳ್ಮೆಯಿಂದ
ಫಲ ಫಲಿಸುತ್ತಾನೆ.

೨.) ಮತ್ತೊಂದು ಸಾಮ್ಯವನ್ನು ಅವರ ಮುಂದೆ ಇಟ್ಟು ಹೇಳಿದ್ದೇ
ನಂದರೆ,—ಪರಲೋಕರಾಜ್ಯವು ತನ್ನ ಹೊಲದಲ್ಲಿ ಒಳ್ಳೇ ಬೀಜ ಬಿತ್ತುವ
ಮನುಷ್ಯನಿಗೆ ಸಮಾನವಾಗಿದೆ; ಆದರೆ ಮನುಷ್ಯನು ನಿದ್ದೆ ಮಾಡುವಾಗ,
ಅವನ ಶತ್ರುವು ಬಂದು, ಗೋಧಿಯ ಮಧ್ಯದಲ್ಲಿ ಊದರೆಯನ್ನು ಬಿತ್ತಿ ಹೋ
ದನು. ಪೈರು ಬೆಳೆದು, ಫಲ ಫಲಿಸಿದಾಗ, ಊದರೆಯು ಸಹಾ ಕಾಣಿಸಿತು.
ಆಗ ಮನೆಯ ಯಜಮಾನನ ದಾಸರು ಅವನ ಬಳಿಗೆ ಬಂದು,—ಅಯ್ಯಾ,
ನೀನು ನಿನ್ನ ಹೊಲದಲ್ಲಿ ಒಳ್ಳೇ ಬೀಜ ಬಿತ್ತಲಿಲ್ಲವೋ? ಹಾಗಾದರೆ ಊ
ದರೆ ಯೆಲ್ಲಿಂದ ಬಂತು? ಅಂದರು. ಅವನು ಅವರಿಗೆ—ಶತ್ರುವಾದ ಮನು
ಷ್ಯನು ಇದನ್ನು ಮಾಡಿದ್ದಾನೆ, ಅಂದನು. ದಾಸರು ಅವನಿಗೆ—ಈಗ ನಾ
ವು ಹೋಗಿ, ಅದನ್ನು ಕೂಡಿಸ ಬೇಕೋ? ಅನ್ನಲು, ಅವನು—ಬೇಡ! ಒಂ
ದುವೇಳೆ ಊದರೆ ಕೂಡಿಸುವಾಗ, ಗೋಧಿಯನ್ನು ಅದರ ಸಂಗಡ ಕೀಳುವಿ
ರಿ; ಕೊಯ್ಯುವ ಕಾಲದ ಪರ್ಯಂತರ ಯೆರಡು ಕೂಡಾ ಬೆಳೆಯ ಬಿಡಿರಿ; ಕೊ
ಯ್ಯುವ ಕಾಲದಲ್ಲಿ ನಾನು ಕೊಯ್ಯುವವರಿಗೆ—ಮೊದಲು ಊದರೆಯನ್ನು ಕೂ
ಡಿಸಿ, ಅದನ್ನು ಸುಡುವದಕ್ಕೆ ಕಟ್ಟುಗಳಾಗಿ ಕಟ್ಟಿರಿ; ಆದರೆ ಗೋಧಿಯನ್ನು
ನನ್ನ ಕಣಜದಲ್ಲಿ ಕೂಡಿಸಿಡಿರಿ! ಯೆಂದು ಹೇಳುವೆನು, ಅಂದನು.—ಆಗ
ಆತನ ಶಿಷ್ಯರು ಆತನ ಬಳಿಗೆ ಬಂದು,—ಹೊಲದ ಊದರೆಯ ಸಾಮ್ಯ
ವನ್ನು ನಮಗೆ ತಿಳಿಸು! ಅಂದರು. ಆತನು ಅವರಿಗೆ ಹೇಳಿದ್ದು,—ಒಳ್ಳೇ
ಬೀಜ ಬಿತ್ತುವವನು ಮನುಷ್ಯನ ಮಗನು; ಹೊಲವು ಈ ಲೋಕವು;
ಒಳ್ಳೇ ಬೀಜವು ರಾಜ್ಯದ ಮಕ್ಕಳು; ಊದರೆಯು ದುಷ್ಟನ ಮಕ್ಕಳು; ಅವು
ಗಳನ್ನು ಬಿತ್ತುವ ಶತ್ರುವು ಪಿಶಾಚನು; ಕೊಯ್ಯುವ ಕಾಲ ಈ ಲೋಕದ ಅಂತ್ಯ
ವು; ಕೊಯ್ಯುವವರು ದೂತರು. ಆದದರಿಂದ ಊದರೆಯು ಹ್ಯಾಗೆ ಕೂ
ಡಿಸಲ್ಪಟ್ಟು, ಬೆಂಕಿಯಿಂದ ಸುಡಲ್ಪಡುವದೋ, ಹಾಗೆಯೇ ಈ ಲೋಕದ ಅಂ

ಷ್ಯದಲ್ಲಿ ಇರುವದು; ಮನುಷ್ಯನ ಮಗನು ತನ್ನ ದೂತರನ್ನು ಕಳುಹಿಸುವನು; ಅವರು ಆತನ ರಾಜ್ಯದೊಳಗಿಂದ ಯೆಲ್ಲಾ ಆತಂಕಗಳನ್ನೂ ಅನೀತಿ ಮಾಡುವವರನ್ನೂ ಕೂಡಿಸಿ, ಅವರನ್ನು ಬೆಂಕಿಯ ಗುಂಡದಲ್ಲಿ ಹಾಕುವರು; ಅಲ್ಲಿ ಅಳುವಿಕೆಯೂ ಹಲ್ಲುಕಡಿಯುವಿಕೆಯೂ ಇರುವವು. ಆದರೆ ನೀತಿವಂತರು ಸೂರ್ಯನ ಹಾಗೆ ತಮ್ಮ ತಂದೆಯ ರಾಜ್ಯದಲ್ಲಿ ಪ್ರಕಾಶಿಸುವರು. ಕೇಳುವದಕ್ಕೆ ಕಿವಿಗಳುಳ್ಳವರು ಕೇಳಲಿ!

೩.) ಮತ್ತೊಂದು ಸಾಮ್ಯವನ್ನು ಅವರ ಮುಂದೆ ಇಟ್ಟು, ಹೇಳಿದ್ದೇನಂದರೆ,—ಪರಲೋಕರಾಜ್ಯವು ಸಾಸಿವೆ ಕಾಳಿಗೆ ಸಮಾನವಾಗಿದೆ ಒಬ್ಬ ಮನುಷ್ಯನು ಅದನ್ನು ತೆಗೆದು, ತನ್ನ ಹೊಲದಲ್ಲಿ ಬಿತ್ತಿದನು. ಅದು ಸಮಸ್ತ ಬೀಜಗಳಲ್ಲಿ ಸಣ್ಣದಾಗಿದ್ದರೂ, ಬೆಳದ ಮೇಲೆ ಪಲ್ಯದ ಗಿಡಗಳಲ್ಲಿ ದೊಡ್ಡದಾಗಿ ಮರವಾಗುತ್ತದೆ. ಆದದರಿಂದ ಆಕಾಶದ ಪಕ್ಷಿಗಳು ಬಂದು, ಅದರ ಕೊಂಬೆಗಳಲ್ಲಿ ವಾಸ ಮಾಡುತ್ತವೆ.

೪.) ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು, ಯೇನಂದರೆ,—ಪರಲೋಕರಾಜ್ಯವು ಹುಳಿಹಿಟ್ಟಿಗೆ ಸಮಾನವಾಗಿದೆ; ಅದನ್ನು ಒಬ್ಬ ಸ್ತ್ರೀಯು ತಕ್ಕೊಂಡು, ಮೂರು ಸೇರು ಹಿಟ್ಟಿನಲ್ಲಿ, ಯೆಲ್ಲಾ ಹುಳಿಯಾಗುವ ಪರ್ಯಂತರ, ಅಡಗಿಸಿ ಇಟ್ಟಳು.

೫.) ಮತ್ತು ಪರಲೋಕರಾಜ್ಯವು ಹೊಲದಲ್ಲಿ ಬಚ್ಚಿಟ್ಟ ದ್ರವ್ಯಕ್ಕೆ ಸಮಾನವಾಗಿದೆ. ಅದನ್ನು ಒಬ್ಬ ಮನುಷ್ಯನು ಕಂಡು, ಅಡಗಿಸಿ, ಅದರ ಸಂತೋಷದಿಂದ ಹೋಗಿ, ತನಗಿರುವದನ್ನೆಲ್ಲಾ ಮಾರಿ ಬಿಟ್ಟು, ಆ ಹೊಲವನ್ನು ಕೊಂಡುಕೊಳ್ಳುತ್ತಾನೆ.

೬.) ಮತ್ತು ಪರಲೋಕರಾಜ್ಯವು ಒಳ್ಳೇ ಮುತ್ತುಗಳನ್ನು ಹುಡುಕುವ ವರ್ತಕನಿಗೆ ಸಮಾನವಾಗಿದೆ. ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು, ಹೋಗಿ, ತನಗಿದ್ದದ್ದನ್ನೆಲ್ಲಾ ಮಾರಿ ಬಿಟ್ಟು; ಅದನ್ನು ಕೊಂಡುಕೊಂಡನು.

೭.) ಮತ್ತು ಪರಲೋಕರಾಜ್ಯವು ಸಮುದ್ರದಲ್ಲಿ ಹಾಕಲ್ಪಟ್ಟು, ಯೆಲ್ಲಾ

ಜಾತಿಯವುಗಳನ್ನು ಕೂಡಿಸುವ ಬಲೆಗೆ ಸಮಾನವಾಗಿದೆ. ತುಂಬಿದ ಮೇಲೆ ಅದನ್ನು ದಡಕ್ಕೆ ಯೆಳದು, ಕೂತುಕೊಂಡು, ಒಳ್ಳೆಯವುಗಳನ್ನು ಪುಟ್ಟಿಗಳಲ್ಲಿ ಕೂಡಿಸಿ, ಕೆಟ್ಟವುಗಳನ್ನು ಆಚೆ ಬಿಸಾಟರು. ಹಾಗೆಯೇ ಲೋಕದ ಅಂತ್ಯದಲ್ಲಿ ಇರುವದು. ದೂತರು ಹೊರಟು ಬಂದು, ನೀತಿವಂತರ ಮಧ್ಯದಿಂದ ದುಷ್ಟರನ್ನು ಬೇರೆ ಮಾಡಿ, ಅವರನ್ನು ಬೆಂಕಿಯ ಗುಂಡದಲ್ಲಿ ಹಾಕುವರು; ಅಲ್ಲಿ ಅಳುವಿಕೆಯೂ ಹಲ್ಲು ಕಡಿಯುವಿಕೆಯೂ ಇರುವವು.

ಯೇಸು ಈ ಸಾಮ್ಯಗಳನ್ನು ಮುಗಿಸಿದ ಮೇಲೆ, ಅಲ್ಲಿಂದ ಹೊರಟು ಹೋದನು.

---

೧೫. ಯೇಸುವನ್ನು ಹಿಂಬಾಲಿಸುವ ಮನಸ್ಸಾಗಿದ್ದವರು. ಬಿರುಘಾಳಿ. ಗೆರ್ಗೆಸೇನರು. ನಜರೇತಿನಲ್ಲಿ ಬಾಧಿಸಿದ್ದು.

(ಮತ್ತ. ೮, ೧೮—೩೪. ೧೩, ೫೩—೫೮. ಮಾರ್ಕ. ೪, ೩೫—೪೧. ೫, ೧—೨೦. ೬, ೧—೬. ಲೂಕ. ೪, ೧೩—೩೦. ೮, ೨೨—೩೯. ೯, ೫೭—೬೨.)

ಆದರೆ ಯೇಸು ತನ್ನ ಸುತ್ತಲೂ ಬಹು ಸಮೂಹಗಳನ್ನು ನೋಡಿ, ಆಚೆಗೆ ಹೋಗ ಅಪ್ಪಣೆ ಕೊಟ್ಟನು. ಮತ್ತು ಒಬ್ಬ ಶಾಸ್ತ್ರಿಯು ಹತ್ತಿರ ಬಂದು, ಆತನಿಗೆ—ಬೋಧಕನೇ, ನೀನು ಯೆಲ್ಲಿಗೆ ಹೋದರೂ, ನಿನ್ನನ್ನು ಹಿಂಬಾಲಿಸುವೆನು, ಅಂದನು. ಯೇಸು ಅವನಿಗೆ—ನರಿಗಳಿಗೆ ಕುಣಿಗಳೂ, ಆಕಾಶದ ಪಕ್ಷಿಗಳಿಗೆ ಗೂಡುಗಳೂ ಉಂಟು; ಆದರೆ ಮನುಷ್ಯನ ಮಗನಿಗೆ ತಲೆ ಇಡ ಸ್ಥಳವಿಲ್ಲ, ಅಂದನು.—ಮತ್ತು ಬೇರೊಬ್ಬನಿಗೆ ಆತನು —ನನ್ನನ್ನು ಹಿಂಬಾಲಿಸು! ಅಂದಾಗ, ಅವನು —ಕರ್ತನೇ, ನಾನು ಮೊದಲು ಹೋಗಿ, ನನ್ನ ತಂದೆಯನ್ನು ಹೂಣುವ ಹಾಗೆ ನನಗೆ ಅಪ್ಪಣೆ ಕೊಡು! ಅನ್ನಲು, ಯೇಸು ಅವನಿಗೆ—ಸತ್ತವರೇ ತಮ್ಮ ಸತ್ತವರನ್ನು ಹೂಣಲಿ; ಆದರೆ ನೀನು ಹೋಗಿ, ದೇವರ ರಾಜ್ಯವನ್ನು ಸಾರು! ಅಂದನು.—ಇದಲ್ಲದೆ ಬೇರೊಬ್ಬನು —ಕರ್ತನೇ, ನಿನ್ನನ್ನು ಹಿಂಬಾಲಿಸುವೆನು; ಆದರೆ ಮೊದಲು ನನ್ನ ಮ

ನೆಯವರಿಂದ ಅಪ್ಪಣೆ ತಕ್ಕೊಳ್ಳುವದಕ್ಕೆ ಉತ್ತರ ಕೊಡು! ಅಂದಾಗ, ಯೇಸು ಅವನಿಗೆ—ತನ್ನ ಕೈಯನ್ನು ನೇಗಿಲಿಗೆ ಹಾಕಿ, ಹಿಂದಕ್ಕೆ ನೋಡುವವನ್ಯಾವನಾದರೂ ದೇವರ ರಾಜ್ಯಕ್ಕೆ ತಕ್ಕವನಲ್ಲಾ! ಅಂದನು.

ಮತ್ತು ಆತನು ಹಡಗವನ್ನು ಯೇರುವಾಗ, ಆತನ ಶಿಷ್ಯರು ಆತನನ್ನು ಹಿಂಬಾಲಿಸಿದರು. ಮತ್ತು ಇಗೋ, ಸಮುದ್ರದಲ್ಲಿ ಮಹಾ ಕಂಪವುಂಟಾಗಿ, ಹಡಗವು ತೆರೆಗಳಿಂದ ಮುಚ್ಚಲ್ಪಟ್ಟಿತು. ಆದರೆ ಆತನು ಹಿಂಭಾಗದಲ್ಲಿ ತಲೆಗಿಂಬಿನ ಮೇಲೆ ನಿದ್ದೆ ಮಾಡುತ್ತಿದ್ದನು. ಆಗಲಾತನ ಶಿಷ್ಯರು ಹತ್ತರ ಬಂದು, ಆತನನ್ನು ಯೆಬ್ಬಿಸಿ,—ಕರ್ತನೇ, ನಮ್ಮನ್ನು ರಕ್ಷಿಸು! ನಾವು ನಾಶವಾಗುವದು ನಿನಗೆ ಚಿಂತೆ ಇಲ್ಲವೋ? ಅನ್ನಲಾಗಿ, ಆತನು ಅವರಿಗೆ—ಅಲ್ಪ ವಿಶ್ವಾಸಿಗಳೇ, ಯಾಕೆ ಹೇಡಿಗಳಾಗಿದ್ದೀರಿ? ಯೆಂದು ಹೇಳಿ, ಯೆದ್ದು, ಗಾಳಿಗಳನ್ನೂ ಸಮುದ್ರವನ್ನೂ ಗದರಿಸಿದನು. ಆಗ ಮಹಾ ಶಾಂತ



ವಾಯಿತು. ಆದರೆ ಆ ಮನುಷ್ಯರು ಆಶ್ಚರ್ಯ ಪಟ್ಟು,—ಈತನು ಯೆಂಥವನು? ಯಾಕಂದರೆ ಗಾಳಿಗಳೂ ಸಮುದ್ರವೂ ಆತನಿಗೆ ವಿಧೇಯವಾಗಿವೆ! ಅಂದರು.

ಆಗ ಸಮುದ್ರದ ಆಚೆಗೆ ಗೆರ್ಗೆಸೇನರ ದೇಶಕ್ಕೆ ಬಂದರು. ಮತ್ತು ಆತನು ಹಡಗದಿಂದಿಳಿದಾಗಲೇ, ಆ ಮಾರ್ಗವಾಗಿ ಯಾರೂ ಬರಕೂಡದ ಹಾಗೆ ಬಹು ಘೋರವಾದ ದೆವ್ವ ಹಿಡಿದವರಿಬ್ಬರು ಸಮಾಧಿಗಳೊಳಗಿಂದ

ಪೊರಟು, ಆತನೆದುರಿಗೆ ಬಂದರು. ವೊಬ್ಬನು ಅನೇಕಸಾರಿ ಬಂಧಗಳಿಂದಲೂ ಸಂಕೋಲೆಗಳಿಂದಲೂ ಕಟ್ಟಲ್ಪಟ್ಟು, ಸಂಕೋಲೆಗಳನ್ನು ಪೊರಿದು, ಬಂಧಗಳನ್ನು ಮುರಿದಿದ್ದನು; ಮತ್ತು ಯಾರೂ ಅವನನ್ನು ಸಾಧುಮಾಡಲಾರದೆ ಇದ್ದರು. ರಾತ್ರಿಪಗಲು ಯಾವಾಗಲೂ ಅವನು ಬೆಟ್ಟಗಳಲ್ಲಿಯೂ ಸಮಾಧಿಗಳಲ್ಲಿಯೂ ಕೂಗುತ್ತಾ, ಕಲ್ಲುಗಳಿಂದ ತನ್ನನ್ನು ಕೊಯಿದುಕೊಳ್ಳುತ್ತಾ ಇದ್ದನು. ಮತ್ತು ಇಗೋ,—ದೇವರ ಮಗನಾದ ಯೇಸುವೇ, ನಮಗೂ ನಿನಗೂ ಯೇನು? ಕಾಲಕ್ಕೆ ಮುಂಚೆ ನಮ್ಮನ್ನು ಬಾಧಿಸ ಇಲ್ಲಿಗೆ ಬಂದಿಯಾ? ಯೆಂದು ಅವರು ಕೂಗಿದರು. ಆದರೆ ಅವರಿಗೆ ದೂರವಾಗಿ ಬಹಳ ಪಂದಿಗಳ ಮಂದೆ ಮೇಯುತ್ತಿತ್ತು. ಮತ್ತು ದೆವ್ವಗಳು ಅಗಾಧದೊಳಗೆ ಹೋಗ ತಮಗೆ ಆಜ್ಞಾಪಿಸಬಾರದೆಂದು ಆತನನ್ನು ಬೇಡಿಕೊಂಡು,—ನೀನು ನಮ್ಮನ್ನು ಹೊರಡಿಸಿದರೆ, ಪಂದಿಗಳ ಮಂದೆಯೊಳಗೆ ಹೋಗ ನಮಗೆ ಅಪ್ಪಣೆ ಕೊಡು! ಯೆಂದು ಪೇಳಿದವು. ಆತನು ಅವುಗಳಿಗೆ—ಪೋಗಿರಿ! ಅನ್ನಲು, ಅವು ಹೊರಗೆ ಬಂದು, ಪಂದಿಗಳ ಮಂದೆಯೊಳಗೆ ಹೊಕ್ಕವು. ಆಗ ಇಗೋ, ಪೆಚ್ಚುಕಡಿಮೆ ಯೆರಡು ಸಾವಿರವಾಗಿದ್ದ ಆ ಪಂದಿಗಳ ಮಂದೆ ಯೆಲ್ಲಾ ಇಳಿಜಾರಿನಿಂದ ಸಮುದ್ರಕ್ಕೆ ವೋಡಿ, ನೀರುಗಳಲ್ಲಿ ಬಿದ್ದು, ಸತ್ತುಹೋದವು. ಆದರೆ ಮೇಯಿಸುವವರು ವೋಡಿ, ಪಟ್ಣಕ್ಕೆ ಬಂದು, ಯೆಲ್ಲವುಗಳನ್ನು ತಿಳಿಸಿದರು. ಆಗ ಇಗೋ, ಪಟ್ಣವೆಲ್ಲಾ ಯೇಸುವಿನೆದುರಿಗೆ ಹೊರಟು, ಆತನನ್ನು ಕಂಡು, ತಮ್ಮ ಪ್ರಾಂತ್ಯಗಳನ್ನು ಬಿಟ್ಟು ಪೋಗಬೇಕೆಂದು ಬೇಡಿಕೊಂಡರು. ಆತನು ಪಡಗವನ್ನೇರಿದಾಗ, ಆ ದೆವ್ವಹಿಡಿದವರಲ್ಲಿ ವೊಬ್ಬನು ಆತನ ಸಂಗಡ ಇರಬೇಕೆಂದು, ಆತನನ್ನು ಬೇಡಿಕೊಂಡನು. ಆದರೆ ಯೇಸು ಅವನಿಗೆ ಅಪ್ಪಣೆ ಕೊಡದೆ,—ನಿನ್ನ ಮನೆಗೆ ಸ್ವಜನರ ಬಳಿಗೆ ಹೋಗಿ, ಕರ್ತನು ನಿನ್ನನ್ನು ಕರುಣಿಸಿ, ನಿನಗೆ ಯೆಂಥವುಗಳನ್ನು ಮಾಡಿದ್ದಾನೋ, ಅವುಗಳನ್ನು ಅವರಿಗೆ ತಿಳಿಸು, ಅಂದನು. ಆಗಲವನು ಹೋಗಿ, ಯೇಸು ತನಗೆ ಮಾಡಿದವುಗಳನ್ನು ಸಾರಲಾರಂಭಿಸಲಾಗಿ, ಯೆಲ್ಲರೂ ಆಶ್ಚರ್ಯ ಪಟ್ಟರು.

ತರುವಾಯ ಯೇಸು ತಾನು ಸಾಕಲ್ಪಟ್ಟ ನಜರೇತಿಗೆ ಬಂದು, ತನ್ನ ವಾಡಿಕೆ

ಯ ಮೇರೆಗೆ ಸಬ್ಬಾಥ್ ದಿವಸದಲ್ಲಿ ಸಭೆಮನೆಯಲ್ಲಿ ಪ್ರವೇಶಿಸಿ, ವಾಚುವದಕ್ಕೆ ಯೆದ್ದನು. ಮತ್ತು ಪ್ರವಾದಿಯಾದ ಯೆಶಾಯನ ಪುಸ್ತಕವು ಆತನಿಗೆ ಕೊಡಲ್ಪಟ್ಟಾಗ, ಪುಸ್ತಕವನ್ನು ತೆರದು, —ಕರ್ತನ ಆತ್ಮವು ನನ್ನ ಮೇಲೆ ಅದೆ; ಯಾಕಂದರೆ ಬಡವರಿಗೆ ಸುವಾರ್ತೆಯನ್ನು ಪ್ರಸಂಗಿಸುವದಕ್ಕೆ ನನ್ನನ್ನು ಅಭಿಷೇಕಿಸಿದ್ದಾನೆ; ನಲಗಿದ ಹೃದಯವುಳ್ಳವರನ್ನು ಗುಣ ಮಾಡುವದಕ್ಕೂ, ಸೆರೆಯವರಿಗೆ ಬಿಡುಗಡೆಯನ್ನೂ, ಕುರುಡರಿಗೆ ದೃಷ್ಟಿಯನ್ನೂ ಸಾರುವದಕ್ಕೂ, ಜಜ್ಜಲ್ಪಟ್ಟವರನ್ನು ಬಿಡುಗಡೆಯಾಗಿ ಕಳುಹಿಸುವದಕ್ಕೂ, ಕರ್ತನ ಹಿತವಾದ ಸಂವತ್ಸರವನ್ನು ಸಾರುವದಕ್ಕೂ ನನ್ನನ್ನು ಕಳುಹಿಸಿದ್ದಾನೆಂದು, (ಯೆಶ್. ೬೧, ೧. ೨.) ಬರದಿರುವ ಸ್ಥಳವನ್ನು ಕಂಡುಕೊಂಡನು. ಆಗಲಾತನು ಪುಸ್ತಕವನ್ನು ಮುಚ್ಚಿ, ಊಳಿಗದವನಿಗೆ ಕೊಟ್ಟು, ಕೂತುಕೊಂಡಾಗ, ಸಭೆಮನೆಯಲ್ಲಿರುವವರೆಲ್ಲರ ಕಣ್ಣುಗಳ ದೃಷ್ಟಿಯು ಆತನ ಮೇಲೆ ಇರಲು, ಅವರಿಗೆ —ಈ ಹೊತ್ತು ಈ ಬರಹವು ನಿಮ್ಮ ಕಿವಿಗಳಲ್ಲಿ ಈಡೇರಿತು! ಯೆಂದು ಹೇಳಲಾರಂಭಿಸಿದನು. ಯೆಲ್ಲರೂ ಆತನ ಬಾಯೊಳಗಿಂದ ಹೊರಡುವ ಕೃಪೆಯ ವಾಕ್ಯಗಳಿಗೆ ಆಶ್ಚರ್ಯ ಪಟ್ಟು, —ಈತನು ಯೋಸೇಫನ ಮಗನಲ್ಲವೇ? ಅಂದರು. ಆತನು ಅವರಿಗೆ —ವೈದ್ಯನೇ, ನಿನ್ನನ್ನು ವಾಸಿಮಾಡಿಕೋ! ಯೆಂಬ ಗಾದೆಯನ್ನೂ, ಕಪೆರ್ನೌಮಿನಲ್ಲಿ ಆದವೆಂದು ನಾವು ಕೇಳಿದವುಗಳನ್ನು ಇಲ್ಲಿ ನಿನ್ನ ಸ್ವದೇಶದಲ್ಲಿ ಮಾಡು! ಯೆಂಬುವದನ್ನೂ, ನನಗೆ ಹೇಳುವಿರಷ್ಟೆ, ಅಂದನು. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಯಾವ ಪ್ರವಾದಿಯಾದರೂ ಸ್ವದೇಶದಲ್ಲಿ ಸಮರ್ಪಕವಾದವನಲ್ಲ! ಎಲೀಯನ ದಿವಸಗಳಲ್ಲಿ ಅನೇಕ ವಿಧವೆಗಳು ಇಸ್ರಯೇಲಿನಲ್ಲಿ ಇದ್ದರು; ಆದರೆ ಸರೆಪ್ತದಲ್ಲಿ ಇರುವ ವಿಧವೆಸ್ತ್ರೀಯ ಬಳಿಗೆ ಹೊರತು, ಅವರಲ್ಲಿ ಯಾವನ ಬಳಿಗೂ ಎಲೀಯನು ಕಳುಹಿಸಲ್ಪಡಲಿಲ್ಲ. ಮತ್ತು ಪ್ರವಾದಿಯಾದ ಎಲೀಶನ ಕಾಲದಲ್ಲಿ ಇಸ್ರಯೇಲಿನಲ್ಲಿ ಬಹಳ ಮಂದಿ ಕುಷ್ಠರೋಗಿಗಳು ಇದ್ದರು. ಆದರೆ ಸುರಿಯದವನಾದ ನೆಯೆಮಾನನೇ ಹೊರತು ಅವರಲ್ಲಿ ಯಾವನಾದರೂ ಶುಚಿಯಾಗಲಿಲ್ಲ. —ಆಗ ಸಭೆಯವರೆಲ್ಲರೂ ಕೋಪದಿಂದ ತುಂಬಿದವರಾಗಿ, ಆತನನ್ನು

ಪಟ್ಣದಿಂದ ಹೊರಡಿಸಿ, ಆತನನ್ನು ಕೆಳಗೆ ದೊಬ್ಬಿಹಾಕುವದಕ್ಕೆ, ಅವರ ಪಟ್ಣವು ಕಟ್ಟಿದ ಗುಡ್ಡದ ಅಂಚಿಗೆ ನಡಿಸಿಕೊಂಡು ಹೋದರು. ಆದರೆ ಆತನು ಅವರ ಮಧ್ಯದಲ್ಲಿಂದ ಹಾದು, ಹೊರಟು ಹೋದನು.

---

೧೬. ಸ್ನಾನಿಕನಾದ ಯೋಹಾನನ ಮರಣ. ಹನ್ನೆರಡು ಮಂದಿ ಅಪೊಸ್ತಲರ ಪ್ರಯಾಣ. ಐದು ಸಾವಿರ ಮಂದಿಗೆ ಆಹಾರವನ್ನು ಕೊಟ್ಟದ್ದು.

(ಮಥ್. ೯, ೩೫—೩೮. ೧೦, ೧—೪೨. ೧೪, ೧—೨೩. ಮಾರ್ಕ. ೬, ೭—೪೬. ಲೂಕ್. ೯, ೧—೧೭. ಯೋ. ೬, ೧—೨೧.)

ಆ ಕಾಲದಲ್ಲಿ ಚತುರಧಿಪತಿಯಾದ ಹೆರೋದನು, ಯೇಸುವಿನ ಸುದ್ದಿಯನ್ನು ಕೇಳಿ, ತನ್ನ ಆಳುಗಳಿಗೆ—ಇವನು ಸ್ನಾನಿಕನಾದ ಯೋಹಾನನು; ಅವನು ಸತ್ತವರೊಳಗಿಂದ ಯೆದ್ದಿದ್ದಾನೆ; ಆದಕಾರಣ ಬಲವಾದ ಕ್ರಿಯೆಗಳು ಅವನಿಂದ ಆಗುತ್ತವೆ, ಅಂದನು. ಯಾಕಂದರೆ ಯೋಹಾನನನ್ನು ಸೆರೆಯಲ್ಲಿ ಕಟ್ಟಿಹಾಕಿದ ಮೇಲೆ, ಹೆರೋದ್ಯಳು ಅವನನ್ನು ಹೊಂಚಿ ನೋಡಿ, ಕೊಲ್ಲ ಇಚ್ಛೆಯಿಸಿದಳು; ಆದರೆ ಆಗಲಿಲ್ಲ, ಯಾಕಂದರೆ ಹೆರೋದನು, ಅವನು ನೀತಿವಂತನೂ ಪರಿಶುದ್ಧನೂ ಆಗಿರುವ ಮನುಷ್ಯನೆಂದು ತಿಳಿದು, ಯೋಹಾನನಿಗೆ ಭಯಪಟ್ಟು, ಅವನನ್ನು ಕಾಪಾಡಿದನು; ಮತ್ತು ಅವನ ಮಾತನ್ನು ಕೇಳಿ, ಅನೇಕ ಕೆಲಸಗಳನ್ನು ಮಾಡಿ, ಅವನನ್ನು ಸಂತೋಷವಾಗಿ ಕೇಳಿದನು. ಹೀಗಿರಲಾಗಿ ಹೆರೋದನು ತಾನು ಹುಟ್ಟಿದ ದಿವಸದಲ್ಲಿ ತನ್ನ ದೊಡ್ಡವರಿಗೂ ಸಹಸ್ರಾಧಿಪತಿಗಳಿಗೂ ಗಲಿಲಾಯದ ಶ್ರೇಷ್ಠರಿಗೂ ಔತಣ ಮಾಡಿಸುವ ಒಳ್ಳೇ ದಿನ ಉಂಟಾದಾಗ, ಹೆರೋದ್ಯಳ ಮಗಳು ಒಳಗೆ ಬಂದು, ನಾಟ್ಯವಾಡಿದಳು. ಅವಳು ಹೆರೋದನನ್ನೂ ಅವನ ಸಂಗಡ ಕೂತವರನ್ನೂ ಮೆಚ್ಚಿಸಿದಾಗ, ಅರಸನು ಹುಡುಗಿಗೆ—ಮನಸ್ಸಿಗೆ ಬಂದದ್ದನ್ನು ನನ್ನಿಂದ ಬೇಡಿಕೋ! ನೀನು ನನ್ನನ್ನು ಯೇನು ಬೇಡಿಕೊಂಡರೂ, ನನ್ನ ರಾಜ್ಯದ ಅರೆವಾಸಿಯ


ಮಟ್ಟಿಗೂ ನಿನಗೆ ಕೊಡುತ್ತೇನೆ, ಯೆಂದು ಅವಳಿಗೆ ಆಣೆ ಇಟ್ಟುಕೊಂಡನು. ಆಗಲವಳು ಹೊರಗೆ ಹೋಗಿ, ತನ್ನ ತಾಯಿಗೆ—ನಾನೇನು ಬೇಡಿಕೊಳ್ಳಬೇಕು? ಅಂದಳು; ಅವಳು—ಸ್ನಾನಿಕನಾದ ಯೋಹಾನನ ತಲೆಯನ್ನು, ಅಂದಳು. ಸಂಗಡಲೇ ಅರಸನ ಬಳಿಗೆ ಬೇಗ ಬಂದು,—ಈಗಲೇ ತಬಕಿನ ಮೇಲೆ ಸ್ನಾನಿಕನಾದ ಯೋಹಾನನ ತಲೆಯನ್ನು ನನಗೆ ಕೊಡಬೇಕು! ಯೆಂದು ಬೇಡಿಕೊಂಡಳು. ಆಗ ಅರಸನು ದುಖ್ಖಾಕ್ರಾಂತನಾಗಿದ್ದರೂ, ಆಣೇ ನಿಮಿತ್ತವೂ ಸಂಗಡ ಕೂತವರ ನಿಮಿತ್ತವೂ ಅವಳನ್ನು ಅಲಕ್ಷ್ಯಮಾಡ ಮನಸ್ಸಾಗಿರದೆ, ಸಂಗಡಲೇ ತಲ್ಲೆಯವನನ್ನು ಕಳುಹಿಸಿ, ಯೋಹಾನನ ತಲೆಯನ್ನು ತರಬೇಕೆಂದು ಆಜ್ಞಾಪಿಸಿದನು. ತಲ್ಲೆಯವನು ಹೋಗಿ, ಸೆರೆಮನೆಯಲ್ಲಿ ಯೋಹಾನನ ತಲೆ ಕಡಿದು, ತಬಕಿನ ಮೇಲೆ ತಂದು, ಹುಡುಗಿಗೆ ಕೊಟ್ಟನು. ಹುಡುಗಿಯು ಅದನ್ನು ತನ್ನ ತಾಯಿಗೆ ಕೊಟ್ಟಳು.—ಯೋಹಾನನ ಶಿಷ್ಯರು ಅದನ್ನು ಕೇಳಿ, ಬಂದು, ಅವನ ಹೆಣ ಯೆತ್ತಿ, ಸಮಾಧಿಯಲ್ಲಿ ಇಟ್ಟರು.

ಇದಲ್ಲದೆ ಯೇಸು ಸಭೆಮನೆಗಳಲ್ಲಿ ಬೋಧಿಸುತ್ತಾ, ರಾಜ್ಯದ ಸುವಾರ್ತೆಯನ್ನು ಸಾರುತ್ತಾ, ಜನರೊಳಗೆ ಇರುವ ಸಕಲ ರೋಗಗಳನ್ನೂ ಸಕಲ ಅಸೌಖ್ಯಗಳನ್ನೂ ವಾಸಿ ಮಾಡುತ್ತಾ, ಯೆಲ್ಲಾ ಪಟ್ಣ ಗ್ರಾಮಗಳನ್ನು ಸಂಚರಿಸಿದನು. ಆದರೆ ಆತನು ಸಮೂಹಗಳನ್ನು ನೋಡಿ, ಅವರು ಕುರುಬನಿಲ್ಲದ ಕುರಿಗಳ ಹಾಗೆ ಬಳಲಿ, ಚದರಿರುವದರಿಂದ, ಅವರಿಗೋಸ್ಕರ ಅಂತಃಕರಣ ಪಟ್ಟನು. ಆಗ ತನ್ನ ಶಿಷ್ಯರಿಗೆ—ಬೆಳೆ ಬಹಳ, ಆದರೆ ಕೆಲಸದವರು ಸ್ವಲ್ಪ; ಆದದರಿಂದ ತನ್ನ ಬೆಳೆಗೆ ಕೆಲಸದವರನ್ನು ಕಳುಹಿಸ ಬೇಕೆಂದು, ಬೆಳೆಯ ಯಜಮಾನನನ್ನು ಬೇಡಿಕೊಳ್ಳಿರಿ! ಅಂದನು. ಮತ್ತು ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಇಬ್ಬರಿಬ್ಬರಾಗಿ ಕಳುಹಿಸಿ, ಅವರಿಗೆ ಆಜ್ಞಾಪಿಸಿದ್ದೇನಂದರೆ,—ಇಸ್ರಯೇಲನ ಮನೆಯ ತಪ್ಪಿ ಹೋದ ಕುರಿಗಳ ಬಳಿಗೆ ಹೋಗಿರಿ; ಹೋಗುವಾಗ ಪರಲೋಕರಾಜ್ಯವು ಸಮೀಪವಾಯಿತೆಂದು ಸಾರಿರಿ! ಬಲಹೀನರನ್ನು ಸ್ವಸ್ಥ ಮಾಡಿರಿ; ಕುಷ್ಠರೋಗಿಗಳನ್ನು ಶುಚಿ ಮಾಡಿರಿ; ಸತ್ತವರನ್ನು ಯೆಬ್ಬಿಸಿರಿ; ದೆವ್ವಗಳನ್ನು ಹೊರಡಿಸಿರಿ! ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ! ಆ

ಗಲವರು ಹೊರಟು, ಮಾನಸಾಂತರ ಪಡಬೇಕೆಂದು ಸಾರಿ, ಅನೇಕ ದೆವ್ವಗಳನ್ನು ಹೊರಡಿಸಿ, ಅನೇಕ ರೋಗಿಷ್ಟರನ್ನು, ಯೆಣ್ಣೆ ಹಚ್ಚಿ, ಸ್ವಸ್ಥಮಾಡಿದರು.

ಅಪಾಸ್ತಲರು ಯೇಸುವಿನ ಬಳಿಗೆ ತಿರಿಗಿ ಕೂಡಿ ಬಂದು, ತಾವು ಮಾಡಿದವುಗಳನ್ನೂ ಬೋಧಿಸಿದವುಗಳನ್ನೂ ಆತನಿಗೆ ತಿಳಿಸಿದರು. ಆತನು ಅವರಿಗೆ—ನೀವೇ ಯೇಕಾಂತವಾಗಿ ಅರಣ್ಯಸ್ಥಳಕ್ಕೆ ಬಂದು, ಸ್ವಲ್ಪ ವಿಶ್ರಮಿಸಿಕೊಳ್ಳಿರಿ! ಅಂದನು. ಯಾಕಂದರೆ ಬರುವವರೂ ಹೋಗುವವರೂ ಅನೇಕರಾಗಿದ್ದದರಿಂದ, ಉಣ್ಣುವದಕ್ಕೆ ಸಹಾ ಸಮಯ ಬೀಳಲಿಲ್ಲ. ಆಗ ಹಡಗದಲ್ಲಿ ಯೇರಿ, ಗಲಿಲಾಯ ಸಮುದ್ರದ ಆಚೆಗೆ ಇರುವ ಅರಣ್ಯಸ್ಥಳಕ್ಕೆ ಪ್ರವೇಶವಾಗಿ ಹೋದರು. ಯೆಹೂದ್ಯರ ಹಬ್ಬವಾದ ಪಸ್ಕವು ಸಮೀಪವಾಗಿತ್ತು. ಆಗಲು ಸಮೂಹಗಳು ಯೇಸುವನ್ನು ಹಿಂಬಾಲಿಸಿದಾಗ, ಆತನು ಅವರ ಮೇಲೆ ಅಂತಃಕರಣ ಪಟ್ಟು, ಅವರನ್ನು ಅಂಗೀಕರಿಸಿ, ದೇವರ ರಾಜ್ಯವನ್ನು ಕುರಿತು ಅವರ ಸಂಗಡ ಮಾತಾಡಿ, ಸ್ವಸ್ಥವಾಗಬೇಕಾದವರನ್ನು ಸ್ವಸ್ಥ ಮಾಡಿದನು. ಆಗ ಬಹಳ ಹೊತ್ತಾದದರಿಂದ, ಆತನ ಶಿಷ್ಯರು ಆತನ ಬಳಿಗೆ ಬಂದು,—ಇದು ಅರಣ್ಯಸ್ಥಳವು; ಮತ್ತು ಈಗ ಬಹಳ ಹೊತ್ತಾಯಿತು; ಅವರು ಸುತ್ತಲಿರುವ ಗ್ರಾಮಗಳಿಗೂ ಹಳ್ಳಿಗಳಿಗೂ ಹೋಗಿ, ತಮಗೆ ರೊಟ್ಟಿಗಳನ್ನು ಕೊಂಡುಕೊಳ್ಳುವ ಹಾಗೆ, ಅವರನ್ನು ಕಳುಹಿಸಿ ಬಿಡು; ಯಾಕಂದರೆ ಉಣ್ಣುವದಕ್ಕೆ ಅವರಿಗೆ ಯೇನೂ ಇಲ್ಲ, ಅಂದರು. ಆದರೆ ಆತನು ಪ್ರತ್ಯುತ್ತರವಾಗಿ,—ನೀವೇ ಅವರಿಗೆ ಉಣ್ಣ ಕೊಡಿರಿ! ಯೆಂದು ಅವರಿಗೆ ಹೇಳಿದನು. ಮತ್ತು ಫಿಲಿಪ್ಪನಿಗೆ—ಇವರು ತಿನ್ನುವ ಹಾಗೆ ಯೆಲ್ಲಿಂದ ರೊಟ್ಟಿಗಳನ್ನು ಕೊಂಡುಕೊಳ್ಳುವಾ? ಅಂದನು. ಅವನನ್ನು ಶೋಧಿಸ ಇದನ್ನು ಹೇಳಿದನು. ಯಾಕಂದರೆ ತಾನು ಮಾಡ ಹೋಗುವದನ್ನು ತಿಳಿದಿದ್ದನು. ಫಿಲಿಪ್ಪನು ಆತನಿಗೆ ಪ್ರತ್ಯುತ್ತರವಾಗಿ,—ಇವರಲ್ಲಿ ಒಬ್ಬೊಬ್ಬನು ಸ್ವಲ್ಪ ತಕ್ಕೊಳ್ಳುವ ಹಾಗೆ, ಇನ್ನೂರು ಹಣದ ರೊಟ್ಟಿ ಸಾಲದು, ಅಂದನು. ಆಗಲಾತನು ಶಿಷ್ಯರಿಗೆ—ನಿಮಗೆ ಯೆಷ್ಟು ರೊಟ್ಟಿಗಳವೆ? ಹೋಗಿ ನೋಡಿರಿ! ಅಂದನು. ಅಂದ್ರೇಯನು ಆತನಿಗೆ—ಇಲ್ಲಿ ವೊಬ್ಬ ಹುಡುಗನಿದ್ದಾನೆ; ಅವನ ಬಳಿಯಲ್ಲಿ ಜವೆಗೋಧಿಯ

ಐದು ರೊಟ್ಟಿಗಳೂ, ಯೆರಡು ಮೀನುಗಳೂ ಉಂಟು; ಆದರೆ ಅಷ್ಟು ಜನರಿಗೆ ಇವೇನು? ಅನ್ನಲಾಗಿ, ಆತನು — ಅವುಗಳನ್ನು ಇಲ್ಲಿ ನನಗೆ ತನ್ನಿರಿ! ಅಂದನು. ಆಗಲಾತನು ಯೆಲ್ಲರನ್ನು ಹಸುರಾದ ಹುಲ್ಲಿನ ಮೇಲೆ ಕುಂಡ್ರಿಸಬೇಕೆಂದು ಆಜ್ಞಾಪಿಸಿದನು. ಆಗಲವರು ಸಾಲುಸಾಲಿಗೆ ನೂರುನೂರಾಗಿಯೂ ಐವತ್ತೈವತ್ತಾಗಿಯೂ ಕೂತುಕೊಂಡರು. ಮತ್ತು ಆತನು ಐದು ರೊಟ್ಟಿಗಳನ್ನೂ ಯೆರಡು ಮೀನುಗಳನ್ನೂ ತೆಗದು ಕೊಂಡು, ಆಕಾಶವನ್ನು ನೋಡಿ, ಸ್ತೋತ್ರಮಾಡಿ, ಅವುಗಳನ್ನು ಆಶೀರ್ವದಿಸಿ, ಆರೊಟ್ಟಿಗಳನ್ನು ಮುರಿ



ದು, ತನ್ನ ಶಿಷ್ಯರಿಗೆ ಕೊಟ್ಟನು; ಶಿಷ್ಯರು ಕೂತುಕೊಂಡಿರುವವರಿಗೆ ಹಂಚಿದರು. ಅದೇ ಪ್ರಕಾರ ಮೀನುಗಳಲ್ಲಿಯೂ ಬೇಕಾದಷ್ಟು ಹಂಚಿದರು. ಯೆಲ್ಲರೂ ತಿಂದು ತೃಪ್ತಿಯಾದರು. ತೃಪ್ತಿಯಾದ ಮೇಲೆ ತನ್ನ ಶಿಷ್ಯರಿಗೆ — ಯೇನಾದರೂ ಕೆಟ್ಟು ಹೋಗದ ಹಾಗೆ, ಮಿಕ್ಕಿರುವ ತುಂಡುಗಳನ್ನು ಕೂಡಿಸಿರಿ! ಅಂದನು. ಅವರು ಕೂಡಿಸಿ, ಆ ಐದು ಜವೆಗೋಧಿಯ ರೊಟ್ಟಿಗಳಲ್ಲಿಯೂ ಯೆರಡು ಮೀನುಗಳಲ್ಲಿಯೂ ತಿಂದವರಿಗೆ ಮಿಕ್ಕಿರುವ ತುಂಡುಗಳಿಂದ ಹನ್ನೆರಡು ಪುಟ್ಟಿಗಳನ್ನು ತುಂಬಿಸಿದರು. ಹೆಂಗಸರೂ ಮಕ್ಕಳೂ ಹೊರತಾಗಿ ತಿಂದವರು ಹೆಚ್ಚುಕಡಿಮೆ ಐದುಸಾವಿರ ಗಂಡಸರಾಗಿದ್ದರು. ಆ ಮನುಷ್ಯರು ಯೇಸು ಮಾಡಿದ ಲಕ್ಷಣವನ್ನು ನೋಡಿ, — ಈತನು ನಿಜವಾಗಿ ಲೋಕಕ್ಕೆ ಬರುವ ಪ್ರವಾದಿಯಾಗಿದ್ದಾನೆ! ಅಂದರು. ಆಗ ಯೇಸು, ತನ್ನನ್ನು ಅರಸನಾಗ ಮಾಡು

ಹವಕ್ಕೆ ಅವರು ಬಂದು, ತನ್ನನ್ನು ಹಿಡುಕೊಳ್ಳುವರೆಂದು ತಿಳಿದು, ಒಂಟಿಯಾಗಿ ಬೆಟ್ಟಕ್ಕೆ ಹೋಗಿ ಪ್ರಾರ್ಥಿಸಿದನು.

---

೧೭. ಯೇಸು ಸಮುದ್ರದ ಮೇಲೆ ನಡದದ್ದು. ಜೀವದ ರೊಟ್ಟಿ. ಹಿರಿಯರ ಸಂಪ್ರದಾಯ. ಕನಾನ್ಯಳಾದ ಸ್ತ್ರೀಯು.

(ಮತ್ಥ. ೧೪, ೨೪—೩೬. ೧೫, ೧—೨೮. ಮಾರ್ಕ. ೬, ೪೭—೫೬. ೭, ೧—೩೦. ಯೋ. ೬, ೨೨—೭೧.)

ಆದರೆ ಸಾಯಂಕಾಲವಾದಾಗ ಆತನ ಶಿಷ್ಯರು ಸಮುದ್ರಕ್ಕೆ ಇಳಿದು ಹೋಗಿ, ಹಡಗವನ್ನೇರಿ, ಸಮುದ್ರದ ಆಚೆಗೆ ಕಪೆರ್ನಾಹೂಮಿಗೆ ಹೋಗುತ್ತಿದ್ದರು. ಆಗಲೇ ಕತ್ತಲಾಗಿತ್ತು. ಯೇಸು ಅವರ ಬಳಿಗೆ ಬಾರದೆ ಇದ್ದನು. ದೊಡ್ಡ ಬಿರುಗಾಳಿ ಬೀಸುವದರಿಂದ, ಸಮುದ್ರವು ಉಬ್ಬಿತು; ಮತ್ತು ಗಾಳಿಯು ಯೆದುರಾಗಿದ್ದ ಕಾರಣ, ಹಡಗವು ತೆರೆಗಳಿಂದ ಬಡಿಯಲ್ಪಡುತ್ತಿತ್ತು. ತರುವಾಯ ರಾತ್ರಿ ನಾಲ್ಕನೇ ಝಾವಿನಲ್ಲಿ ಯೇಸು ಸಮುದ್ರದ ಮೇಲೆ ನಡದು, ಅವರ ಬಳಿಗೆ ಬಂದು, ಅವರನ್ನು ದಾಟಿಹೋಗ ಮನಸ್ಸಾಗಿದ್ದನು. ಅವರು ಆತನು ಸಮುದ್ರದ ಮೇಲೆ ನಡದುಕೊಳ್ಳುವದನ್ನು ನೋಡಿ, ಭೂತವೆಂದು ನೆನಸಿ, ಭಯದಿಂದ ಕೂಗಿದರು. ಸಂಗಡಲೇ ಯೇಸು —ಧೈರ್ಯವಾಗಿರಿ! ನಾನೇ! ಭಯ ಪಡಬೇಡಿರಿ! ಯೆಂದು ಅವರ ಸಂಗಡ ಮಾತಾಡಿದನು. ಆಗ ಪೇತ್ರನು ಆತನಿಗೆ ಪ್ರತ್ಯುತ್ತರವಾಗಿ,—ಕರ್ತನೇ! ನೀನಾದರೆ, ನೀರಿನ ಮೇಲೆ ನಿನ್ನ ಬಳಿಗೆ ಬರ ನನಗೆ ಅಪ್ಪಣೆ ಕೊಡು, ಅಂದನು. ಆತನು —ಬಾ! ಅನ್ನಲು, ಪೇತ್ರನು ಹಡಗದಿಂದ ಇಳಿದು, ಯೇಸುವಿನ ಬಳಿಗೆ ಬರುವದಕ್ಕೆ ನೀರಿನ ಮೇಲೆ ನಡದನು. ಆದರೆ ಗಾಳಿ ಬಲವಾಗಿರುವದನ್ನು ನೋಡಿ, ಭಯ ಪಟ್ಟನು, ಮತ್ತು ಮುಣುಗಲಾರಂಭಿಸಿ,—ಕರ್ತನೇ, ನನ್ನನ್ನು ರಕ್ಷಿಸು! ಯೆಂದು ಕೂಗಿದನು. ಸಂಗಡಲೇ ಯೇಸು ಕೈ ಚಾಚಿ, ಅವನನ್ನು ಹಿಡಿದು,—ಅಲ್ಪ ವಿಶ್ವಾಸಿಯೇ, ಯಾಕೆ ಸಂದೇಹ ಪಟ್ಟಿ? ಯೆಂದು

ಅವನಿಗೆ ಹೇಳಿದನು. ತರುವಾಯ ಅವರು ಹಡಗವನ್ನೇರಿದಾಗ, ಘಾಳಿಯು ನಿಂತಿತು. ಆಗ ಹಡಗದಲ್ಲಿ ಇದ್ದವರು ಬಂದು, ಆತನಿಗೆ ನಮಸ್ಕರಿ



ಸಿ,—ನೀನು ನಿಜವಾಗಿ ದೇವರ ಮಗನಾಗಿದ್ದಿ! ಅಂದರು. ಮತ್ತು ಸಂಗಡಲೇ ಹಡಗವು ಅವರು ಹೋಗುವ ಭೂಮಿಗೆ ಸೇರಿತು.

ಮರುದಿವಸ ಸಮುದ್ರದ ಆಚೆಯಲ್ಲಿ ನಿಂತ ಸಮೂಹವು ಯೇಸು ಅಲ್ಲಿ ಇಲ್ಲವೆಂದು ನೋಡಿ, ತಾವೇ ಹಡಗಗಳನ್ನೇರಿ, ಯೇಸುವನ್ನು ಹುಡುಕುತ್ತಾ ಕಪೆರ್ನಹೂಮಿಗೆ ಬಂದರು. ಆತನನ್ನು ಕಂಡು, ಆತನಿಗೆ—ರಬ್ಬಿಯೇ, ಯಾವಾಗ್ಯೆ ಇಲ್ಲಿಗೆ ಬಂದಿ? ಅಂದರು. ಯೇಸು ಅವರಿಗೆ ಹೇಳಿದ್ದು,—ನೀವು ರೊಟ್ಟಿಗಳನ್ನು ತಿಂದು ತೃಪ್ತಿಯಾದದರಿಂದ ನನ್ನನ್ನು ಹುಡುಕುತ್ತೀರಿ. ನಾಶವಾಗುವ ಆಹಾರಕ್ಕೋಸ್ಕರವಲ್ಲ, ನಿತ್ಯಜೀವಕ್ಕೆ ನೆಲೆಯಾಗಿರುವ ಆಹಾರಕ್ಕೋಸ್ಕರ ಕಷ್ಟಮಾಡಿರಿ! ಅದನ್ನು ಮನುಷ್ಯನ ಮಗನು ನಿಮಗೆ ಕೊಡುವನು. ನಾನೇ ಪರಲೋಕದಿಂದ ಇಳಿದು ಬಂದ ಜೀವವುಳ್ಳ ರೊಟ್ಟಿಯಾಗಿದ್ದೇನೆ; ಈ ರೊಟ್ಟಿ ಯಾವನಾದರೂ ತಿಂದರೆ, ಯೆಂದೆಂದಿಗೂ ಬದುಕುವನು; ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವು; ಅದನ್ನು ನಾನು ಲೋಕದ ಜೀವಕ್ಕೋಸ್ಕರ ಕೊಡುವೆನು, ಅಂದನು. ಆಗ ಯೆಹೂದ್ಯರು,—ಈತನು ತನ್ನ ಮಾಂಸವನ್ನು ತಿನ್ನಕೊಡಲಾಗುವದು ಹ್ಯಾಗೆ? ಯೆಂದು ಜಗಳಾಡಿಕೊಂಡರು. ಆಗ ಯೇಸು ಅವರಿಗೆ,—ನಿಶ್ಚಯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಮನುಷ್ಯನ ಮಗನ ಮಾಂಸವನ್ನು ತಿನ್ನದೆ, ಆತನ ರಕ್ತವನ್ನು ಕುಡಿಯದೆ

ಹೋದರೆ, ನಿಮ್ಮೊಳಗೆ ಜೀವವು ಇಲ್ಲದವರಾಗಿದ್ದೀರಿ. ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು ಕುಡಿಯುವವನಿಗೆ ನಿತ್ಯ ಜೀವ ವುಂಟು; ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಯೆಬ್ಬಿಸುವೆನು; ಇದೇ ಪರಲೋಕದಿಂದ ಇಳಿದು ಬರುವ ರೊಟ್ಟಿ. ಆತನ ಶಿಷ್ಯರಲ್ಲಿ ಅನೇಕರು ಅದನ್ನು ಕೇಳಿ,—ಈ ಮಾತು ಕಠಿಣವಾಗಿದೆ; ಇದನ್ನು ಯಾರು ಕೇಳ ಬಹುದು? ಅಂದಾಗ, ಅಂದಿನಿಂದ ಆತನ ಸಂಗಡ ನಡದುಕೊಳ್ಳದೆ, ಹಿಂದಕ್ಕೆ ಹೋದರು. ಆಗ ಯೇಸು ಹನ್ನೆರಡು ಮಂದಿಗೆ ಹೇಳಿದ್ದು,—ನೀವು ಸಹಾ ಹೋಗ ಬೇಕೆಂದಿದ್ದೀರೋ? ಸೀಮೋನ್ ಪೇತ್ರನು ಆತನಿಗೆ ಪ್ರತ್ಯುತ್ತರವಾಗಿ,—ಕರ್ತನೇ, ನಾವು ಯಾರ ಬಳಿಗೆ ಹೋಗೋಣ? ನಿನಗೆ ನಿತ್ಯಜೀವದ ವಾಕ್ಯಗಳು ಉಂಟು; ಮತ್ತು ನೀನು ಜೀವವುಳ್ಳ ದೇವರ ಮಗನಾದ ಕ್ರಿಸ್ತನು! ಯೆಂದು ನಾವು ನಂಬಿ ತಿಳಿದಿದ್ದೇವೆ, ಅಂದನು.

ಆಗ ಯೆರೂಸಲೇಮಿನವರಾದ ಶಾಸ್ತ್ರಿಗಳೂ ಫರಿಸಾಯರೂ ಯೇಸುವಿನ ಬಳಿಗೆ ಬಂದು,—ನಿನ್ನ ಶಿಷ್ಯರು ಹಿರಿಯರ ಸಂಪ್ರದಾಯವನ್ನು ಯಾಕೆ ಮೀರುತ್ತಾರೆ? ಹ್ಯಾಗಂದರೆ ಅವರು ರೊಟ್ಟಿ ತಿನ್ನುವಾಗ, ತಮ್ಮ ಕೈಗಳನ್ನು ತೊಳೆದುಕೊಳ್ಳುವದಿಲ್ಲಾ, ಅಂದರು. ಆದರೆ ಆತನು ಅವರಿಗೆ ಹೇಳಿದ್ದು,—ನೀವು ಸಹಾ ನಿಮ್ಮ ಸಂಪ್ರದಾಯದಿಂದ ದೇವರ ಕಟ್ಟಳೆಯನ್ನು ಯಾಕೆ ಮೀರುತ್ತೀರಿ? ಕಪಟಿಗಳೇ, ನಿಮ್ಮನ್ನು ಕುರಿತು ಯೆಶಾಯನು (೨೯, ೧೩.) ಚನ್ನಾಗಿ ಪ್ರವಾದಿಸಿದ್ದಾನೆ, ಯೇನಂದರೆ,—ಈ ಜನರು ಬಾಯಿಂದ ನನಗೆ ಸಮೀಪಿಸಿ, ತುಟಿಗಳಿಂದ ನನ್ನನ್ನು ಸನ್ಮಾನಿಸುತ್ತಾರೆ; ಆದರೆ ಅವರ ಹೃದಯವು ನನಗೆ ದೂರವಾಗಿದೆ; ಮನುಷ್ಯರ ಕಲ್ಪನೆಗಳಾದ ಬೋಧನೆಗಳನ್ನು ಬೋಧಿಸಿ, ವ್ಯರ್ಥವಾಗಿ ನನ್ನನ್ನು ಭಜಿಸುತ್ತಾರೆ. ಮತ್ತು ಆತನು ಸಮೂಹವನ್ನು ಕರಸಿ, ಅವರಿಗೆ ಹೇಳಿದ್ದೇನಂದರೆ,—ಯೆಲ್ಲರೂ ನನಗೆ ಕಿವಿ ಕೊಟ್ಟು ಗ್ರಹಿಸಿರಿ! ಮನುಷ್ಯನ ಹೊರಗಿಂದ ಅವನೊಳಗೆ ಸೇರುವ ವೊಂದಾದರೂ ಅವನನ್ನು ಹೊಲೆ ಮಾಡಲಾರದು; ಆದರೆ ಅವನೊಳಗಿಂದ ಹೊರಡುವವುಗಳೇ ಮನುಷ್ಯನನ್ನು ಹೊಲೆ ಮಾಡುವಂಥವುಗಳು; ಯಾಕಂದರೆ ವೊಳಗಿನಿಂ

ದ, ಮನುಷ್ಯರ ಹೃದಯದೊಳಗಿಂದ ದುರಾಲೋಚನೆಗಳೂ ವ್ಯಭಿಚಾರಗಳೂ ಜಾರತ್ವಗಳೂ ಕೊಲೆಗಳೂ ಕಳ್ಳತನಗಳೂ ಲೋಭಗಳೂ ಕೆಟ್ಟತನಗಳೂ ಮೋಸವೂ ಬಂಡುತನವೂ ಕ್ರೂರದೃಷ್ಟಿಯೂ ದೂಷಣೆಯೂ ಗರ್ವವೂ ದುರ್ಬುದ್ಧಿಯೂ ಹೊರಡುತ್ತವೆ. ಮನುಷ್ಯನನ್ನು ಹೊಲೆ ಮಾಡುವವುಗಳು ಇವೇ; ಆದರೆ ತೊಳೆಯದ ಕೈಗಳಿಂದ ಊಟ ಮಾಡುವದು ಮನುಷ್ಯನನ್ನು ಹೊಲೆ ಮಾಡುವದಿಲ್ಲ.

ಆ ಮೇಲೆ ಯೇಸು ಅಲ್ಲಿಂದ ಯೆದ್ದು, ತೂರ್ ಸಿದೋನ್ ಮೇರೆಗಳಿಗೆ ಯಾರಿಗೂ ತಿಳಿಯ ಬಾರದ ಹಾಗೆ ಹೋದನು; ಆದರೆ ಅಡಗಿರಲಾರದೆ ಇದ್ದನು. ಹ್ಯಾಗಂದರೆ ಇಗೋ, ಅಶುದ್ಧಾತ್ಮ ಹಿಡಿದ ಮಗಳು ಇದ್ದ ಕನಾನ್ಯಳಾದ ವೊಬ್ಬ ಸ್ತ್ರೀಯು ಆತನ ಸುದ್ದಿ ಕೇಳಿ, ಬಂದು, ಆತನಿಗೆ — ದಾವೀದನ ಮಗನಾದ ಕರ್ತನೇ, ನನ್ನನ್ನು ಕರುಣಿಸು! ನನ್ನ ಮಗಳು ದೆವ್ವದಿಂದ ಬಹಳ ಉಪದ್ರ ಪಡುತ್ತಾಳೆ, ಯೆಂದು ಕೂಗಿದಳು. ಆದರೆ ಆತನು ವೊಂದು ಮಾತಾದರೂ ಅವಳಿಗೆ ಉತ್ತರ ಕೊಡಲಿಲ್ಲ. ಆತನ ಶಿಷ್ಯರು ಹತ್ತರ ಬಂದು, — ನಮ್ಮ ಹಿಂದೆ ಕೂಗುತ್ತಾಳೆ; ಅವಳನ್ನು ಕಳುಹಿಸಿ ಬಿಡು! ಯೆಂದು ಆತನನ್ನು ಬೇಡಿಕೊಂಡರು. ಆದರೆ ಆತನು ಪ್ರತ್ಯುತ್ತರವಾಗಿ, — ಇಸ್ರಯೇಲನ ಮನೆಯ ತಪ್ಪಿ ಹೋದ ಕುರಿಗಳಿಗೆ ಹೊರತು ನಾನು ಕಳುಹಿಸಲ್ಪಡಲಿಲ್ಲ, ಅಂದನು. ಆಗಲವಳು ಬಂದು, — ಕರ್ತನೇ ನನಗೆ ಸಹಾಯ ಮಾಡು! ಯೆಂದು ಆತನಿಗೆ ನಮಸ್ಕಾರ ಮಾಡಿದಳು. ಯೇಸು ಪ್ರತ್ಯುತ್ತರವಾಗಿ ಅವಳಿಗೆ — ಮೊದಲು ಮಕ್ಕಳಿಗೆ ತೃಪ್ತಿಯಾಗಗೊಡಿಸು! ಮಕ್ಕಳ ರೊಟ್ಟಿಯನ್ನು ತಕ್ಕೊಂಡು, ನಾಯಿಗಳಿಗೆ ಹಾಕುವದು ವೊಳ್ಳೇದಲ್ಲ, ಅಂದನು. ಅವಳು — ಹೌದು, ಕರ್ತನೇ! ಆದರೆ ನಾಯಿಗಳು ತಮ್ಮ ಯಜಮಾನರ ಮೇಜಿನ ಕೆಳಗೆ ಬೀಳುವ, ಮಕ್ಕಳ ಯೆಂಜಲು ತಿಂನುತ್ತವೆ, ಅಂದಳು. ಆಗ ಯೇಸು ಪ್ರತ್ಯುತ್ತರವಾಗಿ ಅವಳಿಗೆ — ಓ ಸ್ತ್ರೀಯೇ, ನಿನ್ನ ವಿಶ್ವಾಸವು ದೊಡ್ಡದು; ನೀನು ಇಚ್ಛೆಯಿಸುವ ಪ್ರಕಾರ ನಿನಗಾಗಲಿ! ಅಂದನು. ಆ ಘಳಿಗೆಯಿಂದ ಅವಳ ಮಗಳು ಸ್ವಸ್ಥವಾದಳು.

---

೧೮. ನಾಲ್ಕು ಸಾವಿರ ಮಂದಿಗೆ ಆಹಾರವನ್ನು ಕೊಟ್ಟದ್ದು. ಬೆಥ್ಸಾಯಿದದ ಕುರುಡನು. ಪೇತ್ರನ ಅರಿಕೆಯು. ಯೇಸು ಪಡಬೇಕಾದ ಶ್ರಮೆಗಳು.

(ಮತ್ಥ. ೧೫, ೨೯–೩೯. ೧೬, ೧–೨೮. ಮಾರ್ಕ. ೭, ೩೧–೩೭. ೮, ೧–೩೮. ಲೂಕ. ೯, ೧೮–೨೭.)

ಮತ್ತು ಯೇಸು ಅಲ್ಲಿಂದ ಹೊರಟು ಹೋಗಿ, ಗಲಿಲಾಯಸಮುದ್ರದ ಬಳಿಗೆ ಬಂದು, ಬೆಟ್ಟವನ್ನೇರಿ, ಅಲ್ಲಿ ಕೂತುಕೊಂಡನು. ಆಗ ನತ್ತಿಮಾತಾಡುವ ಕಿವಡನನ್ನು ಆತನ ಬಳಿಗೆ ತಂದು, ಅವನ ಮೇಲೆ ಕೈ ಇಡಬೇಕೆಂದು ಆತನನ್ನು ಬೇಡಿಕೊಂಡರು. ಆತನು ಅವನನ್ನು ಸಮೂಹದಿಂದ ಯೇಕಾಂತವಾಗಿ ಕರಕೊಂಡು ಹೋಗಿ, ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ ಹಾಕಿ, ಉಗುಳಿ, ಅವನ ನಾಲಿಗೆಯನ್ನು ಮುಟ್ಟಿ, ಆಕಾಶವನ್ನು ನೋಡಿ, ಮೂಲುಗಿ, — ಎಪ್ಫಥಾ! ಯೆಂದು ಅವನಿಗೆ ಹೇಳಿದನು. ಅದೇನಂದರೆ, ತೆರೆದಾಗು. ಸಂಗಡಲೇ ಅವನ ಕಿವಿಗಳು ತೆರೆಯಲ್ಪಟ್ಟು, ಅವನ ನಾಲಿಗೆಯ ನರವು ಬಿಚ್ಚಲ್ಪಟ್ಟು, ಅವನು ಚನ್ನಾಗಿ ಮಾತಾಡಿದನು. ಆಗ ಯಾರಿಗೂ ಹೇಳಬಾರದೆಂದು ಅವರಿಗೆ ಆಜ್ಞಾಪಿಸಿದನು; ಆದರೆ ಆತನು ಅವರಿಗೆ ಯೆಷ್ಟು ಆಜ್ಞಾಪಿಸಿದನೋ, ಅಷ್ಟು ಅಧಿಕಾಧಿಕವಾಗಿ ಸಾರಿದರು. ಅವರು — ಯೆಲ್ಲಾ ಚನ್ನಾಗಿ ಮಾಡಿದ್ದಾನೆ; ಕಿವಡರು ಕೇಳುವ ಹಾಗೆಯೂ, ಮೂಕರು ಮಾತಾಡುವ ಹಾಗೆಯೂ ಮಾಡುತ್ತಾನೆ, ಯೆಂದು ಹೇಳಿ, ಅತ್ಯಧಿಕವಾಗಿ ಆಶ್ಚರ್ಯಪಟ್ಟರು. ಮತ್ತು ಬಹು ಸಮೂಹಗಳು ಕುಂಟರನ್ನೂ ಕುರುಡರನ್ನೂ ಮೂಕರನ್ನೂ ಊನರನ್ನೂ ಬೇರೆ ಅನೇಕರನ್ನೂ ಆತನ ಬಳಿಗೆ ತಕ್ಕೊಂಡು ಬಂದು, ಅವರನ್ನು ಯೇಸುವಿನ ಪಾದಗಳ ಬಳಿಯಲ್ಲಿ ಇಟ್ಟರು. ಆತನು ಅವರನ್ನು ವಾಸಿಮಾಡಿದನು. ಆಗ ಯೇಸು ತನ್ನ ಶಿಷ್ಯರನ್ನು ಕರದು ಹೇಳಿದ್ದೇನಂದರೆ, — ಸಮೂಹದ ಮೇಲೆ ಅಂತಃಕರಣ ಪಡುತ್ತೇನೆ; ಯಾಕಂದರೆ ಅವರು ಈಗ ಮೂರು ದಿವಸದಿಂದ ನನ್ನ ಹತ್ತರ ಇದ್ದಾರೆ; ತಿನ್ನುವದಕ್ಕೆ ಅವರಿಗೆ ಯೇನೂ ಇಲ್ಲಾ; ಅವರನ್ನು ಉಪವಾಸವಾಗಿ ಕಳುಹಿಸಿ

ಬಿಡುವದಕ್ಕೆ ನನಗೆ ಮನಸ್ಸಿಲ್ಲಾ; ಒಂದುವೇಳೆ ಮಾರ್ಗದಲ್ಲಿ ಬಳಲಿ ಹೋದಾರು. ಆತನ ಶಿಷ್ಯರು ಆತನಿಗೆ—ಇಷ್ಟು ದೊಡ್ಡ ಸಮೂಹವನ್ನು ತೃಪ್ತಿಪಡಿಸುವದಕ್ಕೆ ಸಾಕಾಗುವಷ್ಟು ರೊಟ್ಟಿಗಳು ಅರಣ್ಯದಲ್ಲಿ ನಮಗೆ ಯೆಲ್ಲಿಂದ ಶಿಕ್ಕ್ಯಾವು? ಅನ್ನಲು, ಯೇಸು ಅವರಿಗೆ—ನಿಮ್ಮಲ್ಲಿ ಯೆಷ್ಟು ರೊಟ್ಟಿಗಳುಂಟು? ಅಂದನು. ಅವರು—ಯೇಳು ಮತ್ತು ಕೆಲವು ಸಣ್ಣ ಮೀನುಗಳು, ಅಂದರು. ಆಗಲಾತನು ಸಮೂಹಗಳಿಗೆ ನೆಲದ ಮೇಲೆ ಕೂತುಕೊಳ್ಳ ಬೇಕೆಂದು ಆಜ್ಞಾಪಿಸಿ, ಯೇಳು ರೊಟ್ಟಿಗಳನ್ನೂ ಮೀನುಗಳನ್ನೂ ತೆಗದುಕೊಂಡು, ಸ್ತೋತ್ರ ಮಾಡಿ, ಮುರಿದು, ತನ್ನ ಶಿಷ್ಯರಿಗೆ ಕೊಟ್ಟನು. ಶಿಷ್ಯರು ಸಮೂಹಕ್ಕೆ ಬಡಿಸಿದರು. ಆಗ ಯೆಲ್ಲರೂ ತಿಂದು ತೃಪ್ತಿಯಾದರು. ಮಿಕ್ಕ ತುಂಡುಗಳನ್ನು ಯೇಳು ಪುಟ್ಟಿ ತುಂಬ ಯೆತ್ತಿದರು. ಹೆಂಗಸರೂ ಮಕ್ಕಳೂ ಹೊರತಾಗಿ ತಿಂದವರು ನಾಲ್ಕು ಸಾವಿರ ಗಂಡಸರಾಗಿದ್ದರು. ಮತ್ತು ಸಮೂಹಗಳನ್ನು ಕಳುಹಿಸಿ ಬಿಟ್ಟು, ಹಡಗವನ್ನೇರಿ, ಸಮುದ್ರದ ಆಚೇತೀರಕ್ಕೆ ಹೋದನು.

ಮತ್ತು ಆತನು ಬೆಥ್ಸಾಯಿದಕ್ಕೆ ಬಂದಾಗ, ಒಬ್ಬ ಕುರುಡನನ್ನು ಆತನ ಬಳಿಗೆ ತಂದು, ಅವನನ್ನು ಮುಟ್ಟ ಬೇಕೆಂದು ಆತನನ್ನು ಬೇಡಿಕೊಂಡರು. ಆತನು ಕುರುಡನ ಕೈ ಹಿಡಿದು, ಅವನ್ನ ಗ್ರಾಮದ ಹೊರಗೆ ಕರಕೊಂಡು ಹೋಗಿ, ಅವನ ಕಣ್ಣುಗಳಲ್ಲಿ ಉಗುಳಿ, ಅವನ ಮೇಲೆ ಕೈಗಳನ್ನಿಟ್ಟು,—ಯೇನಾದರೂ ನೋಡುತ್ತೀಯೋ? ಯೆಂದು ಅವನನ್ನು ಕೇಳಿದನು. ಅವನು ಕಣ್ಣೆತ್ತಿ,—ತಿರುಗಾಡುವ ಮನುಷ್ಯರನ್ನು ಮರಗಳ ಹಾಗೆ ನೋಡುತ್ತೇನೆ, ಅಂದನು. ಆ ಮೇಲೆ ಆತನು ತಿರಿಗಿ ಅವನ ಕಣ್ಣುಗಳ ಮೇಲೆ ಕೈಗಳನ್ನಿಟ್ಟು, ಅವನನ್ನು ಮೇಲೆ ನೋಡ ಮಾಡಿದಾಗ, ಅವನು ಯೆಲ್ಲರನ್ನು ಸ್ಪಷ್ಟವಾಗಿ ನೋಡಿದನು. ಆಗ ಯೇಸು ಅವನನ್ನು ಮನೆಗೆ ಕಳುಹಿಸಿದನು.

ಮತ್ತು ಯೇಸು ಫಿಲಿಪ್ಪನ ಕೈಸರೈಯದ ಮೇರೆಗಳಿಗೆ ಬಂದಾಗ,—ಮನುಷ್ಯರು ಮನುಷ್ಯನ ಮಗನಾದ ನನ್ನನ್ನು ಯಾರೆಂದು ಹೇಳುತ್ತಾರೆ? ಯೆಂದು ತನ್ನ ಶಿಷ್ಯರನ್ನು ಕೇಳಿದನು. ಅದಕ್ಕೆ ಅವರು—ಕೆಲವರು ಸ್ನಾನಿಕನಾದ ಯೋಹಾನನು, ಕೆಲವರು ಎಲೀಯನು, ಇನ್ನೂ ಕೆಲವರು ಯೆರೆಮೀ

ಯನು, ಇಲ್ಲವೆ ಪ್ರವಾದಿಗಳಲ್ಲಿ ಒಬ್ಬನು ಯೆಂದು ಹೇಳುತ್ತಾರೆ, ಅಂದರು. ಆತನು ಅವರಿಗೆ—ಆದರೆ ನೀವು ನನ್ನನ್ನು ಯಾರೆಂದು ಹೇಳುತ್ತೀರಿ? ಅನ್ನಲಾಗಿ, ಸೀಮೋನ್ ಪೇತ್ರನು ಪ್ರತ್ಯುತ್ತರವಾಗಿ,—ನೀನು ಜೀವವುಳ್ಳ ದೇವರ ಮಗನಾದ ಕ್ರಿಸ್ತನು! ಅಂದನು. ಯೇಸು ಅವನಿಗೆ ಹೇಳಿದ್ದು,—ಸೀಮೋನನೇ, ನೀನು ಭಾಗ್ಯವಂತನು! ಯಾಕಂದರೆ ರಕ್ತಮಾಂಸವಲ್ಲ, ಪರಲೋಕದಲ್ಲಿರುವ ನನ್ನ ತಂದೆಯು ನಿನಗೆ ಇದನ್ನು ಪ್ರಕಟ ಮಾಡಿದ್ದಾನೆ. ಮತ್ತು ನಾನು ನಿನಗೆ ಹೇಳುತ್ತೇನೆ,—ನೀನು ಪೇತ್ರನು, ಮತ್ತು ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳದ ದ್ವಾರಗಳು ಅದನ್ನು ಜಯಿಸಲಾರವು.

ಅಂದಿನಿಂದ ಯೇಸು—ಮನುಷ್ಯನ ಮಗನು ಬಹಳ ಶ್ರಮೆ ಪಟ್ಟು, ಹಿರಿಯರಿಂದಲೂ ಪ್ರಧಾನಯಾಜಕರಿಂದಲೂ ಶಾಸ್ತ್ರಿಗಳಿಂದಲೂ ತಳ್ಳಲ್ಪಟ್ಟು, ಕೊಲ್ಲಲ್ಪಟ್ಟು, ಮೂರನೇ ದಿವಸದಲ್ಲಿ ಯೆಬ್ಬಿಸಲ್ಪಡಬೇಕಾಗಿದೆ, ಯೆಂದು ತನ್ನ ಶಿಷ್ಯರಿಗೆ ತೋರಿಸಲಾರಂಭಿಸಿದನು. ಆಗ ಪೇತ್ರನು ಆತನನ್ನು ತಕ್ಕೊಂಡು ಗದರಿಸಲಾರಂಭಿಸಿ,—ಕರ್ತನೇ, ನಿನ್ನನ್ನು ಕರುಣಿಸಿಕೋ; ಇದು ನಿನಗಾಗಬಾರದು! ಅಂದನು. ಆದರೆ ಆತನು ತಿರುಗಿಕೊಂಡು, ಪೇತ್ರನಿಗೆ—ಸೈತಾನನೇ, ನನ್ನ ಹಿಂದೆ ಹೋಗು! ನನಗೆ ಆತಂಕವಾಗಿದ್ದೀ; ಯಾಕಂದರೆ ನೀನು ದೇವರವುಗಳನ್ನಲ್ಲ, ಮನುಷ್ಯರವುಗಳನ್ನೇ ಚಿಂತಿಸುತ್ತೀ. ಆಗ ಯೇಸು ತನ್ನ ಶಿಷ್ಯರಿಗೆ ಹೇಳಿದ್ದು—ಯಾವನಾದರೂ ನನ್ನ ಹಿಂದೆ ಬರಬೇಕೆಂದಿದ್ದರೆ, ತನ್ನನ್ನು ಅಲ್ಲಗಳದು, ತನ್ನ ಶಿಲುಬೆಯನ್ನು ಯೆತ್ತಿಕೊಂಡು, ನನ್ನನ್ನು ಹಿಂಬಾಲಿಸಲಿ. ಯಾಕಂದರೆ ತನ್ನ ಪ್ರಾಣ ರಕ್ಷಿಸಬೇಕಾದವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣ ಕಳಕೊಳ್ಳುವವನು, ಅದನ್ನು ಕಂಡುಕೊಳ್ಳುವನು; ಯಾಕಂದರೆ ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ, ತನ್ನ ಪ್ರಾಣದ ನಷ್ಟ ಪಟ್ಟರೆ, ಅವನಿಗೆ ಪ್ರಯೋಜನವೇನು? ಇಲ್ಲವೆ ತನ್ನ ಪ್ರಾಣಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕದ್ದೇನು?

---

೧೮. ರೂಪಾಂತರವು. ದೆವ್ವವನ್ನು ಹೊರಡಿಸಿದ್ದು. ಯೇಸು ಪಡಬೇಕಾದ ಶ್ರಮೆಗಳು. ದೇವಾಲಯದ ತೆರಿಗೆಯು.

(ಮತ್ಥ. ೧೭, ೧–೨೭. ಮಾರ್ಕ. ೯, ೧–೩೨. ಲೂಕ. ೯, ೨೮–೪೫.)

ಆರು ದಿವಸಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಯೋಹಾನನನ್ನೂ ಯೇಕಾಂತವಾಗಿ ಯೆತ್ತರವಾದ ಬೆಟ್ಟಕ್ಕೆ ಕರಕೊಂಡು ಹೋದನು. ಆತನು ಪ್ರಾರ್ಥಿಸುತ್ತಿರುವಾಗ, ಅವರ ಮುಂದೆ ರೂಪಾಂತರವಾದನು; ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಮತ್ತು ಆತನ ವಸ್ತ್ರಗಳು ಭೂಮಿಯ ಮೇಲಿನ ಯಾವ ಅಗಸನಾದರೂ ಬಿಳುಪು ಮಾಡಲಾರದ ಪ್ರಕಾರ ಹಿಮದಂತೆ ಬಹಳ ಬಿಳುಪಾಗಿ ಪ್ರಕಾಶವಾದವು. ಆಗ ಇಗೋ, ಮೋಶೆಯೂ ಎಲೀಯನೂ ಮಹಿಮೆಯಲ್ಲಿ ಕಾಣಿಸಿಕೊಂಡು, ಆತನು ಯೆರೂಸಲೇಮಿನಲ್ಲಿ ಪೂರಯಿಸಬೇಕಾದ ಹೊರಡೋಣದರ ವಿಷಯ ಆತನ ಸಂಗಡ ಮಾತಾಡಿದರು. ಆದರೆ ಪೇತ್ರನೂ ಅವನ ಸಂಗಡ ಇದ್ದವರೂ ನಿದ್ರಾಭಾರವಾಗಿದ್ದರು. ಯೆಚ್ಚತ್ತಾಗ, ಆತನ ಮಹಿಮೆಯನ್ನೂ ಆತನ ಸಂಗಡ ನಿಂತ ಇಬ್ಬರು ಪುರುಷರನ್ನೂ ನೋಡಿದರು. ಆಗ ಪೇತ್ರನು ಯೇಸುವಿಗೆ ಹೇಳಿದ್ದೇನಂದರೆ,—ಅಯ್ಯಾ, ನಾವು ಇಲ್ಲಿ ಇರುವದು ಒಳ್ಳೇದು! ಮೂರು ಪರ್ಣಶಾಲೆಗಳನ್ನು ಮಾಡುವಾ, ನಿನಗೆ ಒಂದು, ಮೋಶೆಗೆ ಒಂದು, ಎಲೀಯನಿಗೆ ಒಂದು! ಯಾಕಂದರೆ ಅವರು ಭಯಭ್ರಾಂತರಾಗಿರುವ ಕಾರಣ, ತಾನು ಹೇಳಿದ್ದೇನೆಂದು ಅವನಿಗೆ ತಿಳಿಯಲಿಲ್ಲ. ಇದನ್ನು ಅವನು ಹೇಳುತ್ತಿರುವಾಗ, ಬೆಳಕುಳ್ಳ ಮೇಘವು ಬಂದು, ಅವರ ಮೇಲೆ ನೆರಳಾಗಿತ್ತು. ಅವರು ಆ ಮೇಘದೊಳಗೆ ಶೇರುವಾಗ, ಭಯ ಪಟ್ಟರು. ಇದಲ್ಲದೆ ಮೇಘದೊಳಗಿಂದ—ಈತನೇ ನನ್ನ ಪ್ರಿಯ ಮಗನು; ಈತನಲ್ಲಿ ಆನಂದ ಪಡುತ್ತೇನೆ; ಈತನನ್ನು ಕೇಳಿರಿ! ಯೆಂಬ ಶಬ್ದವು ಉಂಟಾಯಿತು. ಶಿಷ್ಯರು ಇದನ್ನು ಕೇಳಿ, ಮೋರೆ ಕೆಳಗಾಗಿ ಬಿದ್ದು, ಬಹಳ ಭಯ ಪಟ್ಟರು. ಆಗ ಯೇಸು ಹತ್ತರ ಬಂದು, ಅವರನ್ನು ಮುಟ್ಟಿ,—ಯೇಳಿರಿ, ಭಯ ಪ

ಡಬೇಡಿರಿ! ಅಂದನು. ಅವರು ತಮ್ಮ ಕಣ್ಣುಗಳನೆತ್ತಿ, ಯೇಸುವನ್ನು ಹೊರ್ತು ಮತ್ತಾರನ್ನೂ ನೋಡಲಿಲ್ಲ. ಅವರು ಬೆಟ್ಟದಿಂದ ಇಳಿದು ಬರುವಾಗ, ಯೇಸು—ಮನುಷ್ಯನ ಮಗನು ಸತ್ತವರೊಳಗಿಂದ ಯೇಳುವ ಪರ್ಯಂತರ ಈ ದರ್ಶನವನ್ನು ಯಾರಿಗೂ ಹೇಳಬೇಡಿರಿ! ಯೆಂದು ಅವರಿಗೆ ಆಜ್ಞಾಪಿಸಿದನು.

ತರುವಾಯ ಯೇಸು ಉಳಿದ ಶಿಷ್ಯರ ಬಳಿಗೆ ಬಂದು, ಅವರ ಸುತ್ತಲೂ ಬಹು ಸಮೂಹವನ್ನೂ, ಶಾಸ್ತ್ರಿಗಳು ಅವರ ಸಂಗಡ ತರ್ಕ ಮಾಡುವದನ್ನೂ ನೋಡಿದನು. ಸಂಗಡಲೇ ಸಮೂಹವೆಲ್ಲಾ ಆತನನ್ನು ನೋಡಿ, ಭ್ರಮೆಗೊಂಡು, ಹತ್ತರ ಓಡಿ ಬಂದು, ಆತನನ್ನು ವಂದಿಸಿದರು. ಆಗ ಸಮೂಹದಲ್ಲಿ ಒಬ್ಬನು ಆತನಿಗೆ ಮೊಣಕಾಲೂರಿ,—ಕರ್ತನೇ ನನ್ನ ಮಗನನ್ನು ಕರುಣಿಸು! ಅವನು ಚಂದ್ರರೋಗ ಉಳ್ಳವನಾಗಿಯೂ, ಮೂಕವಾದ ಆತ್ಮ ಉಳ್ಳವನಾಗಿಯೂ, ಬಹಳ ಶ್ರಮೆ ಪಡುತ್ತಾನೆ; ಅದು ಅವನನ್ನು ಹಿಡಿಯುವಲ್ಲಿ ಅವನನ್ನು ಒದ್ದಾಡಿಸುತ್ತದೆ; ಅವನು ನೊರೆ ಸುರಿಸಿ, ಹಲ್ಲು ಕಡಿದು, ಸವೆದು ಹೋಗುತ್ತಾನೆ; ಅದನ್ನು ಹೊರಡಿಸ ಬೇಕೆಂದು ನಿನ್ನ ಶಿಷ್ಯರಿಗೆ ಹೇಳಿದೆನು; ಆದರೆ ಅವರಿಂದ ಆಗದೆ ಹೋಯಿತು, ಅಂದನು. ಆತನು ಪ್ರತ್ಯುತ್ತರವಾಗಿ,—ಓ ವಿಶ್ವಾಸಹೀನ ಸಂತತಿಯೇ! ಯೆಷ್ಟು ಮಟ್ಟಿಗೂ ನಿಮ್ಮ ಸಂಗಡ ಇರಬೇಕು? ಯೆಷ್ಟು ಮಟ್ಟಿಗೂ ನಿಮ್ಮನ್ನು ತಾಳಬೇಕು? ಅವನನ್ನು ನನ್ನ ಬಳಿಗೆ ತನ್ನಿರಿ! ಅಂದನು. ಆಗಲವನನ್ನು ಆತನ ಬಳಿಗೆ ತಂದರು. ಮತ್ತು ಯೇಸುವನ್ನು ನೋಡಿದಾಗಲೇ, ಆತ್ಮವು ಹುಡುಗನನ್ನು ಒದ್ದಾಡಿಸಿದದರಿಂದ, ಅವನು ನೆಲಕ್ಕೆ ಬಿದ್ದು, ನೊರೆ ಸುರಿಸಿ, ಹೊರಳಾಡಿದನು. ಯೇಸು ಅವನ ತಂದೆಯನ್ನು—ಇದು ಅವನಿಗೆ ಬಂದು, ಯೆಷ್ಟು ಕಾಲವಾಯಿತು! ಯೆಂದು ಕೇಳಿದಾಗ, ಅವನು—ಬಾಲ್ಯದಿಂದಲೇ; ಮತ್ತು ಅನೇಕಸಾರಿ ಅವನನ್ನು ಸಂಹರಿಸುವದಕ್ಕೆ ಅವನನ್ನು ಬೆಂಕಿಯೊಳಗೂ ನೀರೊಳಗೂ ಹಾಕಿ ಅದೆ; ಆದರೆ ನೀನು ಯೇನಾದರು ಮಾಡಕೂಡುವದಾದರೆ, ನಮ್ಮ ಮೇಲೆ ಅಂತಃಕರಣವಿಟ್ಟು, ನಮಗೆ ಸಹಾಯ ಮಾಡು! ಅಂದನು.

ಯೇಸು ಅವನಿಗೆ ಹೇಳಿದ್ದು,—ವಿಶ್ವಾಸಿಸುವದು ನಿನ್ನಿಂದಾದರೆ; ವಿಶ್ವಾಸಿಸು ವವನಿಂದ ಯೆಲ್ಲಾ ಆಗುವದು! ಸಂಗಡಲೇ ಹುಡುಗನ ತಂದೆಯು ಕಣ್ಣೀರಿನಿಂದ,—ವಿಶ್ವಾಸಿಸುತ್ತೇನೆ; ಕರ್ತನೇ, ನನ್ನ ಅವಿಶ್ವಾಸಕ್ಕೆ ಸಹಾಯ ಮಾಡು! ಯೆಂದು ಕೂಗಿ ಹೇಳಿದನು. ಯೇಸು ಅಶುದ್ಧಾತ್ಮವನ್ನು ಗದರಿಸಿ,—ಅವನಿಂದ ಹೊರಡು! ಇನ್ನು ಮೇಲೆ ಅವನೊಳಗೆ ಪ್ರವೇಶಿಸ ಬೇಡೆಂದು ನಾನು ನಿನಗೆ ಆಜ್ಞಾಪಿಸುತ್ತೇನೆ, ಅಂದನು. ಆಗಲದು ಕೂಗಿ, ಅವನನ್ನು ಬಹಳ ವಾದ್ದಾಡಿಸಿ, ಹೊರಟಿತು. ಮತ್ತು ಅವನು ಸತ್ತವನ ಹಾಗಾದದರಿಂದ, ಅನೇಕರು—ಅವನು ಸತ್ತಿದ್ದಾನೆ, ಅಂದರು. ಆದರೆ ಯೇಸು ಅವನ ಕೈ ಹಿಡಿದು, ಅವನನ್ನು ಯೆಬ್ಬಿಸಿದಾಗ, ಅವನು ಯೆದ್ದು, ಆ ಘಳಿಗೆಯಿಂದಲೇ ಸ್ವಸ್ಥವಾದನು. ಆಗ ಯೆಲ್ಲರೂ ದೇವರ ಮಹತ್ತಿಗೆ ಭ್ರಮೆಗೊಂಡರು.

ಯೇಸು ಮನೆಯೊಳಗೆ ಬಂದಾಗ, ಆತನ ಶಿಷ್ಯರು,—ನಾವು ಅದನ್ನು ಯಾಕೆ ಹೊರಡಿಸಲಾರದೆ ಇದ್ದೆವು? ಯೆಂದು ಕೇಳಿದರು. ಯೇಸು ಅವರಿಗೆ ಹೇಳಿದ್ದು,—ನಿಮ್ಮ ಅವಿಶ್ವಾಸದ ನಿಮಿತ್ತವೇ! ಯಾಕಂದರೆ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಸಾಸಿವೆಕಾಳಷ್ಟು ವಿಶ್ವಾಸವು ನಿಮಗಿದ್ದರೆ, ಯಾವದಾದರೂ ನಿಮ್ಮಿಂದ ಆಗದೆ ಇರಲಿಕ್ಕಿಲ್ಲಾ; ಆದರೆ ಈ ಜಾತಿ ಪ್ರಾರ್ಥನೆ ಉಪವಾಸಗಳಿಂದಲೇ ಹೊರತು ಹೊರಡುವದಿಲ್ಲಾ.

ಅಲ್ಲಿಂದ ಅವರು ಹೊರಟು, ಗಲಿಲಾಯದಲ್ಲಿ ಸಂಚರಿಸುತ್ತಿರುವಾಗ, ಯೇಸು (ಯೆರಡನೇ ಸಾರಿ) ತನ್ನ ಶಿಷ್ಯರಿಗೆ,—ಮನುಷ್ಯನ ಮಗನು ಮನುಷ್ಯರ ಕೈಗಳಿಗೆ ಹಾಪ್ಪಿಸಲ್ಪಡುವದಕ್ಕಿದ್ದಾನೆ; ಆತನನ್ನು ಕೊಂದು ಹಾಕುವರು; ಮೂರನೇ ದಿವಸದಲ್ಲಿ ಆತನು ಯೆಬ್ಬಿಸಲ್ಪಡುವನು, ಅಂದನು. ಅದಕ್ಕೆ ಬಹಳ ದುಖ್ಖ ಪಟ್ಟರು.

ಅವರು ಕಪೆರ್ನವೂಮಿಗೆ ಬಂದಾಗ, ದೇವಾಲಯದ ತೆರಿಗೆ ತಕ್ಕೊಳ್ಳುವವರು ಪೇತ್ರನ ಬಳಿಗೆ ಬಂದು,—ನಿಮ್ಮ ಬೋಧಕನು ತೆರಿಗೆ ತೆರುವದಿಲ್ಲವೋ? ಅಂದರು. ತೆರುತ್ತಾನೆ, ಅಂದನು. ಮತ್ತು ಮನೆಯಲ್ಲಿ ಪ್ರವೇಶಿಸಿದಾಗ, ಯೇಸು

ಮೊದಲು ಮಾತಾಡಿ, ಅವನಿಗೆ ಹೇಳಿದ್ದು,—ಸೀಮೋನನೇ, ನಿನಗೆ ಹ್ಯಾಗೆ ಕಾಣುತ್ತದೆ? ಭೂಮಿಯ ಅರಸರು ಯಾರಿಂದ ತೆರಿಗೆಯನ್ನೂ ಕಪ್ಪವನ್ನೂ ತಕ್ಕೊಳ್ಳುತ್ತಾರೆ? ತಮ್ಮ ಮಕ್ಕಳಿಂದಲೋ, ಪರರಿಂದಲೋ? ಪೇತ್ರನು ಆತನಿಗೆ,—ಪರರಿಂದಲೇ, ಅನ್ನಲು, ಯೇಸು ಅವನಿಗೆ ಹೇಳಿದ್ದು,—ಹಾಗಾದರೆ ಮಕ್ಕಳು ಬಿಡುಗಡೆ ಆಗಿದ್ದಾರೆ; ನಾವು ಅವರನ್ನು ಆತಂಕಪಡಿಸದ ಹಾಗೆ, ಸಮುದ್ರಕ್ಕೆ ಹೋಗಿ, ಗಾಳ ಹಾಕಿ, ಮೊದಲು ಮೇಲೆ ಬರುವ ಮೀನನ್ನು ಯೆತ್ತು; ಅದರ ಬಾಯಿ ತೆರದಾಗ ಒಂದು ಸ್ತಾತೆರನ್ನು ಕಾಣುವಿ; ಅದನ್ನು ತೆಗದುಕೊಂಡು, ನನಗೋಸ್ಕರವೂ ನಿನಗೋಸ್ಕರವೂ ಅವರಿಗೆ ಕೊಡು!



---

೨೦. ಪರಲೋಕರಾಜ್ಯದಲ್ಲಿ ದೊಡ್ಡವನು ಯಾರು? ಇಬ್ಬರು ಸಾಲಗಾರರ ಸಾಮ್ಯವು. ಯೆಪ್ಪತ್ತು ಮಂದಿಯನ್ನು ಕಳುಹಿಸಿದ್ದು.

(ಮತ್ಥ. ೧೮, ೧—೩೫. ೧೧, ೨೦—೩೦. ಮಾರ್ಕ. ೯, ೩೩—೫೦. ಲೂಕ. ೯, ೪೬—೬೨. ೧೦, ೧—೨೪.)

ಆ ವೇಳೆಯಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು,—ಪರಲೋಕರಾಜ್ಯದಲ್ಲಿ ದೊಡ್ಡವನು ಯಾರು? ಅನ್ನಲಾಗಿ, ಯೇಸು ಒಂದು ಕೂಸನ್ನು ಕರದು, ಅವರ ಮಧ್ಯದಲ್ಲಿ ನಿಲ್ಲಿಸಿ, ಅಪ್ಪಿಕೊಂಡು, ಹೇಳಿದ್ದೇನಂದರೆ,—ನಿಶ್ಚಯ

ವಾಗಿ ನಿಮಗೆ ಹೇಳುತ್ತೇನೆ, ನೀವು ತಿರಿಗಿಕೊಂಡು, ಕೂಸುಗಳ ಹಾಗೆ ಆದ ಹೊರತು ಪರಲೋಕರಾಜ್ಯದಲ್ಲಿ ಸೇರಲಾರಿರಿ! ಆದದರಿಂದ ಈ ಕೂಸಿನ ಹಾಗೆ ತನ್ನನ್ನು ತಗ್ಗಿಸಿಕೊಳ್ಳುವವನ್ಯಾವನೋ, ಅವನು ಪರಲೋಕರಾಜ್ಯದಲ್ಲಿ ದೊಡ್ಡವನು. ಮತ್ತು ಇಂಥಾ ಕೂಸುಗಳಲ್ಲಿ ಒಂದನ್ನು ನನ್ನ ಹೆಸರಿನಲ್ಲಿ ಅಂಗೀಕರಿಸುವವನ್ಯಾವನೋ, ಅವನು ನನ್ನನ್ನು ಅಂಗೀಕರಿಸುತ್ತಾನೆ. ಆದರೆ ನನ್ನನ್ನು ವಿಶ್ವಾಸಿಸುವ ಈ ಚಿಕ್ಕವರಲ್ಲಿ ಒಬ್ಬನನ್ನು ಆಶಂಕ ಪಡಿಸುವವನ್ಯಾವನೋ, ಅವನ ಕೊರಳಿಗೆ ಬೀಸುವ ಕಲ್ಲು ತೂಗ ಹಾಕಲ್ಪಟ್ಟು, ಸಮುದ್ರದ ಅಗಾಧದಲ್ಲಿ ಮುಳುಗಿಸಲ್ಪಡುವದು ಅವನಿಗೆ ವಾಸಿ. ಈ ಚಿಕ್ಕವರಲ್ಲಿ ಒಬ್ಬನನ್ನು ತಿರಸ್ಕರಿಸದ ಹಾಗೆ ನೋಡಿಕೊಳ್ಳಿರಿ; ಯಾಕಂದರೆ ಪರಲೋಕದಲ್ಲಿ ಅವರ ದೂತರು ಯಾವಾಗಲೂ ಪರಲೋಕದಲ್ಲಿರುವ ನನ್ನ ತಂದೆಯ ಮುಖವನ್ನು ನೋಡುತ್ತಾರೆಂದು ನಿಮಗೆ ಹೇಳುತ್ತೇನೆ. ಯಾಕಂದರೆ ಕೆಟ್ಟು ಹೋದದ್ದನ್ನು ರಕ್ಷಿಸುವದಕ್ಕೆ ಮನುಷ್ಯನ ಮಗನು ಬಂದಿದ್ದಾನೆ; ಹಾಗೆಯೇ ಈ ಚಿಕ್ಕವರಲ್ಲಿ ಒಬ್ಬನಾದರೂ ಕೆಟ್ಟು ಹೋಗ ಬೇಕೆಂಬುವದು ನಿಮ್ಮ ತಂದೆಯ ಚಿತ್ತವಲ್ಲ. —ನಿನ್ನ ಸಹೋದರನು ನಿನಗೆ ವಿರೋಧವಾಗಿ ಪಾಪ ಮಾಡಿದರೆ, ಹೋಗಿ, ನೀನೂ ಅವನೂ ಮಾತ್ರ ಕೂಡಾ ಇದ್ದು, ಅವನನ್ನು ಗದರಿಸು; ಮಾನಸಾಂತರಪಟ್ಟರೆ, ಅವನಿಗೆ ಮನ್ನಿಸು! ನೀನು ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ. ಅವನು ನಿನಗೆ ಕಿವಿ ಕೊಡದೆ ಹೋದರೆ, ಯೆರಡು ಮೂರು ಸಾಕ್ಷಿಗಳ ಬಾಯಿಂದ ಮಾತೆಲ್ಲಾ ಸ್ಥಾಪನೆ ಆಗುವ ಹಾಗೆ, ಇನ್ನೂ ಒಬ್ಬನನ್ನು, ಇಲ್ಲವೇ ಇಬ್ಬರನ್ನು ನಿನ್ನ ಸಂಗಡ ಕರದುಕೋ. ಮತ್ತು ನಿಮಗೆ ಹೇಳುತ್ತೇನೆ, ನಿಮ್ಮೊಳಗೆ ಇಬ್ಬರು ತಾವು ಬೇಡಿಕೊಳ್ಳುವ ಯಾವ ಕಾರ್ಯದ ವಿಷಯಕ್ಕಾದರೂ ಒಪ್ಪಿಕೊಂಡರೆ, ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಉಂಟಾಗುವದು. ಯಾಕಂದರೆ ಇಬ್ಬರಾದರೂ ಮೂವರಾದರೂ ನನ್ನ ಹೆಸರಿನಲ್ಲಿ ಯೆಲ್ಲಿ ಕೂಡಿ ಇದ್ದಾರೋ, ಅಲ್ಲಿ ಅವರ ಮಧ್ಯದಲ್ಲಿ ಇದ್ದೇನೆ.

ಆಗ ಪೇತ್ರನು ಆತನ ಬಳಿಗೆ ಬಂದು,—ಕರ್ತನೇ, ನನ್ನ ಸಹೋದರನು ನನಗೆ ವಿರೋಧವಾಗಿ ಯೆಷ್ಟುಸಾರಿ ಪಾಪಮಾಡಲಾಗಿ, ಅವನಿಗೆ ಮನ್ನಿಸ ಬೇ

ಕು? ಯೇಳು ಸಾರಿ ಪರ್ಯಂತರವೋ? ಅಂದಾಗ, ಯೇಸು ಅವನಿಗೆ ಹೇಳಿ
ದ್ದು,—ಯೇಳು ಸಾರಿ ಪರ್ಯಂತರವೆಂದು ನಿನಗೆ ಹೇಳುವದಿಲ್ಲಾ; ಯೇಳೆಪ್ಪತ್ತು
ಸಾರಿ ಪರ್ಯಂತರ. ಆದದರಿಂದ ಪರಲೋಕರಾಜ್ಯವು ತನ್ನ ದಾಸರಿಂದ ಲೆಖ್ಖ
ತೆಗದುಕೊಳ್ಳ ಬೇಕೆಂದಿದ್ದ ಅರಸನಿಗೆ ಸಮಾನವಾಗಿದೆ. ಅವನು ಲೆಖ್ಖ ತೆಗದು
ಕೊಳ್ಳಲಾರಂಭಿಸಿದಾಗ, ಹತ್ತುಸಾವಿರ ತಲಾಂತಿನ ಸಾಲ ಮಾಡಿದವನೊಬ್ಬನು ಅ
ವನ ಬಳಿಗೆ ತರಲ್ಪಟ್ಟನು. ಆದರೆ ತೀರಿಸುವದಕ್ಕೆ ಅವನಿಗೆ ಇಲ್ಲದದರಿಂದ,
ಅವನ ಯಜಮಾನನು ಅವನನ್ನೂ, ಅವನ ಹೆಂಡತಿಯನ್ನೂ ಮಕ್ಕಳನ್ನೂ,
ಅವನಿಗಿದ್ದ ಯೆಲ್ಲವನ್ನೂ ಮಾರಿಬಿಟ್ಟು, ತೀರಿಸ ಬೇಕೆಂದು ಅಪ್ಪಣೆ ಕೊಟ್ಟನು.
ಹೀಗಿರಲಾಗಿ ದಾಸನು ಅಡ್ಡಬಿದ್ದು, ಅವನಿಗೆ,—ಕರ್ತನೇ, ನನಗೋಸ್ಕರ ತಾಳಿಕೋ;
ನಿನಗೆ ಯೆಲ್ಲಾ ಕೊಡುತ್ತೇನೆ, ಯೆಂದು ನಮಸ್ಕರಿಸಲಾಗಿ, ಆ ದಾಸನ ಯಜ
ಮಾನನು ಅಂತಃಕರಣಪಟ್ಟು, ಅವನನ್ನು ಬಿಡಿಸಿ, ಅವನಿಗೆ ಸಾಲ ಬಿಟ್ಟನು.
ತರುವಾಯ ಆ ದಾಸನು ಹೊರಗೆ ಬಂದು, ತನಗೆ ನೂರು ಹಣ ಕೊಡ ಬೇಕಾ
ದ ಒಬ್ಬ ಜತೆದಾಸನನ್ನು ಕಂಡು,—ನೀನು ಕೊಡ ಬೇಕಾದದ್ದನ್ನು ನನಗೆ ಕೊ
ಡು! ಯೆಂದು ಹೇಳಿ, ಹಿಡಿದು, ಕುತ್ತಿಗೆ ಹಿಸಿಕಿದನು. ಆಗಲವನ ಜತೆ
ದಾಸನು ಅವನ ಪಾದಕ್ಕೆ ಬಿದ್ದು,—ನನಗೋಸ್ಕರ ತಾಳಿಕೋ! ನಿನಗೆ ಯೆಲ್ಲಾ ಕೊಡು
ತ್ತೇನೆ, ಯೆಂದು ಅವನನ್ನು ಬೇಡಿಕೊಂಡನು. ಆದರೆ ಅವನು ಒಪ್ಪದೆ, ಹೋ
ಗಿ, ಸಾಲ ತೀರಿಸುವ ಪರ್ಯಂತರ ಅವನನ್ನು ಸೆರೆಯಲ್ಲಿ ಹಾಕಿಸಿದನು. ಅವ
ನ ಜತೆದಾಸರು ಅದನ್ನು ನೋಡಿ, ಬಹಳ ದುಖ್ಖಪಟ್ಟು, ಬಂದು, ನಡದವು
ಗಳನ್ನೆಲ್ಲಾ ತಮ್ಮ ಯಜಮಾನನಿಗೆ ತಿಳಿಸಿದರು. ಆಗಲವನ ಯಜಮಾನ
ನು ಅವನನ್ನು ಕರಸಿ, ಅವನಿಗೆ,—ಕೆಟ್ಟ ದಾಸನೇ, ನೀನು ನನ್ನನ್ನು ಬೇಡಿ
ಕೊಂಡ ಕಾರಣ ಆ ಸಾಲವನ್ನೆಲ್ಲಾ ನಿನಗೆ ಬಿಟ್ಟೆನು; ನಾನು ನಿನ್ನನ್ನು ಕರುಣಿಸಿ
ದ ಪ್ರಕಾರ, ನೀನು ಸಹಾ ನಿನ್ನ ಜತೆದಾಸನನ್ನು ಕರುಣಿಸ ಬೇಕಾಗಿತ್ತಲ್ಲವೋ?
ಅಂದನು. ಮತ್ತು ಅವನ ಯಜಮಾನನು ಕೋಪ ಮಾಡಿ, ತನಗೆ ಕೊಡ ಬೇಕಾ
ದದ್ದನ್ನೆಲ್ಲಾ ಕೊಡುವ ಪರ್ಯಂತರ ಹಿಡಿಸುವವನಿಗೆ ಅವನನ್ನು ಒಪ್ಪಿಸಿದ
ನು. ಈ ಪ್ರಕಾರ ನಿಮ್ಮಲ್ಲಿ ಒಬ್ಬೊಬ್ಬನು ತನ್ನ ಸಹೋದರನಿಗೆ ಅವನ ತ

ಪ್ಪುಗಳನ್ನು ಮನಃಪೂರ್ವಕವಾಗಿ ಮನ್ನಿಸದಿದ್ದರೆ, ಪರಲೋಕದಲ್ಲಿರುವ ನನ್ನ ತಂದೆಯು ನಿಮಗೆ ಹಾಗೆಯೇ ಮಾಡುವನು.

ಇದಲ್ಲದೆ ಆತನು ಯೆತ್ತಲ್ಪಡುವದಕ್ಕೆ ದಿವಸಗಳು ಪೂರ್ಣವಾದಾಗ, ಆತನು ಯೆರೂಸಲೇಮಿಗೆ ಹೋಗುವದಕ್ಕೆ ತನ್ನ ಮುಖವನ್ನು ಸ್ಥಿರಮಾಡಿಕೊಂಡು, ಜನರನ್ನು ತನ್ನ ಮುಖದ ಮುಂದೆ ಕಳುಹಿಸಿದನು. ಇವರು ಹೋಗಿ, ಆತನಿಗೆ ಸಿದ್ಧ ಮಾಡುವದಕ್ಕೆ ಸಮಾರ್ಯರ ಒಂದು ಗ್ರಾಮದಲ್ಲಿ ಪ್ರವೇಶಿಸಿದರು. ಅವರು ಆತನನ್ನು ಅಂಗೀಕರಿಸಲಿಲ್ಲ. ಯಾಕೋಬನೂ ಯೋಹಾನನೂ ಅದನ್ನು ನೋಡಿ,—ಕರ್ತನೇ, ಎಲೀಯನು ಮಾಡಿದ ಹಾಗೆ ಆಕಾಶದಿಂದ ಬೆಂಕಿ ಇಳಿದು ಅವರನ್ನು ಸಂಹರಿಸ ಬೇಕೆಂದು, ನಾವು ಹೇಳುವದಕ್ಕೆ ನಿನಗೆ ಮನಸ್ಸುಂಟೋ? ಅಂದರು. ಆಗಲಾತನು ಅವರನ್ನು ಗದರಿಸಿ ಹೇಳಿದ್ದು,—ನೀವು ಯೆಂಥಾ ಆತ್ಮದವರಾಗಿದ್ದೀರೋ ಅರಿಯರಿ! ಯಾಕಂದರೆ ಮನುಷ್ಯನ ಮಗನು ಮನುಷ್ಯರ ಪ್ರಾಣಗಳನ್ನು ನಾಶ ಮಾಡುವದಕ್ಕಲ್ಲಾ, ರಕ್ಷಿಸುವದಕ್ಕೆ ಬಂದನು.

ಇವುಗಳಾದ ಮೇಲೆ ಕರ್ತನು ಬೇರೆ ಯೆಪ್ಪತ್ತು ಮಂದಿಯನ್ನು ನೇಮಿಸಿ, ಅವರನ್ನು ಇಬ್ಬರಿಬ್ಬರಾಗಿ ತನ್ನ ಮುಖದ ಮುಂದೆ ತಾನು ಹೋಗ ಬೇಕಾದ ಸಕಲ ಪಟ್ಣಗಳಿಗೂ ಸ್ಥಳಗಳಿಗೂ ಕಳುಹಿಸಿದನು. ಆತನು ಅವರಿಗೆ ಹೇಳಿದ್ದೇನಂದರೆ,—ಹೋಗಿರಿ! ಇಗೋ, ನಾನು ತೋಳಗಳ ಮಧ್ಯದಲ್ಲಿರುವ ಕುರಿಗಳ ಹಾಗೆ ನಿಮ್ಮನ್ನು ಕಳುಹಿಸುತ್ತೇನೆ. ನೀವು ಯಾವ ಮನೆಯಲ್ಲಿ ಪ್ರವೇಶಿಸುತ್ತೀರೋ, ಮೊದಲು,—ಈ ಮನೆಗೆ ಸಮಾಧಾನವಾಗಲಿ! ಯೆಂದು ಹೇಳಿರಿ; ರೋಗಿಷ್ಠರನ್ನು ಸ್ವಸ್ಥಮಾಡಿ, ದೇವರ ರಾಜ್ಯವು ನಿಮಗೆ ಸಮೀಪವಾಯಿತೆಂದು ಅವರಿಗೆ ಹೇಳಿರಿ! ಅವರು ನಿಮ್ಮನ್ನು ಅಂಗೀಕರಿಸದೆ ಹೋದರೆ, ಅದರ ಬೀದಿಗಳಿಗೆ ಹೊರಟು,—ನಿಮ್ಮ ಪಟ್ಣದಿಂದ ನಮಗೆ ಹತ್ತಿದ ಧೂಳು ಸಹಾ ನಿಮಗೆ ಝಾಡಿಸಿ ಬಿಡುತ್ತೇವೆ; ಆದಾಗ್ಯೂ ದೇವರ ರಾಜ್ಯವು ನಿಮಗೆ ಸಮೀಪವಾಯಿತೆಂದು ತಿಳುಕೊಳ್ಳಿರಿ ಯೆಂದು ಅವರಿಗೆ ಹೇಳಿರಿ!—ನ್ಯಾಯತೀರ್ವಿಕೆಯ ದಿವಸದಲ್ಲಿ ಆ ಪಟ್ಣಕಿಂತ ಸೋದೋಮಿಗೆ ತಾಳತಕ್ಕದ್ದಾಗಿರುವದು

ಯೆಂದು ನಿಮಗೆ ಹೇಳುತ್ತೇನೆ; ಯಾಕಂದರೆ ನಿಮ್ಮನ್ನು ಕೇಳುವವನು ನನ್ನನ್ನು ಕೇಳುತ್ತಾನೆ; ನಿಮ್ಮನ್ನು ಅಲಕ್ಷ್ಯಮಾಡುವವನು ನನ್ನನ್ನು ಅಲಕ್ಷ್ಯಮಾಡುತ್ತಾನೆ.—ಆದರೆ ಆ ಯೆಪ್ಪತ್ತು ಮಂದಿ ಸಂತೋಷದಿಂದ ತಿರಿಗಿ ಬಂದು,—ಕರ್ತನೇ, ದೆವ್ವಗಳು ಸಹಾ ನಿನ್ನ ಹೆಸರಿನಲ್ಲಿ ನಮಗೆ ವಿಧೇಯವಾಗಿವೆ, ಅಂದಾಗ, ಆತನು ಅವರಿಗೆ ಹೇಳಿದ್ದು,—ಆತ್ಮಗಳು ನಿಮಗೆ ವಿಧೇಯವಾಗಿವೆ ಯೆಂದು ಸಂತೋಷಪಡದೆ, ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟವೆ ಯೆಂದು ಹೆಚ್ಚಾಗಿ ಸಂತೋಷ ಪಡಿರಿ!—ಆ ಸಮಯದಲ್ಲಿ ಯೇಸು ಹೇಳಿದ್ದೇನಂದರೆ,—ಪರಲೋಕ ಭೂಲೋಕಗಳ ಕರ್ತನಾದ ತಂದೆಯೇ, ನೀನು ಇವುಗಳನ್ನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಮರೆ ಮಾಡಿ, ಬಾಲಕರಿಗೆ ಪ್ರಕಟ ಮಾಡಿದದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ. ಹೌದು, ತಂದೆಯೇ! ಯಾಕಂದರೆ ಹೀಗೆ ನಿನ್ನ ಮುಂದೆ ಒಳ್ಳೇದೆಂದು ತೋರಿತು. ಯೆಲ್ಲವುಗಳು ನನ್ನ ತಂದೆಯಿಂದ ನನಗೆ ಒಪ್ಪಿಸಲ್ಪಟ್ಟವೆ; ಮತ್ತು ತಂದೆಯಲ್ಲದೆ, ಯಾವನೂ ಮಗನನ್ನು ಅರಿಯನು; ಮತ್ತು ಮಗನಲ್ಲದೆ, ಮಗನು ಯಾವನಿಗೆ ಪ್ರಕಟಮಾಡ ಮನಸ್ಸಾಗಿದ್ದಾನೋ, ಅವನಲ್ಲದೆ, ಯಾವನೂ ತಂದೆಯನ್ನು ಅರಿಯನು. ಕಷ್ಟ ಪಟ್ಟು, ಭಾರ ಹೊರುವವರೆಲ್ಲರೇ, ನನ್ನ ಬಳಿಗೆ ಬನ್ನಿರಿ! ನಾನು ನಿಮಗೆ ವಿಶ್ರಾಂತಿ ಕೊಡುವೆನು. ನನ್ನ ನೊಗವನ್ನು ನಿಮ್ಮ ಮೇಲೆ ತಕ್ಕೊಂಡು, ನನ್ನಿಂದ ಕಲಿತುಕೊಳ್ಳಿರಿ; ಯಾಕಂದರೆ ಸಾತ್ವಿಕನೂ ಹೃದಯದಲ್ಲಿ ದೀನನೂ ಆಗಿದ್ದೇನೆ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಹೊಂದುವಿರಿ; ಯಾಕಂದರೆ ನನ್ನ ನೊಗ ಮೃದುವೂ, ನನ್ನ ಹೊರೆ ಹಗುರವೂ ಆಗಿದೆ.


---

೨೧. ಸಮಾರ್ಯನ ಸಾಮ್ಯ. ಬೆಥಾನ್ಯದ ಭೇಟಿ. ಕರ್ತನ ಪ್ರಾರ್ಥನೆ. ಭೂಮಿ ಚನ್ನಾಗಿ ಫಲಿಸಿದವನ ಸಾಮ್ಯ. ಅಂಜೂರಮರದ ಸಾಮ್ಯ.

(ಲೂಕ್. ೧೦, ೨೫–೪೨. ೧೧, ೧–೫೪. ೧೨, ೧–೫೯. ೧೩, ೧–೯.)

ಆಗ ಒಬ್ಬ ನ್ಯಾಯಶಾಸ್ತ್ರಿ ಯೆದ್ದು, ಆತನನ್ನು ಶೋಧಿಸಿ,—ಬೋಧಕನೇ! ನಿತ್ಯಜೀವವನ್ನು ಬಾಧ್ಯವಾಗಿ ಹೊಂದುವದಕ್ಕೆ ನಾನೇನು ಮಾಡ ಬೇ

ಕು? ಅಂದಾಗ, ಅವನಿಗೆ,—ನ್ಯಾಯಪ್ರಮಾಣದಲ್ಲಿ ಯೇನು ಬರದದೆ? ಹ್ಯಾಗೆ ವಾಚುತ್ತೀ? ಅಂದನು. ಅವನು ಪ್ರತ್ಯುತ್ತರವಾಗಿ ಹೇಳಿದ್ದು,—ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ, ಮತ್ತು ನಿನ್ನ ನೆರೆಯವನನ್ನು ನಿನ್ನ ಹಾಗೆಯೂ ಪ್ರೀತಿಮಾಡ ಬೇಕು. (೫ ಮೋಶೆ. ೬, ೫. ೩ ಮೋಶೆ. ೧೯, ೧೮.) ಯೇಸು ಅವನಿಗೆ,—ಸರಿಯಾಗಿ ಉತ್ತರ ಕೊಟ್ಟೀ; ಇದನ್ನು ಮಾಡಿದರೆ ಬದುಕುವಿ, ಅಂದನು. ಆದರೆ ಅವನು, ತಾನು ನೀತಿವಂತನು ಅನ್ನಿಸಿಕೊಳ್ಳ ಬೇಕೆಂದು, ಯೇಸುವಿಗೆ—ಹಾಗಾದರೆ ನನ್ನ ನೆರೆಯವನು ಯಾರು? ಅಂದನು. ಅದಕ್ಕೆ ಯೇಸು ಹೇಳಿದ್ದೇನಂದರೆ,—ಒಬ್ಬ ಮನುಷ್ಯನು ಯೆರೂಸಲೇಮಿನಿಂದ ಯೆರಿಖೋವಿಗೆ ಇಳಿದು ಹೋಗುವಾಗ, ಕಳ್ಳರಾಳಿಗೆ ಬಿದ್ದನು. ಇವರು ಅವನ ವಸ್ತ್ರಗಳನ್ನು ತೆಗದು, ಪೆಟ್ಟು ಹೊಡದು, ಅವನನ್ನು ಅರೆಪ್ರಾಣದಲ್ಲಿ ಬಿಟ್ಟು ಹೋದರು. ಆಗ ಅಕಸ್ಮಾತ್ತಾಗಿ ಆ ಮಾರ್ಗದಲ್ಲಿ ಒಬ್ಬ ಯಾಜಕನು ಇಳಿದು ಹೋಗುವಾಗ, ಅವನನ್ನು ನೋಡಿ, ವಾರೆಯಾಗಿ ಹೋದನು. ಅದೇ ಪ್ರಕಾರ ಒಬ್ಬ ಲೇವ್ಯನು ಆ ಸ್ಥಳಕ್ಕೆ ಬಂದು, ನೋಡಿ, ವಾರೆಯಾಗಿ ಹೋದನು. ಆದರೆ ಒಬ್ಬ ಸಮಾರ್ಯನು ಅವನ ಹತ್ತರ ಬಂದು, ಅವನನ್ನು ನೋಡಿ, ಅಂತಃಕರಣ ಪಟ್ಟು, ಹತ್ತರ ಹೋಗಿ, ಅವನ ಘಾಯಗಳಲ್ಲಿ ಯೆಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯಿದು, ಕಟ್ಟಿ, ಅವನನ್ನು ಸ್ವಂತ ವಾಹನದ ಮೇಲೆ ಯೇರಿ



ಸಿ, ಛತ್ರಕ್ಕೆ ಅವನನ್ನು ತಕ್ಕೊಂಡು ಹೋಗಿ, ಅವನನ್ನು ಪರಾಮರಿಸಿದನು. ಮೂರನೇ ದಿವಸದಲ್ಲಿ ಅವನು ಹೊರಟು ಹೋಗುವಾಗ, ಯೆರಡು ಹಣಗಳನ್ನು ತೆಗದುಕೊಂಡು, ಛತ್ರದವನಿಗೆ ಕೊಟ್ಟು, ಅವನಿಗೆ ಹೇಳಿದ್ದೇನಂದರೆ,—ಇವನನ್ನು ಪರಾಮರಿಸು; ಮತ್ತು ನೀನು ಹೆಚ್ಚು ಯೇನಾದರೂ ವೆಚ್ಚ ಮಾಡಿದರೆ, ನಾನು ತಿರಿಗಿ ಬರುವಾಗ ನಿನಗೆ ಕೊಡುತ್ತೇನೆ. ಆದದರಿಂದ ಈ ಮೂವರಲ್ಲಿ ಯಾವನು ಕಳ್ಳರೊಳಗೆ ಬಿದ್ದವನಿಗೆ ನೆರೆಯವನಾಗಿದ್ಧಾನೆಂದು ನಿನಗೆ ಕಾಣುತ್ತದೆ? ಇವನು,—ಅವನಿಗೆ ಕರುಣೆ ತೋರಿಸಿದವನೇ! ಅಂದನು. ಆದದರಿಂದ ಯೇಸು ಅವನಿಗೆ ಹೇಳಿದ್ದು,—ನೀನು ಹೋಗಿ, ಅದೇ ಪ್ರಕಾರ ಮಾಡು!

ಮತ್ತು ಆತನು (ಯೆರೂಸಲೇಮಿನ ಸಮೀಪದಲ್ಲಿರುವ ಬೆಥಾನ್ಯವೆಂಬ) ವೊಂದು ಗ್ರಾಮದಲ್ಲಿ ಪ್ರವೇಶಿಸಿದನು; ಮತ್ತು ಮಾರ್ಥಳೆಂಬ ವೊಬ್ಬ ಸ್ತ್ರೀಯು ಆತನನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡಳು. ಅವಳಿಗೆ ಮರೀಯಳೆಂಬ ವೊಬ್ಬ ಸಹೋದರಿ ಇದ್ದಳು; ಇವಳು ಯೇಸುವಿನ ಪಾದಗಳ ಬಳಿಯಲ್ಲಿ ಕೂತುಕೊಂಡು, ಆತನ ವಾಕ್ಯವನ್ನು ಕೇಳಿದಳು. ಆದರೆ ಮಾರ್ಥಳು ಬಹಳ ಸೇವೆಯಿಂದ ತೊಂದರೆ ಪಟ್ಟು, ಹತ್ತರ ಬಂದು,—ಕರ್ತನೇ, ನನ್ನ ಸಹೋದರಿ ನನ್ನನ್ನು ವೊಬ್ಬಳಾಗಿ ಸೇವೆ ಮಾಡ ಬಿಟ್ಟದ್ದಕ್ಕೆ ನಿನಗೆ ಚಿಂತೆ ಇಲ್ಲವೋ? ನನಗೆ ಸಹಾಯ ಮಾಡ ಬೇಕೆಂದು ಅವಳಿಗೆ ಹೇಳು, ಅಂದಾಗ,



ಯೇಸು ಅವಳಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ಮಾರ್ಥಳೇ, ಮಾರ್ಥಳೇ, ಅನೇಕ ಕಾರ್ಯಗಳ ನಿಮಿತ್ತ ಚಿಂತೆ ತೊಂದರೆ ಪಡುತ್ತೀ; ಆದರೆ ಬೇಕಾದದ್ದು ಒಂದೇ! ಮರಿಯಳು ಒಳ್ಳೇ ಪಾಲನ್ನು ಆದುಕೊಂಡಿದ್ದಾಳೆ; ಅದು ಅವಳಿಂದ ತೆಗೆಯಲ್ಪಡದು.

ಇದಲ್ಲದೆ ಆತನು ಒಂದು ಸ್ಥಳದಲ್ಲಿ ಪ್ರಾರ್ಥನೆ ಮಾಡುತ್ತಿರಲಾಗಿ ಆದದ್ದೇನಂದರೆ,—ಆತನು ಮುಗಿಸಿದಾಗ, ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ,—ಕರ್ತನೇ, ಪ್ರಾರ್ಥನೆ ಮಾಡ ನಮಗೆ ಬೋಧಿಸು! ಅಂದಾಗ, ಆತನು ಅವರಿಗೆ ಹೇಳಿದ್ದೇನಂದರೆ,—ನೀವು ಪ್ರಾರ್ಥನೆ ಮಾಡುವಾಗ, ಪರಲೋಕದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪರಿಶುದ್ಧವಾಗಲಿ; ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ; ಅನುದಿನದ ನಮ್ಮ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು; ನಾವು ನಮ್ಮ ಸಾಲಗಾರರಿಗೆ ಬಿಡುವ ಪ್ರಕಾರ, ನಮ್ಮ ಸಾಲಗಳನ್ನು ನಮಗೆ ಬಿಡು; ನಮ್ಮನ್ನು ಶೋಧನೆಯಲ್ಲಿ ಸೇರಿಸದೆ, ಕೇಡಿನೊಳಗಿಂದ ನಮ್ಮನ್ನು ತಪ್ಪಿಸು; ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯೆಂದೆಂದಿಗೂ ನಿನ್ನವಾಗಿವೆ; ಆಮೆನ್! ಯೆಂದು ಹೇಳಿರಿ. ನಿಮ್ಮಲ್ಲಿ ಒಬ್ಬನಿಗೆ ಸ್ನೇಹಿತನಿರಲಾಗಿ, ಮಧ್ಯರಾತ್ರೆಯಲ್ಲಿ ಅವನ ಬಳಿಗೆ ಹೋಗಿ,—ಸ್ನೇಹಿತನೇ, ನನಗೆ ಮೂರು ರೊಟ್ಟಿಗಳನ್ನು ಕಡವಾಗಿ ಕೊಡು; ಯಾಕಂದರೆ ನನ್ನ ಸ್ನೇಹಿತನು ಮಾರ್ಗಸ್ಥನಾಗಿ ನನ್ನ ಬಳಿಗೆ ಬಂದಿದ್ದಾನೆ, ಮತ್ತು ಅವನ ಮುಂದೆ ಇಡುವದಕ್ಕೆ ನನಗೆ ಯೇನೂ ಇಲ್ಲಾ, ಯೆಂದು ಅವನಿಗೆ ಹೇಳಿದರೆ, ಅವನು ಒಳಗಿನಿಂದ ಉತ್ತರ ಕೊಟ್ಟು,—ನನ್ನನ್ನು ತೊಂದರೆ ಪಡಿಸ ಬೇಡ! ಈಗ ಬಾಗಲು ಮುಚ್ಚಿ ಅದೆ; ಮತ್ತು ನನ್ನ ಮಕ್ಕಳು ನನ್ನ ಸಂಗಡ ಮಲಗಿಕೊಂಡಿದ್ದಾರೆ; ನಾನು ಯೆದ್ದು ನಿನಗೆ ಕೊಡಲಾರೆನು, ಯೆಂದು ಹೇಳ್ಯಾನೇ? ಅವನು ತನಗೆ ಸ್ನೇಹಿತನಾಗಿರುವದರಿಂದ ಯೆದ್ದು, ಅವನಿಗೆ ಕೊಡದೆ ಇದ್ದರೂ, ಅವನ ನಿರ್ಲಜ್ಜೆಯ ನಿಮಿತ್ತವಾದರೂ ಯೆದ್ದು, ಅವನಿಗೆ ಬೇಕಾದಷ್ಟು ಕೊಡುವನೆಂದು ನಿಮಗೆ ಹೇಳುತ್ತೇನೆ. ಮತ್ತು ನಾನು ನಿಮಗೆ ಹೇಳುವದೇನಂದರೆ,—ಬೇಡಿಕೊಳ್ಳಿರಿ, ಆಗ ನಿ

ಮಗೆ ಕೊಡಲ್ಪಡುವದು; ಹುಡುಕಿರಿ, ಆಗ ನಿಮಗೆ ಸಿಕ್ಕುವದು; ತಟ್ಟಿರಿ, ಆಗ ನಿಮಗೆ ತೆರಿಯಲ್ಪಡುವದು; ಯಾಕಂದರೆ ಬೇಡಿಕೊಳ್ಳುವ ಪ್ರತಿ ಮನುಷ್ಯನು ಹೊಂದುತ್ತಾನೆ; ಹುಡುಕುವವನಿಗೆ ಸಿಕ್ಕುತ್ತದೆ; ತಟ್ಟುವವನಿಗೆ ತೆರಿಯಲ್ಪಡುವದು. ಆದರೆ ನಿಮ್ಮಲ್ಲಿ ತಂದೆಯಾಗಿರುವ ಯಾವನಾದರೂ, ಮಗನು ರೊಟ್ಟಿಯನ್ನು ಬೇಡಿಕೊಂಡರೆ, ಅವನಿಗೆ ಕಲ್ಲನ್ನು ಕೊಡುವನೇ? ಇಲ್ಲವೇ ಮೀನನ್ನು ಬೇಡಿಕೊಂಡರೆ, ಮೀನಿಗೆ ಬದಲಾಗಿ ಅವನಿಗೆ ಸರ್ಪವನ್ನು ಕೊಡುವನೇ? ಇಲ್ಲವೆ ಮೊಟ್ಟೆಯನ್ನು ಕೇಳಿದರೆ, ಅವನಿಗೆ ಚೇಳನ್ನು ಕೊಡುವನೇ? ಹೀಗಾದರೆ ನೀವು ಕೆಟ್ಟವರಾಗಿದ್ದು, ನಿಮ್ಮ ಮಕ್ಕಳಿಗೆ ಒಳ್ಳೇ ದಾನಗಳನ್ನು ಕೊಡ ತಿಳಿದರೆ, ಯೆಷ್ಟು ಹೆಚ್ಚಾಗಿ ನಿಮ್ಮ ಪರಲೋಕದ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಪರಿಶುದ್ಧಾತ್ಮವನ್ನು ಕೊಡುವನು!

ಆಗ ಸಮೂಹದಲ್ಲಿ ಒಬ್ಬನು ಆತನಿಗೆ,—ಬೋಧಕನೇ, ನನ್ನ ಸಹೋದರನಿಗೆ ನನ್ನ ಸಂಗಡ ಬಾಧ್ಯತೆಯನ್ನು ಪಾಲಿಡ ಬೇಕೆಂದು ಹೇಳು! ಅಂದಾಗ, ಅವನಿಗೆ,—ಮನುಷ್ಯನೇ, ನನ್ನನ್ನು ನಿಮ್ಮ ಮೇಲೆ ನ್ಯಾಯಾಧಿಪತಿಯಾಗಿಯೂ ಹಂಚುವವನಾಗಿಯೂ ಇಟ್ಟವನ್ಯಾರು? ಅಂದನು. ಮತ್ತು ಅವರಿಗೆ ಹೇಳಿದ್ದೇನಂದರೆ,—ಲೋಭಕ್ಕೆ ನೋಡಿಕೊಂಡು ಯೆಚ್ಚರಿಕೆಯಾಗಿರಿ; ಯಾಕಂದರೆ ಅವರಿಗೆ ಇರುವ ವಸ್ತುಗಳ ಹೆಚ್ಚಿಗೆಯಲ್ಲಿ ಜನರ ಜೀವ ಇರುವದಿಲ್ಲಾ. ಮತ್ತು ಅವರಿಗೆ ಸಾಮ್ಯವನ್ನು ಹೇಳಿದನು, ಯೇನಂದರೆ,—ಐಶ್ವರ್ಯವಂತನಾದ ಒಬ್ಬ ಮನುಷ್ಯನ ಭೂಮಿಯು ಚನ್ನಾಗಿ ಫಲಿಸಿತು. ಆಗಲವನು ತನ್ನೊಳಗೆ ಹೇಳಿದ್ದು,—ನಾನೇನು ಮಾಡಲಿ? ಯಾಕಂದರೆ ನನ್ನ ಫಲಗಳನ್ನು ಕೂಡಿಸುವದಕ್ಕೆ ನನಗೆ ಸ್ಥಳವಿಲ್ಲಾ; ಇದನ್ನು ಮಾಡುತ್ತೇನೆ, ನನ್ನ ಕಣಜಗಳನ್ನು ತೆಗದು ಹಾಕಿ, ದೊಡ್ಡವುಗಳನ್ನು ಕಟ್ಟಿಸುತ್ತೇನೆ, ಮತ್ತು ಅಲ್ಲಿ ನನ್ನ ಬೆಳೆಗಳನ್ನೂ ನನ್ನ ಆಸ್ತಿಯನ್ನೂ ಯೆಲ್ಲಾ ಕೂಡಿಸುತ್ತೇನೆ; ಮತ್ತು ನನ್ನ ಆತ್ಮಕ್ಕೆ,—ಆತ್ಮವೇ! ಅನೇಕ ವರುಷಗಳಿಗೆ ನಿನಗೆ ಬಹಳ ಆಸ್ತಿ ಇಟ್ಟದೆ; ವಿಶ್ರಮಿಸಿಕೋ! ಉಣ್ಣು, ಕುಡಿ, ಆನಂದವಾಗಿರು! ಯೆಂದು ಹೇಳುವೆನು. ಆದರೆ ದೇವರು ಅವನಿಗೆ,—ಬುದ್ಧಿಹೀನನೇ! ಈ ರಾತ್ರೆ ನಿನ್ನ ಪ್ರಾಣವನ್ನು ನಿನ್ನಿಂ

ದ ಕೇಳುವರು; ಆಗ ನೀನು ಸಿದ್ಧಮಾಡಿದವುಗಳು ಯಾರಿಗೆ ಆಗುವವು? ಯೆಂದು ಹೇಳಿದನು. ತನಗೆ ದ್ರವ್ಯ ಇಟ್ಟುಕೊಂಡು, ದೇವರಲ್ಲಿ ಐಶ್ವರ್ಯವಂತನಾಗದೆ ಇರುವವನು ಹೀಗೇ. ಇದಕ್ಕೋಸ್ಕರ ನಿಮಗೆ ಹೇಳುತ್ತೇನೆ, ಯೇನು ಉಣ್ಣುವಾ? ಯೇನು ಕುಡಿಯುವಾ? ಯೇನು ಹೊದ್ದು ಕೊಳ್ಳುವಾ? ಯೆಂದು ಹುಡುಕದೆ, ಸಂಶಯ ಪಡದೆ ಇರ್ರಿ; ಯಾಕಂದರೆ ಇವುಗಳನ್ನೆಲ್ಲಾ ಲೋಕದ ಜನಾಂಗಗಳು ಹುಡುಕುತ್ತವೆ; ಆದರೆ ಅವು ನಿಮಗೆ ಬೇಕೆಂದು ನಿಮ್ಮ ತಂದೆಗೆ ತಿಳಿದದೆ. ದೇವರ ರಾಜ್ಯವನ್ನು ಹುಡುಕಿರಿ, ಆಗ ಇವೆಲ್ಲಾ ನಿಮಗೆ ಕೂಡಿಸಲ್ಪಡುವವು; ಯಾಕಂದರೆ ನಿಮ್ಮ ದ್ರವ್ಯವು ಯೆಲ್ಲಿಯೋ, ಅಲ್ಲಿ ನಿಮ್ಮ ಹೃದಯವು ಸಹಾ ಇರುವದು.

ಆ ಕಾಲದಲ್ಲಿ ಆತನ ಹತ್ತರ ಇದ್ದ ಕೆಲವರು ಗಲಿಲಾಯದವರನ್ನು ಕುರಿತು, ಪಿಲಾತನು ಅವರ ರಕ್ತವನ್ನು ಅವರ ಬಲಿಗಳ ಸಂಗಡ ಕಲಿಸಿದನೆಂದು ಹೇಳಿದರು. ಯೇಸು ಅವರಿಗೆ ಹೇಳಿದ್ದೇನಂದರೆ,—ಈ ಗಲಿಲಾಯದವರು ಇಂಥವುಗಳನ್ನು ಅನುಭವಿಸಿದ ಕಾರಣ, ಅವರು ಯೆಲ್ಲಾ ಗಲಿಲಾಯದವರಿಗಿಂತ ಪಾಪಿಷ್ಟರಾಗಿದ್ದರೆಂದು ನೆನಸುತ್ತೀರೋ? ಅಲ್ಲವೆಂದು ನಿಮಗೆ ಹೇಳುತ್ತೇನೆ. ಆದರೆ ಮಾನಸಾಂತರ ಪಡದೆ ಇದ್ದರೆ, ನೀವೆಲ್ಲರೂ ಹಾಗೆಯೇ ನಾಶವಾಗಿ ಹೋಗುವಿರಿ! ಮತ್ತು ಅವರಿಗೆ ಹೇಳಿದ ಸಾಮ್ಯವೇನಂದರೆ,—ವೊಬ್ಬನಿಗೆ ತನ್ನ ದ್ರಾಕ್ಷೇತೋಟದಲ್ಲಿ ನೆಟ್ಟ ಅಂಜೂರದ ಮರವಿತ್ತು. ಅವನು ಬಂದು, ಅದರಲ್ಲಿ ಫಲ ಹುಡುಕಿದಾಗ, ಸಿಕ್ಕಲಿಲ್ಲಾ. ಆಗ ತೋಟದವನಿಗೆ ಹೇಳಿದ್ದು,—ಇಗೋ, ಮೂರು ವರುಷದಿಂದ ನಾನು ಬಂದು, ಈ ಅಂಜೂರದ ಮರದಲ್ಲಿ ಫಲ ಹುಡುಕಿ, ಕಂಡುಕೊಳ್ಳಲಿಲ್ಲಾ; ಅದನ್ನು ಕಡಿದು ಬಿಡು; ಯಾಕೆ ಭೂಭಾರವಾಗಿದೆ? ತೋಟದವನು ಪ್ರತ್ಯುತ್ತರವಾಗಿ,—ಅಯ್ಯಾ, ನಾನು ಅದರ ಸುತ್ತಲೂ ಅಗಿದು, ಗೊಬ್ಬರ ಹಾಕುವ ಪರ್ಯಂತರ, ಈ ವರುಷಕ್ಕೂ ಅದನ್ನು ಬಿಡು; ಫಲ ಫಲಿಸಿದರೆ, ಸರಿ; ಇಲ್ಲದಿದ್ದರೆ, ಆ ಮೇಲೆ ಅದನ್ನು ಕಡಿದು ಹಾಕ ಬಹುದು, ಯೆಂದು ಹೇಳಿದನು.

೨೨. ದೊಡ್ಡ ಔತಣವು. ಕಳದು ಹೋದ ಕುರಿಯೂ ಹಣವೂ ಮಗನೂ.

(ಲೂಕ. ೧೩, ೨೨–೨೪. ೧೪, ೧–೨೪. ೧೫, ೧–೩೨.)

ತರುವಾಯ ಆತನು ಬೋಧಿಸುತ್ತಾ, ಯೆರೂಸಲೇಮಿಗೆ ಪ್ರಯಾಣ ಮಾಡುತ್ತಾ, ಪಟ್ಟಣ ಗ್ರಾಮಗಳನ್ನು ಹಾದು ಹೋದನು. ಆಗ ಒಬ್ಬನು ಆತನಿಗೆ,—ಕರ್ತನೇ ರಕ್ಷಿಸಲ್ಪಡುವವರು ಕೊಂಚ ಮಂದಿಯೋ? ಅಂದಾಗ, ಆತನು ಅವರಿಗೆ ಹೇಳಿದ್ದೇನಂದರೆ,—ಇಕ್ಕಟ್ಟಾದ ಬಾಗಲಿನಿಂದ ಪ್ರವೇಶಿಸುವದಕ್ಕೆ ಹೋರಾಡಿರಿ! ಯಾಕಂದರೆ ಅನೇಕರು ಪ್ರವೇಶಿಸ ಹುಡುಕುವರು, ಆದರೆ ಆಗದೆ ಹೋಗುವದು.

ಇದಲ್ಲದೆ ಆತನು ರೊಟ್ಟಿ ಉಣ್ಣುವದಕ್ಕೆ ಸಬ್ಬತಿನಲ್ಲಿ ಫರಿಸಾಯರ ಮುಖ್ಯಸ್ಥನಾದ ಒಬ್ಬನ ಮನೆಯಲ್ಲಿ ಪ್ರವೇಶಿಸಿದನು. ಸಂಗಡ ಕೂತುಕೊಂಡವರಲ್ಲಿ ಒಬ್ಬನು,—ದೇವರ ರಾಜ್ಯದಲ್ಲಿ ರೊಟ್ಟಿ ತಿನ್ನುವವನು ಭಾಗ್ಯವಂತನು! ಯೆಂದು ಆತನಿಗೆ ಹೇಳಿದಾಗ, ಆತನು ಅವನಿಗೆ ಹೇಳಿದ್ದೇನಂದರೆ,—ಒಬ್ಬ ಮನುಷ್ಯನು ದೊಡ್ಡ ಔತಣ ಮಾಡಿಸಿ, ಬಹು ಜನರನ್ನು ಕರಸಿ, ಔತಣದ ಹೊತ್ತಿಗೆ ಕರೆಯಲ್ಪಟ್ಟವರಿಗೆ,—ಬನ್ನಿರಿ! ಈಗಲೇ ಯೆಲ್ಲಾ ಸಿದ್ಧವಾಗಿದೆ, ಯೆಂದು ಹೇಳ ತನ್ನ ದಾಸನನ್ನು ಕಳುಹಿಸಿದಾಗ, ಅವರೆಲ್ಲರೂ ಒಂದೇ ಮನಸ್ಸಾಗಿ ಮನ್ನಿಸ ಬೇಕೆಂದು ಅನ್ನಲಾರಂಭಿಸಿದರು. ಮೊದಲನೆಯವನು ಅವನಿಗೆ,—ಹೊಲವನ್ನು ಕೊಂಡುಕೊಂಡಿದ್ದೇನೆ; ಅದನ್ನು ಹೋಗಿ ನೋಡ ಬೇಕು; ನನ್ನನ್ನು ಮನ್ನಿಸ ಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ, ಅಂದನು. ಬೇರೊಬ್ಬನು,—ನಾನು ಐದು ಜೋಡು ಯೆತ್ತುಗಳನ್ನು ಕೊಂಡುಕೊಂಡಿದ್ದೇನೆ; ಅವುಗಳನ್ನು ಪರೀಕ್ಷಿಸ ಹೋಗುತ್ತೇನೆ; ನನ್ನನ್ನು ಮನ್ನಿಸ ಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ, ಅಂದನು. ಬೇರೊಬ್ಬನು,—ಹೆಣ್ಣು ಮದುವೆ ಮಾಡಿಕೊಂಡಿದ್ದೇನೆ; ಅದಕ್ಕೋಸ್ಕರ ಬರಲಾರೆನು, ಅಂದನು. ಆ ದಾಸನು ಬಂದು, ತನ್ನ ಯಜಮಾನನಿಗೆ ಇವುಗಳನ್ನು ಹೇಳಿದಾಗ, ಇವನು ಕೋಪಿಸಿಕೊಂಡು, ತನ್ನ ದಾಸನಿಗೆ ಹೇಳಿದ್ದೇನಂದರೆ,—ಪಟ್ಟಣದ ಬೀದಿಗಳಿಗೂ ಸಂದುಗಳಿಗೂ ಬೇಗ

ಹೋಗಿ, ಬಡವರನ್ನೂ ಊನರನ್ನೂ ಕುಂಟರನ್ನೂ ಕುರುಡರನ್ನೂ ಇಲ್ಲಿಗೆ ಕರಕೊಂಡು ಬಾ! ಆ ದಾಸನು,—ಅಯ್ಯಾ, ನೀನು ಅಪ್ಪಣೆ ಕೊಟ್ಟ ಹಾಗಾಯಿತು; ಮತ್ತು ಇನ್ನೂ ಸ್ಥಳ ಉಂಟು, ಅಂದಾಗ, ಯಜಮಾನನು ದಾಸನಿಗೆ ಹೇಳಿದ್ದು,—ನೀನು ಹಾದಿಗಳಿಗೂ ಬೇಲಿಗಳಿಗೂ ಹೋಗಿ, ನನ್ನ ಮನೆ ತುಂಬುವ ಹಾಗೆ ಒಳಗೆ ಬರುವದಕ್ಕೆ ಅವರನ್ನು ಬಲವಂತ ಮಾಡು! ಯಾಕಂದರೆ ನಿನಗೆ ಹೇಳುತ್ತೇನೆ, ಕರಿಯಲ್ಪಟ್ಟ ಜನರಲ್ಲಿ ಒಬ್ಬನಾದರೂ ನನ್ನ ಔತಣವನ್ನು ರುಚಿ ನೋಡನು.

ಇದಲ್ಲದೆ ಬಹು ಸಮೂಹಗಳು ಯೇಸುವಿನ ಸಂಗಡ ಪ್ರಯಾಣ ಮಾಡಲಾಗಿ, ಆತನು ತಿರುಗಿಕೊಂಡು, ಅವರಿಗೆ ಹೇಳಿದ್ದೇನಂದರೆ,—ಒಬ್ಬನು ನನ್ನ ಬಳಿಗೆ ಬಂದು, ತನ್ನ ತಂದೆಯನ್ನೂ ತಾಯಿಯನ್ನೂ ಹೆಂಡತಿಯನ್ನೂ ಮಕ್ಕಳನ್ನೂ ಮತ್ತು ಸ್ವಂತ ಪ್ರಾಣವನ್ನು ಸಹಾ ಹಗೆ ಮಾಡದೆ ಇದ್ದರೆ, ನನ್ನ ಶಿಷ್ಯನಾಗಿರಲಾರನು. ಮತ್ತು ತನ್ನ ಶಿಲುಬೆ ಹೊತ್ತುಕೊಂಡು, ನನ್ನ ಹಿಂದೆ ಬಾರದವನು, ನನ್ನ ಶಿಷ್ಯನಾಗಿರಲಾರನು. ತನಗುಂಟಾದವುಗಳನ್ನೆಲ್ಲಾ ಯಾವನು ಬಿಟ್ಟು ಬಿಡುವದಿಲ್ಲವೋ, ಅವನು ನನ್ನ ಶಿಷ್ಯನಾಗಿರಲಾರನು. ಕೇಳ ಕಿವಿಗಳುಳ್ಳವನು ಕೇಳಲಿ!

ಇದಲ್ಲದೆ ಯೆಲ್ಲಾ ಸುಂಕದವರೂ ಪಾಪಿಷ್ಟರೂ ಆತನನ್ನು ಕೇಳುವದಕ್ಕೆ ಆತನ ಸಮೀಪಕ್ಕೆ ಬರಲಾಗಿ, ಫರಿಸಾಯರೂ ಶಾಸ್ತ್ರಿಗಳೂ,—ಇವನು ಪಾಪಿಗಳನ್ನು ಅಂಗೀಕರಿಸಿ, ಅವರ ಸಂಗಡ ಉಣ್ಣುತ್ತಾನೆ, ಯೆಂದು ಗುಣುಗುಟ್ಟಿದರು. ಆದರೆ ಯೇಸು ಅವರಿಗೆ ಹೇಳಿದ ಸಾಮ್ಯವೇನಂದರೆ,—ನಿಮ್ಮಲ್ಲಿ ಯಾವ ಮನುಷ್ಯನು ನೂರು ಕುರಿಗಳಿದ್ದು, ಅವುಗಳಲ್ಲಿ ಒಂದನ್ನು ಕಳಕೊಂಡರೆ, ತೊಂಬತ್ತೊಂಬತ್ತನ್ನು ಅರಣ್ಯದಲ್ಲಿ ಬಿಟ್ಟು, ಕಳಕೊಂಡದ್ದನ್ನು ಅದು ಸಿಕ್ಕುವ ಪರ್ಯಂತರ ಹುಡುಕದೆ ಇರುವನು? ಸಿಕ್ಕಿದ ಮೇಲೆ ಸಂತೋಷ ಪಟ್ಟು, ಅದನ್ನು ತನ್ನ ಹೆಗಲಿನ ಮೇಲೆ ಇಟ್ಟುಕೊಂಡು, ಮನೆಗೆ ಬಂದು, ಸ್ನೇಹಿತರನ್ನೂ ನೆರೆಯವರನ್ನೂ ಕೂಡಾ ಕರದು,—ನನ್ನ ಸಂಗಡ ಸಂತೋಷ ಪಡಿರಿ, ಯಾಕಂದರೆ ಕಳಕೊಂಡ ನನ್ನ ಕುರಿಯು ನನಗೆ ಸಿಕ್ಕಿತು, ಯೆಂದು ಅವರಿಗೆ ಹೇ

ಳುವನು.—ಮತ್ತು ಯಾವ ಸ್ತ್ರೀಯು ಹತ್ತು ಹಣಗಳಿದ್ದು, ಒಂದು ಹಣ ಕಳಕೊಂಡರೆ, ದೀಪ ಹಚ್ಚಿ, ಮನೆ ಗುಡಿಸಿ, ಅದು ಸಿಕ್ಕುವ ಪರ್ಯಂತರ ಜಾಗ್ರತೆಯಾಗಿ ಹುಡುಕದೆ ಇರುವಳು? ಸಿಕ್ಕಿದ ಮೇಲೆ ಗೆಳತಿಯರನ್ನೂ ನೆರೆಯವರನ್ನೂ ಕೂಡಾ ಕರದು,—ನನ್ನ ಸಂಗಡ ಸಂತೋಷ ಪಡಿರಿ, ಯಾಕಂದರೆ ನಾನು ಕಳಕೊಂಡ ಹಣವು ಸಿಕ್ಕಿತು! ಯೆಂದು ಹೇಳುವಳು. ಈ ಪ್ರಕಾರ ಮಾನಸಾಂತರ ಪಡುವ ಒಬ್ಬ ಪಾಪಿಗೋಸ್ಕರ ದೇವದೂತರ ಮುಂದೆ ಸಂತೋಷವು ಇರುವದೆಂದು ನಿಮಗೆ ಹೇಳುತ್ತೇನೆ.

ಮತ್ತು ಆತನು ಹೇಳಿದ್ದೇನಂದರೆ,—ಒಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಚಿಕ್ಕವನು ತಂದೆಗೆ,—ತಂದೆಯೇ! ಆಸ್ತಿಯಲ್ಲಿ ನನಗೆ ಬರ ತಕ್ಕ ಪಾಲನ್ನು ನನಗೆ ಕೊಡು! ಅಂದಾಗ, ಬದುಕನ್ನು ಅವರಿಗೆ ಪಾಲಿಟ್ಟನು. ಕೆಲವು ದಿನಗಳ ಮೇಲೆ ಚಿಕ್ಕ ಮಗನು ಯೆಲ್ಲಾ ಕೂಡಿಸಿಕೊಂಡು, ದೂರ ದೇಶಕ್ಕೆ ಹೊರಟು, ಅಲ್ಲಿ ದುಂದುಗಾರನಾಗಿ ಬದುಕಿ, ತನ್ನ ಆಸ್ತಿಯನ್ನು ಹಾಳು ಮಾಡಿ ಬಿಟ್ಟನು. ಅವನು ಯೆಲ್ಲಾ ವೆಚ್ಚ ಮಾಡಿದ ಮೇಲೆ, ಆ ದೇಶದಲ್ಲಿ ಘೋರವಾದ ಬರ ಉಂಟಾಗಿ, ಅವನು ಕೊರತೆ ಪಡಲಾರಂಭಿಸಿದನು. ಆಗ ಹೋಗಿ, ಆ ದೇಶಸ್ಥರಲ್ಲಿ ಒಬ್ಬನನ್ನು ಹೊಂದಿಕೊಂಡನು. ಇವನು ಅವನನ್ನು ಹಂದಿಗಳನ್ನು ಮೇಯಿಸುವದಕ್ಕೆ ತನ್ನ ಹೊಲಗಳಿಗೆ ಕಳುಹಿಸಿದನು. ಹೀಗಿರಲಾಗಿ ಹಂದಿಗಳು ತಿನ್ನುವ ಹಿಂಡಿಯಿಂದ ತನ್ನ ಹೊಟ್ಟೆ ತುಂ



ಬಿಸಿಕೊಳ್ಳ ಅಪೇಕ್ಷಿಸಿದಾಗ, ಯಾರೂ ಅವನಿಗೆ ಕೊಡಲಿಲ್ಲ. ಆಗ ತೆಪ್ಪರಿಸಿಕೊಂಡು,—ನನ್ನ ತಂದೆಯ ಹತ್ತರ ಯೆಷ್ಟೋ ಮಂದಿ ಕೂಲಿಯವರಿಗೆ ತುಂಬಾ ರೊಟ್ಟಿ ಉಂಟು; ಆದರೆ ನಾನು ಹಸಿವೆಯಿಂದ ಸಾಯುತ್ತೇನೆ; ನಾನು ಯೆದ್ದು, ನನ್ನ ತಂದೆಯ ಬಳಿಗೆ ಹೋಗಿ, ಅವನಿಗೆ,—ತಂದೆಯೇ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ; ನಾನು ಇನ್ನೂ ನಿನ್ನ ಮಗನೆಂದು ಕರೆಯಲ್ಪಡ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯವರಲ್ಲಿ ಒಬ್ಬನಂತೆ ಮಾಡು! ಅನ್ನುವೆನು, ಯೆಂದು ಹೇಳಿ, ಯೆದ್ದು, ತನ್ನ ತಂದೆಯ ಬಳಿಗೆ ಬಂದನು. ಅವನು ಇನ್ನೂ ದೂರದಲ್ಲಿರುವಾಗ, ಅವನ ತಂದೆ ಅವನನ್ನು ನೋಡಿ, ಅಂತಃಕರಣ ಪಟ್ಟು, ಓಡಿ ಬಂದು, ಅವನ ಕೊರಳಿನ ಮೇಲೆ ಬಿದ್ದು, ಅವನನ್ನು ಮುದ್ದಿಟ್ಟನು. ಆದರೆ ಮಗನು ಅವನಿಗೆ,—



ತಂದೆಯೇ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ; ನಾನು ಇನ್ನೂ ನಿನ್ನ ಮಗನೆಂದು ಕರೆಯಲ್ಪಡ ಯೋಗ್ಯನಲ್ಲ! ಅನ್ನಲು, ತಂದೆಯು ತನ್ನ ದಾಸರಿಗೆ,— ಶ್ರೇಷ್ಟವಾದ ಅಂಗಿ ತಂದು, ಅವನಿಗೆ ಹೊದ್ದಿಸಿರಿ; ಅವನ ಕೈಗೆ ಉಂಗರವನ್ನೂ, ಪಾದಗಳಿಗೆ ಕೆರಗಳನ್ನೂ ಕೊಡಿರಿ; ಮತ್ತು, ಕೊಬ್ಬಿದ ಕರುವನ್ನು ತಂದು ಕೊಯ್ಯಿರಿ; ಉಂಡು, ಆನಂದ ಪಡು

ವಾ! ಯಾಕಂದರೆ ಈ ನನ್ನ ಮಗನು ಸತ್ತವನಾಗಿದ್ದು, ತಿರಿಗಿ ಬದುಕಿದ್ದಾನೆ; ಕಳೆದು ಹೋದವನಾಗಿದ್ದು, ಸಿಕ್ಕಿದ್ದಾನೆ, ಅಂದನು. ಆಗ ಆನಂದ ಪಡಲಾರಂಭಿಸಿದರು.—ಆದರೆ ಅವನ ಹಿರೇಮಗನು ಹೊಲದಲ್ಲಿ ಇದ್ದನು. ಅವನು ಬಂದು, ಮನೆಗೆ ಸಮೀಪಿಸುವಾಗ, ಗಾನವನ್ನು ಕೇಳಿ, ಆಳುಗಳಲ್ಲಿ ಒಬ್ಬನನ್ನು ಕರದು, ಅದೇನೆಂದು ವಿಚಾರಿಸಿದನು. ಅವನು ಅವನಿಗೆ,—ನಿನ್ನ ತಮ್ಮನು ಬಂದಿದ್ದಾನೆ; ಮತ್ತು ನಿನ್ನ ತಂದೆಯು ಅವನನ್ನು ಸ್ವಸ್ಥವಾಗಿ ತಿರಿಗಿ ಹೊಂದಿದ ಕಾರಣ, ಕೊಬ್ಬಿದ ಕರುವನ್ನು ಕೊಯ್ಸಿಸಿದ್ದಾನೆ, ಅಂದನು. ಆಗಲವನು ಕೋಪಗೊಂಡು, ಒಳಗೆ ಬರಲೊಲ್ಲದೆ ಇದ್ದನು. ಆದದರಿಂದ ಅವನ ತಂದೆ ಹೊರಗೆ ಬಂದು, ಅವನನ್ನು ಬೇಡಿಕೊಂಡನು. ಆದರೆ ಅವನು ತಂದೆಗೆ,—ಇಗೋ, ಇಷ್ಟು ವರುಷ ನಿನಗೆ ದಾಸನಾಗಿದ್ದೇನೆ; ಯೆಂದಾದರೂ ನಿನ್ನ ಆಜ್ಞೆ ಮೀರಲಿಲ್ಲ; ಆದಾಗ್ಯು ನನ್ನ ಸ್ನೇಹಿತರ ಸಂಗಡ ಆನಂದ ಪಡುವದಕ್ಕೆ ನೀನು ನನಗೆ ಯೆಂದಾದರೂ ಆಡುಮರಿಯಾದರೂ ಕೊಡಲಿಲ್ಲ; ಆದರೆ ನಿನ್ನ ಬದುಕನ್ನು ತಿಂದು ಬಿಟ್ಟ, ಈ ನಿನ್ನ ಮಗನು ಬಂದಾಗ, ಅವನಿಗೋಸ್ಕರ ಕೊಬ್ಬಿದ ಕರುವನ್ನು ಕೊಯ್ಸಿಸಿದ್ದೀ, ಅಂದನು. ಆಗ ತಂದೆಯು ಅವನಿಗೆ ಹೇಳಿದ್ದು,—ಮಗನೇ, ನೀನು ಯಾವಾಗಲೂ ನನ್ನ ಸಂಗಡ ಇದ್ದೀ; ನನ್ನದ್ದೆಲ್ಲಾ ನಿನ್ನದ್ದೇ; ಆದರೆ ಆನಂದ ಸಂತೋಷ ಪಡ ಬೇಕಾಗಿತ್ತು; ಯಾಕಂದರೆ ಈ ನಿನ್ನ ತಮ್ಮನು ಸತ್ತವನಾಗಿದ್ದು, ತಿರಿಗಿ ಬದುಕಿದ್ದಾನೆ; ಕಳೆದು ಹೋದವನಾಗಿದ್ದು, ಸಿಕ್ಕಿದ್ದಾನೆ.

---

೨೩. ಐಶ್ವರ್ಯವಂತನೂ, ಬಡವನಾದ ಲಾಜರನೂ. ಹತ್ತು ಮಂದಿ ಕುಷ್ಠರೋಗಿಗಳು. ಅನ್ಯಾಯವಾದ ನ್ಯಾಯಾಧಿಪತಿಯು. ಫರಿಸಾಯನೂ ಸುಂಕದವನೂ.

(ಲೂಕ್. ೧೬, ೧–೩೧. ೧೭, ೧೧–೧೯. ೧೮, ೧–೧೪.)

ಐಶ್ವರ್ಯವನ್ನೂ ಈ ಲೋಕದ ಸಂಪತ್ತನ್ನೂ ಹ್ಯಾಗೆ ಪ್ರಯೋಗಿಸ ಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದಾಗ, ದ್ರವ್ಯಾಶೆಯುಳ್ಳ ಫರಿಸಾಯರು

ಆತನನ್ನು ಹಾಸ್ಯ ಮಾಡಿದರು. ಆಗಲಾತನು ಅವರಿಗೆ ಹೇಳಿದ್ದೇನಂದರೆ,—ರಕ್ತಾಂಬರವನ್ನೂ ನಾರುಮಡಿಯನ್ನೂ ಹೊದ್ದುಕೊಂಡು, ದಿನದಿನ ಸಂಭ್ರಮವಾಗಿ ಆನಂದ ಪಡುವ ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು; ಮತ್ತು ಅವನ ಬಾಗಲಲ್ಲಿ ಲಾಜರನೆಂಬ ಬಡವನು ಹುಣ್ಣು ತುಂಬಿದವನಾಗಿ ಬಿದ್ದು, ಐಶ್ವರ್ಯವಂತನ ಮೇಜಿನಿಂದ ಬೀಳುವ ಯೆಂಜಲಿಂದ ತೃಪ್ತಿಯಾಗುವದಕ್ಕೆ ಅಪೇಕ್ಷಿಸಿದನು; ಇದಲ್ಲದೆ ನಾಯಿಗಳು ಸಹಾ ಬಂದು, ಅವನ ಹುಣ್ಣುಗಳನ್ನು ನೆಕ್ಕಿದವು. ತರುವಾಯ ಬಡವನು ಸತ್ತು, ದೂತರಿಂ



ದ ಅಬ್ರಹಾಮನ ಯೆದೆಗೆ ಹೊಯ್ಯಲ್ಪಟ್ಟನು; ಮತ್ತು ಐಶ್ವರ್ಯವಂತನೂ ಸತ್ತು, ಹೂಣಲ್ಪಟ್ಟನು. ಆಗಲವನು ಪಾತಾಳದ ಬಾಧೆಗಳಲ್ಲಿದ್ದು, ತನ್ನ ಕಣ್ಣುಗಳನ್ನು ಯೆತ್ತಿ, ದೂರದಿಂದ ಅಬ್ರಹಾಮನನ್ನೂ ಅವನ ಯೆದೆಯಲ್ಲಿರುವ ಲಾಜರನನ್ನೂ ನೋಡಿ,—ತಂದೆಯಾದ ಅಬ್ರಹಾಮನೇ, ನನ್ನನ್ನು ಕರುಣಿಸಿ, ಲಾಜರನನ್ನು, ಅವನು ತನ್ನ ಬೆರಳಿನ ತುದಿ ನೀರಿನಲ್ಲಿ ಅದ್ದಿ, ನನ್ನ ನಾಲಿಗೆಯನ್ನು ತಣ್ಣಗೆ ಮಾಡುವ ಹಾಗೆ ಕಳುಹಿಸು; ಯಾಕಂದರೆ ಈ ಉರಿಯಲ್ಲಿ ವೇದನೆ ಪಡುತ್ತೇನೆ, ಯೆಂದು ಕೂಗಿ ಹೇಳಿದನು. ಆದರೆ ಅಬ್ರಹಾಮನು,—ಮಗನೇ, ನೀನು ಬದುಕುವಾಗ ನಿನ್ನ ಒಳ್ಳೆಯವುಗಳನ್ನು ಹೊಂದಿದಿ; ಮತ್ತು ಅದೇ ಪ್ರಕಾರ ಲಾಜರನು ಕೆಟ್ಟವುಗಳನ್ನು ಹೊಂದಿದ

ನೆಂದು ಜ್ಞಾಪಕ ಮಾಡಿಕೋ! ಆದರೆ ಈಗ ಅವನಿಗೆ ಆದರಣೆಯೂ, ನಿನಗೆ ವೇದನೆಯೂ ಆಗುತ್ತದೆ; ಅದೆಲ್ಲಾ ಆದದರ ಹೊರ್ತು ಬೇಕೆಂದಿರುವವರು ಇಲ್ಲಿಂದ ನಿಮ್ಮ ಬಳಿಗೆ ದಾಟುವದೂ, ಅಲ್ಲಿಯವರು ನಮ್ಮ ಬಳಿಗೆ ದಾಟುವದೂ ಆಗದ ಹಾಗೆ, ನಮಗೂ ನಿಮಗೂ ಮಧ್ಯದಲ್ಲಿ ದೊಡ್ಡ ಡಾಂಗರ ಸ್ಥಾಪಿಸಿ ಅದೆ, ಅಂದನು. ಆಗಲವನು,—ಹಾಗಾದರೆ, ತಂದೆಯೇ, ಅವನನ್ನು ನನ್ನ ತಂದೆಯ ಮನೆಗೆ ಕಳುಹಿಸ ಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ; ಯಾಕಂದರೆ ನನಗೆ ಐದು ಮಂದಿ ಸಹೋದರರು ಇದ್ದಾರೆ; ಅವರು ಸಹಾ ಈ ಬಾಧೆಯ ಸ್ಥಳಕ್ಕೆ ಬಾರದ ಹಾಗೆ ಅವನವರಿಗೆ ಸಾಕ್ಷಿ ಕಾಡಲಿ! ಅಂದಾಗ, ಅವನಿಗೆ ಅಬ್ರಹಾಮನು,—ಅವರಿಗೆ ಮೋಶೆಯೂ ಪ್ರವಾದಿಗಳೂ ಇದ್ದಾರೆ; ಅವರನ್ನು ಕೇಳಲಿ! ಅಂದನು. ಅವನು,—ತಂದೆಯಾದ ಅಬ್ರಹಾಮನೇ, ಹಾಗಲ್ಲಾ! ಆದರೆ ಸತ್ತವರೊಳಗಿಂದ ವೊಬ್ಬನು ಅವರ ಬಳಿಗೆ ಹೋದರೆ, ಮಾನಸಾಂತರ ಪಡುವರು, ಅಂದನು. ಆದರೆ ಅಬ್ರಹಾಮನು ಅವನಿಗೆ,—ಮೋಶೆಯನ್ನೂ ಪ್ರವಾದಿಗಳನ್ನೂ ಕೇಳದೆ ಹೋದರೆ, ಸತ್ತವರೊಳಗಿಂದ ವೊಬ್ಬನು ಯೆದ್ದರೂ, ಅವರು ನಂಬಲಿಕ್ಕಿಲ್ಲಾ, ಅಂದನು.

ಇದಲ್ಲದೆ ಆತನು ಸಮಾರ್ಯ ಗಲಿಲಾಯ ದೇಶಗಳ ಮಧ್ಯದಲ್ಲಿ ಹಾದು ಹೋದನು. ಆತನು ವೊಂದು ಗ್ರಾಮದಲ್ಲಿ ಪ್ರವೇಶಿಸುವಾಗ, ಹತ್ತು ಮಂದಿ ಕುಷ್ಠರೋಗಿಗಳು ಆತನೆದುರಿಗೆ ಬಂದು, ದೂರದಲ್ಲಿ ನಿಂತು, ಶಬ್ದವಂನೆತ್ತಿ,—ಯೇಸು, ಅಯ್ಯಾ, ನಮ್ಮನ್ನು ಕರುಣಿಸು! ಅಂದರು. ಆತನು ಅವರನ್ನು ನೋಡಿ, ಅವರಿಗೆ,—ನೀವು ಹೋಗಿ, ನಿಮ್ಮನ್ನು ಯಾಜಕರಿಗೆ ತೋರಿಸಿಕೊಳ್ಳಿರಿ! ಅಂದನು. ಅವರು ಹೋಗುತ್ತಿರುವಾಗ ಶುಚಿಯಾದರು. ಆದರೆ ಅವರಲ್ಲಿ ವೊಬ್ಬನು ಗುಣವಾದೆನೆಂದು ನೋಡಿ, ಮಹಾ ಶಬ್ದದಿಂದ ದೇವರನ್ನು ಮಹಿಮೆ ಪಡಿಸಿ, ತಿರುಗಿಕೊಂಡು, ಆತನ ಪಾದಗಳ ಬಳಿಯಲ್ಲಿ ಅಡ್ಡ ಬಿದ್ದು, ಆತನಿಗೆ ಸ್ತೋತ್ರ ಮಾಡಿದನು; ಮತ್ತು ಅವನು ಸಮಾರ್ಯನಾಗಿದ್ದನು. ಆಗ ಯೇಸು ಹೇಳಿದ್ದು,—ಹತ್ತು ಮಂದಿ ಶುಚಿಯಾಗಲಿಲ್ಲ

ವೋ? ಒಂಭತ್ತು ಮಂದಿ ಯೆಲ್ಲಿ? ಈ ಪರದೇಶಿಯೇ ಹೊರತು, ದೇವರಿಗೆ ಮಹಿಮೆ ಕೊಡುವದಕ್ಕೆ ತಿರುಗಿ ಕೊಳ್ಳುವವರು ಸಿಕ್ಕಲಿಲ್ಲವೋ? ಮತ್ತು ಅವನಿಗೆ ಹೇಳಿದ್ದು, — ಯೆದ್ದು, ಹೋಗು! ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ.

ಇದಲ್ಲದೆ ಆಯಾಸ ಪಡದೆ, ಯಾವಾಗಲೂ ಪ್ರಾರ್ಥನೆ ಮಾಡ ಬೇಕೆಂದು, ಒಂದು ಸಾಮ್ಯವನ್ನು ಶಿಷ್ಯರಿಗೆ ಹೇಳಿದನು, ಯೇನಂದರೆ, — ದೇವರಿಗೆ ಭಯ ಪಡದೆ, ಮನುಷ್ಯರನ್ನು ಲಕ್ಷ್ಯ ಮಾಡದೆ ಇರುವ ಒಬ್ಬ ನ್ಯಾಯಾಧಿಪತಿಯು ಒಂದು ಪಟ್ಣದಲ್ಲಿ ಇದ್ದನು. ಅದೇ ಪಟ್ಣದಲ್ಲಿ ಒಬ್ಬ ವಿಧವೆ ಇದ್ದಳು. ಅವಳು ಅವನ ಬಳಿಗೆ ಬಂದು, — ನನ್ನ ಯೆದುರಾಳಿಯಿಂದ ನನ-ನ್ನು ಬಿಡಿಸಿ, ನನಗೆ ನ್ಯಾಯ ತೀರಿಸು! ಅಂದಳು. ಸ್ವಲ್ಪ ಕಾಲ ಅವನಿಗೆ ಮನಸ್ಸಿರಲಿಲ್ಲ. ಆ ಮೇಲೆ ತನ್ನೊಳಗೆ ಹೇಳಿದ್ದೇನಂದರೆ, — ನಾನು ದೇವರಿಗೆ ಭಯ ಪಡದೆ, ಮನುಷ್ಯನನ್ನು ಲಕ್ಷ್ಯ ಮಾಡದೆ ಇದ್ದಾಗ್ಯೂ, ಈ ವಿಧವೆ ನನಗೆ ತೊಂದರೆ ಪಡಿಸುವ ಕಾರಣ, ಅವಳು ಕಡೇವರೆಗೂ ಬಂದು, ನನ್ನನ್ನು ಪೀಡಿಸದ ಹಾಗೆ, ಅವಳಿಗೆ ನ್ಯಾಯ ತೀರಿಸುವೆನು. ಮತ್ತು ಕರ್ತನು ಹೇಳಿದ್ದು, — ಅನ್ಯಾಯವಾದ ನ್ಯಾಯಾಧಿಪತಿ ಹೇಳುವದೇನೆಂದು ಕೇಳಿರಿ! ಹೀಗಿದ್ದರೆ, ದೇವರು ರಾತ್ರೆ ಹಗಲು ತನಗೆ ಮೊರೆ ಇಡುವ ತಾನು ಆದುಕೊಂಡವರಿಗೆ, ಅವರಿಗೆ ದೀರ್ಘಶಾಂತನಾಗಿದ್ದು ನ್ಯಾಯ ತೀರಿಸನೋ? ನಿಮಗೆ ಹೇಳುತ್ತೇನೆ, ಅವರಿಗೆ ಬೇಗ ನ್ಯಾಯ ತೀರಿಸುವನು.

ಮತ್ತು ತಾವು ನೀತಿವಂತರೆಂದು ನಿಶ್ಚಯಿಸಿಕೊಂಡು, ಮಿಕ್ಕಾದವರಿಗೆ ಅಸಡ್ಡೆ ಮಾಡುವ ಕೆಲವರಿಗೆ ಈ ಸಾಮ್ಯವನ್ನು ಹೇಳಿದನು, ಯೇನಂದರೆ, — ಇಬ್ಬರು ಮನುಷ್ಯರು ಪ್ರಾರ್ಥನೆ ಮಾಡ ದೇವಾಲಯಕ್ಕೆ ಯೇರಿ ಹೋದರು; ಒಬ್ಬನು ಫರಿಸಾಯನು, ಮತ್ತೊಬ್ಬನು ಸುಂಕದವನು. ಫರಿಸಾಯನು ನಿಂತುಕೊಂಡು, ತಂನಲ್ಲಿ ಪ್ರಾರ್ಥಿಸಿದ್ದೇನಂದರೆ, — ದೇವರೇ! ಕಳ್ಳರೂ ಅನೀತಿವಂತರೂ ವ್ಯಭಿಚಾರಿಗಳೂ ಆಗಿರುವ ಮಿಕ್ಕಾದ ಮನುಷ್ಯರ ಹಾಗೆಯೂ, ಈ ಸುಂಕದವನ ಹಾಗೆಯೂ ನಾನಲ್ಲದ ಕಾರಣ ನಿನಗೆ ಸ್ತೋತ್ರ ಮಾಡುತ್ತೇನೆ; ನಾನು

ವಾರಕ್ಕೆ ಯೆರಡು ಸಾರಿ ಉಪವಾಸ ಮಾಡುತ್ತೇನೆ; ನನ್ನ ಯೆಲ್ಲಾ ಸಂಪಾದನೆಯಲ್ಲಿ ಹತ್ತರಲ್ಲೊಂದು ಕೊಡುತ್ತೇನೆ. — ಆದರೆ ಸುಂಕದವನು ದೂರದಲ್ಲಿ ನಿಂತು, ಕಣ್ಣುಗಳನ್ನಾದರೂ ಆಕಾಶಕ್ಕೆ ಯೆತ್ತ ಮನಸ್ಸಿಲ್ಲದೆ, — ದೇವರೇ, ಪಾಪಿಯಾದ ನನ್ನನ್ನು ಕರುಣಿಸು! ಯೆಂದು ಹೇಳಿ, ತನ್ನ ಯೆದೆ ಬಡಕೊಂಡನು. ನಿಮಗೆ ಹೇಳುತ್ತೇನೆ, ಅವನಿಗಿಂತ ಇವನು ನೀತಿನಿರ್ಣಯ ಪಟ್ಟವನಾಗಿ ತನ್ನ ಮನೆಗೆ ಇಳಿದು ಹೋದನು; ಯಾಕಂದರೆ ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು; ಆದರೆ ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.

---

೨೪. ಗುಡಾರಗಳ ಹಬ್ಬವು. ವ್ಯಭಿಚಾರಿಯು. ಲೋಕದ ಬೆಳಕು. ಪಿಶಾಚನ ಮಕ್ಕಳು.

(ಯೋ. ೭, ೧—೫೨. ೮, ೧—೫೯.)

ಇದಲ್ಲದೆ ಯೆಹೂದ್ಯರ ಗುಡಾರಗಳ ಹಬ್ಬವು ಸಮೀಪವಾಗಿತ್ತು. ಆಗ ಆತನ ಸಹೋದರರು ಆತನಿಗೆ, — ನಿನ್ನ ಶಿಷ್ಯರು ಸಹ ನೀನು ಮಾಡುವ ಕ್ರಿಯೆಗಳನ್ನು ನೋಡುವ ಹಾಗೆ, ಇಲ್ಲಿಂದ ಹೊರಟು, ಯೆಹೂದಕ್ಕೆ ಹೋಗು! ಅಂದರು. ಯಾಕಂದರೆ ಆತನ ಸಹೋದರರು ಸಹ ಆತನಲ್ಲಿ ವಿಶ್ವಾಸವಿಡದೆ ಇದ್ದರು. ಯೇಸು ಅವರಿಗೆ, — ನನ್ನ ಸಮಯವು ಇನ್ನೂ ಪೂರ್ಣವಾಗದೆ ಇರುವದರಿಂದ, ನಾನು ಇನ್ನೂ ಯೇರಿ ಹೋಗುವದಿಲ್ಲಾ. ಇವುಗಳನ್ನು ಅವರಿಗೆ ಹೇಳಿ, ಗಲಿಲಾಯದಲ್ಲಿ ನಿಂತನು. ಆದರೆ ಆತನ ಸಹೋದರರು ಯೇರಿ ಹೋದ ಮೇಲೆ, ಆತನು ಸಹ ಅಂತರಂಗವಾಗಿ ಹಬ್ಬಕ್ಕೆ ಯೇರಿ ಹೋದನು. — ಹಬ್ಬದಲ್ಲಿ ಯೆಹೂದ್ಯರು, — ಆತನು ಯೆಲ್ಲಿ? ಯೆಂದು ಆತನನ್ನು ಹುಡುಕಿದರು. ಮತ್ತು ಸಮೂಹಗಳಲ್ಲಿ ಆತನ ವಿಷಯವಾಗಿ ಬಹಳ ಗುಣುಗುಟ್ಟುವಿಕೆ ಆಯಿತು. ಕೆಲವರು, — ಆತನು ಒಳ್ಳೆಯವನು! ಬೇರೆ ಕೆಲವರು, — ಅಲ್ಲಾ, ಸಮೂಹವನ್ನು ಮೋಸಗೊಳಿ

ಸುತ್ತಾನೆ, ಅಂದರು. ಆದಾಗ್ಯೂ ಯೆಹೂದ್ಯರ ಭಯದಿಂದ ಯಾರೂ ಆತನನ್ನು ಕುರಿತು ಧೈರ್ಯವಾಗಿ ಮಾತಾಡಲಿಲ್ಲ. ಆದರೆ ಹಬ್ಬದ ಮಧ್ಯದಲ್ಲಿ ಯೇಸು ದೇವಾಲಯಕ್ಕೆ ಯೇರಿ ಹೋಗಿ ಬೋಧಿಸಿದನು. ಆಗ ಯೆಹೂದ್ಯರು ಆಶ್ಚರ್ಯ ಪಡಲಾಗಿ, ಯೇಸು ಅವರಿಗೆ ಹೇಳಿದ್ದೇನಂದರೆ, — ನನ್ನ ಬೋಧನೆ ನನ್ನದಲ್ಲ, ನನ್ನನ್ನು ಕಳುಹಿಸಿದವನದಾಗಿದೆ; ಯಾರಾದರೂ ಆತನ ಚಿತ್ತವನ್ನು ಮಾಡ ಮನಸ್ಸಾಗಿದ್ದರೆ, ಅವನು, ಬೋಧನೆಯನ್ನು ಕುರಿತು ಅದು ದೇವರಿಂದದೆಯೋ, ನನ್ನಷ್ಟಕ್ಕೆ ನಾನೇ ಮಾತಾಡುತ್ತೇನೋ, ತಿಳಿಯುವನು.

ಹಬ್ಬದ ಮಹಾ ದಿನವಾದ ಕಡೇ ದಿವಸದಲ್ಲಿ ಯೇಸು ನಿಂತು ಕೂಗಿದ್ದೇನಂದರೆ, — ಯಾರಾದರೂ ದಾಹಗೊಂಡರೆ, ನನ್ನ ಬಳಿಗೆ ಬಂದು ಕುಡಿಯಲಿ! ನಂನಲ್ಲಿ ವಿಶ್ವಾಸ ಇಡುವವನು, ಅವನ ಹೊಟ್ಟೆಯಿಂದ ಜೀವವುಳ್ಳ ನೀರಿನ ನದಿಗಳು ಹರಿಯುವವು. ಇದನ್ನು ತಂನಲ್ಲಿ ವಿಶ್ವಾಸ ಇಡುವವರು ಹೊಂದಲಿರುವ ಆತ್ಮವನ್ನು ಕುರಿತು ಹೇಳಿದನು. ಸಮೂಹದಲ್ಲಿ ಅನೇಕರು ಆ ಮಾತನ್ನು ಕೇಳಿ, — ಈತನು ನಿಜವಾಗಿ ಪ್ರವಾದಿಯಾಗಿದ್ದಾನೆ, ಅಂದರು; ಬೇರೊಬ್ಬರು, — ಈತನೇ ಕ್ರಿಸ್ತನು! ಅಂದರು; ಬೇರೊಬ್ಬರು, — ಕ್ರಿಸ್ತನು ಗಲಿಲಾಯದಿಂದ ಬರುತ್ತಾನೋ? ಅಂದರು. ಹೀಗೆ ಆತನನ್ನು ಕುರಿತು ಸಮೂಹದಲ್ಲಿ ಭೇದ ಉಂಟಾಯಿತು. ಅವರಲ್ಲಿ ಕೆಲವರು ಆತನನ್ನು ಹಿಡಿಯಬೇಕೆಂದಿದ್ದರು; ಆದರೆ ಯಾರೂ ಆತನ ಮೇಲೆ ಕೈ ಹಾಕಲಿಲ್ಲ. ಆ ಮೇಲೆ ಪ್ರಧಾನಯಾಜಕರ ಬಳಿಗೆ ಊಳಿಗದವರು ಬಂದಾಗ, ಅವರು, — ನೀವು ಯಾಕೆ ಅವನನ್ನು ತರಲಿಲ್ಲ? ಅನ್ನಲು, ಊಳಿಗದವರು, — ಈ ಮನುಷ್ಯನ ಹಾಗೆ ಯೆಂದಾದರೂ ಯಾವ ಮನುಷ್ಯನಾದರೂ ಮಾತಾಡಲಿಲ್ಲ, ಯೆಂದು ಉತ್ತರ ಕೊಟ್ಟರು. ಆಗ ಫರಿಸಾಯರು ಅವರಿಗೆ ಹೇಳಿದ್ದು, — ನೀವು ಸಹಾ ಮೋಸ ಹೋದಿರೋ? ಅಧಿಪತಿಗಳಲ್ಲಿಯೂ ಫರಿಸಾಯರಲ್ಲಿಯೂ ಯಾವನಾದರೂ ಅವನಲ್ಲಿ ವಿಶ್ವಾಸಿಸಿದ್ದಾನೋ? ಆಗ ರಾತ್ರಿಯಲ್ಲಿ ಆತನ ಬಳಿಗೆ ಬಂದ, ಅವರೊಳಗೆ ಒಬ್ಬನಾದ ನಿಕೊದೇಮನು ಅವರಿಗೆ, — ನಮ್ಮ ನ್ಯಾಯ

ಪ್ರಮಾಣವು, ಮೊದಲು ಅವರನ್ನು ವಿಚಾರಿಸಿ, ಅವರು ಮಾಡುವದೇನೆಂದು ತಿಳಿಯದಿದ್ದರೆ, ಮನುಷ್ಯರಿಗೆ ನ್ಯಾಯ ತೀರಿಸುತ್ತದೋ? ಅಂದಾಗ, ಅವನಿಗೆ ಪ್ರತ್ಯುತ್ತರವಾಗಿ,—ನೀನು ಸಹಾ ಗಲಿಲಾಯದವನೋ? ಗಲಿಲಾಯದಿಂದ ಪ್ರವಾದಿಯು ಯೇಳುವದಿಲ್ಲ! ಅಂದರು. ಆಗ ವೊಬ್ಬೊಬ್ಬನು ತನ್ನ ತನ್ನ ಮನೆಗೆ ಹೋದನು. ಆದರೆ ಯೇಸು ಇಪ್ಪೇಗುಡ್ಡಕ್ಕೆ ಹೋದನು.

ಬೆಳಿಗ್ಗೆ ಆತನು ತಿರಿಗಿ ದೇವಾಲಯಕ್ಕೆ ಬಂದಾಗ, ಜನರೆಲ್ಲಾ ಆತನ ಬಳಿಗೆ ಬರಲು, ಕೂತುಕೊಂಡು, ಅವರಿಗೆ ಬೋಧಿಸಿದನು. ಆಗ ಶಾಸ್ತ್ರಿಗಳೂ ಫರಿಸಾಯರೂ ವ್ಯಭಿಚಾರದಲ್ಲಿ ಹಿಡಿಯಲ್ಪಟ್ಟ ವೊಬ್ಬ ಸ್ತ್ರೀಯನ್ನು ಆತನ ಬಳಿಗೆ ತಂದು, ಅವಳನ್ನು ಮಧ್ಯದಲ್ಲಿ ನಿಲ್ಲಿಸಿ, ಆತನಿಗೆ ಹೇಳಿದ್ದೇನಂದರೆ,—ಬೋಧಕನೇ, ಈ ಸ್ತ್ರೀಯು ವ್ಯಭಿಚಾರ ಮಾಡುತ್ತಲೇ ಹಿಡಿಯಲ್ಪಟ್ಟಳು; ಮೋಶೆಯು ನ್ಯಾಯಪ್ರಮಾಣದಲ್ಲಿ ಇಂಥವರನ್ನು ಕಲ್ಲೆಸೆಯ ಬೇಕೆಂದು ನಮಗೆ ಆಜ್ಞಾಪಿಸಿದ್ದಾನೆ; ಆದರೆ ನೀನು ಯೇನು ಹೇಳುತ್ತೀ? ಆತನ ಮೇಲೆ ತಪ್ಪು ಹಿಡಿಯ ಬೇಕೆಂದು, ಆತನನ್ನು ಶೋಧಿಸ ಇದನ್ನು ಹೇಳಿದರು. ಆದರೆ ಯೇಸು ಬಾಗಿಕೊಂಡು, ಬೆರಳಿನಿಂದ ನೆಲದ ಮೇಲೆ ಬರದನು. ಅವರು ಆತನನ್ನು ಬಿಡದೆ ಕೇಳುತ್ತಿರುವಾಗ, ಆತನು ನಿಂತುಕೊಂಡು,—ನಿಮ್ಮ ಮೇಲೆ ಪಾಪವಿಲ್ಲದವನು ಮೊದಲು ಅವಳ ಮೇಲೆ ಕಲ್ಲು ಹಾಕಲಿ! ಯೆಂದು ಅವರಿಗೆ ಹೇಳಿ, ತಿರಿಗಿ ಬಾಗಿಕೊಂಡು, ನೆಲದ ಮೇಲೆ ಬರದನು. ಆದರೆ ಕೇಳಿದವರು ಮನಸಾಕ್ಷಿಯಿಂದ ಖಂಡಿಸಲ್ಪಟ್ಟು, ಹಿರಿಯರು ಮೊದಲ್ಗೊಂಡು ಕಡೆಯವರ ವರೆಗೂ ವೊಬ್ಬೊಬ್ಬರಾಗಿ ಹೊರಗೆ ಹೋದರು. ಮತ್ತು ಯೇಸು ಮಾತ್ರ ಮಧ್ಯದಲ್ಲಿ ನಿಂತ ಸ್ತ್ರೀಯ ಸಂಗಡ ಬಿಡಲ್ಪಟ್ಟನು. ಯೇಸು ನಿಂತುಕೊಂಡು, ಸ್ತ್ರೀಯ ಹೊರತು ಯಾರನ್ನು ನೋಡದೆ, ಅವಳಿಗೆ,—ಸ್ತ್ರೀಯೇ, ನಿನ್ನ ದೂರುಗಾರರು ಯೆಲ್ಲಿ? ನಿನಗೆ ಯಾರೂ ಆಜ್ಞೆ ನಿರ್ಣಯಿಸಲಿಲ್ಲವೋ? ಅಂದನು. ಅವಳು,—ಕರ್ತನೇ, ಯಾರೂ ಇಲ್ಲ, ಅಂದಾಗ, ಯೇಸು ಅವಳಿಗೆ,—ನಾನು ಸಹಾ ನಿನಗೆ ಆಜ್ಞೆ ನಿರ್ಣಯಿಸುವದಿಲ್ಲ; ಹೋಗು, ಇನ್ನು ಮೇಲೆ ಪಾಪ ಮಾಡ ಬೇಡ! ಅಂದನು.

ತಿರಿಗಿ ಆತನು ಜನರ ಸಂಗಡ ಮಾತಾಡಿ ಹೇಳಿದ್ದೇನಂದರೆ,—ನಾನೇ ಲೋಕದ ಬೆಳಕಾಗಿದ್ಧೇನೆ; ನನ್ನನ್ನು ಹಿಂಬಾಲಿಸುವವನು ಕತ್ತಲೆಯಲ್ಲಿ ನಡಿಯದೆ, ಜೀವದ ಬೆಳಕನ್ನು ಹೊಂದಿರುವನು. ಈ ಮಾತುಗಳನ್ನು ಯೇಸು ಬೊಕ್ಕಸದ ಮನೆಯಲ್ಲಿ ಹೇಳಿದನು; ಮತ್ತು ಆತನ ಘಳಿಗೆ ಇನ್ನೂ ಬಾರದ ಕಾರಣ, ಯಾವನೂ ಆತನನ್ನು ಹಿಡಿಯಲಿಲ್ಲ. ಆದರೆ ಅನೇಕರು ಆತನಲ್ಲಿ ವಿಶ್ವಾಸವಿಟ್ಟರು. ಆಗ ಯೇಸು ತನ್ನಲ್ಲಿ ವಿಶ್ವಾಸವಿಟ್ಟ ಯೆಹೂದ್ಯರಿಗೆ ಹೇಳಿದ್ದೇನಂದರೆ,—ನೀವು ನನ್ನ ವಾಕ್ಯದಲ್ಲಿ ನೆಲೆಯಾಗಿದ್ದರೆ, ನಿಜವಾಗಿ ನನ್ನ ಶಿಷ್ಯರಾಗಿದ್ದು, ಸತ್ಯವನ್ನು ತಿಳಿದುಕೊಳ್ಳುವಿರಿ, ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು. ಅವರು ಆತನಿಗೆ ಪ್ರತ್ಯುತ್ತರವಾಗಿ,—ಅಬ್ರಹಾಮನ ಬೀಜವಾಗಿದ್ಧೇವೆ; ಯಾರಿಗೂ ಯೆಂದೂ ದಾಸರಾಗಿರಲಿಲ್ಲ, ಅಂದರು. ಅವರಿಗೆ ಯೇಸು ಹೇಳಿದ್ದು,—ನಿಶ್ಚಯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಪಾಪ ಮಾಡುವವರೆಲ್ಲರೂ ಪಾಪಕ್ಕೆ ದಾಸರಾಗಿದ್ಧಾರೆ. ನೀವು ಅಬ್ರಹಾಮನ ಮಕ್ಕಳಾಗಿದ್ದರೆ, ಅಬ್ರಹಾಮನ ಕ್ರಿಯೆಗಳನ್ನು ಮಾಡುವಿರಿ; ಆದರೆ ಈಗ ದೇವರಿಂದ ನಾನು ಕೇಳಿದ ಸತ್ಯವನ್ನು ನಿಮಗೆ ಹೇಳಿದ ಮನುಷ್ಯನಾದ ನನ್ನನ್ನು ಕೊಲ್ಲ ಹುಡುಕುತ್ತೀರಿ; ಇದನ್ನು ಅಬ್ರಹಾಮನು ಮಾಡಲಿಲ್ಲ. ಆಗಲವರು ಆತನಿಗೆ,—ನಮಗೆ ಒಬ್ಬನೇ ತಂದೆ, ದೇವರೇ, ಅಂದರು. ಯೇಸು ಅವರಿಗೆ ಹೇಳಿದ್ದು,—ದೇವರು ನಿಮ್ಮ ತಂದೆಯಾಗಿದ್ದರೆ, ನನ್ನನ್ನು ಪ್ರೀತಿ ಮಾಡುವಿರಿ; ಯಾಕಂದರೆ ನಾನು ದೇವರ ಬಳಿಯಿಂದ ಹೊರಟು ಬಂದಿದ್ಧೇನೆ. ನೀವು ನಿಮ್ಮ ತಂದೆಯಾದ ಪಿಶಾಚನಿಂದ ಉಂಟಾಗಿ, ನಿಮ್ಮ ತಂದೆಯ ಇಚ್ಛೆಗಳನ್ನು ಮಾಡ ಬೇಕೆಂದಿದ್ಧೀರಿ; ಅವನು ಆದಿಯಿಂದ ಕೊಲೆಗಾರನಾಗಿದ್ದನು; ಅವನು ಸತ್ಯದಲ್ಲಿ ನೆಲೆಯಾಗಿರಲಿಲ್ಲ, ಯಾಕಂದರೆ ಅವನಲ್ಲಿ ಸತ್ಯವು ಇಲ್ಲ; ಅವನು ಸುಳ್ಳು ಮಾತಾಡುವಾಗ, ಸ್ವಂತವಾದವುಗಳಿಂದ ಮಾತಾಡುತ್ತಾನೆ; ಯಾಕಂದರೆ ಸುಳ್ಳುಗಾರನೂ ಸುಳ್ಳಿನ ತಂದೆಯೂ ಆಗಿದ್ಧಾನೆ. ಆದರೆ ನಾನು ಸತ್ಯವನ್ನು ಹೇಳುವದರಿಂದ, ನನ್ನನ್ನು ನಂಬದೆ ಇದ್ಧೀರಿ. ನಿಮ್ಮಲ್ಲಿ ಯಾವನು ನನ್ನಲ್ಲಿ ಪಾಪವನ್ನು ತೋರಿಸುತ್ತಾನೆ? ಆ

ದರೆ ನಾನು ಸತ್ಯವನ್ನು ಹೇಳಿದರೆ, ಯಾಕೆ ನೀವು ನನ್ನನ್ನು ನಂಬುವದಿಲ್ಲ? ದೇವರಿಂದಿರುವವನು ದೇವರ ಮಾತುಗಳನ್ನು ಕೇಳುತ್ತಾನೆ; ಇದಕ್ಕೋಸ್ಕರ ನೀವು ದೇವರಿಂದಲ್ಲದ ಕಾರಣ ಕೇಳುವದಿಲ್ಲ. ನಿಶ್ಚಯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಯಾವನಾದರೂ ನನ್ನ ವಾಕ್ಯವನ್ನು ಕೈಕೊಂಡರೆ, ಅವನು ಯೆಂದೆಂದಿಗೂ ಮರಣವನ್ನು ನೋಡುವದಿಲ್ಲ. ಆಗ ಯೆಹೂದ್ಯರು ಆತನಿಗೆ ಹೇಳಿದ್ದು,—ನಿನಗೆ ದೆವ್ವ ಉಂಟೆಂದು ಈಗ ತಿಳಿದಿದ್ದೇವೆ; ಸತ್ತು ಹೋದ ನಮ್ಮ ತಂದೆಯಾದ ಅಬ್ರಹಾಮನಿಗಿಂತ ನೀನು ದೊಡ್ಡವನೋ? ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ನಿಮ್ಮ ತಂದೆಯಾದ ಅಬ್ರಹಾಮನು ನನ್ನ ದಿನವನ್ನು ನೋಡ ಬೇಕೆಂದು ಹರ್ಷಿಸಿದನು; ಅದನ್ನು ನೋಡಿ, ಸಂತೋಷವಾಗಿದ್ದನು. ಆಗ ಯೆಹೂದ್ಯರು ಆತನಿಗೆ,—ನಿನಗೆ ಇನ್ನೂ ಐವತ್ತು ವರುಷ ಇಲ್ಲ; ಅಬ್ರಹಾಮನನ್ನು ನೋಡಿದ್ದೀಯೋ? ಅಂದಾಗ, ಯೇಸು ಅವರಿಗೆ,—ನಿಶ್ಚಯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಅಬ್ರಹಾಮನು ಇರುವದಕ್ಕಿಂತ ಮುಂಚೆ ನಾನು ಇರುತ್ತೇನೆ, ಅಂದನು. ಆಗಲಾತನ ಮೇಲೆ ಯೆಸೆಯುವದಕ್ಕೆ ತಿರಿಗಿ ಕಲ್ಲನ್ನು ಯೆತ್ತಿದರು. ಆದರೆ ಯೇಸು ಅಡಗಿಕೊಂಡು, ದೇವಾಲಯದಿಂದ ಹೊರಟು, ಅವರ ಮಧ್ಯದಲ್ಲಿಂದ ಹಾದು, ಹಾಗೇ ಹೋದನು.

---

೨೫. ಹುಟ್ಟುಕುರುಡನು. ಒಳ್ಳೇ ಕುರುಬನು. ಪ್ರತಿಷ್ಠೆಯ ಹಬ್ಬವು.

(ಯೋ. ೯, ೧–೪೧. ೧೦, ೧–೪೨.)

ಹೋಗುವಾಗ, ಹುಟ್ಟುಕುರುಡನಾದ ಮನುಷ್ಯನನ್ನು ಕಂಡನು. ಆತನ ಶಿಷ್ಯರು,—ರಬ್ಬಿಯೇ, ಇವನು ಕುರುಡನಾಗಿ ಹುಟ್ಟುವ ಹಾಗೆ ಯಾರು ಪಾಪ ಮಾಡಿದರು? ಇವನೋ, ಇವನ ಹೆತ್ತವರೋ? ಯೆಂದು ಆತನನ್ನು ಕೇಳಿದಾಗ, ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ಇವನಾದರೂ ಇವನ

ಹೆತ್ತವರಾದರೂ ಅಲ್ಲಾ, ದೇವರ ಕ್ರಿಯೆಗಳು ಅವನಲ್ಲಿ ಪ್ರಕಟವಾಗುವ ಹಾಗೆ ಆಯಿತು. ಇವುಗಳನ್ನು ಹೇಳಿ, ನೆಲದ ಮೇಲೆ ಉಗುಳಿ, ಉಗುಳಿನಿಂದ ಕೆಸರು ಮಾಡಿ, ಕೆಸರನ್ನು ಕುರುಡನ ಕಣ್ಣುಗಳಿಗೆ ಹಚ್ಚಿ, ಅವನಿಗೆ,—ನೀನು ಹೋಗಿ, ಸಿಲೋವ ಕೊಳದಲ್ಲಿ ತೊಳದುಕೋ! ಅಂದನು. ಅವನು ಹೋಗಿ, ತೊಳಕೊಂಡು, ನೋಡುವವನಾಗಿ ಬಂದನು. ಆಗ ನೆರೆಯವರೂ, ಅವನನ್ನು ಕುರುಡನಾಗಿ ಮುಂಚೆ ನೋಡಿದವರೂ,—ಇವನು ಕೂತುಕೊಂಡು, ಭಿಕ್ಷೆ ಬೇಡಿದವನಲ್ಲವೋ? ಅಂದರು. ಬೇರೊಬ್ಬರು,—ಇವನೇ, ಅಂದರು; ಮತ್ತೊಬ್ಬರು,—ಅವನ ಹಾಗೆ ಇದ್ದಾನೆ, ಅಂದರು; ಅವನು,—ನಾನೇ, ಅಂದನು. ಆಗಲವರು ಅವನಿಗೆ,—ನಿನ್ನ ಕಣ್ಣುಗಳು ಹ್ಯಾಗೆ ತೆರೆಯಲ್ಪಟ್ಟವು? ಅಂದಾಗ, ಅವನು ಹೇಳಿದ್ದು,—ಯೇಸುವೆಂಬ ವೊಬ್ಬ ಮನುಷ್ಯನು ಕೆಸರು ಮಾಡಿ, ನನ್ನ ಕಣ್ಣುಗಳಿಗೆ ಹಚ್ಚಿ, ಸಿಲೋವ ಕೊಳಕ್ಕೆ ಹೋಗಿ, ತೊಳದುಕೋ! ಯೆಂದು ನನಗೆ ಹೇಳಿದನು; ನಾನು ಹೋಗಿ, ತೊಳಕೊಂಡು ನೋಡಿದೆನು. ಆಗಲವನಿಗೆ,—ಅವನು ಯೆಲ್ಲಿ? ಅನ್ನಲು, ಅವನು,—ಅರಿಯೆ, ಅಂದನು. ಆಗ ಅವನನ್ನು ಫರಿಸಾಯರ ಬಳಿಗೆ ಕರಕೊಂಡು ಹೋದರು. ಮತ್ತು ಸಬ್ಬಥಾಗಿತ್ತು. ಫರಿಸಾಯರು,—ಹ್ಯಾಗೆ ದೃಷ್ಟಿ ಹೊಂದಿದಿ? ಯೆಂದು ತಿರಿಗಿ ಅವನನ್ನು ಕೇಳಿದಾಗ, ಅವರಿಗೆ,—ನನ್ನ ಕಣ್ಣುಗಳ ಮೇಲೆ ಕೆಸರನ್ನು ಇಟ್ಟನು; ನಾನು ತೊಳಕೊಂಡು ನೋಡುತ್ತೇನೆ, ಅಂದನು. ಆಗ ಫರಿಸಾಯರಲ್ಲಿ ಕೆಲವರು,—ಈ ಮನುಷ್ಯನು ದೇವರಿಂದ ಬಂದವನಲ್ಲಾ, ಯಾಕಂದರೆ ಅವನು ಸಬ್ಬಥನ್ನು ಕೈಕೊಳ್ಳುವದಿಲ್ಲಾ, ಅಂದರು. ಬೇರೊಬ್ಬರು,—ಪಾಪಿಷ್ಟನಾದ ಮನುಷ್ಯನು ಇಂಥಾ ಲಕ್ಷಣಗಳನ್ನು ಮಾಡಲಾಗುವದು ಹ್ಯಾಗೆ? ಅಂದರು. ಹೀಗೆ ಅವರಲ್ಲಿ ಭೇದವಾಯಿತು. ತಿರಿಗಿ ಕುರುಡನಿಗೆ,—ನಿನ್ನ ಕಣ್ಣುಗಳನ್ನು ತೆರದದರಿಂದ, ನೀನು ಅವನನ್ನು ಕುರಿತು ಯೇನು ಹೇಳುತ್ತೀ? ಅಂದರು. ಪ್ರವಾದಿಯಾಗಿದ್ದಾನೆ, ಅಂದನು. ಆದರೆ ಯೆಹೂದ್ಯರು ಅವನು ಕುರುಡನಾಗಿದ್ದನೆಂದು ನಂಬದೆ,—ಕುರುಡನಾಗಿಯೇ ಹುಟ್ಟಿದನೆಂದು ನೀವು ಹೇಳುವ ನಿಮ್ಮ ಮಗನು ಇವನೋ? ಯೆಂದು ಅವನ ಹೆತ್ತವರನ್ನು ಕೇಳಿದರು.

ಅವರು ಹೇಳಿದ್ದು,—ಇವನು ನಮ್ಮ ಮಗನೆಂದು ಬಲ್ಲೆವು; ಆದರೆ ಈಗ ಹ್ಯಾಗೆ ನೋಡುತ್ತಾನೋ ಅರಿಯೆವು; ಅವನು ಪ್ರಾಯದವನು; ಅವನನ್ನು ಕೇಳಿರಿ! ಯೆಹೂದ್ಯರಿಗೆ ಭಯಪಟ್ಟದರಿಂದ, ಅವನ ಹೆತ್ತವರು ಇವುಗಳನ್ನು ಹೇಳಿದರು; ಯಾಕಂದರೆ ಯಾರಾದರೂ ಅವನು ಕ್ರಿಸ್ತನೆಂದು ಅರಿಕೆ ಮಾಡಿದರೆ, ಅವನನ್ನು ಸಭೆಯಿಂದ ಹೊರಗೆ ಹಾಕ ಬೇಕೆಂದು, ಯೆಹೂದ್ಯರು ಆಗಲೇ ನಿಷ್ಕರ್ಷೆ ಮಾಡಿಕೊಂಡಿದ್ದರು. ಆಗಲವರು ಕುರುಡನಾಗಿದ್ದ ಮನುಷ್ಯನನ್ನು ಯೆರಡನೇ ಸಾರಿ ಕರದು, ಅವನಿಗೆ,—ದೇವರಿಗೆ ಮಹಿಮೆ ಕೊಡು! ಈ ಮನುಷ್ಯನು ಪಾಪಿಯಾಗಿದ್ಧಾನೆಂದು ನಾವು ಬಲ್ಲೆವು, ಅಂದಾಗ, ಅವನು,—ಆತನು ಪಾಪಿಯೋ, ಯೇನೋ, ನಾನರಿಯೆ; ಇದೊಂದು ಬಲ್ಲೆನು; ಕುರುಡನಾಗಿದ್ದು, ಈಗ ನೋಡುತ್ತೇನೆ, ಅಂದನು. ಅವರು ತಿರಿಗಿ ಅವನಿಗೆ,—ನಿನ್ನ ಕಣ್ಣುಗಳನ್ನು ಹ್ಯಾಗೆ ತೆರದನು? ಅನ್ನಲಾಗಿ, ಅವನು,—ಮುಂಚೆ ನಿಮಗೆ ಹೇಳಿದೆನು; ನೀವು ಕೇಳಲಿಲ್ಲ; ಯಾಕೆ ತಿರಿಗಿ ಕೇಳ ಬೇಕು? ನೀವು ಸಹಾ ಆತನ ಶಿಷ್ಯರಾಗ ಬೇಕೋ? ಅಂದನು. ಆಗ ಅವನನ್ನು ನಿಂದಿಸಿ,—ನೀನು ಅವನ ಶಿಷ್ಯನು; ನಾವು ಮೋಶೆಯ ಶಿಷ್ಯರು; ಮೋಶೆಯ ಸಂಗಡ ದೇವರು ಮಾತಾಡಿದನೆಂದು ನಾವು ಬಲ್ಲೆವು; ಆದರೆ ಇವನು ಯೆಲ್ಲಿಂದ ಬಂದವನೋ ಅರಿಯೆವು, ಅಂದರು. ಆ ಮನುಷ್ಯನು ಅವರಿಗೆ ಹೇಳಿದ್ದು,—ಇದು ಮಾತ್ರ ಆಶ್ಚರ್ಯ; ಆತನು ಯೆಲ್ಲಿಂದ ಬಂದವನೋ, ನೀವು ಅರಿಯರಿ; ಆದರೆ ನನ್ನ ಕಣ್ಣುಗಳನ್ನು ತೆರದಿದ್ಧಾನೆ; ಈತನು ದೇವರಿಂದ ಬಂದವನಲ್ಲದಿದ್ದರೆ, ಯೇನೂ ಮಾಡಲಾರದೆ ಇರುವನು. ಅವರು ಅವನಿಗೆ ಪ್ರತ್ಯುತ್ತರವಾಗಿ,—ಪೂರ್ಣವಾಗಿ ಪಾಪಗಳಲ್ಲಿ ಹುಟ್ಟಿದವನಾದ ನೀನು ನಮಗೆ ಬೋಧಿಸುತ್ತೀಯೋ? ಯೆಂದು ಹೇಳಿ, ಅವನನ್ನು ಹೊರಗೆ ಹಾಕಿದರು. ಅವನನ್ನು ಹೊರಗೆ ಹಾಕಿದ್ಧಾರೆಂದು ಯೇಸು ಕೇಳಿ, ಅವನನ್ನು ಕಂಡುಕೊಂಡು, ಅವನಿಗೆ,—ದೇವರ ಮಗನಲ್ಲಿ ವಿಶ್ವಾಸವಿಡುತ್ತೀಯೋ? ಅಂದನು. ಅವನು ಪ್ರತ್ಯುತ್ತರವಾಗಿ,—ಕರ್ತನೇ, ನಾನು ಆತನಲ್ಲಿ ವಿಶ್ವಾಸವಿಡುವ ಹಾಗೆ, ಆತನು ಯಾರು? ಅಂದಾಗ, ಯೇಸು ಅವನಿಗೆ,—ಅವನ

ನ್ನು ನೋಡಿದ್ದೀ; ನಿನ್ನ ಸಂಗಡ ಮಾತಾಡುವವನು ಅವನೇ, ಅಂದನು. ಅವನು,—ಕರ್ತನೇ, ವಿಶ್ವಾಸಿಸುತ್ತೇನೆ, ಯೆಂದು ಹೇಳಿ, ಆತನಿಗೆ ನಮಸ್ಕರಿಸಿದನು.

ಆಗ ಯೇಸು ಹೇಳಿದ್ದು,—ನೋಡದವರು ನೋಡುವ ಹಾಗೆಯೂ ನೋಡುವವರು ಕುರುಡರಾಗುವ ಹಾಗೆಯೂ, ನ್ಯಾಯತೀರ್ವಿಕೆಗೋಸ್ಕರ ನಾನು ಈ ಲೋಕಕ್ಕೆ ಬಂದೆನು. ಫರಿಸಾಯರಲ್ಲಿ ಕೆಲವರು ಆತನ ಸಂಗಡ ಇದ್ದು, ಇದನ್ನು ಕೇಳಿ, ಆತನಿಗೆ,—ನಾವು ಸಹಾ ಕುರುಡರೋ? ಅನ್ನಲು, ಯೇಸು ಅವರಿಗೆ ಹೇಳಿದ್ದು,—ನೀವು ನೋಡುತ್ತೇವೆಂದು ಹೇಳುತ್ತೀರಿ; ಆದಕಾರಣ ನಿಮ್ಮ ಪಾಪವು ಇರುತ್ತದೆ. ನಿಶ್ಚಯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ,—ಕುರಿಹಟ್ಟಿಯಲ್ಲಿ ಬಾಗಲಿಂದ ಪ್ರವೇಶಿಸದೆ, ಬೇರೆ ಯೆಲ್ಲಿಂದಲಾದರೂ ಯೇರಿ ಬರುವವನ್ಯಾವನೋ, ಅವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ; ಆದರೆ ಬಾಗಲಿಂದ ಪ್ರವೇಶಿಸುವವನು ಕುರಿಗಳ ಕುರುಬನಾಗಿದ್ದಾನೆ; ಕುರಿಗಳು ಅವನ ಶಬ್ದವನ್ನು ಕೇಳುತ್ತವೆ; ಸ್ವಂತ ಕುರಿಗಳನ್ನು ಹೆಸರಿನಿಂದ ಕರದು, ಅವುಗಳನ್ನು ಹೊರಗೆ ನಡಿಸಿ, ಅವುಗಳ ಮುಂದೆ ಹೋಗುತ್ತಾನೆ. ಕುರಿಗಳು ಅವನ ಶಬ್ದವನ್ನು ತಿಳಿಯುವದರಿಂದ, ಅವನನ್ನು ಹಿಂಬಾಲಿಸುತ್ತವೆ; ಆದರೆ ಅನ್ಯನನ್ನು ಹಿಂಬಾಲಿಸದೆ, ಅವನ ಬಳಿಯಿಂದ ಓಡಿ ಹೋಗುವವು; ಯಾಕಂದರೆ ಅನ್ಯರ ಶಬ್ದವನ್ನು ಅರಿಯವು. ನಾನು ಕುರಿಗಳಿಗೆ ಬಾಗಲಾಗಿದ್ದೇನೆ; ನನ್ನಿಂದ ಯಾವನಾದರೂ ಪ್ರವೇಶಿಸಿದರೆ, ರಕ್ಷಿಸಲ್ಪಟ್ಟು, ಒಳಗೆ ಹೋಗುತ್ತಾ, ಹೊರಗೆ ಬರುತ್ತಾ, ಮೇವನ್ನು ಕಂಡುಕೊಳ್ಳುವನು. ಅವುಗಳಿಗೆ ಜೀವ ವುಂಟಾಗಿರುವ ಹಾಗೆಯೂ, ಅದು ಸಂಪೂರ್ಣವಾಗಿರುವ ಹಾಗೆಯೂ, ನಾನು ಬಂದೆನು. ನಾನು ಒಳ್ಳೇ ಕುರುಬನಾಗಿದ್ದು, ನನ್ನವುಗಳನ್ನು ತಿಳಿದುಕೊಳ್ಳುತ್ತೇನೆ; ನನ್ನವುಗಳಿಂದ ತಿಳಿಯಲ್ಪಡುತ್ತೇನೆ; ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ. ಇದಲ್ಲದೆ ಈ ಹಟ್ಟಿಗೆ ಸೇರದ ಬೇರೆ ಕುರಿಗಳು ನನಗೆ ಉಂಟು; ಅವುಗಳನ್ನು ಸಹಾ ನಾನು ತರ ಬೇಕು; ನನ್ನ ಶಬ್ದವನ್ನು ಕೇಳುವವು; ಆಗ ಒಂದೇ ಮಂದೆಯೂ ಒಬ್ಬನೇ

ಕುರುಬನೂ ಆಗುವದು.—ಆಗ ಈ ಮಾತುಗಳ ವಿಷಯವಾಗಿ ಯೆಹೂದ್ಯರಲ್ಲಿ ತಿರಿಗಿ ಭೇದವಾಯಿತು; ಅವರಲ್ಲಿ ಅನೇಕರು,—ಅವನಿಗೆ ದೆವ್ವ ಉಂಟು; ಮರುಳಾಗಿದ್ದಾನೆ; ಯಾಕೆ ಅವನನ್ನು ಕೇಳುತ್ತೀರಿ? ಅಂದರು; ಬೇರೊಬ್ಬರು,—ಇವು ದೆವ್ವ ಹಿಡಿದವನ ಮಾತುಗಳಲ್ಲಾ; ದೆವ್ವವು ಕುರುಡರ ಕಣ್ಣುಗಳನ್ನು ತೆರೆಯಲಾಗುವದೋ? ಅಂದರು.

ಯೆರೂಸಲೇಮಿನಲ್ಲಿ ಪ್ರತಿಷ್ಠೆಯ ಹಬ್ಬವಾಗಿ, ಛಳಿಕಾಲವಾಗಿತ್ತು. ಆಗ ಯೇಸು ದೇವಾಲಯದೊಳಗೆ ಸೊಲೊಮೋನನ ಮಂಟಪದಲ್ಲಿ ಸಂಚರಿಸುತ್ತಿರುವಾಗ, ಯೆಹೂದ್ಯರು ಆತನನ್ನು ಸುತ್ತಿಕೊಂಡು, ಆತನನ್ನು,—ಯೆಷ್ಟು ಮಟ್ಟಿಗೂ ನಮ್ಮ ಮನಸ್ಸನ್ನು ಸಂದೇಹ ಪಡಿಸುತ್ತೀ? ನೀನು ಕ್ರಿಸ್ತನಾಗಿದ್ದರೆ, ನಮಗೆ ಸ್ಪಷ್ಟವಾಗಿ ಹೇಳು! ಅಂದರು. ಯೇಸು ಅವರಿಗೆ ಹೇಳಿದ್ದು,—ನಿಮಗೆ ಹೇಳಿದ್ದಾಗ್ಯೂ, ನೀವು ನಂಬುವದಿಲ್ಲಾ; ನನ್ನ ತಂದೆಯ ಹೆಸರಿನಲ್ಲಿ ನಾನು ಮಾಡುವ ಕ್ರಿಯೆಗಳು, ಅವೇ ನನ್ನನ್ನು ಕುರಿತು ಸಾಕ್ಷಿ ಕೊಡುತ್ತವೆ; ಆದರೆ ನೀವು ನಂಬುವದಿಲ್ಲಾ; ಯಾಕಂದರೆ ನೀವು ನನ್ನ ಕುರಿಗಳಲ್ಲಾ. ನನ್ನ ಕುರಿಗಳು ನನ್ನ ಶಬ್ದವನ್ನು ಕೇಳುತ್ತವೆ; ನಾನು ಅವುಗಳನ್ನು ತಿಳಿಯುತ್ತೇನೆ; ಅವು ನನ್ನನ್ನು ಹಿಂಬಾಲಿಸುತ್ತವೆ, ಮತ್ತು ನಾನು ನಿತ್ಯ ಜೀವವನ್ನು ಅವುಗಳಿಗೆ ಕೊಡುತ್ತೇನೆ; ಅವು ಯೆಂದೆಂದಿಗೂ ನಾಶವಾಗವು, ಮತ್ತು ಯಾವನೂ ಅವುಗಳನ್ನು ನನ್ನ ಕೈಯೊಳಗಿಂದ ಕಸಕೊಳ್ಳನು. ಅವುಗಳನ್ನು ನನಗೆ ಕೊಟ್ಟ ನನ್ನ ತಂದೆಯು ಯೆಲ್ಲರಿಗಿಂತ ದೊಡ್ಡವನಾಗಿದ್ದಾನೆ, ಮತ್ತು ಯಾವನೂ ಅವುಗಳನ್ನು ನನ್ನ ತಂದೆಯ ಕೈಯೊಳಗಿಂದ ಕಸಕೊಳ್ಳಲಾರನು. ನಾನೂ ತಂದೆಯೂ ಒಂದೇ.—ಆಗ ಯೆಹೂದ್ಯರು ಆತನ ಮೇಲೆ ಯೆಸೆಯುವದಕ್ಕೆ ಕಲ್ಲುಗಳನ್ನು ತಿರಿಗಿ ಯೆತ್ತಿದರು. ಯೇಸು ಅವರಿಗೆ,—ನನ್ನ ತಂದೆಯ ಕಡೆಯಿಂದ ನಿಮಗೆ ಅನೇಕ ಒಳ್ಳೇ ಕ್ರಿಯೆಗಳನ್ನು ತೋರಿಸಿದ್ದೇನೆ; ಅವುಗಳಲ್ಲಿ ಯಾವ ಕ್ರಿಯೆಗೋಸ್ಕರ ನನ್ನನ್ನು ಕಲ್ಲೆಸೆಯುತ್ತೀರಿ? ಯೆಂದು ಹೇಳಿದಾಗ, ಯೆಹೂದ್ಯರು ಆತನಿಗೆ,—ದೂಷಣೆಗೋಸ್ಕರವೂ, ನೀನು ಮನುಷ್ಯನಾಗಿದ್ದು, ನಿನ್ನನ್ನು ನೀನೇ ದೇವರೆಂದು ಮಾಡಿಕೊಳ್ಳುವದಕ್ಕೋಸ್ಕರವೂ ನಿನ್ನ

ನ್ನು ಕಲ್ಲೆಸೆಯುತ್ತೇವೆ, ಅಂದರು. ಯೇಸು ಅವರಿಗೆ ಹೇಳಿದ್ದು,—ನಾನು ನನ್ನ ತಂದೆಯ ಕ್ರಿಯೆಗಳನ್ನು ಮಾಡದೆ ಇದ್ದರೆ, ನನ್ನನ್ನು ನಂಬ ಬೇಡಿರಿ; ಆದರೆ ಮಾಡಿದರೆ, ನನ್ನನ್ನು ನಂಬದೆ ಇದ್ದಾಗ್ಯೂ, ಕ್ರಿಯೆಗಳನ್ನು ನಂಬಿರಿ!—ಆಗ ತಿರಿಗಿ ಆತನನ್ನು ಹಿಡಿಯ ಹುಡುಕಿದರು; ಆದರೆ ಅವರ ಕೈಯಿಂದ ತಪ್ಪಿಸಿಕೊಂಡು, ಯೊರ್ದಾನಿನ ಆಚೆಗೆ ತಿರಿಗಿ ಹೋಗಿ, ಅಲ್ಲಿ ಇದ್ದನು. ಮತ್ತು ಅನೇಕರು ಆತನ ಬಳಿಗೆ ಬಂದು, ಆತನಲ್ಲಿ ವಿಶ್ವಾಸವಿಟ್ಟರು.

---

೨೬. ಲಾಜರನನ್ನು ಸತ್ತವರೊಳಗಿಂದ ಯೆಬ್ಬಿಸಿದ್ದು. ಮಕ್ಕಳಿಗೆ ಆಶೀರ್ವಾದ ಕೊಟ್ಟದ್ದು.

(ಯೋ. ೧೧, ೧—೫೭. ಮತ್ಥ್. ೧೯, ೧೩—೧೫. ಮಾರ್ಕ್. ೧೦, ೧೩—೧೬. ಲೂಕ್. ೧೮, ೧೫—೧೭.)

ಇದಲ್ಲದೆ ಬೆಥಾನ್ಯದವನಾದ ಲಾಜರನೆಂಬವನು ಅಸ್ವಸ್ಥವಾಗಿದ್ದನು. ಆಗ ಅವನ ಸಹೋದರಿಯರಾದ ಮರೀಯಳೂ ಮಾರ್ಥಳೂ,—ಕರ್ತನೇ, ಇಗೋ, ನೀನು ಸ್ನೇಹಿಸುವವನು ಅಸ್ವಸ್ಥವಾಗಿದ್ದಾನೆ, ಯೆಂದು ಆತನ ಬಳಿಗೆ ಹೇಳಿ ಕಳುಹಿಸಿದರು. ಯೇಸು ಕೇಳಿ,—ಈ ರೋಗವು ಮರಣಕ್ಕಲ್ಲ, ದೇವರ ಮಗನು ಅದರ ಮೂಲವಾಗಿ ಮಹಿಮೆ ಪಡುವ ಹಾಗೆ, ದೇವರ ಮಹಿಮೆಗೋಸ್ಕರವೇ ಅದೆ, ಅಂದನು. ಆದರೆ ಯೇಸು ಮಾರ್ಥಳನ್ನೂ ಅವಳ ಸಹೋದರಿಯನ್ನೂ ಲಾಜರನನ್ನೂ ಪ್ರೀತಿ ಮಾಡಿದನು. ಆಗ ಅಸ್ವಸ್ಥವಾಗಿದ್ದಾನೆಂದು ಕೇಳಿ, ತಾನು ಇದ್ದ ಸ್ಥಳದಲ್ಲಿಯೇ ಯೆರಡು ದಿವಸ ಇದ್ದನು. ಆ ಮೇಲೆ ತನ್ನ ಶಿಷ್ಯರಿಗೆ,—ಯೆಹೂದ್ಯಕ್ಕೆ ತಿರಿಗಿ ಹೋಗುವಾ, ಅಂದನು. ಶಿಷ್ಯರು ಆತನಿಗೆ,—ರಬ್ಬಿಯೇ, ಆಗಲೇ ಯೆಹೂದ್ಯರು ನಿನ್ನನ್ನು ಕಲ್ಲೆಸೆಯುವದಕ್ಕೆ ಹುಡುಕಿದರು; ಅಲ್ಲಿಗೆ ತಿರಿಗಿ ಹೋಗುತ್ತೀಯೋ? ಅಂದರು. ಯೇಸು ಅವರಿಗೆ ಹೇಳಿದ್ದೇನಂದರೆ,—ನಮ್ಮ ಸ್ನೇಹಿತನಾದ ಲಾಜರನು ನಿದ್ದೆ ಹೋಗಿದ್ದಾನೆ; ಆದರೆ ಅವನನ್ನು ನಿದ್ದೆಯಿಂದ ಯೆಬ್ಬಿಸ ಹೋಗುತ್ತೇನೆ

ಆಗಲಾತನ ಶಿಷ್ಯರು,—ಕರ್ತನೇ, ಅವನು ನಿದ್ದೆ ಮಾಡಿದರೆ, ಗುಣವಾಗುವನು, ಅಂದರು. ಆಗ ಯೇಸು ಅವರಿಗೆ ಸ್ಪಷ್ಟವಾಗಿ,—ಲಾಜರನು ಸತ್ತಿದ್ದಾನೆ; ಮತ್ತು ನಾನು ಅಲ್ಲಿ ಇರದ ಕಾರಣ ನಿಮಗೋಸ್ಕರ, ನೀವು ವಿಶ್ವಾಸಿಸುವ ಹಾಗೆ, ಸಂತೋಷ ಪಡುತ್ತೇನೆ; ಆದರೆ ಅವನ ಬಳಿಗೆ ಹೋಗುವಾ, ಅಂದನು. ಆಗ ಥೋಮನು ಜತೆಶಿಷ್ಯರಿಗೆ,—ನಾವು ಸಹಾ ಹೋಗಿ, ಆತನ ಸಂಗಡ ಸಾಯುವಾ, ಅಂದನು. ಹೀಗಿರಲಾಗಿ ಯೇಸು ಬಂದು, ಅವನು ಆಗಲೇ ನಾಲ್ಕು ದಿವಸ ಸಮಾಧಿಯಲ್ಲಿ ಇದ್ದನೆಂದು ಕಂಡನು. ಆದರೆ ಬೆಥಾನ್ಯವು ಯೆರೂಸಲೇಮಿಗೆ ಹೆಚ್ಚುಕಡಿಮೆ ಯೆರಡು ಮೈಲುಗಳಷ್ಟು ಸಮೀಪವಾಗಿತ್ತು. ಮತ್ತು ಯೆಹೂದ್ಯರಲ್ಲಿ ಅನೇಕರು ಮಾರ್ಥಳ ಮತ್ತು ಮರಿಯಳ ಬಳಿಗೆ, ಅವರನ್ನು ಆದರಿಸುವದಕ್ಕೆ ಬಂದಿದ್ದರು. ಹೀಗಿರಲಾಗಿ ಮಾರ್ಥಳು, ಯೇಸು ಬರುತ್ತಾನೆಂದು ಕೇಳಿ, ಆತನೆದುರಾಗಿ ಬಂದಳು; ಆದರೆ ಮರಿಯಳು ಮನೆಯಲ್ಲಿ ಕೂತುಕೊಂಡಿದ್ದಳು. ಆಗ ಮಾರ್ಥಳು ಯೇಸುವಿಗೆ,—ಕರ್ತನೇ, ನೀನು ಇಲ್ಲಿ ಇದ್ದರೆ, ನನ್ನ ಸಹೋದರನು ಸಾಯುತ್ತಿದ್ದಿಲ್ಲಾ; ಆದಾಗ್ಯೂ ನೀನು ದೇವರನ್ನು ಬೇಡಿಕೊಳ್ಳುವದೆಲ್ಲಾ ದೇವರು ನಿನಗೆ ಕೊಡುವನೆಂದು ಈಗಲೂ ಬಲ್ಲೆನು, ಅಂದಳು. ಯೇಸು ಅವಳಿಗೆ,—ನಿನ್ನ ಸಹೋದರನು ಯೇಳುವನು, ಅಂದನು. ಮಾರ್ಥಳು ಆತನಿಗೆ,—ಕಡೇ ದಿವಸದ ಪುನರುತ್ಥಾನದಲ್ಲಿ ಯೇಳುವನೆಂದು ಬಲ್ಲೆನು, ಅಂದಾಗ, ಯೇಸು ಅವಳಿಗೆ ಹೇಳಿದ್ದು,—ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ ಬದುಕುವನು; ಇದನ್ನು ನಂಬುತ್ತೀಯೋ? ಅವಳು ಆತನಿಗೆ,—ಹೌದು, ಕರ್ತನೇ, ನೀನು ಲೋಕಕ್ಕೆ ಬರುವವನಾದ ದೇವರ ಮಗನಾದ ಕ್ರಿಸ್ತನಾಗಿದ್ದೀ ಯೆಂದು ನಂಬುತ್ತೇನೆ, ಯೆಂದು ಹೇಳಿದಳು. ಇವುಗಳನ್ನುಹೇಳಿ, ಹೋಗಿ, ಮರಿಯಳನ್ನುಗುಪ್ತವಾಗಿ ಕರದು,—ಬೋಧಕನು ಬಂದಿದ್ದಾನೆ, ನಿನ್ನನ್ನುಕರೆಯುತ್ತಾನೆ, ಅಂದಳು. ಅವಳು ಕೇಳುತ್ತಲೇ ಬೇಗ ಯೆದ್ದು, ಆತನ ಬಳಿಗೆ ಬಂದಳು. ಆದರೆ ಯೇಸು ಇನ್ನೂ ಗ್ರಾಮಕ್ಕೆ ಬರಲಿಲ್ಲಾ. ಅವಳ ಸಂಗಡ ಮನೆಯಲ್ಲಿ ಇದ್ದ ಯೆಹೂದ್ಯರು,—

ಅವಳು ಸಮಾಧಿಗೆ ಅಲ್ಲಿ ಅಳುವದಕ್ಕೆ ಹೋಗುತ್ತಾಳೆ, ಯೆಂದು ಹೇಳಿ, ಅವಳನ್ನು ಹಿಂಬಾಲಿಸಿದರು. ಆದರೆ ಮರಿಯಳು ಯೇಸುವನ್ನು ನೋಡಿ, ಆತನ ಪಾದಗಳ ಮೇಲೆ ಬಿದ್ದು, ಆತನಿಗೆ,—ನೀನು ಇಲ್ಲಿ ಇದ್ದರೆ, ನನ್ನ ಸಹೋದರನು ಸಾಯುತ್ತಿದ್ದಿಲ್ಲಾ, ಅಂದಳು. ಯೇಸು ಅವಳೂ ಯೆಹೂದ್ಯರೂ ಅಳುವದನ್ನು ನೋಡಿದಾಗ, ಆತ್ಮದಲ್ಲಿ ನೊಂದುಕೊಂಡು, ಕಳವಳ ಪಟ್ಟು,—ಅವನನ್ನು ಯೆಲ್ಲಿ ಇಟ್ಟಿದ್ದೀರಿ? ಅಂದನು. ಅವರು ಆತನಿಗೆ,—ಕರ್ತನೇ, ಬಂದು ನೋಡು! ಅಂದರು. ಯೇಸು ಕಣ್ಣೀರಿಟ್ಟನು. ಆಗ ಯೆಹೂದ್ಯರು,—ಇಗೋ, ಅವನನ್ನು ಯೆಷ್ಟೋ ಸ್ನೇಹಿಸಿದನು! ಅಂದರು; ಮತ್ತು ಕೆಲವರು,—ಕುರುಡನ ಕಣ್ಣುಗಳನ್ನು ತೆರದ ಈತನು, ಇವನು ಸಾಯದ ಹಾಗೆ ಮಾಡಲಾರದೆ ಇದ್ದನೋ? ಅಂದರು. ಯೇಸು ತಿರಿಗಿ ತನ್ನಲ್ಲಿ ನೊಂದುಕೊಂಡು, ಸಮಾಧಿಗೆ ಬಂದನು. ಅದು ಗುಹೆಯಾಗಿತ್ತು, ಮತ್ತು ಕಲ್ಲು ಅದರ ಮೇಲೆ ಬಿದ್ದಿತ್ತು. ಯೇಸು,—ಕಲ್ಲು ಯೆತ್ತಿ ಹಾಕಿರಿ! ಅಂದನು. ಆ



ಗ ಮಾರ್ಥಳು ಆತನಿಗೆ,—ಕರ್ತನೇ, ಈಗಲೇ ನಾರುತ್ತಾನೆ; ಅವನು ಸತ್ತು ನಾಲ್ಕು ದಿವಸವಾಯಿತು, ಅಂದಳು. ಯೇಸು ಅವಳಿಗೆ,—ನೀನು ವಿಶ್ವಾಸಿಸಿದರೆ, ದೇವರ ಮಹಿಮೆಯನ್ನು ನೋಡುವಿ! ಯೆಂದು ನಿನಗೆ ನಾನು ಹೇಳಲಿಲ್ಲವೋ? ಅಂದನು. ಆಗ ಕಲ್ಲು ಯೆತ್ತಿ ಹಾಕಿದರು. ಮತ್ತು ಯೇಸು ಕಣ್ಣುಗಳನ್ನು ಮೇಲಕ್ಕೆ ಯೆತ್ತಿ,—ತಂದೆಯೇ! ನೀನು ನನ್ನನ್ನು ಕೇಳಿದದರಿಂದ, ನಿ

ನ್ನನ್ನು ಸ್ತುತಿಸುತ್ತೇನೆ; ನೀನು ಯಾವಾಗಲೂ ನನ್ನನ್ನು ಕೇಳುತ್ತೀ ಯೆಂದು ಬಲ್ಲೆನು; ಆದರೆ ಸುತ್ತಲು ನಿಂತ ಸಮೂಹದ ನಿಮಿತ್ತ, ನೀನೇ ನನ್ನನ್ನು ಕಳುಹಿಸಿದ್ದೀ ಯೆಂದು ಅವರು ನಂಬುವ ಹಾಗೆ ಹೇಳಿದೆನು, ಅಂದನು. ಇದನ್ನು ಹೇಳಿ, ಮಹಾ ಶಬ್ದದಿಂದ,—ಲಾಜರನೇ, ಹೊರಗೆ ಬಾ! ಯೆಂದು ಕೂಗಿದನು. ಆಗ ಸತ್ತವನು ಬಟ್ಟೆಯಿಂದ ಕೈಕಾಲು ಕಟ್ಟಿದವನಾಗಿ ಹೊರಗೆ ಬಂದನು; ಇದಲ್ಲದೆ ಅವನ ಮುಖಕ್ಕೆ ಕೈವಸ್ತ್ರ ಸುತ್ತಲ್ಪಟ್ಟಿತ್ತು. ಯೇಸು ಅವರಿಗೆ,—ಅವನನ್ನು ಬಿಚ್ಚಿ, ಹೋಗ ಬಿಡಿರಿ! ಅಂದನು. ಆಗ ಯೆಹೂದ್ಯರಲ್ಲಿ ಅನೇಕರು ಯೇಸು ಮಾಡಿದವುಗಳನ್ನು ನೋಡಿ, ಆತನಲ್ಲಿ ವಿಶ್ವಾಸವಿಟ್ಟರು. ಆದರೆ ಕೆಲವರು ಫರಿಸಾಯರ ಬಳಿಗೆ ಹೋಗಿ, ಯೇಸು ಮಾಡಿದವುಗಳನ್ನು ಅವರಿಗೆ ತಿಳಿಸಿದರು. ಆಗ ಪ್ರಧಾನಯಾಜಕರೂ ಫರಿಸಾಯರೂ ಮಂತ್ರಿಸಭೆಯನ್ನು ಕೂಡಿಸಿ, ಹೇಳಿದ್ದೇನಂದರೆ,—ಯೇನು ಮಾಡುವಾ? ಈ ಮನುಷ್ಯನು ಬಹಳ ಲಕ್ಷಣಗಳನ್ನು ಮಾಡುತ್ತಾನೆ; ನಾವು ಅವನನ್ನು ಹೀಗೇ ಬಿಟ್ಟರೆ, ಯೆಲ್ಲರು ಆತನಲ್ಲಿ ವಿಶ್ವಾಸವಿಡುವರು; ಮತ್ತು ರೋಮಿಯರು ಬಂದು, ನಮ್ಮ ಸ್ಥಳವನ್ನೂ ಜನಾಂಗವನ್ನೂ ತೆಗದು ಹಾಕುವರು. ಆದರೆ ಆ ವರುಷದ ಪ್ರಧಾನಯಾಜಕನಾದ ಕಾಯಫನು ಅವರಿಗೆ,—ನಿಮಗೆ ಯೇನೂ ತಿಳಿಯುವದಿಲ್ಲ; ಜನಾಂಗವೆಲ್ಲಾ ನಾಶವಾಗದ ಹಾಗೆ ವೊಬ್ಬ ಮನುಷ್ಯನು ಜನರಿಗೋಸ್ಕರ ಸಾಯುವದು ನಮಗೆ ವೊಳ್ಳೇದೆಂದು ಆಲೋಚಿಸುವದಿಲ್ಲ, ಅಂದನು. ಅಂದಿನಿಂದ ಆತನನ್ನು ಕೊಂದು ಹಾಕ ಬೇಕೆಂದು ಆಲೋಚನೆ ಮಾಡಿದರು.

ಹೀಗಿರುವದರಿಂದ ಯೇಸು ಯೆಹೂದ್ಯರೊಳಗೆ ಬಹಿರಂಗವಾಗಿ ಸಂಚರಿಸದೆ, ಅಲ್ಲಿಂದ ಅರಣ್ಯಕ್ಕೆ ಸಮೀಪವಾದ ದೇಶಕ್ಕೂ, ಎಫ್ರೇಮ್ ಯೆಂಬ ಪಟ್ಟಣಕ್ಕೂ ಹೋಗಿ, ಅಲ್ಲಿ ತನ್ನ ಶಿಷ್ಯರ ಸಂಗಡ ವಾಸ ಮಾಡಿದನು. ಆದರೆ ಯೆಹೂದ್ಯರ ಪಸ್ಕವು ಸಮೀಪವಾಗಿತ್ತು. ಮತ್ತು ಪ್ರಧಾನಯಾಜಕರೂ ಫರಿಸಾಯರೂ,—ಆತನು ಯೆಲ್ಲಿ? ಯೆಂದು ಯಾರಾದರೂ ತಿಳಿದರೆ, ಆತನನ್ನು ಹಿಡಿಯುವ ಹಾಗೆ ತಿಳಿಸ ಬೇಕೆಂದು ಅಪ್ಪಣೆ ಕೊಟ್ಟಿದ್ದರು.

ಆಗ ಆತನು ಕೈಗಳನ್ನು ಅವುಗಳ ಮೇಲೆ ಇಟ್ಟು, ಪ್ರಾರ್ಥಿಸುವ ಹಾಗೆ, ಕೂಸುಗಳನ್ನು ಆತನ ಬಳಿಗೆ ತಂದರು. ಶಿಷ್ಯರು ಅದನ್ನು ನೋಡಿ, ತಂದವರನ್ನು ಗದರಿಸಿದರು. ಆದರೆ ಯೇಸು ಅದನ್ನು ನೋಡಿ, ಅವುಗಳನ್ನು ಹತ್ತರ ಕರೆದು, ಶಿಷ್ಯರಿಗೆ ಹೇಳಿದ್ದೇನಂದರೆ,—ಕೂಸುಗಳನ್ನು ನನ್ನ ಬಳಿಗೆ ಬರ ಬಿಡಿರಿ, ಮತ್ತು ಅವುಗಳನ್ನು ತಡಿಯ ಬೇಡಿರಿ! ಯಾಕಂದರೆ ದೇವರ ರಾಜ್ಯವು ಇಂಥವರದಾಗಿದೆ; ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಕೂಸಿನ ಹಾಗೆ ದೇವರ ರಾಜ್ಯವನ್ನು ಹೊಂದದವನು ಅದರಲ್ಲಿ ಪ್ರವೇಶಿಸುವದೇ ಇಲ್ಲ. ತರುವಾಯ ಅವುಗಳನ್ನು ಅಪ್ಪಿಕೊಂಡು, ಅವುಗಳ ಮೇಲೆ ಕೈಗಳನ್ನಿಟ್ಟು, ಅವುಗಳನ್ನು ಆಶೀರ್ವದಿಸಿದನು.



೨೭. ಐಶ್ವರ್ಯವಂತ ಯೌವನಸ್ಥನು. ದ್ರಾಕ್ಷೇತೋಟದ ಆಳುಗಳು. ಮೂರನೇ ಸಾರಿ ತನ್ನ ಶ್ರಮೆಯನ್ನು ಮುಂತಿಳಿಸಿದ್ದು. ಯೆರಿಖೋವಿನ ಕುರುಡನು. ಜಖ್ಖಾಯನು.

(ಮತ್ತ್. ೧೯, ೧೬—೩೦. ೨೦, ೧—೩೪. ಮಾರ್ಕ. ೧೦, ೧೭—೫೨. ಲೂಕ. ೧೮, ೧೮—೪೩. ೧೯, ೧—೧೦.)

ಮತ್ತು ಆತನು ಪ್ರಯಾಣಕ್ಕೆ ಹೊರಡುವಾಗ, ಒಬ್ಬ ಯೌವನಸ್ಥನಾದ ಅಧಿಪತಿಯು ಮುಂದೆ ಓಡಿ, ಆತನಿಗೆ ಮೊಣಕಾಲೂರಿ,—ಒಳ್ಳೇ ಬೋಧಕನೇ,

ನಾನು ನಿತ್ಯಜೀವವನ್ನು ಬಾಧ್ಯವಾಗಿ ಹೊಂದುವ ಹಾಗೆ, ಒಳ್ಳೇದೇನು ಮಾಡ ಬೇಕು? ಯೆಂದು ಆತನನ್ನು ಕೇಳಿದನು. ಆದರೆ ಯೇಸು ಅವನಿಗೆ ಹೇಳಿದ್ದು,—ನೀನು ನನ್ನನ್ನು ಒಳ್ಳೆಯವನೆಂದು ಹೇಳುವದೇನು? ದೇವರೊಬ್ಬನೇ ಹೊರ್ತು ಒಳ್ಳೆಯವನು ಯಾವನೂ ಇಲ್ಲ. ಆದರೆ ಜೀವದಲ್ಲಿ ಪ್ರವೇಶಿಸ ಬೇಕಾದರೆ, ಕಟ್ಟಳೆಗಳನ್ನು ಕೈಕೊಳ್ಳು! ಅಂದನು. ಅವನು ಆತನಿಗೆ,—ಯಾವವುಗಳನ್ನು? ಅನ್ನಲು, ಯೇಸು,—ಕೊಲ್ಲ ಬೇಡ! ವ್ಯಭಿಚಾರ ಮಾಡ ಬೇಡ! ಕದಿಯ ಬೇಡ! ಅಪಸಾಕ್ಷಿ ಹೇಳ ಬೇಡ! ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು! ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡು! ಯೆಂಬ ಕಟ್ಟಳೆಗಳನ್ನು ಬಲ್ಲಿ. ಯೌವನಸ್ಥನು ಆತನಿಗೆ,—ಇವುಗಳನ್ನೆಲ್ಲಾ ನನ್ನ ಬಾಲ್ಯದಿಂದ ಕೈಕೊಂಡಿದ್ದೇನೆ; ನನಗೆ ಇನ್ನೂ ಯೇನು ಕಡಿಮೆ? ಅಂದಾಗ, ಯೇಸು ಅವನ ಮೇಲೆ ದೃಷ್ಟಿ ಇಟ್ಟು, ಅವನನ್ನು ಪ್ರೀತಿ ಮಾಡಿ, ಹೇಳಿದ್ದೇನಂದರೆ,—ಒಂದು ನಿನಗೆ ಕಡಿಮೆಯಾಗಿದೆ; ನೀನು ಸಂಪೂರ್ಣನಾಗ ಬೇಕಾದರೆ, ಹೋಗಿ, ನಿನ್ನದೆಲ್ಲಾ ಮಾರಿ ಬಿಟ್ಟು, ಬಡವರಿಗೆ ಕೊಡು! ಆಗ ಪರಲೋಕದಲ್ಲಿ ನಿನಗೆ ದ್ರವ್ಯವಿರುವದು; ಮತ್ತು ಬಂದು, ಶಿಲುಬೆಯನ್ನು ಯೆತ್ತಿಕೊಂಡು, ನನ್ನನ್ನು ಹಿಂಬಾಲಿಸು!—ಯೌವನಸ್ಥನು ಈ ಮಾತನ್ನು ಕೇಳಿದಾಗ, ಚಿಂತೆ ಪಟ್ಟು, ದುಃಖದಿಂದ ಹೋದನು; ಯಾಕಂದರೆ ಅವನಿಗೆ ಬಹಳ ಆಸ್ತಿ ಇತ್ತು. ಆಗ ಯೇಸು ಸುತ್ತಲೂ ನೋಡಿ, ತನ್ನ ಶಿಷ್ಯರಿಗೆ,—ಆಸ್ತಿಯಲ್ಲಿ ನಂಬಿಕೆ ಇಟ್ಟುಕೊಂಡವರು ದೇವರ ರಾಜ್ಯದಲ್ಲಿ ಪ್ರವೇಶಿಸುವದು ಯೆಷ್ಟೋ ಕಷ್ಟ! ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕಿಂತ ಒಂಟೆಯು ಸೂಜಿಯ ಬೆಜ್ಜದಲ್ಲಿ ತೂರುವದು ಸುಲಭವಾಗಿದೆ, ಅಂದನು. ಅದಕ್ಕೆ ಅವರು ಅಧಿಕವಾಗಿ ಆಶ್ಚರ್ಯ ಪಟ್ಟು,—ಹಾಗಾದರೆ ಯಾರು ರಕ್ಷಿಸಲ್ಪಡಬಹುದು? ಯೆಂದು ತಮ್ಮಲ್ಲಿ ಹೇಳಿಕೊಂಡರು. ಆದರೆ ಯೇಸು ಅವರ ಮೇಲೆ ದೃಷ್ಟಿ ಇಟ್ಟು,—ಅದು ಮನುಷ್ಯರ ಬಳಿಯಲ್ಲಿ ಅಸಾಧ್ಯ, ಆದರೆ ದೇವರ ಬಳಿಯಲ್ಲಿ ಅಲ್ಲಾ; ಯಾಕಂದರೆ ದೇವರ ಬಳಿಯಲ್ಲಿ ಯೆಲ್ಲಾ ಸಾಧ್ಯವಾಗಿದೆ, ಅಂದನು.

ಆಗ ಪೇತ್ರನು ಪ್ರತ್ಯುತ್ತರವಾಗಿ ಆತನಿಗೆ,—ಇಗೋ, ನಾವು ಯೆಲ್ಲಾ ಬಿಟ್ಟು, ನಿನ್ನನ್ನು ಹಿಂಬಾಲಿಸಿದೆವು; ನಮಗೆ ಯೇನು ಆಗುವದು? ಅನ್ನಲಾಗಿ, ಯೇಸು ಅವರಿಗೆ ಹೇಳಿದ್ದೇನಂದರೆ,—ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನನಗೋಸ್ಕರವೂ ಸುವಾರ್ತೆಗೋಸ್ಕರವೂ ಮನೆಯನ್ನಾಗಲಿ, ಸಹೋದರರನ್ನಾಗಲಿ, ಸಹೋದರಿಗಳನ್ನಾಗಲಿ, ತಂದೆಯನ್ನಾಗಲಿ, ತಾಯಿಯನ್ನಾಗಲಿ, ಹೆಂಡತಿಯನ್ನಾಗಲಿ, ಮಕ್ಕಳನ್ನಾಗಲಿ, ಹೊಲಗಳನ್ನಾಗಲಿ ಬಿಟ್ಟುಬಿಟ್ಟ ಯಾವನಾದರೂ, ಈಗ ಈ ಕಾಲದಲ್ಲಿ ನೂರಷ್ಟು ಮನೆಗಳನ್ನೂ ಸಹೋದರರನ್ನೂ ಸಹೋದರಿಗಳನ್ನೂ ತಾಯಿಗಳನ್ನೂ ಮಕ್ಕಳನ್ನೂ ಹೊಲಗಳನ್ನೂ ಹಿಂಸೆಗಳು ಸಹಿತವಾಗಿ, ಮತ್ತು ಬರುವ ಲೋಕದಲ್ಲಿ ನಿತ್ಯ ಜೀವವನ್ನೂ ಹೊಂದದೆ ಇರನು. ಆದರೆ ಮೊದಲಿನವರಾದ ಅನೇಕರು ಕಡೆಯವರಾಗಿಯೂ, ಕಡೆಯವರು ಮೊದಲಿನವರಾಗಿಯೂ ಇರುವರು. ಯಾಕಂದರೆ ಪರಲೋಕರಾಜ್ಯವು ತನ್ನ ದ್ರಾಕ್ಷೇತೋಟಕ್ಕೆ ಕೂಲೀಆಳುಗಳನ್ನು ಕರಿಯುವದಕ್ಕೆ, ಬೆಳಿಗ್ಗೆ ಹೊರಟ ಮನೇಯಜಮಾನಗೆ ಸಮಾನವಾಗಿದೆ. ಆಳುಗಳ ಸಂಗಡ ದಿವಸಕ್ಕೆ ಒಂದು ಹಣದ ಮೇರೆಗೆ ಒಡಂಬಟ್ಟು, ಅವರನ್ನು ತನ್ನ ದ್ರಾಕ್ಷೇತೋಟಕ್ಕೆ ಕಳುಹಿಸಿದನು. ಮತ್ತು ಹೆಚ್ಚುಕಡಿಮೆ ಮೂರನೇ ತಾಸಿನಲ್ಲಿ ಹೊರಟು ಹೋಗಿ, ಅಂಗಡಿ ಬೀದಿಯಲ್ಲಿ ಸುಮ್ಮನೇ ನಿಂತಿರುವ ಮತ್ತಿಬ್ಬರನ್ನು ಕಂಡು, ಅವರಿಗೆ,—ನೀವು ಸಹಾ ದ್ರಾಕ್ಷೇತೋಟಕ್ಕೆ ಹೋಗಿರಿ! ನ್ಯಾಯವಾದದ್ದನ್ನು ನಿಮಗೆ ಕೊಡುವೆನು, ಅಂದನು. ಅವರು ಹೋದರು. ಮತ್ತು ಆರನೇ ಒಂಭತ್ತನೇ ತಾಸುಗಳಲ್ಲಿ ಹೊರಟು, ಅದೇ ಪ್ರಕಾರ ಮಾಡಿದನು. ಮತ್ತು ಹೆಚ್ಚುಕಡಿಮೆ ಹನ್ನೊಂದನೇ ತಾಸಿನಲ್ಲಿ ಹೊರಟು ಹೋಗಿ, ಸುಮ್ಮನೇ ನಿಂತಿರುವ ಮತ್ತಿಬ್ಬರನ್ನು ಕಂಡು, ಅವರಿಗೆ,—ದಿನವೆಲ್ಲಾ ಇಲ್ಲಿ ಸುಮ್ಮನೇ ನಿಂತುಕೊಳ್ಳುವದೇನು? ಅಂದನು. ಅವರು ಅವನಿಗೆ,—ಯಾರೂ ನಮ್ಮನ್ನು ಕೂಲಿಗೆ ಕರಿಯಲಿಲ್ಲಾ, ಅನ್ನಲು, ಅವರಿಗೆ,—ನೀವು ಸಹಾ ದ್ರಾಕ್ಷೇತೋಟಕ್ಕೆ ಹೋಗಿರಿ! ನ್ಯಾಯವಾದದ್ದನ್ನು ಹೊಂದುವಿರಿ, ಅಂದನು. ಸಾಯಂಕಾಲವಾದಾಗ ದ್ರಾಕ್ಷೇತೋಟದ ಯಜಮಾನನು ತ


ನ್ನು ಉಗ್ರಾಣಿಕನಿಗೆ,—ಆಳುಗಳನ್ನು ಕರದು, ಕಡೆಯವರಿಂದ ಆರಂಭ ಮಾ
ಡಿ, ಮೊದಲನೇಯವರ ಮಟ್ಟಿಗೂ ಅವರಿಗೆ ಕೂಲಿ ಕೊಡು! ಅಂದನು. ಆ
ಗ ಹನ್ನೊಂದನೇ ತಾಸಿನವರು ಬಂದು, ಒಂದೊಂದು ಹೊನವನ್ನು ಹೊಂದಿ
ದರು. ಮತ್ತು ಮೊದಲಿನವರು ಬಂದು, ಹೆಚ್ಚಾಗಿ ಹೊಂದುವೆವೆಂದು ನೆ
ನಸಿದರು; ಆದರೆ ಅವರು ಸಹಾ ಒಂದೊಂದು ಹೊನವನ್ನೇ ಹೊಂದಿದ
ರು. ಹೊಂದಿದಾಗ,—ಕಡೇಯವರಾದ ಇವರು ಒಂದು ತಾಸು ಕೆಲಸ ಮಾ
ಡಿದ್ದಾರೆ; ಆದರೆ ದಿವಸದ ಭಾರವನ್ನೂ ಬಿಸಲನ್ನೂ ತಾಳಿದ ನಮಗೆ ಅವರ
ನ್ನು ಸಮಾನ ಮಾಡಿದ್ದೀ, ಯೆಂದು ಮನೇಯಜಮಾನನ ಮೇಲೆ ಗುಣಗು
ಟ್ಟಿದರು. ಅವನು ಅವರಲ್ಲಿ ಒಬ್ಬನಿಗೆ ಹೇಳಿದ್ದು,—ಸ್ನೇಹಿತನೇ, ನಾನು
ನಿನಗೆ ಅನ್ಯಾಯ ಮಾಡಲಿಲ್ಲಾ; ನೀನು ಒಂದು ಹೊನಕ್ಕೆ ನನ್ನ ಸಂಗಡ ಒ
ಡಂಬಡಲಿಲ್ಲವಾ? ನಿನ್ನದನ್ನು ತಕ್ಕೊಂಡು ಹೋಗು; ನಿನಗೆ ಕೊಟ್ಟ ಹಾಗೆ ಕ
ಡೆಯವನಾದ ಇವನಿಗೆ ಕೊಡ ನನಗೆ ಮನಸ್ಸುಂಟು; ನನ್ನವುಗಳಿಂದ ನಾನು
ಮನಸ್ಸು ಬಂದ ಹಾಗೆ ಮಾಡಬಾರದಾ? ನಾನು ಒಳ್ಳೆಯವನಾದದರಿಂದ,
ನಿನ್ನ ಕಣ್ಣು ಕೆಟ್ಟದ್ದಾಗಿದೆಯೋ?—ಈ ಪ್ರಕಾರ ಕಡೆಯವರು ಮೊದಲಿನವ
ರಾಗಿಯೂ, ಮೊದಲಿನವರು ಕಡೆಯವರಾಗಿಯೂ ಇರುವರು; ಯಾಕಂದರೆ ಕ
ರೆಯಲ್ಪಟ್ಟವರು ಅನೇಕರು, ಆಯಲ್ಪಟ್ಟವರು ಕೆಲವರು.

ಇದಲ್ಲದೆ ಅವರು ಯೆರೂಸಲೇಮಿಗೆ ಯೇರಿ ಹೋಗುವ ಮಾರ್ಗದಲ್ಲಿ
ಇದ್ದರು; ಮತ್ತು ಯೇಸು ಅವರ ಮುಂದೆ ಹೋಗುತ್ತಿದ್ದನು. ಹಿಂಗಿರಲಾಗಿ
ಅವರು ಶ್ರಮೆಗೊಂಡು, ಹಿಂಬಾಲಿಸುತ್ತಾ ಭಯಪಟ್ಟರು. ಆಗಲಾತನು
ತಿರಿಗಿ ಹನ್ನೆರಡು ಮಂದಿಯನ್ನು ಕರಕೊಂಡು, ತನಗೆ ಸಂಭವಿಸುವದಕ್ಕೆ ಇರು
ವವುಗಳನ್ನು ಅವರಿಗೆ (ಮೂರನೇ ಸಾರಿ) ಹೇಳಲಾರಂಭಿಸಿದ್ದೇನಂದರೆ,—ಇ
ಗೋ, ಯೆರೂಸಲೇಮಿಗೆ ಯೇರಿ ಹೋಗುತ್ತೇವೆ; ಮತ್ತು ಮನುಷ್ಯನ ಮಗ
ನು ಪ್ರಧಾನಯಾಜಕರಿಗೂ ಶಾಸ್ತ್ರಿಗಳಿಗೂ ಒಪ್ಪಿಸಲ್ಪಡುವನು; ಇವರು ಅ
ವನನ್ನು ಮರಣಕ್ಕೆ ನಿರ್ಣಯಿಸಿ, ಜನಾಂಗಗಳಿಗೆ ಒಪ್ಪಿಸಿ, ಹಾಸ್ಯ ಮಾಡಿ,
ಹೊಡದು, ಅವನ ಮೇಲೆ ಉಗುಳಿ, ಅವನನ್ನು ಕೊಂದು ಹಾಕುವರು;

ಮತ್ತು ಅವನು ಮೂರನೇ ದಿವಸದಲ್ಲಿ ಯೇಳುವನು. ಆದರೆ ಅವರು ಇವುಗಳಲ್ಲಿ ವೊಂದನ್ನೂ ಗ್ರಹಿಸಲಿಲ್ಲ. ಆ ಮಾತು ಅವರಿಗೆ ಮರೆಯಾಗಿದ್ದದರಿಂದ, ಹೇಳಿದ್ದನ್ನು ತಿಳಿಯದೆ ಹೋದರು.

ಆತನು ಯೆರಿಖೋವಿಗೆ ಸಮೀಪ ಬಂದಿರಲಾಗಿ, ವೊಬ್ಬ ಕುರುಡನು ಭಿಕ್ಷೆ ಬೇಡುತ್ತಾ ಮಾರ್ಗದ ಬಳಿಯಲ್ಲಿ ಕೂತುಕೊಂಡಿದ್ದನು. ಇವನು ಹಾದು ಹೋಗುವ ಸಮೂಹವನ್ನು ಕೇಳಿ,—ಅದೇನು? ಯೆಂದು ವಿಚಾರಿಸಿದನು. ಅವರು,—ನಜರೇತಿನವನಾದ ಯೇಸು ಹಾದು ಹೋಗುತ್ತಾನೆ, ಯೆಂದು ಅವನಿಗೆ ತಿಳಿಸಿದಾಗ, ಅವನು,—ದಾವೀದನ ಮಗನಾದ ಯೇಸುವೇ, ನನ್ನನ್ನು ಕರುಣಿಸು! ಯೆಂದು ಕೂಗಿದನು. ಮುಂದೆ ಹೋಗುವವರು ಸುಮ್ಮನಿರ ಬೇಕೆಂದು ಅವನನ್ನು ಗದರಿಸಿದಾಗ, ಅವನು ಬಹಳ ಹೆಚ್ಚಾಗಿ,—ದಾವೀದನ ಮಗನೇ, ನನ್ನನ್ನು ಕರುಣಿಸು! ಯೆಂದು ಕೂಗಿದನು. ಆಗ ಯೇಸು ನಿಂತು, ಅವನನ್ನು ತನ್ನ ಬಳಿಗೆ ತರಲಾಜ್ಞಾಪಿಸಿ, ಅವನು ಹತ್ತಿರ ಬಂದಾಗ,—ನಾನು ನಿನಗೆ ಯೇನು ಮಾಡ ಬೇಕು? ಯೆಂದು ಕೇಳಿದನು. ಅವನು,—ಕರ್ತನೇ, ದೃಷ್ಟಿ ಕಾಡ ಬೇಕು, ಅಂದನು. ಯೇಸು ಅವನಿಗೆ,—ದೃಷ್ಟಿ ಹೊಂದು! ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ, ಅಂದನು. ಸಂಗಡಲೇ ಅವನು ದೃಷ್ಟಿ ಹೊಂದಿ, ದೇವರನ್ನು ಮಹಿಮೆ ಪಡಿಸುತ್ತಾ, ಆತನನ್ನು ಹಿಂಬಾಲಿಸಿದನು. ಜನರೆಲ್ಲರು ಅದನ್ನು ನೋಡಿ, ದೇವರನ್ನು ಹೊಗಳಿದರು.

ಮತ್ತು ಯೆರಿಖೋವಿನಲ್ಲಿ ಪ್ರವೇಶಿಸಿ, ಹಾದು ಹೋದನು. ಆಗ ಇಗೋ, ಜಕ್ಕಾಯನೆಂಬ ವೊಬ್ಬ ಮನುಷ್ಯನಿದ್ದನು; ಅವನು ಸುಂಕದವರಲ್ಲಿ ಮುಖ್ಯಸ್ಥನೂ ಐಶ್ವರ್ಯವಂತನೂ ಆಗಿದ್ದನು. ಯೇಸುವನ್ನು, ಆತನು ಯಾರೆಂದು ನೋಡ ಹುಡುಕುತ್ತಾ, ಗಿಡ್ಡನಾಗಿದ್ದದರಿಂದ ಸಮೂಹದ ನಿಮಿತ್ತ ನೋಡಲಾರದೆ ಇದ್ದನು. ಆಗ ಮುಂದೆ ವೋಡಿ ಹೋಗಿ, ಆತನನ್ನು ನೋಡುವ ಹಾಗೆ ವೊಂದು ಆಲದ ಮರದ ಮೇಲೆ ಯೇರಿದನು; ಯಾಕಂದರೆ ಆ ಮಾರ್ಗವಾಗಿ ಆತನು ಹಾದು ಬರ ಬೇಕಾಗಿತ್ತು. ಯೇಸು ಆ ಸ್ಥಳಕ್ಕೆ ಬಂದಾಗ, ಮೇಲಕ್ಕೆ ನೋಡಿ, ಅವನನ್ನು ಕರದು, ಅವನಿಗೆ,—ಜಕ್ಕಾಯನೇ, ಬೇಗ



ಇಳಿದು ಬಾ! ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇರ ಬೇಕು, ಅಂದನು ಆಗಲವನು ಬೇಗ ಇಳಿದು, ಆತನನ್ನು ಸಂತೋಷದಿಂದ ಅಂಗೀಕರಿಸಿದನು. ಯೆಲ್ಲರೂ ಅದನ್ನು ನೋಡಿ, ಆತನು ಪಾಪಿಯಾದ ಮನುಷ್ಯನ ಬಳಿಯಲ್ಲಿ ಇರುವದಕ್ಕೆ ಸೇರಿದ್ದಾನೆಂದು ಗುಣುಗುಟ್ಟಿದರು. ಆದರೆ ಜಕ್ಕಾಯನು ಕರ್ತನಿಗೆ,— ಇಗೋ, ಕರ್ತನೇ, ನನಗುಂಟಾದವುಗಳಲ್ಲಿ ಅರೆವಾಸಿಯನ್ನು ಬಡವರಿಗೆ ಕೊಡುತ್ತೇನೆ; ಮತ್ತು ವೊಬ್ಬನ ಮೇಲೆ ದೂರು ಹೇಳಿ, ಯೇನಾದರೂ ಮೋಸ ಮಾಡಿದ್ದಾದರೆ, ನಾಲ್ಕ್ಪಟ್ಟು ಬದಲು ಕೊಡುತ್ತೇನೆ, ಅಂದನು. ಆಗ ಯೇಸು ಅವನಿಗೆ ಹೇಳಿದ್ದು,— ಈ ಹೊತ್ತು ಈ ಮನೆಗೆ ರಕ್ಷಣೆ ಉಂಟಾಯಿತು; ಇವನು ಸಹಾ ಅಬ್ರಹಾಮನ ಮಗನಲ್ಲವೋ? ಯಾಕಂದರೆ ಮನುಷ್ಯನ ಮಗನು ಕೆಟ್ಟು ಹೋದದ್ದನ್ನು ಹುಡುಕುವದಕ್ಕೂ ರಕ್ಷಿಸುವದಕ್ಕೂ ಬಂದನು.

೨೮. ಬೆಥಾನ್ಯದಲ್ಲಿ ಆದ ಔತಣವು. ಯೆರೂಸಲೇಮಿನಲ್ಲಿ ಮಾಡಿದ ಪ್ರವೇಶವು. ಅಂಜೂರ ಮರಕ್ಕೆ ಶಾಪ ಕೊಟ್ಟದ್ದು. ದೇವಾಲಯವನ್ನು ಶುದ್ಧ ಮಾಡಿದ್ದು. ವಿಶ್ವಾಸವುಳ್ಳ ಪ್ರಾರ್ಥನೆಯ ಬಲವು.

(ಮತ್ತ್. ೨೬, ೬–೧೩. ೨೧, ೧–೨೨. ಮಾರ್ಕ. ೧೪, ೩–೯. ೧೧, ೧–೨೬. ಲೂಕ್. ೧೯, ೨೯–೪೪. ಯೋ. ೧೨, ೧–೧೯.)

(ಶ್ರಮಸಪ್ತಕದ ಶನಿವಾರ.)

ಪಸ್ಕಕ್ಕೆ ಆರು ದಿವಸಕ್ಕೆ ಮುಂಚೆ ಯೇಸು ಬೆಥಾನ್ಯಕ್ಕೆ ಬಂದನು. ಅಲ್ಲಿ ಆತನು ಸತ್ತವರೊಳಗಿಂದ ಯೆಬ್ಬಿಸಿದ ಲಾಜರನು ಇದ್ದನು. ಅಲ್ಲಿ ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಆತನಿಗೆ ಔತಣ ಮಾಡಿದರು; ಮತ್ತು ಮಾರ್ಥಳು ಸೇವಿಸಿದಳು; ಆದರೆ ಲಾಜರನು ಆತನ ಸಂಗಡ ಔತಣಕ್ಕೆ ಕೂತವರಲ್ಲಿ ಒಬ್ಬನಾಗಿದ್ದನು. ಹೀಗಿರಲಾಗಿ ಮರಿಯಳು ಬೆಲೆಯುಳ್ಳ ಶುದ್ಧ ಜಟಮಾಂಸಿ ತೈಲದ ಚಂದ್ರಕಾಂತ ಭರಣಿಯನ್ನು ಹಿಡಿದುಕೊಂಡು, ಯೇಸುವಿನ ಪಾದಗಳಿಗೆ ಹಚ್ಚಿ, ತನ್ನ ಕೂದಲಿಂದ ಅವುಗಳನ್ನು ಒರಸಿದಳು; ಮತ್ತು ಆ ಚಂದ್ರಕಾಂತವನ್ನು ಒಡೆದು, ಆತನ ತಲೆಯ ಮೇಲೆ ಹೊಯಿದಳು; ಮತ್ತು ಮನೆಯು ತೈಲದ ಪರಿಮಳದಿಂದ ತುಂಬಿತು. ಆದರೆ ಕೆಲವರು ತಮ್ಮಲ್ಲಿ ಗುಣುಗುಟ್ಟಿ,— ಈ ತೈಲದ ನಷ್ಟವು ಯಾಕೆ? ಮತ್ತು ಶಿಷ್ಯರಲ್ಲಿ ಒಬ್ಬನಾದಂಥಾ, ಆತನನ್ನು ಒಪ್ಪಿಸಿ ಕೊಡುವದಕ್ಕಿದ್ದಂಥಾ, ಸೀಮೋನನ ಮಗನಾದ ಇಸ್ಕರಿಯೋತನೆಂಬ ಯೂದನು,— ಈ ತೈಲವನ್ನು ಯಾಕೆ ಮುನ್ನೂರು ಹಣಕ್ಕೆ ಮಾರಿ, ಬಡವರಿಗೆ ಕೊಡಲಿಲ್ಲಾ? ಅಂದನು. ಇದನ್ನು ಅವನು ಬಡವರಿಗೋಸ್ಕರ ಚಿಂತೆ ಪಟ್ಟದರಿಂದಲ್ಲಾ, ತಾನು ಕಳ್ಳನಾಗಿದ್ದು, ಹಣದ ಚೀಲವನ್ನಿಟ್ಟುಕೊಂಡು, ಅದರಲ್ಲಿ ಹಾಕಲ್ಪಡುವವುಗಳನ್ನು ಹಾರುವವನಾಗಿದ್ದದರಿಂದ ಹೇಳಿದನು. ಆಗ ಯೇಸು ಹೇಳಿದ್ದು,— ಅವಳನ್ನು ಬಿಡಿರಿ! ಅವಳನ್ನು ಯಾಕೆ ತೊಂದರೆ ಪಡಿಸುತ್ತೀರಿ? ಅವಳು ನನ್ನ ಮೇಲೆ ಒಳ್ಳೇ ಕ್ರಿಯೆ ಮಾಡಿದ್ದಾಳೆ; ಯಾಕಂದರೆ ಬಡವರು ನಿಮ್ಮ ಸಂಗಡ

ಯಾವಾಗಲೂ ಇದ್ದಾರೆ, ಮತ್ತು ನಿಮಗೆ ಮನಸ್ಸಿದ್ದಾಗ, ಅವರಿಗೆ ಉಪಕಾರ ಮಾಡ ಬಹುದು; ಆದರೆ ನಾನು ನಿಮ್ಮ ಸಂಗಡ ಯಾವಾಗ್ಯೂ ಇರುವದಿಲ್ಲಾ. ತನ್ನಿಂದಾಗುವದನ್ನು ಮಾಡಿದ್ದಾಳೆ; ಹೂಣುವದಕ್ಕೆ ನನ್ನ ಶರೀರವನ್ನು ಅಭಿಷೇಕಿಸ ಮುಂಕೊಂಡಿದ್ದಾಳೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಈ ಸುವಾರ್ತೆಯು ಸಮಸ್ತ ಲೋಕದಲ್ಲಿ ಯೆಲ್ಲಿ ಪ್ರಸಂಗಿಸಲ್ಪಡುವದೋ, ಅಲ್ಲಿ ಅವಳು ಮಾಡಿದ್ದು ಸಹಾ ಅವಳನ್ನು ನೆನಸುವದಕ್ಕೆ ಹೇಳಲ್ಪಡುವದು.

(ಶ್ರಮಸಪ್ತಕದ ಆದಿತ್ಯವಾರ.)

ಮಾರಣೆ ದಿವಸದಲ್ಲಿ ಯೆರೂಸಲೇಮಿಗೆ ಸಮೀಪಿಸಿ, ಇಪ್ಪೇಗುಡ್ಡಕ್ಕೆ ಬಂದಾಗ, ಯೇಸು ಇಬ್ಬರು ಶಿಷ್ಯರನ್ನು ಕಳುಹಿಸಿ, ಅವರಿಗೆ ಹೇಳಿದ್ದೇನಂದರೆ,—ನಿಮ್ಮೆದುರಾಗಿರುವ ಗ್ರಾಮಕ್ಕೆ ಹೋಗಿರಿ; ಸಂಗಡಲೇ ಕಟ್ಟಿರುವ ಕತ್ತೆಯನ್ನೂ, ಅದರ ಸಂಗಡ ಮರಿಯನ್ನೂ ಕಾಣುವಿರಿ; ಬಿಚ್ಚಿ, ನನಗೆ ತನ್ನಿರಿ; ಯಾವನಾದರೂ ನಿಮಗೆ ಯೇನಾದರೂ ಹೇಳಿದರೆ,—ಅವು ಕರ್ತನಿಗೆ ಬೇಕು, ಅನ್ನಿರಿ; ಸಂಗಡಲೇ ಅವುಗಳನ್ನು ಕಳುಹಿಸುವನು. ಆಗ ಶಿಷ್ಯರು ಹೋಗಿ, ಯೇಸು ಅವರಿಗೆ ಆಜ್ಞಾಪಿಸಿದ ಪ್ರಕಾರ ಮಾಡಿ, ಕತ್ತೆಯನ್ನೂ ಮರಿಯನ್ನೂ ತಂದು, ತಮ್ಮ ವಸ್ತ್ರಗಳನ್ನು ಅವುಗಳ ಮೇಲೆ ಇಟ್ಟರು; ಆತನು ಅವುಗಳ ಮೇಲೆ ಕೂತುಕೊಂಡನು. ಆಗ ಹಬ್ಬಕ್ಕೆ ಬಂದ ಬಹು ಸಮೂಹವು ತಮ್ಮ ವಸ್ತ್ರಗಳನ್ನು ದಾರಿಯಲ್ಲಿ ಹಾಸಿದರು; ಬೇರೊಬ್ಬರು ಖರ್ಜೂರದ ಗರಿಗಳನ್ನು ಕೊಯಿದು, ದಾರಿಯಲ್ಲಿ ಹಾಕಿದರು. ಮತ್ತು ಆತನು ಇಪ್ಪೇಗುಡ್ಡದಿಂದ ಇಳಿಯುವ ಸ್ಥಳಕ್ಕೆ ಸಮೀಪ ಬಂದಾಗ, ಮುಂದೆಯೂ ಹಿಂದೆಯೂ ಹೋಗುವ ಶಿಷ್ಯರ ಸಮೂಹಗಳು ತಾವು ನೋಡಿದ ಯೆಲ್ಲಾ ಬಲವಾದ ಕ್ರಿಯೆಗಳಿಗೆ ಸಂತೋಷ ಪಟ್ಟು, ಮಹಾ ಶಬ್ದದಿಂದ ದೇವರನ್ನು ಹೊಗಳಿ,—ದಾವೀದನ ಮಗನಿಗೆ ಹೋಶಿಯನ್ನಾ! (ಅಂದರೆ, ಕರ್ತನೇ ರಕ್ಷಿಸು!) ಕರ್ತನ ಹೆಸರಿನಲ್ಲಿ ಬರುವವನಾದ ಇಸ್ರಯೇಲಿನ ಅರಸನಿಗೆ ಆಶೀರ್ವಾದವಾಗಲಿ! ಅತ್ಯುನ್ನತವಾದವುಗಳಲ್ಲಿ ಹೋಶಿಯನ್ನಾ! ಯೆಂದು ಕೂಗಿದರು. ಆಗ ಸಮೂಹದಲ್ಲಿರುವ ಫರಿಸಾಯರಲ್ಲಿ ಕೆಲವರು,—ನಿಮಗೆ ಯೇನೂ ಅನು

ಕೂಲವಿಲ್ಲವೆಂದು ನೋಡುತ್ತೀರೋ? ಇಗೋ, ಲೋಕವು ಅವನ ಹಿಂದೆ ಹೋಯಿತು, ಯೆಂದು ತಮ್ಮಲ್ಲಿ ಅಂದುಕೊಂಡರು. ಮತ್ತು ಕೆಲವರು ಆತನಿಗೆ,—ಬೋಧಕನೇ, ನಿನ್ನ ಶಿಷ್ಯರನ್ನು ಗದರಿಸು! ಅಂದರು. ಆತನು ಪ್ರತ್ಯುತ್ತರವಾಗಿ ಅವರಿಗೆ,—ನಿಮಗೆ ಹೇಳುತ್ತೇನೆ, ಇವರು ಸುಮ್ಮನಿದ್ದರೆ, ಕಲ್ಲುಗಳು ಕೂಗುವವು, ಅಂದನು. ತರುವಾಯ ಆತನು ಸಮೀಪಿಸಿದಾಗ, ಪಟ್ಟವನ್ನು ನೋಡಿ, ಅದಕ್ಕೋಸ್ಕರ ಅತ್ತು, ಹೇಳಿದ್ದೇನಂದರೆ,—ಅಯ್ಯೋ! ನೀನು ಈ ನಿನ್ನ ದಿವಸದಲ್ಲಾದರೂ ನಿನ್ನ ಸಮಾಧಾನಕ್ಕೆ ಬೇಕಾದವುಗಳನ್ನು ತಿಳಿದಿದ್ದರೆ, ಒಳ್ಳೇದಾಗಿತ್ತು! ಆದರೆ ಈಗ ನಿನ್ನ ಕಣ್ಣುಗಳಿಗೆ ಮರೆಯಾಗಿವೆ. ನಿನ್ನ ಶತ್ರುಗಳು ಮೇರುವೆಯನ್ನು ನಿನ್ನ ಸುತ್ತ ಹಾಕಿ, ನಿನ್ನನ್ನು ಸುತ್ತಿಕೊಂಡು, ಯೆಲ್ಲಾ ಕಡೆಯಲ್ಲಿ ನಿನ್ನನ್ನು ಇರಿಕಿಸಿ, ನಿನ್ನನ್ನೂ ನಿಂನಲ್ಲಿರುವ ನಿನ್ನ ಮಕ್ಕಳನ್ನೂ ನೆಲಸಮ ಮಾಡಿ, ನಿಂನಲ್ಲಿ ಕಲ್ಲಿನ ಮೇಲೆ ಕಲ್ಲು ಬಿಡದ ದಿನಗಳು ನಿನ್ನ ಮೇಲೆ ಬರುವವು; ಯಾಕಂದರೆ ನಿನ್ನ ದರ್ಶನದ ಸಮಯವನ್ನು ನೀನು ತಿಳುಕೊಳ್ಳಲಿಲ್ಲ.—ಮತ್ತು ಆತನು ಯೆರೂಸಲೇಮನ್ನು ಪ್ರವೇಶಿಸಿದಾಗ, ಇವನ್ಯಾರೆಂದು ಹೇಳಿ, ಪಟ್ಟವೆಲ್ಲಾ ಕದಲಿತು. ಆಗ ಸಮೂಹಗಳು,—ಈತನು ಗಲಿಲಾಯದ ನಜರೇತಿನವನಾದ ಪ್ರವಾದಿಯಾದ ಯೇಸು, ಅಂದರು. ಮತ್ತು ಯೇಸು ದೇವಾಲಯದಲ್ಲಿ ಪ್ರವೇಶಿಸಿ, ಯೆಲ್ಲವುಗಳನ್ನು ಸುತ್ತು ನೋಡಿಕೊಂಡು, ಆಗ ಸಾಯಂಕಾಲವಾದದರಿಂದ ಹನ್ನೆರಡು ಮಂದಿಯ ಸಂಗಡ ಬೆಥಾನ್ಯಕ್ಕೆ ಹೊರಟು ಹೋದನು.

(ಶ್ರಮಸಪ್ತಕದ ಸೋಮವಾರ.)

ಯೇಸು ಬೆಳಿಗ್ಗೆ ಪಟ್ಟಕ್ಕೆ ತಿರಿಗಿ ಬರುವಾಗ, ಹಸಿದಿದ್ದನು. ಆಗ ಮಾರ್ಗದಲ್ಲಿ ಯೆಲೆಗಳುಳ್ಳ ಒಂದು ಅಂಜೂರದ ಮರವನ್ನು ನೋಡಿ, ಹತ್ತರ ಬಂದು, ಯೆಲೆಗಳು ಹೊರ್ತು ಮತ್ತೇನೂ ಕಾಣಲಿಲ್ಲ. ಆಗ ಯೇಸು ಅದಕ್ಕೆ,—ನಿನ್ನಿಂದ ಯೆಂದೆಂದಿಗೂ ಯಾರೂ ಫಲವನ್ನು ತಿನ್ನದಿರಲಿ! ಅಂದನು. ಆತನ ಶಿಷ್ಯರು ಅದನ್ನು ಕೇಳಿದರು; ಮತ್ತು ಆ ಅಂಜೂರದ ಮರವು ಸಂಗಡಲೇ ಒಣಗಿ ಹೋಯಿತು.

ಅವರು ಯೆರೂಸಲೇಮಿಗೆ ಬಂದಾಗ, ಯೇಸು ದೇವಾಲಯದಲ್ಲಿ ಪ್ರವೇಶಿಸಿ, ದೇವಾಲಯದಲ್ಲಿ ಕ್ರಯ ವಿಕ್ರಯ ಮಾಡುವವರನ್ನು ಹೊರಗೆ ಹಾಕಲಾರಂಭಿಸಿ, ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರುವವರ ಪೀಠಗಳನ್ನೂ ಕೆಡವಿ ಬಿಟ್ಟನು. ಮತ್ತು ಯಾವನಾದರೂ ದೇವಾಲಯದ ಮಾರ್ಗವಾಗಿ ಸಾಮಾನು ತಕ್ಕೊಂಡು ಹೋಗ ಗೊಡಿಸಲಿಲ್ಲ; ಮತ್ತು,— ನನ್ನ ಮನೆಯು ಯೆಲ್ಲಾ ಜನಾಂಗಗಳಿಗೆ ಪ್ರಾರ್ಥನೆಯ ಮನೆ ಯೆಂದು ಕರೆಯಲ್ಪಡುವದೆಂಬದಾಗಿ ಬರದದೆ ಅಲ್ಲವೋ? ಆದರೆ ನೀವು ಅದನ್ನ ಕಳ್ಳರ ಗವಿಯಾಗ ಮಾಡಿದ್ದೀರಿ, ಯೆಂದು ಅವರಿಗೆ ಹೇಳಿ ಬೋಧಿಸಿದನು. ಮತ್ತು ಕುರುಡರೂ ಕುಂಟರೂ ದೇವಾಲಯದೊಳಗೆ ಆತನ ಬಳಿಗೆ ಬರಲಾಗಿ, ಅವರನ್ನು ಸ್ವಸ್ಥ ಮಾಡಿದನು. ಆದರೆ ಪ್ರಧಾನಯಾಜಕರೂ ಶಾಸ್ತ್ರಿಗಳೂ ಆತನು ನಡಿಸಿದ ಆಶ್ಚರ್ಯಗಳನ್ನೂ,— ದಾವೀದನ ಮಗನಿಗೆ ಹೊಶಿಯನ್ನಾ! ಯೆಂದು ದೇವಾಲಯದಲ್ಲಿ ಕೂಗುವ ಮಕ್ಕಳನ್ನೂ ನೋಡಿ, ಕೋಪಿಸಿ,— ಇವರು ಹೇಳುವದನ್ನು ಕೇಳುತ್ತೀಯೋ? ಯೆಂದು ಆತನಿಗೆ ಹೇಳಿದರು. ಯೇಸು ಅವರಿಗೆ,— ಹೌದು; ಬಾಲಕರ ಮೊಲೆಕೂಸುಗಳ ಬಾಯೊಳಗಿಂದ ಹೊಗಳಿಕೆಯನ್ನು ಸಿದ್ಧ ಮಾಡಿಕೊಂಡಿ ಯೆಂಬುವದನ್ನು ನೀವು ಯೆಂದಾದರೂ (ಕೀರ್ತ. ೮, ೩.) ಓದಲಿಲ್ಲವೋ? ಯೆಂದು ಹೇಳಿ, ಅವರನ್ನು ಬಿಟ್ಟು, ಪಟ್ಟಣದಿಂದ ಹೊರಟು, ಬೆಥಾನ್ಯಕ್ಕೆ ಹೋಗಿ, ಅಲ್ಲಿ ಇಳುಕೊಂಡನು.

(ಶ್ರಮಸಪ್ತಕದ ಮಂಗಳವಾರ.)

ಹೊತ್ತಾರೆ ಅವರು ಹೋಗುತ್ತಿರುವಾಗ, ಆ ಅಂಜೂರದ ಮರವು ಬೇರಾಂದಿಗೆ ಒಣಗಿರುವದನ್ನು ಕಂಡರು. ಆಗ ಪೇತ್ರನು ಜ್ಞಾಪಕ ಮಾಡಿಕೊಂಡು, ಆತನಿಗೆ,— ರಬ್ಬಿಯೇ, ಇಗೋ, ನೀನು ಶಪಿಸಿದ ಅಂಜೂರದ ಮರವು ಒಣಗಿ ಹೋಯಿತು, ಅಂದನು. ಯೇಸು ಅವರಿಗೆ ಹೇಳಿದ್ದು,— ದೇವರಲ್ಲಿ ನಂಬಿಕೆ ಇಡಿರಿ! ಯಾಕಂದರೆ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಯಾವನು ತನ್ನ ಹೃದಯದಲ್ಲಿ ಸಂದೇಹ ಪಡದೆ, ತಾನು ಹೇಳುವವುಗಳು ಆಗುವವೆಂದು ನಂಬಿ, ಈ ಬೆಟ್ಟಕ್ಕೆ,— ಯೆದ್ದು, ಸಮುದ್ರದಲ್ಲಿ ಬೀಳು! ಯೆಂದು ಹೇಳುವ

ನೋ, ಅವನು ಹೇಳುವಂಥಾದ್ದು ಅವನಿಗೆ ಆಗುವದು. ಆದದರಿಂದ ನಿಮಗೆ ಹೇಳುತ್ತೇನೆ, ನೀವು ಪ್ರಾರ್ಥಿಸಿ, ಬೇಡಿಕೊಳ್ಳುವವುಗಳನ್ನೆಲ್ಲಾ ಹೊಂದುವೆವೆಂದು ನಂಬಿದರೆ, ನಿಮಗೆ ಸಿಕ್ಕುವವು.

---

೨೯. ಯೇಸುವಿನ ಅಧಿಕಾರ. ತಂದೆಯ ಚಿತ್ತವನ್ನು ಅನುಸರಿಸುವ ಮಗ. ದ್ರಾಕ್ಷೇತೋಟದ ಸಾಮ್ಯ. ಮದಿವೇ ಔತಣದ ಸಾಮ್ಯ. ಯೆಹೂದ್ಯರ ಮೂರು ಪ್ರಶ್ನೆಗಳು. ಯೇಸುವಿನ ಪ್ರತಿಪ್ರಶ್ನೆ. ಫರಿಸಾಯರನ್ನೂ ಶಾಸ್ತ್ರಿಗಳನ್ನೂ ವಾಗ್ದಂಡಿಸಿದ್ದು. ವಿಧವೆಯ ದುಗ್ಗಾಣಿ.

(ಮತ್ಥ. ೨೧, ೨೩–೪೬. ೨೨, ೧–೪೬. ೨೩, ೧–೩೯. ಮಾರ್ಕ. ೧೧, ೨೭–೩೩. ೧೨, ೧–೪೪. ಲೂಕ. ೨೦, ೧–೪೬. ೨೧, ೧–೪.)

ಆಗಲವರು ತಿರಿಗಿ ಯೆರೂಸಲೇಮಿಗೆ ಬಂದರು. ಮತ್ತು ಆತನು ದೇವಾಲಯದಲ್ಲಿ ತಿರುಗಾಡುತ್ತಿರುವಾಗ, ಪ್ರಧಾನಯಾಜಕರೂ ಹಿರಿಯರೂ ಆತನ ಬಳಿಗೆ ಬಂದು,—ಇವುಗಳನ್ನು ಯಾವ ಅಧಿಕಾರದಿಂದ ಮಾಡುತ್ತೀ? ಅಂದರು. ಆದರೆ ಯೇಸು ಅವರಿಗೆ,—ನಾನು ಸಹಾ ಒಂದು ಮಾತು ನಿಮ್ಮನ್ನು ಕೇಳುತ್ತೇನೆ; ಅದನ್ನು ನನಗೆ ಹೇಳಿದರೆ, ಆಗ ನಾನು ಯಾವ ಅಧಿಕಾರದಿಂದ ಇವುಗಳನ್ನು ಮಾಡುತ್ತೇನೆಂದು ನಿಮಗೆ ಹೇಳುವೆನು; ಯೋಹಾನನ ಸ್ನಾನವು ಪರಲೋಕದಿಂದ ಆಯಿತೋ, ಮನುಷ್ಯರಿಂದ ಆಯಿತೋ? ಅಂದನು. ಆಗಲವರು,—ನಾವು ಪರಲೋಕದಿಂದ ಅಂದರೆ,—ಹಾಗಾದರೆ ಯಾಕೆ ಅವನಲ್ಲಿ ವಿಶ್ವಾಸವಿಡಲಿಲ್ಲಾ? ಯೆಂದು ನಮಗೆ ಹೇಳುವನು; ಮನುಷ್ಯರಿಂದ ಅಂದರೆ, ಸಮೂಹಕ್ಕೆ ಭಯಪಡುತ್ತೇವೆ, ಯಾಕಂದರೆ ಯೆಲ್ಲರೂ ಯೋಹಾನನನ್ನು ಪ್ರವಾದಿ ಯೆಂದು ಯೆಣಿಸುತ್ತಾರೆ, ಯೆಂಬದಾಗಿ ತಮ್ಮೊಳಗೆ ಆಲೋಚಿಸಿಕೊಂಡು, ಯೇಸುವಿಗೆ,—ನಾವರಿಯೆವು, ಅಂದರು. ಆತನು ಅವರಿಗೆ ಹೇಳಿದ್ದು,—ನಾನು ಸಹಾ ಯಾವ ಅಧಿಕಾರದಿಂ

ದ ಇವುಗಳನ್ನು ಮಾಡುತ್ತೇನೆಂದು ನಿಮಗೆ ಹೇಳುವದಿಲ್ಲ. ಆದರೆ ನಿಮಗೆ ಹ್ಯಾಗೆ ತೋಚುತ್ತದೆ? ಒಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಮೊದಲನೆಯವನ ಬಳಿಗೆ ಬಂದು,—ಮಗನೇ, ಹೋಗಿ, ಈಹೊತ್ತು ನನ್ನ ದ್ರಾಕ್ಷೇತೋಟದಲ್ಲಿ ಕೆಲಸ ಮಾಡು! ಅನ್ನಲು, ಅವನು,—ಒಲ್ಲೆನು, ಯೆಂದು ಉತ್ತರ ಕೊಟ್ಟು, ತರುವಾಯ ಮನಸಾಂತರ ಪಟ್ಟು ಹೋದನು. ಆಮೇಲೆ ಯೆರಡನೆಯವನ ಬಳಿಗೆ ಬಂದು, ಅದೇ ಪ್ರಕಾರ ಹೇಳಿದನು. ಅವನು,—ಹೋಗುತ್ತೇನಪ್ಪಾ, ಯೆಂದು ಉತ್ತರ ಕೊಟ್ಟು, ಹೋಗಲಿಲ್ಲ. ಈ ಇಬ್ಬರಲ್ಲಿ ಯಾವನು ತಂದೆಯ ಚಿತ್ತದ ಪ್ರಕಾರ ಮಾಡಿದನು? ಅವರು ಆತನಿಗೆ,—ಮೊದಲನೆಯವನೇ, ಅಂದಾಗ, ಯೇಸು ಅವರಿಗೆ,—ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಸುಂಕದವರೂ ಸೂಳೆಯರೂ ನಿಮಗೆ ಮುಂಚೆ ದೇವರ ರಾಜ್ಯದಲ್ಲಿ ಶೇರುತ್ತಾರೆ, ಅಂದನು.

ಮತ್ತೊಂದು ಸಾಮ್ಯವನ್ನು ಕೇಳಿರಿ! ಮನೆಯ ಯಜಮಾನನಾದ ಒಬ್ಬ ಮನುಷ್ಯನಿದ್ದನು. ಅವನು ದ್ರಾಕ್ಷೇತೋಟವನ್ನು ನೆಟ್ಟು, ಅದರ ಸುತ್ತಲು ಬೇಲಿ ಹಾಕಿ, ಅದರೊಳಗೆ ತೊಟ್ಟಿಯನ್ನು ಅಗಿದು, ಗೋಪುರವನ್ನು ಕಟ್ಟಿ, ಅದನ್ನು ಒಕ್ಕಲಿಗರಿಗೆ ಒಪ್ಪಿಸಿ, ಬಹುಕಾಲ ದೇಶಾಂತರಕ್ಕೆ ಹೋದನು. ಆದರೆ ಫಲಕಾಲ ಸಮೀಪಿಸಿದಾಗ, ದ್ರಾಕ್ಷೇತೋಟದ ಫಲದಲ್ಲಿ ತನಗೆ ಕೊಡಬೇಕೆಂದು ಹೇಳಿ, ತನ್ನ ದಾಸರನ್ನು ಒಕ್ಕಲಿಗರ ಬಳಿಗೆ ಕಳುಹಿಸಿದನು. ಆಗ ಒಕ್ಕಲಿಗರು ಅವನ ದಾಸರನ್ನು ಹಿಡಿದು, ಒಬ್ಬನನ್ನು ಹೊಡದು, ಒಬ್ಬನನ್ನು ಕೊಂದು, ಒಬ್ಬನನ್ನು ಕಲ್ಲೆಸದರು. ಆಮೇಲೆ ಮೊದಲಿನವರಿಗಿಂತ ಹೆಚ್ಚಾದ ಬೇರೆ ದಾಸರನ್ನು ಕಳುಹಿಸಿದನು; ಅವರಿಗೂ ಅದೇ ಪ್ರಕಾರ ಮಾಡಿದರು. ಕಡೆಯಲ್ಲಿ,—ನನ್ನ ಮಗನನ್ನು ಲಕ್ಷ್ಯಮಾಡುವರು, ಯೆಂದು, ತನ್ನ ಮಗನನ್ನು ಅವರ ಬಳಿಗೆ ಕಳುಹಿಸಿದನು. ಆದರೆ ಒಕ್ಕಲಿಗರು ಮಗನನ್ನು ನೋಡಿ,—ಇವನು ಬಾಧ್ಯಸ್ಥನು; ಬನ್ನಿರಿ, ಇವನನ್ನು ಕೊಂದು, ಇವನ ಬಾಧ್ಯತೆಯನ್ನು ಹಿಡಿದುಕೊಳ್ಳುವಾ! ಯೆಂದು ತಮ್ಮೊಳಗೆ ಹೇಳಿಕೊಂಡು, ಅವನನ್ನು ಹಿಡಿದು, ದ್ರಾಕ್ಷೇತೋಟದ ಹೊರಗೆ ಹಾಕಿ, ಕೊಂದು ಬಿಟ್ಟ

ರು. ಆದದರಿಂದ ದ್ರಾಕ್ಷೇತೋಟದ ಯಜಮಾನನು ಬರುವಾಗ, ಆ ಒಕ್ಕಲಿಗರಿಗೆ ಯೇನು ಮಾಡುವನು? ಅಂದನು. ಅವರು ಆತನಿಗೆ,—ಆ ಕೆಟ್ಟವರನ್ನು ಕ್ರೂರವಾಗಿ ನಾಶನ ಮಾಡಿ, ತಕ್ಕ ಕಾಲಗಳಲ್ಲಿ ಫಲಗಳನ್ನು ತನಗೆ ಕೊಡುವ ಬೇರೆ ಒಕ್ಕಲಿಗರಿಗೆ ದ್ರಾಕ್ಷೇತೋಟವನ್ನು ಒಪ್ಪಿಸುವನು, ಅಂದರು. ಯೇಸು ಅವರಿಗೆ,—ಆದದರಿಂದ ನಿಮಗೆ ಹೇಳುತ್ತೇನೆ, ದೇವರ ರಾಜ್ಯವು ನಿಮ್ಮಿಂದ ತೆಗಿಯಲ್ಪಟ್ಟು, ಅದರ ಫಲಗಳನ್ನು ಫಲಿಸುವ ಜನಾಂಗಕ್ಕೆ ಕೊಡಲ್ಪಡುವದು, ಅಂದನು. ಪ್ರಧಾನಯಾಜಕರೂ ಫರಿಸಾಯರೂ ಆತನ ಸಾಮ್ಯಗಳನ್ನು ಕೇಳಿ, ತಮ್ಮನ್ನು ಕುರಿತು ಮಾತಾಡುತ್ತಾನೆಂದು ತಿಳಿದು, ಆತನ ಮೇಲೆ ಕೈ ಹಾಕುವದಕ್ಕೆ ಹುಡುಕಿ, ಜನರಿಗೆ ಭಯ ಪಟ್ಟರು; ಯಾಕಂದರೆ ಆತನನ್ನು ಪ್ರವಾದಿಯೆಂದೆಣಿಸಿದರು.

ಆಗ ಯೇಸು ತಿರಿಗಿ ಅವರಿಗೆ ಸಾಮ್ಯಗಳಿಂದ ಹೇಳಿದ್ದೇನಂದರೆ,—ಪರಲೋಕರಾಜ್ಯವು ತನ್ನ ಮಗನಿಗೆ ಮದುವೆ ಮಾಡಿದ ಒಬ್ಬ ಅರಸನಿಗೆ ಸಮಾನವಾಗಿದೆ. ಅವನು ಮದುವೆಗೆ ಹೇಳಿದವರನ್ನು ಕರೆಯುವದಕ್ಕೆ ತನ್ನ ದಾಸರನ್ನು ಕಳುಹಿಸಿದನು; ಆದರೆ ಬರಲೊಲ್ಲದೆ ಇದ್ದರು. ಮತ್ತು,—ಇಗೋ, ನನ್ನ ಔತಣವನ್ನು ಸಿದ್ಧ ಮಾಡಿದ್ದೇನೆ; ನನ್ನ ಯೆತ್ತುಗಳೂ ಕೊಬ್ಬಿದ ಪಶುಗಳೂ ಕೊಯಿದವೆ; ಯೆಲ್ಲಾ ಸಿದ್ಧವಾಗಿದೆ; ಮದುವೆಗೆ ಬನ್ನಿರಿ, ಯೆಂದು ಕರೆಯಲ್ಪಟ್ಟವರಿಗೆ ಹೇಳಿರಿ! ಯೆಂದು ಬೇರೆ ದಾಸರನ್ನು ಕಳುಹಿಸಿದನು. ಆದರೆ ಅವರು ಅಲಕ್ಷ್ಯ ಮಾಡಿ, ಒಬ್ಬನು ತನ್ನ ಹೊಲಕ್ಕೆ, ಒಬ್ಬನು ತನ್ನ ವ್ಯಾಪಾರಕ್ಕೆ ಹೋಗಿ ಬಿಟ್ಟರು. ಮಿಕ್ಕಾದವರು ಅವನ ದಾಸರನ್ನು ಹಿಡಿದು, ನಿಂದಿಸಿ, ಕೊಂದು ಹಾಕಿದರು. ಅರಸನು ಅದನ್ನು ಕೇಳಿ, ಕೋಪಿಸಿಕೊಂಡು, ತನ್ನ ಸೈನ್ಯಗಳನ್ನು ಕಳುಹಿಸಿ, ಆ ಕೊಲೆಗಾರರನ್ನು ನಾಶನ ಮಾಡಿ, ಅವರ ಪಟ್ಟಣಗಳನ್ನು ಸುಟ್ಟು ಬಿಟ್ಟನು. ಆಗ ತನ್ನ ದಾಸರಿಗೆ,—ಮದುವೆಗೆ ಸಿದ್ಧವಾಗಿದೆ; ಆದರೆ ಕರೆಯಲ್ಪಟ್ಟವರು ಯೋಗ್ಯರಾಗಿರಲಿಲ್ಲಾ; ಆದದರಿಂದ ಮಾರ್ಗಗಳ ಸಂದುಗಳಿಗೆ ಹೋಗಿ, ಕಂಡವರನ್ನೆಲ್ಲಾ ಮದುವೆಗೆ ಕರೆಯಿರಿ! ಅಂದನು. ಮತ್ತು ಆ ದಾಸರು ಮಾರ್ಗಗಳಿಗೆ ಹೋಗಿ, ಕಂಡವರನ್ನೆಲ್ಲಾ ಕೂ

ಡಿಸಿದರು; ಆಗ ಮದುವೆಯ ಮನೆಯು ಕೂತವರಿಂದ ತುಂಬಿತು. ಆದರೆ ಅರಸನು ಕೂತವರನ್ನು ನೋಡುವದಕ್ಕೆ ಒಳಗೆ ಬಂದಾಗ, ಅಲ್ಲಿ ಮದುವೆಯ ವಸ್ತ್ರವನ್ನು ಹೊದ್ದುಕೊಳ್ಳದ ಒಬ್ಬನನ್ನು ನೋಡಿ, ಅವನಿಗೆ,—ಸ್ನೇಹಿತನೇ, ಮದುವೆಯ ವಸ್ತ್ರವಿಲ್ಲದೆ ಇಲ್ಲಿ ಹೇಗೆ ಬಂದಿ? ಅನ್ನಲು, ಅವನು ಸುಮ್ಮನೇ ಇದ್ದನು. ಆಗ ಅರಸನು ಸೇವಕರಿಗೆ,—ಅವನ ಕೈಕಾಲುಗಳನ್ನು ಕಟ್ಟಿ, ಅವನನ್ನು ಯೆತ್ತಿಕೊಂಡು, ಹೊರಗಿನ ಕತ್ತಲೆಯಲ್ಲಿ ಹಾಕಿರಿ; ಅಲ್ಲಿ ಅಳುವಿಕೆಯೂ ಹಲ್ಲುಕಡಿಯುವಿಕೆಯೂ ಇರುವವು. ಯಾಕಂದರೆ ಕರೆಯಲ್ಪಟ್ಟವರು ಅನೇಕರು, ಆಯಲ್ಪಟ್ಟವರು ಕೆಲವರೇ, ಅಂದನು.

ಆಗ ಫರಿಸಾಯರು ಹೊರಟು, ಆತನನ್ನು ಅಧಿಪತಿಯ ವಶಕ್ಕೆ ಒಪ್ಪಿಸುವ ಹಾಗೆ ಮಾತಿನಲ್ಲಿ ಆತನನ್ನು ಹಿಡಿದುಕೊಳ್ಳುವದಕ್ಕೆ ಆಲೋಚಿಸಿಕೊಂಡು, ತಾವು ನೀತಿವಂತರೆಂದು ಕಪಟದಿಂದ ಅನ್ನಿಸಿಕೊಳ್ಳುವ ಚಾರರನ್ನು ಕಳುಹಿಸಿದರು. ಇವರು ಆತನಿಗೆ,—ಬೋಧಕನೇ, ನೀನು ಸತ್ಯವಂತನಾಗಿ, ದೇವರ ಮಾರ್ಗವನ್ನು ಸತ್ಯವಾಗಿ ಬೋಧಿಸಿ, ಯಾರನ್ನಾದರೂ ಲಕ್ಷಿಸದೆ, ಮನುಷ್ಯರ ಮುಖದಾಕ್ಷಿಣ್ಯ ಮಾಡುವದಿಲ್ಲವೆಂದು ಬಲ್ಲೆವು; ಆದಕಾರಣ ನಿನಗೆ ಹೇಗೆ ತೋಚುತ್ತದೆ? ಕೈಸರನಿಗೆ ಗುತ್ತಿಗೆ ಕೊಡ ಬಹುದೋ, ಬಾರದೋ? ಅಂದರು. ಆದರೆ ಯೇಸು ಅವರ ಕೆಟ್ಟತನವನ್ನು ತಿಳಿದು,—ಕಪಟಿಗಳೇ, ನೀವು ನನ್ನನ್ನು ಶೋಧಿಸುವದೇನು? ಗುತ್ತಿಗೆಯ ನಾಣ್ಯವನ್ನು ನನಗೆ ತೋರಿಸಿರಿ! ಅಂದನು. ಅವರು ಒಂದು ಹಣವನ್ನು ಆತನ ಬಳಿಗೆ ತಂದರು. ಆತನು ಅವರಿಗೆ,—ಈ ರೂಪವೂ ಮೇಲ್ಬರಹವೂ ಯಾರದು? ಯೆಂದು ಕೇಳಿದಾಗ, ಅವರು,—ಕೈಸರನದು, ಅಂದರು. ಆಗ ಅವರಿಗೆ ಹೇಳಿದ್ದು,—ಹಾಗಾದರೆ ಕೈಸರನದನ್ನು ಕೈಸರನಿಗೆ, ದೇವರದನ್ನು ದೇವರಿಗೆ ಕೊಡಿರಿ! ಆಗ ಅವರು ಆತನ ಮಾತನ್ನು ಹಿಡಿಯಲಾರದೆ, ಆತನ ಉತ್ತರಕ್ಕೆ ಆಶ್ಚರ್ಯ ಪಟ್ಟು, ಸುಮ್ಮನಿದ್ದು, ಆತನನ್ನು ಬಿಟ್ಟು ಹೋದರು.

ಅದೇ ದಿವಸದಲ್ಲಿ ಪುನರುತ್ಥಾನವಿಲ್ಲವೆಂದು ಹೇಳುವ ಸದ್ದುಕಾಯರು ಆತನ ಬಳಿಗೆ ಬಂದು, ಆತನನ್ನು ಕೇಳಿದ್ದೇನಂದರೆ,—ಬೋಧಕನೇ, ಒಬ್ಬ

ನು ಮಕ್ಕಳಿಲ್ಲದೆ ಸತ್ತರೆ, ಅವನ ಸಹೋದರನು ಅವನ ಹೆಂಡತಿಯನ್ನು ಮದುವೆ ಮಾಡಿಕೊಳ್ಳ ಬೇಕೆಂದು ಮೋಶೆಯು ಹೇಳಿದನು. ಹೀಗಿರಲಾಗಿ ನಮ್ಮಲ್ಲಿ ಯೇಳು ಮಂದಿ ಸಹೋದರರು ಇದ್ದರು; ಮೊದಲನೆಯವನು ತೀರಿ ಹೋಗಿ, ತನಗೆ ಮಕ್ಕಳಿಲ್ಲದ ಕಾರಣ, ತನ್ನ ಹೆಂಡತಿಯನ್ನು ತನ್ನ ಸಹೋದರನಿಗೆ ಬಿಟ್ಟನು; ಅದೇಮೇರೆಗೆ ಯೆರಡನೆಯವನೂ ಮೂರನೆಯವನೂ, ಯೇಳನೆಯವನ ಪರ್ಯಂತರ; ಯೆಲ್ಲರ ತರುವಾಯ ಹೆಂಡತಿಯೂ ಸತ್ತಳು; ಆದದರಿಂದ ಪುನರುತ್ಥಾನದಲ್ಲಿ ಅವಳು ಆ ಯೇಳು ಮಂದಿಯಲ್ಲಿ ಯಾರಿಗೆ ಹೆಂಡತಿಯಾಗಿರುವಳು? ಯೇಸು ಅವರಿಗೆ ಹೇಳಿದ್ದು, —ನೀವು ಬರಹಗಳನ್ನೂ ದೇವರ ಬಲವನ್ನೂ ಅರಿಯದೆ, ಮೋಸ ಹೋಗುತ್ತೀರಿ; ಹ್ಯಾಗಂದರೆ ಪುನರುತ್ಥಾನದಲ್ಲಿ ಮದುವೆ ಮಾಡಿಕೊಳ್ಳದೆ, ಮದುವೆ ಮಾಡಿ ಕೊಡದೆ, ಪರಲೋಕದಲ್ಲಿ ದೇವರ ದೂತರ ಹಾಗೆಯೇ ಇರುವರು. ಆದರೆ ಸತ್ತವರು ಯೇಳುತ್ತಾರೆಂದು ಮೋಶೆಯು ಸಹಾ ಪೊದೆಯ ಸಂಧಿಯಲ್ಲಿ, —ಕರ್ತನು ಅಬ್ರಹಾಮನ ದೇವರೂ, ಇಸಾಕನ ದೇವರೂ, ಯಾಕೋಬನ ದೇವರೂ! ಯೆಂದು ಹೇಳಿ ತೋರಿಸಿದ್ದಾನೆ; ದೇವರು ಸತ್ತವರಿಗಲ್ಲಾ, ಬದುಕುವವರಿಗೆ ದೇವರಾಗಿದ್ದಾನೆ.— ಸಮೂಹಗಳು ಕೇಳಿ, ಆತನ ಬೋಧನೆಗೆ ಆಶ್ಚರ್ಯಪಟ್ಟವು.

ಆದರೆ ಫರಿಸಾಯರು, ಆತನು ಸದ್ದುಕಾಯರ ಬಾಯಿ ಮುಚ್ಚಿದನೆಂದು ಕೇಳಿ, ಕೂಡಿ ಬಂದರು. ಮತ್ತು ಅವರಲ್ಲಿ ಒಬ್ಬ ನ್ಯಾಯಶಾಸ್ತ್ರಿಯು,— ಬೋಧಕನೇ, ನ್ಯಾಯಪ್ರಮಾಣದಲ್ಲಿ ದೊಡ್ಡ ಕಟ್ಟಳೆ ಯಾವದು? ಯೆಂದು ಕೇಳಿ, ಆತನನ್ನು ಶೋಧಿಸಿದನು. ಯೇಸು ಅವನಿಗೆ ಹೇಳಿದ್ದು,—ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿ ಮಾಡು! ಈ ಕಟ್ಟಳೆಯು ಮೊದಲನೇದೂ ದೊಡ್ಡದೂ ಆಗಿದೆ. ಮತ್ತು ಯೆರಡನೇದು ಅದಕ್ಕೆ ಸಮಾನವಾಗಿದೆ, ಯೇನಂದರೆ, ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡು! ಈ ಯೆರಡು ಕಟ್ಟಳೆಗಳಲ್ಲಿ ನ್ಯಾಯಪ್ರಮಾಣವೆಲ್ಲವೂ ಪ್ರವಾದಿಗಳೂ ಅಡಕವಾಗಿವೆ.

ಫರಿಸಾಯರು ಕೂಡಿ ಬಂದಿರುವಾಗ, ಯೇಸು ಅವರನ್ನು,—ಕ್ರಿಸ್ತನನ್ನು ಕುರಿತು ನಿಮಗೆ ಹ್ಯಾಗೆ ತೋಚುತ್ತದೆ? ಯಾರ ಮಗನಾಗಿದ್ದಾನೆ? ಯೆಂದು ಕೇಳಿದನು. ಅವರು ಆತನಿಗೆ,—ದಾವೀದನ ಮಗನು, ಅಂದರು. ಆತನು ಅವರಿಗೆ ಹೇಳಿದ್ದು,—ಹಾಗಾದರೆ ಕರ್ತನು ನನ್ನ ಕರ್ತನಿಗೆ,—ನಾನು ನಿನ್ನ ಶತ್ರುಗಳನ್ನು ನಿನ್ನ ಪಾದಪೀಠವಾಗಿ ಇಡುವ ವರೆಗೂ ನನ್ನ ಬಲಪಾರ್ಶ್ವದಲ್ಲಿ ಕೂಡ್ರು! ಯೆಂದು ದಾವೀದನು (ಕೀರ್ತನೆ. ೧೧೦, ೧.) ಹೇಳಿ, ಆತ್ಮದಲ್ಲಿ ಅವನನ್ನು ಕರ್ತನೆಂದು ಕರೆಯುವದು ಹ್ಯಾಗೆ? ಹೀಗಿದ್ದರೆ ದಾವೀದನು ಅವನನ್ನು ಕರ್ತನೆಂದು ಕರದರೆ, ಹ್ಯಾಗೆ ಅವನ ಮಗನಾಗಿದ್ದಾನೆ? ಅದಕ್ಕೆ ಯಾರೂ ಆತನಿಗೆ ಯೇನೂ ಉತ್ತರ ಕೊಡಲಾರದೆ ಹೋದರು; ಮತ್ತು ಅಂದಿನಿಂದ ಯಾರೂ ಆತನನ್ನು ಇನ್ನೇನೂ ಕೇಳುವದಕ್ಕೆ ಧೈರ್ಯ ಪಡಲಿಲ್ಲ. ಇದಲ್ಲದೆ ಸಮೂಹದ ಜನರು ಆತನನ್ನು ಸಂತೋಷವಾಗಿ ಕೇಳಿದರು.

ಆಗ ಯೇಸು ಸಮೂಹಗಳಿಗೂ ತನ್ನ ಶಿಷ್ಯರಿಗೂ ಹೇಳಿದ್ದೇನಂದರೆ,—ಮೋಶೆಯ ಪೀಠದ ಮೇಲೆ ಶಾಸ್ತ್ರಿಗಳೂ ಫರಿಸಾಯರೂ ಕೂತುಕೊಂಡಿದ್ದಾರೆ; ಆದದರಿಂದ ಅವರು ನಿಮಗೆ ಕೈಕೊಳ್ಳ ಹೇಳುವದನ್ನೆಲ್ಲಾ ಕೈಕೊಂಡು ಮಾಡಿರಿ, ಆದರೆ ಅವರ ಕ್ರಿಯೆಗಳ ಪ್ರಕಾರ ಮಾಡ ಬೇಡಿರಿ! ಯಾಕಂದರೆ ಹೇಳುತ್ತಾರೆ, ಆದರೆ ಮಾಡುವದಿಲ್ಲ. ಹ್ಯಾಗಂದರೆ ಭಾರವಾದ, ಹೊರುವದಕ್ಕೆ ಕಷ್ಟವಾದ ಹೊರೆಗಳನ್ನು ಕಟ್ಟಿ, ಮನುಷ್ಯರ ಹೆಗಲುಗಳ ಮೇಲೆ ಇಡುತ್ತಾರೆ; ಆದರೆ ತಮ್ಮ ಬೆರಳಿನಿಂದಾದರೂ ಅವುಗಳನ್ನು ಮುಟ್ಟಲಿಕ್ಕೆ ಅವರಿಗೆ ಮನಸ್ಸಿಲ್ಲ. ಮತ್ತು ಮನುಷ್ಯರಿಗೆ ಕಾಣಿಸುವ ಹಾಗೆ, ತಮ್ಮ ಕ್ರಿಯೆಗಳನ್ನೆಲ್ಲಾ ಮಾಡುತ್ತಾರೆ; ಮತ್ತು ಔತಣಗಳಲ್ಲಿ ಮೊದಲನೇ ಪಂಕ್ತಿಗಳನ್ನೂ, ಸಭೆಮನೆಗಳಲ್ಲಿ ಮೊದಲನೇ ಪೀಠಗಳನ್ನೂ ಪ್ರೀತಿ ಮಾಡುತ್ತಾರೆ. ಆದರೆ ನಿಮ್ಮಲ್ಲಿ ದೊಡ್ಡವನು ನಿಮ್ಮ ಸೇವಕನಾಗಿರಲಿ! ಇದಲ್ಲದೆ ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.—ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅಯ್ಯೋ! ಯಾಕಂದರೆ ದೇವರ ರಾಜ್ಯವನ್ನು ಮನುಷ್ಯರ ಮುಂದೆ ಮುಚ್ಚಿ ಬಿಡುತ್ತೀರಿ; ನೀವು

ಪ್ರವೇಶಿಸುವದಿಲ್ಲ, ಮತ್ತು ಪ್ರವೇಶಿಸುವವರನ್ನು ಪ್ರವೇಶಿಸಗೊಡಿಸುವದಿಲ್ಲ. ಹಾವುಗಳೇ, ಸರ್ಪಜಾತಿಯವರೇ! ನರಕದ ನ್ಯಾಯತೀರ್ವಿಕೆಗೆ ಹೇಗೆ ತಪ್ಪಿಸಿಕೊಳ್ಳುವಿರಿ? ಯೆರೂಸಲೇಮೇ, ಯೆರೂಸಲೇಮೇ! ಪ್ರವಾದಿಗಳನ್ನು ಕೊಲ್ಲುವವಳೇ! ತನ್ನ ಬಳಿಗೆ ಕಳುಹಿಸಲ್ಪಟ್ಟವರನ್ನು ಕಲ್ಲೆಸೆಯುವವಳೇ! ಕೋಳಿಯು ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಹೊದಗಿಸುವ ಪ್ರಕಾರ, ನಿನ್ನ ಮಕ್ಕಳನ್ನು ಹೊದಗಿಸ ಯೆಷ್ಟೋ ಸಾರಿ ಮನಸ್ಸಾಗಿದ್ದೆನು, ಆದರೆ ನೀವು ವೊಲ್ಲದೆ ಹೋದಿರಿ! ಇಗೋ, ನಿಮ್ಮ ಮನೆಯು ನಿಮಗೆ ಹಾಳಾಗಿ ಬಿಡಲ್ಪಡುವದು!


ಮತ್ತು ಯೇಸು ಬೊಕ್ಕಸಕ್ಕೆ ಯೆದುರಾಗಿ ಕೂತುಕೊಂಡು, ಜನರು ಬೊಕ್ಕಸದಲ್ಲಿ ಹಣ ಹಾಕುವ ರೀತಿಯನ್ನು ನೋಡುವಾಗ, ಅನೇಕ ಐಶ್ವರ್ಯವಂತರು ಬಹಳ ಹಾಕಿದರು. ಆಗ ವೊಬ್ಬ ಬಡ ವಿಧವೆ ವೊಂದು ದುಗ್ಗಾಣಿಯಾದ ಯೆರಡು ಕಾಸು ಹಾಕಿದಳು. ಆಗ ತನ್ನ ಶಿಷ್ಯರನ್ನು ಹತ್ತರ ಕರದು, ಅವರಿಗೆ ಹೇಳಿದ್ದೇನಂದರೆ, — ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಬೊಕ್ಕಸದಲ್ಲಿ ಹಾಕಿದ ಯೆಲ್ಲರಿಗಿಂತ ಈ ಬಡ ವಿಧವೆ ಹೆಚ್ಚು ಹಾಕಿದ್ದಾಳೆ; ಯಾತಕಂದರೆ ಯೆಲ್ಲರು ತಮ್ಮ ಹೆಚ್ಚಿಗೆಯಿಂದ ಕೆಲವನ್ನು ದೇವರಿಗೆ ದಾನವಾಗಿ ಹಾಕಿದ್ದಾರೆ; ಆದರೆ ಇವಳು ತನ್ನ ಕೊರತೆಯಿಂದ ತನಗಿದ್ದದ್ದೆಲ್ಲಾ, ತನ್ನ ಜೀವನವೆಲ್ಲಾ ಹಾಕಿದ್ದಾಳೆ.

---

೩೦. ಕಡೇ ಕಾಲವು. ಹತ್ತು ಕನ್ಯಾಸ್ತ್ರೀಯರು. ತಲಾಂತುಗಳ ಸಾಮ್ಯ. ಕಡೇ ನ್ಯಾಯತೀರ್ವಿಕೆಯು.

(ಮತ್ಥ. ೨೪, ೧—೫೧. ೨೫, ೧—೪೬. ಮಾರ್ಕ. ೧೩, ೧—೩೭. ಲೂಕ. ೨೧, ೫—೩೬.)

ಆಗ ಯೇಸು ದೇವಾಲಯದಿಂದ ಹೊರಟು ಹೋದಾಗ, ಆತನ ಶಿಷ್ಯರು ದೇವಾಲಯದ ಶಿಲ್ಪಗಳನ್ನು ಆತನಿಗೆ ತೋರಿಸುವದಕ್ಕೆ ಹತ್ತರ ಬಂದರು. ಮತ್ತು ಶಿಷ್ಯರಲ್ಲಿ ವೊಬ್ಬನು ಆತನಿಗೆ, — ಬೋಧಕನೇ, ನೋಡು; ಯೆಂಥಾ ಕ



ಲ್ಲುಗಳೂ, ಯೆಂಥಾ ಶಿಲ್ಪದ ಕೆಲಸಗಳೂ! ಅಂದನು. ಆದರೆ ಯೇಸು,—ಇವುಗಳನ್ನೆಲ್ಲಾ ನೋಡುತ್ತೀರಲ್ಲಾ? ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಕಲ್ಲಿನ ಮೇಲೆ ಕಲ್ಲು ಇಲ್ಲಿ ಬಿಡಲ್ಪಡುವದಿಲ್ಲಾ! ಅಂದನು. ಆತನು ಇಪ್ಪೇಗುಡ್ಡದ ಮೇಲೆ ದೇವಾಲಯಕ್ಕೆ ಯೆದುರಾಗಿ ಕೂತುಕೊಂಡಾಗ, ಪೇತ್ರನೂ ಯಾಕೋಬನೂ ಯೋಹಾನನೂ ಅಂದ್ರೇಯನೂ ಯೇಕಾಂತವಾಗಿ,—ಇವು ಯಾವಾಗ ಆಗುವವು? ಮತ್ತು ನಿನ್ನ ಬರುವಿಕೆಗೂ ಲೋಕದ ಅಂತ್ಯಕ್ಕೂ ಗುರುತೇನು? ನಮಗೆ ಹೇಳು! ಅಂದರು. ಯೇಸು ಪ್ರತ್ಯುತ್ತರವಾಗಿ ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ,—ಯಾವನಾದರೂ ನಿಮ್ಮನ್ನು ಮೋಸಗೊಳ್ಳಿಸದ ಹಾಗೆ ನೋಡಿಕೊಳ್ಳಿರಿ! ಯಾಕಂದರೆ ಅನೇಕರು ನನ್ನ ಹೆಸರಿನಲ್ಲಿ ಬಂದು, ನಾನೇ ಕ್ರಿಸ್ತನೆಂದು ಹೇಳಿ, ಅನೇಕರನ್ನು ಮೋಸಗೊಳ್ಳಿಸುವರು. ಇದಲ್ಲದೆ ಯುದ್ಧಗಳನ್ನೂ ಯುದ್ಧಗಳ ಸುದ್ದಿಗಳನ್ನೂ ಕೇಳುವಿರಿ; ಕಳವಳ ಪಡದ ಹಾಗೆ ನೋಡಿಕೊಳ್ಳಿರಿ! ಯಾಕಂದರೆ ಇದೆಲ್ಲಾ ಆಗ ಬೇಕು, ಆದರೂ ಅಂತ್ಯವು ಇನ್ನೂ ಇಲ್ಲಾ. ಆದರೆ ಅಂತ್ಯದ ಪರ್ಯಂತರ ತಾಳುವವನ್ಯಾವನೋ, ಅವನೇ ರಕ್ಷಿಸಲ್ಪಡುವನು. ಮತ್ತು ಈ ರಾಜ್ಯದ ಸುವಾರ್ತೆಯು ಸಮಸ್ತ ಲೋಕದಲ್ಲಿ ಯೆಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರಲ್ಪಡುವದು; ಆಗ ಅಂತ್ಯವು ಬರುವದು. ಆಗ ಮಹಾ ಉಪದ್ರವು ಇರುವದು; ಅಂಥಾದ್ದು ಜಗದುತ್ಪತ್ತಿ ಮೊದಲ್ಗೊಂಡು ಈವರೆಗೂ ಆಗಲಿಲ್ಲಾ, ಇನ್ನು ಮೇಲೆಯೂ ಆಗುವದಿ

ಲ್ಲ. ಮತ್ತು ಆ ದಿವಸಗಳ ಉಪದ್ರವು ಆದ ಕೂಡಲೇ ಸೂರ್ಯನು ಕತ್ತಲಾಗುವನು, ಚಂದ್ರನು ತನ್ನ ಪ್ರಕಾಶವನ್ನು ಕೊಡುವದಿಲ್ಲ, ನಕ್ಷತ್ರಗಳು ಆಕಾಶದಿಂದ ಬಿದ್ದು ಹೋಗುವವು, ಆಕಾಶಗಳ ಬಲಗಳು ಚಲಿಸಲ್ಪಡುವವು. ಆಗ ಮನುಷ್ಯನ ಮಗನ ಗುರ್ತು ಆಕಾಶದಲ್ಲಿ ಕಾಣಿಸುವದು; ಮತ್ತು ಭೂಮಿಯ ಕುಲಗಳೆಲ್ಲಾ ಬಡಕೊಂಡು, ಮನುಷ್ಯನ ಮಗನು ಆಕಾಶದ ಮೇಘಗಳ ಮೇಲೆ ಬಹು ಬಲ ಮಹಿಮೆಗಳಿಂದ ಬರುವದನ್ನು ನೋಡುವರು. ಆತನು ತನ್ನ ದೂತರನ್ನು ತುತೂರಿಯ ದೊಡ್ಡ ಶಬ್ದದಿಂದ ಕಳುಹಿಸುವನು; ಮತ್ತು ಆದುಕೊಂಡವರನ್ನು ಆಕಾಶದ ವೊಂದು ಕೊನೆಯಿಂದ ಮತ್ತೊಂದು ಕೊನೆಯ ಪರ್ಯಂತರ ನಾಲ್ಕು ದಿಕ್ಕುಗಳಿಂದ ಕೂಡಿಸುವರು. ಇದಲ್ಲದೆ ಆ ದಿವಸವೂ ಆ ಘಳಿಗೆಯೂ ನನ್ನ ತಂದೆ ಒಬ್ಬನಿಗೆ ಹೊರತು ಮತ್ಯಾರಿಗೂ, ಪರಲೋಕದಲ್ಲಿರುವ ದೂತರಿಗೆ ಸಹಾ ತಿಳಿಯದು. ಆದರೆ ನೋಹನ ದಿವಸಗಳು ಹ್ಯಾಗೋ, ಹಾಗೆಯೇ ಮನುಷ್ಯನ ಮಗನ ಬರುವಿಕೆಯು ಇರುವದು. ಹ್ಯಾಗಂದರೆ ಪ್ರಳಯಕ್ಕೆ ಮುಂಚಿನ ದಿವಸಗಳಲ್ಲಿ ನೋಹನು ನಾವೆಯಲ್ಲಿ ಪ್ರವೇಶಿಸುವ ದಿವಸದ ಪರ್ಯಂತರ ಅವರು ಉಣ್ಣುತ್ತಾ, ಕುಡಿಯುತ್ತಾ, ಮದುವೆ ಮಾಡಿ ಕೊಳ್ಳುತ್ತಾ, ಮದುವೆ ಮಾಡಿ ಕೊಡುತ್ತಾ, ಹ್ಯಾಗೆ ಅರಿಯದೆ ಇದ್ದರೋ, ಹಾಗೆಯೇ ಮನುಷ್ಯನ ಮಗನ ಬರುವಿಕೆಯು ಇರುವದು. ಆದದರಿಂದ ಯೆಚ್ಚರಿಕೆಯಾಗಿರಿ; ಯಾಕಂದರೆ ನಿಮ್ಮ ಕರ್ತನು ಬರುವ ಘಳಿಗೆ ಯಾವದೆಂದು ಅರಿಯರಿ. ಇದಲ್ಲದೆ ನಿಮ್ಮ ಹೃದಯಗಳು ಹೊಟ್ಟೆಬಾಕತನದಿಂದಲೂ ಅಮಲಿನಿಂದಲೂ ಜೀವನದ ಚಿಂತೆಗಳಿಂದಲೂ ಭಾರವಾಗಿರಲು, ಆ ದಿವಸವು ಫಕ್ಕನೆ ನಿಮ್ಮ ಮೇಲೆ ಬಾರದ ಹಾಗೆ ನೋಡಿಕೊಳ್ಳಿರಿ!

ಆಗ ಪರಲೋಕರಾಜ್ಯವು ತಮ್ಮ ದೀಪಗಳನ್ನು ತೆಗೆದುಕೊಂಡು, ಮದಲಿಂಗನನ್ನು ಯೆದುರುಗೊಳ್ಳ ಹೋರಟ ಹತ್ತು ಮಂದಿ ಕನ್ಯಾಸ್ತ್ರೀಯರಿಗೆ ಸಮಾನವಾಗಿದೆ. ಅವರಲ್ಲಿ ಐವರು ವಿವೇಕಿಗಳೂ, ಐವರು ಹುಚ್ಚರೂ ಆಗಿದ್ದರು. ಹುಚ್ಚರಾದವರು ತಮ್ಮ ದೀಪಗಳನ್ನು ತೆಗೆದುಕೊಂಡು, ಯೆಣ್ಣೆಯ

ನ್ನು ತಮ್ಮ ಸಂಗಡ ತಕ್ಕೊಳ್ಳಲಿಲ್ಲ. ಆದರೆ ವಿವೇಕಿಗಳು ತಮ್ಮ ದೀಪಗಳ ಸಂಗಡ ತಮ್ಮ ಬುದ್ದಲಿಗಳಲ್ಲಿ ಯೆಣ್ಣೆಯನ್ನು ತೆಗದುಕೊಂಡರು. ಮದಲಿಂಗನು ತಡ ಮಾಡುವಾಗ, ಯೆಲ್ಲರೂ ತೂಕಡಿಸಿ, ನಿದ್ದೆ ಮಾಡಿದರು. ಆದರೆ ಮಧ್ಯರಾತ್ರಿಯಲ್ಲಿ,—ಇಗೋ, ಮದಲಿಂಗನು ಬರುತ್ತಾನೆ; ಅವನೆದುರಿಗೆ ಹೊರಟು ಹೋಗಿರಿ! ಯೆಂಬ ಕೂಗು ಉಂಟಾಯಿತು. ಆಗ ಆ ಕನ್ಯಾಸ್ತ್ರೀಯರೆಲ್ಲರು ಯೆದ್ದು, ತಮ್ಮ ದೀಪಗಳನ್ನು ಸಿದ್ಧ ಮಾಡಿದರು. ಆದರೆ ಹುಚ್ಚರು ವಿವೇಕಿಗಳಿಗೆ,—ನಮ್ಮ ದೀಪಗಳು ಆರಿ ಹೋಗುತ್ತವೆ; ನಿಮ್ಮ ಯೆಣ್ಣೆಯಲ್ಲಿ ನಮಗೆ ಕೊಡಿರಿ! ಅನ್ನಲು, ವಿವೇಕಿಗಳು ಪ್ರತ್ಯುತ್ತರವಾಗಿ,—ನಿಮಗೂ ನಮಗೂ ಸಾಲದೆ ಹೋದೀತು; ನೀವು ಮಾರುವವರ ಬಳಿಗೆ ಹೋಗಿ, ನಿಮಗೆ ಕೊಂಡುಕೊಂಡರೆ ವಾಸಿ, ಅಂದರು. ಆದರೆ ಅವರು ಕೊಂಡುಕೊಳ್ಳುವದಕ್ಕೆ ಹೋಗುವಷ್ಟರಲ್ಲಿ ಮದಲಿಂಗನು ಬಂದನು; ಸಿದ್ಧವಾದವರು ಅವನ ಸಂಗಡ ಮದುವೆಗೆ ಪ್ರವೇಶಿಸಿದರು; ಆಗ ಬಾಗಲು ಮುಚ್ಚಲ್ಪಟ್ಟಿತು. ತರುವಾಯ ಮಿಕ್ಕಾದ ಕನ್ಯಾಸ್ತ್ರೀಯರು ಸಹಾ ಬಂದು,—ಕರ್ತನೇ, ಕರ್ತನೇ, ನಮಗೆ ತೆರೆ! ಅಂದರು. ಆದರೆ ಅವನು ಪ್ರತ್ಯುತ್ತರವಾಗಿ,—ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಿಮ್ಮನ್ನು ಅರಿಯೆನು, ಅಂದನು. ಆದದರಿಂದ ಯೆಚ್ಚರಿಕೆಯಾಗಿರಿ; ಯಾಕಂದರೆ ಮನುಷ್ಯನ ಮಗನು ಬರುವ ದಿನವನ್ನಾದರೂ ಘಳಿಗೆಯನ್ನಾದರೂ ಅರಿಯರಿ!

ಯಾಕಂದರೆ ದೇಶಾಂತರಕ್ಕೆ ಹೋಗುವ ವೊಬ್ಬ ಮನುಷ್ಯನು ತನ್ನ ದಾಸರನ್ನು ಕರದು, ಅವರಿಗೆ ತನ್ನ ಆಸ್ತಿಯನ್ನು ವೊಪ್ಪಿಸಿದ ಹಾಗದೆ. ಅವನು ವೊಬ್ಬನಿಗೆ ಐದು ತಲಾಂತು, ವೊಬ್ಬನಿಗೆ ಯೆರಡು, ವೊಬ್ಬನಿಗೆ ವೊಂದು, ವೊಬ್ಬೊಬ್ಬನಿಗೆ ಅವನವನ ಸಾಮರ್ಥ್ಯದ ಪ್ರಕಾರ ಕೊಟ್ಟು, ಸಂಗಡಲೇ ಹೊರಟನು. ಆಗ ಐದು ತಲಾಂತು ಹೊಂದಿದವನು ಹೋಗಿ, ಅವುಗಳಿಂದ ವ್ಯಾಪಾರ ಮಾಡಿ, ಬೇರೆ ಐದು ತಲಾಂತು ಮಾಡಿಕೊಂಡನು. ಅದೇಪ್ರಕಾರ ಯೆರಡು ಹೊಂದಿದವನು ಸಹಾ ಬೇರೆ ಯೆರಡು ಸಂಪಾದಿಸಿಕೊಂಡನು. ಆದರೆ ವೊಂದು ಹೊಂದಿದವನು ಹೋಗಿ, ಭೂಮಿ ಅಗದು, ತನ್ನ ಯ

ಜಮಾನನ ಹಣವನ್ನು ಬಚ್ಚಿಟ್ಟನು. ಬಹುಕಾಲವಾದ ಮೇಲೆ ಆ ದಾಸರ ಯಜಮಾನನು ಬಂದು, ಅವರಿಂದ ಲೆಕ್ಕ ತೆಗದುಕೊಳ್ಳುವಾಗ, ಐದು ತಲಾಂತು ಹೊಂದಿದವನು ಬಂದು, ಬೇರೆ ಐದು ತಲಾಂತು ತಂದು,—ಅಯ್ಯಾ, ಐದು ತಲಾಂತು ನನಗೆ ಒಪ್ಪಿಸಿದಿಯಲ್ಲಾ? ಇಗೋ, ಅವುಗಳಿಂದ ಇನ್ನೂ ಐದು ತಲಾಂತು ಸಂಪಾದಿಸಿಕೊಂಡಿದ್ದೇನೆ, ಅಂದನು. ಆಗ ಅವನ ಯಜಮಾನನು ಅವನಿಗೆ,—ಚನ್ನಾಯಿತು, ನಂಬಿಕೆಯುಳ್ಳ ಒಳ್ಳೇ ದಾಸನೇ! ಸ್ವಲ್ಪವಾದದರಲ್ಲಿ ನಂಬಿಕೆಯುಳ್ಳವನಾಗಿದ್ದಿ, ಬಹಳವಾದದರ ಮೇಲೆ ನಿನ್ನನ್ನು ಇರಿಸುವೆನು; ನಿನ್ನ ಯಜಮಾನನ ಸಂತೋಷದಲ್ಲಿ ಪ್ರವೇಶಿಸು! ಅಂದನು. ಆಮೇಲೆ ಯೆರಡು ತಲಾಂತು ಹೊಂದಿದವನು ಸಹಾ ಬಂದು,—ಅಯ್ಯಾ, ನನಗೆ ಯೆರಡು ತಲಾಂತು ಒಪ್ಪಿಸಿದಿಯಲ್ಲಾ? ಇಗೋ, ಅವುಗಳಿಂದ ಇನ್ನೂ ಯೆರಡು ತಲಾಂತು ಸಂಪಾದಿಸಿಕೊಂಡಿದ್ದೇನೆ, ಅಂದನು. ಅವನ ಯಜಮಾನನು ಅವನಿಗೆ,—ಚನ್ನಾಯಿತು, ನಂಬಿಕೆಯುಳ್ಳ ಒಳ್ಳೇ ದಾಸನೇ! ಸ್ವಲ್ಪವಾದದರ ಮೇಲೆ ನಂಬಿಕೆಯುಳ್ಳವನಾಗಿದ್ದಿ, ಬಹಳವಾದದರ ಮೇಲೆ ನಿನ್ನನ್ನು ಇರಿಸುವೆನು; ನಿನ್ನ ಯಜಮಾನನ ಸಂತೋಷದಲ್ಲಿ ಪ್ರವೇಶಿಸು! ಅಂದನು. ಆಗ ಒಂದು ತಲಾಂತು ಹೊಂದಿದವನು ಸಹಾ ಬಂದು,—ಅಯ್ಯಾ, ನೀನು ಬಿತ್ತದೆ ಇರುವಲ್ಲಿ ಕೊಯ್ಯುವ, ಚೆಲ್ಲದೆ ಇರುವಲ್ಲಿ ಕೂಡಿಸುವ, ಕಠಿಣ ಮನುಷ್ಯನೆಂದು ತಿಳಿದು, ಭಯ ಪಟ್ಟು, ಹೋಗಿ, ನಿನ್ನ ತಲಾಂತು ಭೂಮಿಯಲ್ಲಿ ಬಚ್ಚಿಟ್ಟೆನು; ಇಗೋ, ನಿನ್ನದು ನಿನಗುಂಟು, ಅಂದನು. ಅವನ ಯಜಮಾನನು ಪ್ರತ್ಯುತ್ತರವಾಗಿ ಅವನಿಗೆ,—ಮೈಗಳ್ಳನಾದ ಕೆಟ್ಟ ದಾಸನೇ! ನಾನು ಬಿತ್ತದೆ ಇರುವಲ್ಲಿ ಕೊಯ್ಯುತ್ತೇನೆ, ಚೆಲ್ಲದೆ ಇರುವಲ್ಲಿ ಕೂಡಿಸುತ್ತೇನೆ, ಯೆಂದು ತಿಳುಕೊಂಡಿ; ಹಾಗಾದರೆ ನನ್ನ ಹಣವನ್ನು ಚಿನಿವಾರರಿಗೆ ಕೊಡ ಬೇಕಾಗಿತ್ತು; ಆಗ ನಾನು ಬರುವಾಗ, ನನ್ನದನ್ನು ಬಡ್ಡಿಯ ಸಂಗಡ ತಕೊಳ್ಳುತ್ತಿದ್ದೆನು. ಹೀಗಿರುವದರಿಂದ ಅವನಿಂದ ಆ ತಲಾಂತು ತೆಗದು, ಹತ್ತು ತಲಾಂತು ಹೊಂದಿದವನಿಗೆ ಕೊಡಿರಿ! ಯಾಕಂದರೆ ಉಂಟಾದ ಪ್ರತಿ ಮನುಷ್ಯನಿಗೆ ಕೊಡಲ್ಪಡುವದು, ಆಗ ಅವನಿಗೆ ಹೆಚ್ಚಿರುವದು; ಆದರೆ ಇಲ್ಲದವ

ನಿಂದ ಅವನಿಗೆ ಇದ್ದದ್ದು ಸಹಾ ತೆಗೆಯಲ್ಪಡುವದು. ಮತ್ತು ಈ ನಿಷ್ಪ್ರಯೋಜಕನಾದ ದಾಸನನ್ನು ಹೊರಗಿನ ಕತ್ತಲೆಯೊಳಗೆ ದೊಬ್ಬಿರಿ! ಅಲ್ಲಿ ಅಳುವಿಕೆಯೂ ಹಲ್ಲುಕಡಿಯುವಿಕೆಯೂ ಇರುವವು.

ಇದಲ್ಲದೆ ಮನುಷ್ಯನ ಮಗನು ತನ್ನ ಮಹಿಮೆಯಲ್ಲಿ ತನ್ನ ಪರಿಶುದ್ಧ ದೂತರೆಲ್ಲರ ಸಂಗಡ ಬರುವಾಗ, ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂಡ್ರುವನು. ಮತ್ತು ಅವನ ಮುಂದೆ ಜನಾಂಗಗಳೆಲ್ಲಾ ಕೂಡಲ್ಪಡುವವು. ಮತ್ತು ಕುರುಬನು ಕುರಿಗಳನ್ನೂ ಆಡುಗಳನ್ನೂ ಬೇರೆ ಬೇರೆ ಮಾಡುವ ಪ್ರಕಾರ, ಅವರನ್ನು ಬೇರೆ ಬೇರೆ ಮಾಡಿ, ಕುರಿಗಳನ್ನು ತನ್ನ ಬಲಪಾರ್ಶ್ವದಲ್ಲಿಯೂ, ಆಡುಗಳನ್ನು ಯೆಡಪಾರ್ಶ್ವದಲ್ಲಿಯೂ ನಿಲ್ಲಿಸುವನು. ಆಗ ಅರಸನು ತನ್ನ ಬಲಪಾರ್ಶ್ವದಲ್ಲಿರುವವರಿಗೆ,—ನನ್ನ ತಂದೆಯಿಂದ ಆಶೀರ್ವದಿಸಲ್ಪಟ್ಟವರೇ, ಬನ್ನಿರಿ! ಜಗದುತ್ಪತ್ತಿಯಿಂದ ನಿಮಗೆ ಸಿದ್ಧ ಮಾಡಲ್ಪಟ್ಟ ರಾಜ್ಯವನ್ನು ಬಾಧ್ಯವಾಗಿ ಹೊಂದಿರಿ! ಯಾಕಂದರೆ ನಾನು ಹಸಿದಿರಲಾಗಿ, ನನಗೆ ಉಣ್ಣ ಕೊಟ್ಟಿರಿ; ದಾಹಪಡಲಾಗಿ, ನನಗೆ ಕುಡಿಯ ಕೊಟ್ಟಿರಿ; ಪರದೇಶಿಯಾಗಿರಲಾಗಿ, ನನ್ನನ್ನು ಸೇರಿಸಿಕೊಂಡಿರಿ; ಬೆತ್ತಲೆಯಾಗಿರಲಾಗಿ, ನನಗೆ ಉಡ ಕೊಟ್ಟಿರಿ; ಅಸ್ವಸ್ಥವಾಗಿರಲಾಗಿ, ನನ್ನನ್ನು ಪರಾಮರಿಸಿದಿರಿ; ಸೆರೆಯಲ್ಲಿ ಇರಲಾಗಿ, ನನ್ನ ಬಳಿಗೆ ಬಂದಿರಿ, ಯೆಂದು ಹೇಳುವನು. ಆಗ ನೀತಿವಂತರು ಆತನಿಗೆ ಪ್ರತ್ಯುತ್ತರವಾಗಿ,—ಕರ್ತನೇ, ಯಾವಾಗ ನಿನ್ನನ್ನು ಹಸಿದವನಾಗಿ ನೋಡಿ, ಸಾಕಿದೆವು? ಇಲ್ಲವೆ ನಿನ್ನನ್ನು ದಾಹಪಡುವವನಾಗಿ ನೋಡಿ, ಕುಡಿಯ ಕೊಟ್ಟೆವು? ಯಾವಾಗ ನಿನ್ನನ್ನು ಪರದೇಶಿಯಾಗಿ ನೋಡಿ, ಸೇರಿಸಿಕೊಂಡೆವು? ಇಲ್ಲವೆ ನಿನ್ನನ್ನು ಬೆತ್ತಲೆಯಾಗಿ ನೋಡಿ, ಉಡ ಕೊಟ್ಟೆವು? ಯಾವಾಗ ನಿನ್ನನ್ನು ಅಸ್ವಸ್ಥವಾಗಿ, ಇಲ್ಲವೆ ಸೆರೆಯಲ್ಲಿರುವವನಾಗಿ ನೋಡಿ, ನಿನ್ನ ಬಳಿಗೆ ಬಂದೆವು? ಯೆಂದು ಹೇಳುವರು. ಅವರಿಗೆ ಅರಸನು ಪ್ರತ್ಯುತ್ತರವಾಗಿ,—ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಈ ನನ್ನ ಸಹೋದರರಲ್ಲಿ ಯೆಲ್ಲರಿಗೂ ಚಿಕ್ಕವನಾದ ವೊಬ್ಬನಿಗೆ ಮಾಡಿದದರಿಂದ, ನನಗೆ ಮಾಡಿದಿರಿ! ಯೆಂದು ಹೇಳುವನು. ಆಗ ಯೆಡಪಾರ್ಶ್ವದಲ್ಲಿರುವವರಿಗೆ,—ಶಪಿಸಲ್ಪಟ್ಟವರೇ, ನನ್ನನ್ನು ಬಿಟ್ಟು, ವಿ

ಶಾಟನಿಗೂ ಅವನ ದೂತರಿಗೂ ಸಿದ್ಧ ಮಾಡಲ್ಪಟ್ಟ ನಿತ್ಯ ಬೆಂಕಿಗೆ ಹೋಗಿರಿ! ಯಾಕಂದರೆ ನಾನು ಹಸಿದಿರಲಾಗಿ, ನೀವು ನನಗೆ ಉಣ್ಣ ಕೊಡಲಿಲ್ಲ; ದಾಹಪಡಲಾಗಿ, ನನಗೆ ಕುಡಿಯ ಕೊಡಲಿಲ್ಲ; ಪರದೇಶಿಯಾಗಿರಲಾಗಿ, ನನ್ನನ್ನು ಸೇರಿಸಿಕೊಳ್ಳಲಿಲ್ಲ; ಬೆತ್ತಲೆಯಾಗಿರಲಾಗಿ, ನನಗೆ ಉಡ ಕೊಡಲಿಲ್ಲ; ಅಸ್ವಸ್ಥವಾಗಿಯೂ ಸೆರೆಯಲ್ಲಿಯೂ ಇರಲಾಗಿ, ನನ್ನನ್ನು ಪರಾಮರಿಸಲಿಲ್ಲ, ಯೆಂದು ಹೇಳುವನು. ಆಗಲವರು ಆತನಿಗೆ ಪ್ರತ್ಯುತ್ತರವಾಗಿ, — ಕರ್ತನೇ, ಯಾವಾಗ ನಿನ್ನನ್ನು ಹಸಿದವನಾಗಿಯೂ ದಾಹಪಡುವವನಾಗಿಯೂ ಪರದೇಶಿಯಾಗಿಯೂ ಬೆತ್ತಲೆಯಾಗಿಯೂ ನೋಡಿ, ನಿನಗೆ ಸೇವೆ ಮಾಡಲಿಲ್ಲ? ಯೆಂದು ಹೇಳುವರು. ಆಗಲವರಿಗೆ ಪ್ರತ್ಯುತ್ತರವಾಗಿ, — ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಇವರಲ್ಲಿ ಯೆಲ್ಲರಿಗೂ ಚಿಕ್ಕವನಾದ ಒಬ್ಬನಿಗೆ ಮಾಡದದರಿಂದ, ನನಗೂ ಮಾಡಲಿಲ್ಲ, ಯೆಂದು ಹೇಳುವನು. ಆಗ ಇವರು ನಿತ್ಯದಂಡನೆಗೂ, ನೀತಿವಂತರು ನಿತ್ಯಜೀವಕ್ಕೂ, ಹೋಗುವರು.

---

೩೧. ಗ್ರೇಕರು ಯೇಸುವನ್ನು ನೋಡಲಿಕ್ಕೆ ಬಂದದ್ದು. ಪ್ರಧಾನಯಾಜಕರು ಯೂದನ ಸಂಗಡ ಒಡಂಬಡಿಕೆ ಮಾಡಿದ್ದು. ಕಡೇ ಪಸ್ಕಭೋಜನ.

(ಮತ್ಥ್. ೨೬, ೧–೨೯. ಮಾರ್ಕ. ೧೪, ೧–೨೫. ಲೂಕ್. ೨೨, ೧–೩೮. ಯೋ. ೧೨, ೨೦–೫೦. ೧೩, ೧–೩೮.)

(ಶ್ರಮಸಪ್ತಕದ ಬುಧವಾರ.)

ಹಬ್ಬದಲ್ಲಿ ಆರಾಧಿಸುವದಕ್ಕೆ ಯೇರಿ ಬಂದವರಲ್ಲಿ ಕೆಲವರು ಗ್ರೇಕರು ಇದ್ದರು. ಇವರು ಫಿಲಿಪ್ಪನ ಬಳಿಗೆ ಬಂದು, — ಅಯ್ಯಾ, ಯೇಸುವನ್ನು ನೋಡ ಬೇಕು, ಯೆಂದು ಅವನನ್ನು ಬೇಡಿಕೊಂಡರು. ಫಿಲಿಪ್ಪನು ಬಂದು, ಅಂದ್ರೇಯನಿಗೆ ಹೇಳಿದನು; ಮತ್ತು ಅಂದ್ರೇಯನೂ ಫಿಲಿಪ್ಪನೂ ಯೇಸುವಿಗೆ ಹೇಳಿದರು. ಆಗ ಯೇಸು ಅವರಿಗೆ ಹೇಳಿದ್ದೇನಂದರೆ, — ಮನುಷ್ಯನ ಮಗನು ಮಹಿಮೆ ಪಡುವದಕ್ಕೆ ಘಳಿಗೆ ಬಂತು. ನಿಶ್ಚಯ ನಿಶ್ಚಯವಾಗಿ

ನಿಮಗೆ ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸತ್ತ ಹೊರತು ಒಂಟಿಯಾಗಿರುವದು, ಆದರೆ ಸತ್ತರೆ ಬಹಳ ಫಲ ಫಲಿಸುವದು. ಈಗ ನನ್ನ ಪ್ರಾಣವು ಕಳವಳಗೊಂಡದೆ; ಮತ್ತು ಯೇನು ಹೇಳಲಿ? ತಂದೆಯೇ, ಈ ಘಳಿಗೆಯೊಳಗಿಂದ ನನ್ನನ್ನು ರಕ್ಷಿಸು! ಆದರೆ ಇದಕ್ಕೋಸ್ಕರ ಈ ಘಳಿಗೆಗೆ ಬಂದೆನು. ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸು! ಆಗ,—ಮಹಿಮೆ ಪಡಿಸಿದ್ದೇನೆ, ಮತ್ತು ತಿರಿಗಿ ಮಹಿಮೆ ಪಡಿಸುವೆನು! ಯೆಂಬ ಶಬ್ದವು ಆಕಾಶದಿಂದ ಬಂತು. ಹೀಗಿರುವದರಿಂದ ನಿಂತು ಕೇಳಿದ ಸಮೂಹವು,—ಗುಡುಗಾಯಿತು! ಅಂದರು; ಬೇರೆಬ್ಬರು,—ದೂತನು ಅವನ ಸಂಗಡ ಮಾತಾಡಿದ್ದಾನೆ, ಅಂದರು. ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ನನ್ನಗೋಸ್ಕರವಲ್ಲ, ನಿಮಗೋಸ್ಕರವೇ ಈ ಶಬ್ದವಾಯಿತು. ಈಗಲೇ ಈ ಲೋಕದ ನ್ಯಾಯತೀರ್ವಿಕೆ ಆಗುತ್ತದೆ. ಈಗಲೇ ಈ ಲೋಕದ ಅಧಿಪತಿಯು ಹೊರಗೆ ಹಾಕಲ್ಪಡುವನು. ಇನ್ನು ಸ್ವಲ್ಪ ಕಾಲ ಬೆಳಕು ನಿಮ್ಮಲ್ಲಿ ಇರುತ್ತದೆ. ನೀವು ಬೆಳಕಿನ ಮಕ್ಕಳಾಗುವ ಹಾಗೆ, ಬೆಳಕು ನಿಮಗೆ ಇರುವ ಮಟ್ಟಿಗೂ ಬೆಳಕಿನಲ್ಲಿ ವಿಶ್ವಾಸವಿಡಿರಿ. ಯೇಸು ಇವುಗಳನ್ನು ಮಾತಾಡಿದ ಮೇಲೆ ಅವರನ್ನು ಬಿಟ್ಟು ಹೋಗಿ, ಅಡಗಿಕೊಂಡನು.—ಆದರೆ ಆತನು ಅಷ್ಟು ಲಕ್ಷಣಗಳನ್ನು ಅವರ ಮುಂದೆ ಮಾಡಿದ್ದಾಗ್ಯೂ, ಅವರು ಆತನಲ್ಲಿ ವಿಶ್ವಾಸವಿಡಲಿಲ್ಲ. ಆದಾಗ್ಯೂ ಅಧಿಪತಿಗಳಲ್ಲಿಯೂ ಅನೇಕರು ವಿಶ್ವಾಸವಿಟ್ಟರು; ಆದರೆ ತಾವು ಸಭೆಯಿಂದ ಹೊರಗೆ ಹಾಕಲ್ಪಟ್ಟೇವೆಂದು, ಫರಿಸಾಯರ ನಿಮಿತ್ತ ಅರಿಕೆ ಮಾಡಲಿಲ್ಲ; ಯಾಕಂದರೆ ದೇವರ ಮಹಿಮೆಗಿಂತ ಮನುಷ್ಯರ ಮಹಿಮೆಯನ್ನು ಹೆಚ್ಚಾಗಿ ಪ್ರೀತಿ ಮಾಡಿದರು.

ಯೇಸು ಈ ಮಾತುಗಳನ್ನೆಲ್ಲಾ ಮುಗಿಸಿದ ಮೇಲೆ ತನ್ನ ಶಿಷ್ಯರಿಗೆ,—ಯೆರಡು ದಿವಸಗಳ ಮೇಲೆ ಪಸ್ಕವಾಗುವದೆಂದು ಬಲ್ಲಿರಿ; ಆಗ ಮನುಷ್ಯನ ಮಗನು ಕ್ರೂಜೆಗೆ ಹಾಕಲ್ಪಡುವದಕ್ಕೆ ಒಪ್ಪಿಸಲ್ಪಡುವನು, ಅಂದನು.

ಆಗ ಪ್ರಧಾನಯಾಜಕರೂ ಶಾಸ್ತ್ರಿಗಳೂ ಜನರ ಹಿರಿಯರೂ ಕಾಯಫನೆಂಬ ಪ್ರಧಾನಯಾಜಕನ ಮಠಕ್ಕೆ ಕೂಡಿ ಬಂದು, ಯೇಸುವನ್ನು ಕಪಟದಿಂದ

ಹಿಡಿದುಕೊಳ್ಳುವ ಹಾಗೆ ಆಲೋಚನೆ ಮಾಡಿಕೊಂಡರು. ಆದರೆ, — ಜನರಲ್ಲಿ ಗುಲ್ಲು ಆಗದ ಹಾಗೆ, ಹಬ್ಬದಲ್ಲಿ ಬೇಡ! ಅಂದರು. ಆಗ ಹನ್ನೆರಡು ಮಂದಿಯಲ್ಲಿ ಒಬ್ಬನಾದ ಯೂದ ಇಸ್ಕರಿಯೋತನೆಂಬವನು ಪ್ರಧಾನ ಯಾಜಕರ ಬಳಿಗೆ ಹೋಗಿ, — ನಾನು ಅವನನ್ನು ನಿಮಗೆ ಒಪ್ಪಿಸಿ ಕೊಡುತ್ತೇನೆ; ನನಗೆ ಯೇನು ಕೊಡುತ್ತೀರಿ? ಅಂದನು. ಅವರು ಕೇಳಿ, ಸಂತೋಷಪಟ್ಟು, ಅವನ ಸಂಗಡ ಮೂವತ್ತು ರೂಪಾಯಿಗೆ ಒಡಂಬಟ್ಟರು. ಆಗಲವನು ಮಾತು ಕೊಟ್ಟು, ಗುಂಪು ಕೂಡದ ಹಾಗೆ ಆತನನ್ನು ಅವರಿಗೆ ಒಪ್ಪಿಸುವದಕ್ಕೆ ಒಳ್ಳೇ ಸಮಯ ಹುಡುಕಿದನು.

ಆದರೆ ಯೇಸು ಕೂಗಿ ಹೇಳಿದ್ದೇನಂದರೆ, — ನಂನಲ್ಲಿ ವಿಶ್ವಾಸವಿಡುವವನು ನಂನಲ್ಲಿ ಅಲ್ಲ, ನನ್ನನ್ನು ಕಳುಹಿಸಿದವನಲ್ಲಿ ವಿಶ್ವಾಸವಿಡುತ್ತಾನೆ; ಮತ್ತು ನನ್ನನ್ನು ನೋಡುವವನು ನನ್ನನ್ನು ಕಳುಹಿಸಿದವನನ್ನು ನೋಡುತ್ತಾನೆ. ನಂನಲ್ಲಿ ವಿಶ್ವಾಸವಿಡುವವರೆಲ್ಲರೂ ಕತ್ತಲಲ್ಲಿ ಇರದ ಹಾಗೆ, ನಾನು ಬೆಳಕಾಗಿ ಈ ಲೋಕಕ್ಕೆ ಬಂದೆನು. ಮತ್ತು ಯಾವನಾದರೂ ನನ್ನ ಮಾತುಗಳನ್ನು ಕೇಳಿ ವಿಶ್ವಾಸಿಸದೆ ಹೋದರೆ, ನಾನು ಅವನಿಗೆ ಆಜ್ಞೆ ನಿರ್ಣಯಿಸುವದಿಲ್ಲ; ಯಾಕಂದರೆ ಆಜ್ಞೆ ನಿರ್ಣಯಿಸುವದಕ್ಕಲ್ಲ, ಲೋಕವನ್ನು ರಕ್ಷಿಸುವದಕ್ಕೆ ಬಂದೆನು. ನನ್ನನ್ನು ಅಲಕ್ಷ್ಯ ಮಾಡಿ, ನನ್ನ ಮಾತುಗಳನ್ನು ಅಂಗೀಕರಿಸದವನಿಗೆ ನ್ಯಾಯ ತೀರಿಸುವವನು ಇದ್ದಾನೆ; ನಾನು ಮಾತಾಡಿದ ವಾಕ್ಯ, ಅದೇ ಕಡೇ ದಿವಸದಲ್ಲಿ ಅವನಿಗೆ ನ್ಯಾಯ ತೀರಿಸುವದು; ಯಾಕಂದರೆ ನಾನು ನನ್ನಿಂದಲೇ ಮಾತಾಡಲಿಲ್ಲ; ನಂನನ್ನು ಕಳುಹಿಸಿದ ತಂದೆಯು ನಾನು ಯೇನು ಮಾತಾಡ ಬೇಕೆಂದು ಕಟ್ಟಳೆಯನ್ನು ನನಗೆ ಕೊಟ್ಟಿದ್ದಾನೆ; ಮತ್ತು ಅವನ ಕಟ್ಟಳೆ ನಿತ್ಯಜೀವವಾಗಿದೆ ಯೆಂದು ಬಲ್ಲೆನು; ಆದದರಿಂದ ನಾನು ಮಾತಾಡುವವುಗಳನ್ನು ತಂದೆಯು ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ.

(ಶ್ರಮಸಪ್ತಕದ ಬೃಹಸ್ಪತಿವಾರ.)

ಆದರೆ ಪಸ್ಕಹಬ್ಬಕ್ಕೆ ಮುಂಚೆ ಯೇಸು, ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುವದಕ್ಕೆ ಘಳಿಗೆ ಬಂತೆಂದು ತಿಳಿದುಕೊಂಡು,

ಲೋಕದಲ್ಲಿರುವ ಸ್ವಜನರನ್ನು ಪ್ರೀತಿ ಮಾಡಿ, ಅಂತ್ಯದ ಪರ್ಯಂತರ ಅವರನ್ನು ಪ್ರೀತಿ ಮಾಡಿದನು.

ಆದರೆ ಹುಳಿ ಇಲ್ಲದ ರೊಟ್ಟಿಯ ಹಬ್ಬದ ಮೊದಲನೇ ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು, —ನಾವು ನಿನಗೆ ಪಸ್ಕವನ್ನು ಉಣ್ಣುವದಕ್ಕೆ ಯೆಲ್ಲಿ ಸಿದ್ಧ ಮಾಡ ಬೇಕು? ಅಂದರು. ಅದಕ್ಕಾತನು ಪೇತ್ರನನ್ನೂ ಯೋಹಾನನನ್ನೂ ಕಳುಹಿಸಿ, ಅವರಿಗೆ ಹೇಳಿದ್ದೇನಂದರೆ, —ಪಟ್ಣಕ್ಕೆ ಹೋಗಿರಿ; ಅಲ್ಲಿ ನೀರಿನ ಗಡಿಗೆಯನ್ನು ಹೊರುವ ಮನುಷ್ಯನು ನಿಮಗೆದುರಾಗಿ ಬರುವನು; ಅವನನ್ನು ಹಿಂಬಾಲಿಸಿರಿ; ಮತ್ತು ಅವನು ಪ್ರವೇಶಿಸುವ ಮನೆಯ ಯಜಮಾನನಿಗೆ, —ನನ್ನ ಸಮಯವು ಸಮೀಪವಾಗಿದೆ; ನಾನು ನನ್ನ ಶಿಷ್ಯರ ಸಂಗಡ ಪಸ್ಕವನ್ನು ಉಣ್ಣತಕ್ಕ ಶಾಲೆ ಯೆಲ್ಲಿ? ಯೆಂತ ಬೋಧಕನು ನಿನಗೆ ಹೇಳುತ್ತಾನೆ, ಯೆಂಬದಾಗಿ ಹೇಳಿರಿ! ಅವನು ನಿಮಗೆ ಸಾಮಗ್ರಿ ಇರುವಂಥಾ ದೊಡ್ಡ ಮೇಲ್ಮಾಳಿಗೆಯನ್ನು ತೋರಿಸುವನು; ಅಲ್ಲಿ ಸಿದ್ಧ ಮಾಡಿರಿ! ಅವರು ಹೋಗಿ, ತಮಗೆ ಹೇಳಿದ ಹಾಗೆ ಕಂಡು, ಪಸ್ಕವನ್ನು ಸಿದ್ಧ ಮಾಡಿದರು.

ಮತ್ತು ಸಾಯಂಕಾಲವಾದಾಗ, ಆತನು ಹನ್ನೆರಡು ಮಂದಿಯ ಸಂಗಡ ಬಂದು, ಊಟಕ್ಕೆ ಕೂತುಕೊಂಡನು. ಆಗಲವರಿಗೆ ಹೇಳಿದ್ದೇನಂದರೆ, —ನಾನು ಶ್ರಮೆಪಡುವದಕ್ಕಿಂತ ಮುಂಚೆ ಈ ಪಸ್ಕವನ್ನು ನಿಮ್ಮ ಸಂಗಡ ಉಣ್ಣುವದಕ್ಕೆ ಬಹಳವಾಗಿ ಅಪೇಕ್ಷಿಸಿದ್ದೇನೆ; ಯಾಕಂದರೆ ನಿಮಗೆ ಹೇಳುತ್ತೇನೆ, ಅದು ದೇವರ ರಾಜ್ಯದಲ್ಲಿ ಸಂಪೂರ್ಣವಾಗುವ ಪರ್ಯಂತರ ನಾನು ಇನ್ನೂ ಅದನ್ನು ಉಣ್ಣುವದಿಲ್ಲ. ಮತ್ತು ಆತನು ಕುಡಿಕೆ ತೆಗೆದುಕೊಂಡು, ಸ್ತೋತ್ರ ಮಾಡಿ, —ಇದನ್ನು ತೆಗೆದುಕೊಂಡು, ನಿಮ್ಮಲ್ಲಿ ಹಂಚಿಕೊಳ್ಳಿರಿ! ಯಾಕಂದರೆ ದೇವರ ರಾಜ್ಯವು ಬರುವ ತನಕ ಈ ದ್ರಾಕ್ಷೆರಸವನ್ನು ಇನ್ನೂ ಕುಡಿಯೆನೆಂದು ನಿಮಗೆ ಹೇಳುತ್ತೇನೆ, ಅಂದನು. —ಇದಲ್ಲದೆ ತಮ್ಮಲ್ಲಿ ದೊಡ್ಡವನಾಗಿ ಯೆಣಿಸಲ್ಪಡುವವನು ಯಾರೆಂದು ಅವರಲ್ಲಿ ವಾಗ್ವಾದ ಉಂಟಾಯಿತು. ಆಗ ಯೇಸು ಭೋಜನದಿಂದ ಯೆದ್ದು, ವಸ್ತ್ರಗಳನ್ನು ತೆಗೆದಿಟ್ಟು, ಅಂಗವಸ್ತ್ರವ

ನ್ನು ತಕ್ಕೊಂಡು, ನಡು ಕಟ್ಟಿಕೊಂಡನು. ಆಮೇಲೆ ತೊಳೆಯುವ ಪಾತ್ರೆಯಲ್ಲಿ ನೀರು ಹೊಯಿದು, ಶಿಷ್ಯರ ಪಾದಗಳನ್ನು ತೊಳೆಯಲೂ, ತಾನು ನಡುವಿಗೆ ಕಟ್ಟಿಕೊಂಡಿದ್ದ ಅಂಗವಸ್ತ್ರದಿಂದ ಒರಸಲೂ ಆರಂಭ ಮಾಡಿದನು. ಆತನು ಸೀಮೋನ್ ಪೇತ್ರನ ಬಳಿಗೆ ಬರುವಾಗ, ಇವನು ಆತನಿಗೆ,—ಕರ್ತನೇ, ನೀ



ನು ನನ್ನ ಪಾದಗಳನ್ನು ತೊಳೆಯುತ್ತೀಯೋ? ಅಂದನು. ಯೇಸು ಪ್ರತ್ಯುತ್ತರವಾಗಿ ಅವನಿಗೆ,—ನಾನು ಮಾಡುವದು ಈಗ ನಿನಗೆ ತಿಳಿಯುವದಿಲ್ಲ, ಇನ್ನು ಮೇಲೆ ತಿಳಿಯುವದು, ಅಂದನು. ಪೇತ್ರನು ಆತನಿಗೆ,—ನೀನು ನನ್ನ ಪಾದಗಳನ್ನು ಯೆಂದಿಗೂ ತೊಳೆಯ ಬಾರದು! ಅನ್ನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ,—ನಾನು ನಿನ್ನನ್ನು ತೊಳೆಯದಿದ್ದರೆ, ನನ್ನ ಸಂಗಡ ನಿನಗೆ ಪಾಲಿಲ್ಲ! ಅಂದನು. ಸೀಮೋನ್ ಪೇತ್ರನು ಆತನಿಗೆ,—ಕರ್ತನೇ, ನನ್ನ ಪಾದಗಳನ್ನು ಮಾತ್ರವಲ್ಲ, ನನ್ನ ಕೈಗಳನ್ನೂ ತಲೆಯನ್ನೂ ತೊಳಿ! ಅಂದಾಗ, ಯೇಸು ಅವನಿಗೆ,—ಮೈ ತೊಳದವನಿಗೆ ಪಾದಗಳ ಹೊರತು ತೊಳೆಯುವದಕ್ಕೆ ಅವಶ್ಯವಿಲ್ಲ; ಸಂಪೂರ್ಣವಾಗಿ ಶುದ್ಧವಾಗಿದ್ದಾನೆ, ಅಂದನು. ಅವರ ಪಾದಗಳನ್ನು ತೊಳದ ಮೇಲೆ ತನ್ನ ವಸ್ತ್ರಗಳನ್ನು ತಕ್ಕೊಂಡು, ತಿರಿಗಿ ಕೂತುಕೊಂಡು, ಅವರಿಗೆ ಹೇಳಿದ್ದೇನಂದರೆ,—ನಾನು ನಿಮಗೆ ಮಾಡಿದ್ದೇನೆಂದು ತಿಳಿಯುತ್ತೀರೋ? ನೀವು ನನ್ನನ್ನು ಬೋಧಕನೆಂದೂ ಕರ್ತನೆಂದೂ ಅಂನುತ್ತೀರಿ, ಮತ್ತು ಸರಿಯಾಗಿ ಹೇಳುತ್ತೀರಿ, ಯಾಕಂದರೆ ಹಾಗೆಯೇ ಇದ್ದೇನೆ; ಹಾಗಾದರೆ ಕರ್ತನೂ ಬೋಧಕನೂ ಆಗಿರುವ ನಾನು ನಿಮ್ಮ ಪಾದಗಳನ್ನು ತೊಳದು ಇದ್ದರೆ, ನೀವು ಸ

ಹಾಗೆ ಒಬ್ಬರಿಗೊಬ್ಬರು ಪಾದಗಳನ್ನು ತೊಳೆಯ ಬೇಕು; ಯಾಕಂದರೆ ನಾನು ನಿಮಗೆ ಮಾಡಿದ ಪ್ರಕಾರವೇ ನೀವು ಮಾಡುವ ಹಾಗೆ ನಿಮಗೆ ಮಾದರಿ ಕೊಟ್ಟಿದ್ದೇನೆ. ನಿಶ್ಚಯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ದಾಸನು ತನ್ನ ಕರ್ತನಿಗಿಂತ ದೊಡ್ಡವನಲ್ಲ. ನೀವು ಇವುಗಳನ್ನು ತಿಳಿದು ಮಾಡಿದರೆ, ಭಾಗ್ಯವಂತರಾಗಿದ್ದೀರಿ!

ಅವರು ಊಟ ಮಾಡುವಾಗ ಯೇಸು ಹೇಳಿದ್ದೇನಂದರೆ,—ನಿಮ್ಮಲ್ಲಿ ಒಬ್ಬನು, ನನ್ನ ಸಂಗಡ ಉಣ್ಣುವವನು, ನನ್ನನ್ನು ಒಪ್ಪಿಸಿ ಕೊಡುವನು. ಆಗಲವರು ಬಹಳ ದುಃಖಪಟ್ಟು, ಅವರಲ್ಲಿ ಒಬ್ಬೊಬ್ಬನು,—ಕರ್ತನೇ, ನಾನೋ? ಯೆಂದು ಆತನಿಗೆ ಹೇಳಲಾರಂಭಿಸಿದರು. ಆತನು ಪ್ರತ್ಯುತ್ತರವಾಗಿ ಹೇಳಿದ್ದು,—ಹನ್ನೆರಡು ಮಂದಿಯೊಳಗೆ ನನ್ನ ಸಂಗಡ ಪಾತ್ರೆಯಲ್ಲಿ ಕೈ ಅದ್ದುವ ಒಬ್ಬನೇ! ಮನುಷ್ಯನ ಮಗನು ಅವನ ವಿಷಯವಾಗಿ ಬರದಿರುವ ಪ್ರಕಾರ ಹೋಗುತ್ತಾನೆ; ಆದರೆ ಯಾವನಿಂದ ಮನುಷ್ಯನ ಮಗನು ಒಪ್ಪಿಸಲ್ಪಡುತ್ತಾನೋ, ಆ ಮನುಷ್ಯನಿಗೆ ಅಯ್ಯೋ! ಆ ಮನುಷ್ಯನು ಹುಟ್ಟದೆ ಇದ್ದರೆ, ಅವನಿಗೆ ವಾಸಿ. ಇವುಗಳನ್ನು ಹೇಳಿದ ಮೇಲೆ ಯೇಸು ಆತ್ಮದಲ್ಲಿ ಕಳವಳಗೊಂಡು,(ಯೆರಡನೇ ಸಾರಿ) ಹೇಳಿದ್ದೇನಂದರೆ,—ನಿಮ್ಮಲ್ಲಿ ಒಬ್ಬನು ನನ್ನನ್ನು ಒಪ್ಪಿಸಿ ಕೊಡುವನು. ಆಗ ಶಿಷ್ಯರು ಯಾವನನ್ನು ಕುರಿತು ಹೇಳುತ್ತಾನೆಂದು ಅನುಮಾನಪಟ್ಟು, ಒಬ್ಬರನ್ನೊಬ್ಬರು ನೋಡಿಕೊಂಡರು. ಆದರೆ ಯೇಸುವಿನ ಯೆದೆಯ ಬಳಿಯಲ್ಲಿ ಆತನ ಶಿಷ್ಯರಲ್ಲಿ ಒಬ್ಬನು ಮಲಗಿಕೊಂಡಿದ್ದನು; ಅವನನ್ನು ಯೇಸು ಪ್ರೀತಿಮಾಡಿದನು. (ಯಾರಂದರೆ ಯೋಹಾನನು.) ಆದದರಿಂದ ಪೇತ್ರನು, ಆತನು ಯಾವನನ್ನು ಕುರಿತು ಹೇಳುತ್ತಾನೆಂದು ಕೇಳುವದಕ್ಕೆ ಇವನಿಗೆ ಸಂಜ್ಞೆ ಮಾಡಿದನು. ಇವನು ಆತನಿಗೆ,—ಕರ್ತನೇ, ಯಾರು? ಅನ್ನಲು, ಯೇಸು ಪ್ರತ್ಯುತ್ತರವಾಗಿ,—ನಾನು ರೊಟ್ಟಿಯ ತುಂಡು ಅದ್ದಿ ಯಾರಿಗೆ ಕೊಡುವೆನೋ, ಅವನೇ! ಅಂದನು. ಆಗ ರೊಟ್ಟಿಯ ತುಂಡು ಅದ್ದಿ, ಇಸ್ಕರಿಯೋತೆಂಬ ಯೂದನಿಗೆ ಕೊಟ್ಟನು. ತುಂಡು ತಕ್ಕೊಂಡ ಮೇಲೆ, ಸೈತಾನನು ಅವನೊಳಗೆ ಹೊಕ್ಕನು. ಆಗ ಯೇಸು ಅವನಿ

ಗೆ,—ನೀನು ಮಾಡುವದನ್ನು ಬೇಗ ಮಾಡು! ಅಂದನು. ಸಂಗಡಲೇ ಅವನು ಹೊರಟನು. ಆಗ ರಾತ್ರಿಯಾಗಿತ್ತು. ಅವನು ಹೋದ ಮೇಲೆ ಯೇಸು ಹೇಳಿದ್ದೇನಂದರೆ,—ಈಗ ಮನುಷ್ಯನ ಮಗನು ಮಹಿಮೆ ಪಟ್ಟಿದ್ದಾನೆ, ಮತ್ತು ದೇವರು ಅವನಲ್ಲಿ ಮಹಿಮೆ ಪಟ್ಟಿದ್ದಾನೆ.

ಮತ್ತು ಅವರು ಊಟ ಮಾಡುವಾಗ, ಯೇಸು ರೊಟ್ಟಿಯನ್ನು ತೆಗದುಕೊಂಡು, ಸ್ತೋತ್ರ ಮಾಡಿ, ಮುರಿದು, ಶಿಷ್ಯರಿಗೆ ಕೊಟ್ಟು,—ತಕ್ಕೊಳ್ಳಿರಿ, ತಿನ್ನಿರಿ! ಇ



ದು ನಿಮಗೋಸ್ಕರ ಮುರಿಯಲ್ಪಡುವ ನನ್ನ ಶರೀರವಾಗಿದೆ; ನನ್ನನ್ನು ನೆನಸುವದಕ್ಕಾಗಿ ಇದನ್ನು ಮಾಡಿರಿ! ಅಂದನು. ಆಮೇಲೆ ಕುಡಿಕೆಯನ್ನು ತೆಗದುಕೊಂಡು, ಸ್ತೋತ್ರ ಮಾಡಿ, ಅವರಿಗೆ ಕೊಟ್ಟು,—ಇದರಲ್ಲಿ ನೀವೆಲ್ಲರೂ ಕುಡಿಯಿರಿ! ಯಾಕಂದರೆ ಇದು ಅನೇಕರಿಗೋಸ್ಕರ ಪಾಪಪರಿಹಾರಕ್ಕಾಗಿ ಹೊಯ್ಯಲ್ಪಡುವ ಹೊಸ ಒಡಂಬಡಿಕೆಯ ರಕ್ತವಾದ ನನ್ನ ರಕ್ತವಾಗಿದೆ; ನೀವು ಕುಡಿಯುವಷ್ಟು ಸಾರಿ ನನ್ನನ್ನು ನೆನಸುವದಕ್ಕಾಗಿ ಇದನ್ನು ಮಾಡಿರಿ! ಅಂದನು.

ಮತ್ತು ಯೇಸು ಹೇಳಿದ್ದೇನಂದರೆ,—ಮಕ್ಕಳೇ, ಇನ್ನೂ ಸ್ವಲ್ಪ ಕಾಲ ನಿಮ್ಮ ಸಂಗಡ ಇದ್ದೇನೆ; ನನ್ನನ್ನು ಹುಡುಕುವಿರಿ, ಮತ್ತು ನಾನು ಹೋಗುವಲ್ಲಿಗೆ ನೀವು ಬರಲಾರಿರಿ ಯೆಂದು ನಿಮಗೆ ಹೇಳುತ್ತೇನೆ. ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂಬ ಹೊಸ ಆಜ್ಞೆಯನ್ನು ನಿಮಗೆ ಕೊಡುತ್ತೇನೆ; ನಾನು ನಿಮ್ಮನ್ನು ಪ್ರೀತಿ ಮಾಡಿದ ಹಾಗೆ, ನೀವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕು. ಇದರಿಂದ ನೀವು ನನ್ನ ಶಿಷ್ಯರಾಗಿದ್ದೀರೆಂದು, ಯೆಲ್ಲರೂ ತಿಳುಕೊಳ್ಳುವರು. ಸೀಮೋನ್ ಪೇತ್ರನು ಆತನಿಗೆ,—ಕರ್ತನೇ, ಯೆಲ್ಲಿಗೆ ಹೋಗುತ್ತೀ? ಅ

ನ್ನಲು, ಯೇಸು ಅವನಿಗೆ ಪ್ರಶ್ನೋತ್ತರವಾಗಿ,—ನಾನು ಹೋಗುವಲ್ಲಿಗೆ ಈಗ ನನ್ನನ್ನು ಹಿಂಬಾಲಿಸಲಾರಿ, ಆದರೆ ತರುವಾಯ ನನ್ನನ್ನು ಹಿಂಬಾಲಿಸುವಿ, ಅಂದನು. ಪೇತ್ರನು ಆತನಿಗೆ,—ಕರ್ತನೇ, ಯಾಕೆ ಈಗ ನಿನ್ನನ್ನು ಹಿಂಬಾಲಿಸಲಾರೆನು? ನಿನಗೋಸ್ಕರ ನನ್ನ ಪ್ರಾಣವನ್ನು ಕೊಡುವೆನು, ಅನ್ನಲು, ಯೇಸು ಅವನಿಗೆ ಹೇಳಿದ್ದು,—ನನಗೋಸ್ಕರ ನಿನ್ನ ಪ್ರಾಣವನ್ನು ಕೊಡುವಿಯೋ? ಸೀಮೋನನೇ! ಸೀಮೋನನೇ! ಇಗೋ, ಸೈತಾನನು ನಿನ್ನನ್ನು ಗೋಧಿಯ ಹಾಗೆ ಕೇರುವದಕ್ಕೆ ಇಚ್ಛೈಸಿದ್ದಾನೆ; ಆದರೆ ನಿನ್ನ ವಿಶ್ವಾಸವು ಅಳಿದು ಹೋಗದ ಹಾಗೆ ನಿನಗೋಸ್ಕರ ನಾನು ಬೇಡಿಕೊಂಡಿದ್ದೇನೆ; ಮತ್ತು ನೀನು ತಿರುಗಿಕೊಂಡ ಮೇಲೆ, ನಿನ್ನ ಸಹೋದರರನ್ನು ಸ್ಥಿರಪಡಿಸು! ಅವನು ಆತನಿಗೆ,—ಕರ್ತನೇ, ನಿನ್ನ ಸಂಗಡ ಸೆರೆಗೂ ಮರಣಕ್ಕೂ ಹೋಗ ಸಿದ್ಧವಾಗಿದ್ದೇನೆ, ಅಂದಾಗ, ಯೇಸು ಹೇಳಿದ್ದು,—ಪೇತ್ರನೇ, ನೀನು ನನ್ನನ್ನು ಅರಿಯೆನೆಂದು ಮೂರು ಸಾರಿ ಅಲ್ಲಗಳೆಯುವದಕ್ಕಿಂತ ಮುಂಚೆ ಈ ಹೊತ್ತು ಕೋಳಿ ಕೂಗದೆಂದು ನಿನಗೆ ಹೇಳುತ್ತೇನೆ. ಮತ್ತು ಅವರಿಗೆ ಹೇಳಿದ್ದೇನಂದರೆ,—ನಾನು ನಿಮ್ಮನ್ನು ಹಣದ ಚೀಲವೂ ಹಮ್ಮಿಣಿಯೂ ಕೆರಗಳೂ ಇಲ್ಲದವರಾಗಿ ಕಳುಹಿಸಿದಾಗ, ಯೇನಾದರೂ ಕೊರತೆಪಟ್ಟಿರೋ? ಅವರು,—ಯೇನೂ ಇಲ್ಲಾ, ಅಂದರು. ಆಗಲಾತನು ಅವರಿಗೆ ಹೇಳಿದ್ದು,—ಆದರೆ ಈಗ ಹಣದ ಚೀಲ ಉಂಟಾದವನು ಅದನ್ನೂ ಹಮ್ಮಿಣಿಯನ್ನೂ ಸಹಾ ತಕ್ಕೊಳ್ಳಲಿ! ಮತ್ತು ಇಲ್ಲದವನು ತನ್ನ ವಸ್ತ್ರವನ್ನು ಮಾರಿ ಬಿಟ್ಟು, ಕತ್ತಿಯನ್ನು ಕೊಂಡುಕೊಳ್ಳಲಿ! ಯಾಕಂದರೆ ಅವನು ಅನೀತಿವಂತರ ಸಂಗಡ ಯೆಣಿಸಲ್ಪಟ್ಟನು, ಯೆಂಬ ಬರಹವು ಸಹಾ ನಂನಲ್ಲಿ ಈಡೇರ ಬೇಕೆಂದು ನಿಮಗೆ ಹೇಳುತ್ತೇನೆ, ಯಾಕಂದರೆ ನನ್ನ ವಿಷಯವಾದವುಗಳಿಗೆ ಅಂತ್ಯ ಉಂಟು. ಅವರು,—ಕರ್ತನೇ! ಇಗೋ, ಇಲ್ಲಿ ಯೆರಡು ಕತ್ತಿಗಳುಂಟು, ಅಂದಾಗ, ಆತನು ಅವರಿಗೆ,—ಸಾಕು! ಅಂದನು.

ಮತ್ತು ಅವರಿಗೆ ಹೇಳಿದ್ದೇನಂದರೆ,—ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ! ದೇವರಲ್ಲಿ ವಿಶ್ವಾಸವಿಡಿರಿ, ನನ್ನಲ್ಲಿಯೂ ವಿಶ್ವಾಸವಿಡಿರಿ! ನನ್ನ ತಂದೆ

ಯ ಮನೆಯಲ್ಲಿ ಅನೇಕ ನಿವಾಸಗಳು ಅವೆ; ನಿಮಗೆ ಸ್ಥಳವನ್ನು ಸಿದ್ಧ ಮಾಡ ಹೋಗುತ್ತೇನೆ. ಹೋಗಿ ನಿಮಗೆ ಸ್ಥಳ ಸಿದ್ಧ ಮಾಡಿದರೆ, ನಾನು ತಿರಿಗಿ ಬಂದು, ನಾನು ಇರುವಲ್ಲಿ ನೀವೂ ಇರುವ ಹಾಗೆ, ನಿಮ್ಮನ್ನು ನನ್ನ ಬಳಿಗೆ ಸೇರ ತೆಗೆಯುವೆನು. ನಾನು ಯೆಲ್ಲಿ ಹೋಗುತ್ತೇನೋ ಬಲ್ಲಿರಿ; ಮಾರ್ಗವನ್ನು ಬಲ್ಲಿರಿ. ಆಗ ಥೋಮನು ಆತನಿಗೆ,—ಕರ್ತನೇ, ನೀನು ಯೆಲ್ಲಿಗೆ ಹೋಗುತ್ತೀಯೋ ಅರಿಯೆವು; ಮಾರ್ಗವನ್ನು ಹ್ಯಾಗೆ ತಿಳಿಯ ಬಹುದು? ಅನ್ನಲಾಗಿ, ಯೇಸು ಅವನಿಗೆ ಹೇಳಿದ್ದು,—ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮುಖಾಂತರವಲ್ಲದೆ ಯಾವನೂ ತಂದೆಯ ಬಳಿಗೆ ಬರುವದಿಲ್ಲಾ. ಫಿಲಿಪ್ಪನು ಆತನಿಗೆ,—ಕರ್ತನೇ ನಮಗೆ ತಂದೆಯನ್ನು ತೋರಿಸು; ಅದು ನಮಗೆ ಸಾಕು! ಅನ್ನಲು, ಯೇಸು ಅವನಿಗೆ ಹೇಳಿದ್ದು,—ಫಿಲಿಪ್ಪನೇ, ಇಷ್ಟು ಕಾಲ ನಿಮ್ಮ ಸಂಗಡ ಇದ್ದ ಮೇಲೆ ನೀನು ನನ್ನನ್ನು ತಿಳಿಯಲಿಲ್ಲವೋ? ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ; ನಾನು ತಂದೆಯಲ್ಲಿ ಇದ್ದೇನೆ, ತಂದೆ ನನ್ನಲ್ಲಿ ಇದ್ದಾನೆ, ಯೆಂದು ನನ್ನನ್ನು ನಂಬಿರಿ; ಇಲ್ಲದಿದ್ದರೆ ಕ್ರಿಯೆಗಳ ನಿಮಿತ್ತವೇ ನನ್ನನ್ನು ನಂಬಿರಿ! ಮತ್ತು ತಂದೆ ಮಗನಲ್ಲಿ ಮಹಿಮೆ ಪಡುವ ಹಾಗೆ, ನೀವು ನನ್ನ ಹೆಸರಿನಲ್ಲಿ ಯೇನು ಬೇಡಿಕೊಳ್ಳುವಿರೋ, ಅದನ್ನು ಮಾಡುವೆನು. ನನ್ನನ್ನು ಪ್ರೀತಿ ಮಾಡಿದರೆ, ನನ್ನ ಕಟ್ಟಳೆಗಳನ್ನು ಕೈಕೊಳ್ಳಿರಿ! ಮತ್ತು ನಾನು ತಂದೆಯನ್ನು ಬೇಡಿಕೊಳ್ಳುವೆನು, ಆಗಲವನು ಯೆಂದೆಂದಿಗೂ ನಿಮ್ಮ ಸಂಗಡ ಇರುವದಕ್ಕೆ ಬೇರೊಬ್ಬ ಆದರಿಕನನ್ನು ನಿಮಗೆ ಕೊಡುವನು,—ಸತ್ಯದ ಆತ್ಮವನ್ನೇ! ಲೋಕವು ಅದನ್ನು ನೋಡದೆ ಅರಿಯದೆ ಇರುವದರಿಂದ, ಅದನ್ನು ಹೊಂದಲಾರದು; ಆದರೆ ನೀವು ಅದನ್ನು ತಿಳಿಯುತ್ತೀರಿ. ಹ್ಯಾಗಂದರೆ ನಿಮ್ಮ ಬಳಿಯಲ್ಲಿ ಅದು ನೆಲೆಯಾಗಿದೆ, ಮತ್ತು ನಿಮ್ಮಲ್ಲಿ ಇರುವದು. ನಿಮ್ಮನ್ನು ದಿಕ್ಕಿಲ್ಲದವರಾಗಿ ಬಿಡೆನು; ನಿಮ್ಮ ಬಳಿಗೆ ಬರುತ್ತೇನೆ. ನಾನು ಬದುಕುವದರಿಂದ, ನೀವು ಸಹಾ ಬದುಕುವಿರಿ! ಇನ್ನು ನಿಮ್ಮ ಸಂಗಡ ಬಹಳ ಮಾತಾಡೆನು; ಯಾಕಂದರೆ ಈ ಲೋಕದ ಅಧಿಪತಿ ಬರುತ್ತಾನೆ, ಮತ್ತು ನನ್ನಲ್ಲಿ ಅವನಿಗೆ ಯೇನಾದರೂ ಇಲ್ಲಾ. ಆದರೆ ತಂದೆ

ಯನ್ನು ಪ್ರೀತಿ ಮಾಡುತ್ತೇನೆಂದು ಲೋಕವು ತಿಳಿಯುವ ಹಾಗೆ, ತಂದೆ ನನಗೆ ಆಜ್ಞಾಪಿಸಿದ ಪ್ರಕಾರವೇ ಮಾಡುತ್ತೇನೆ. ಯೇಳಿರಿ, ಇಲ್ಲಿಂದ ಹೋಗುವಾ!

---

೩೨. ಶಿಷ್ಯರಿಗೆ ಹೇಳಿದ ಕಡೇ ಪ್ರಸಂಗ. ಪ್ರಧಾನಯಾಜಕ ಪ್ರಾರ್ಥನೆ. ಗೆಥ್ಸೇಮನೆಯಲ್ಲಿ ತಾಳಿದ ಪ್ರಾಣಸಂಕಟ.

(ಮತ್ತ್. ೨೬, ೩೦—೪೬. ಮಾರ್ಕ. ೧೪, ೨೬—೪೨. ಲೂಕ್. ೨೨, ೩೯—೪೬. ಯೋ. ೧೫, ೧—೨೭. ೧೬, ೧—೩೩. ೧೭, ೧—೨೬. ೧೮, ೧. ೨.)

ಅವರು ಕೀರ್ತನೆ ಹಾಡಿದ ತರುವಾಯ ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ,—ನಾನೇ ನಿಜವಾದ ದ್ರಾಕ್ಷೇಬಳ್ಳಿ; ನನ್ನ ತಂದೆ ಒಕ್ಕಲಿಗನು. ನನ್ನಲ್ಲಿ ಫಲ ಫಲಿಸದ ಕುಡಿಗಳನ್ನೆಲ್ಲಾ ತೆಗದು ಹಾಕುತ್ತಾನೆ. ಫಲ ಫಲಿಸುವವುಗಳನ್ನೆಲ್ಲಾ, ಹೆಚ್ಚಾಗಿ ಫಲ ಫಲಿಸುವ ಹಾಗೆ, ಶುದ್ಧ ಮಾಡುತ್ತಾನೆ. ನಾನು ನಿಮ್ಮಲ್ಲಿ ಇರುವ ಪ್ರಕಾರ ನೀವು ನನ್ನಲ್ಲಿ ನೆಲೆಯಾಗಿರಿ. ಕುಡಿಯು ದ್ರಾಕ್ಷೇಬಳ್ಳಿಯಲ್ಲಿ ನೆಲೆಯಾಗಿದ್ದ ಹೊರ್ತು ತನ್ನಷ್ಟಕ್ಕೆ ತಾನೇ ಫಲ ಫಲಿಸಲಾರದ ಪ್ರಕಾರ, ನೀವೂ ನನ್ನಲ್ಲಿ ನೆಲೆಯಾಗಿರದಿದ್ದರೆ ಫಲ ಫಲಿಸಲಾರಿರಿ. ನಾನು ದ್ರಾಕ್ಷೇಬಳ್ಳಿ, ನೀವು ಕುಡಿಗಳು; ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಯಾಗಿದ್ದರೆ, ಅವನು ಬಹಳ ಫಲ ಫಲಿಸುತ್ತಾನೆ; ಯಾಕಂದರೆ ನಾನಿಲ್ಲದೆ ಯೇನೂ ಮಾಡಲಾರಿರಿ! ಯಾವನಾದರೂ ನನ್ನಲ್ಲಿ ನೆಲೆಯಾಗಿರದಿದ್ದರೆ, ಕುಡಿಯ ಹಾಗೆ ಹೊರಗೆ ಬಿಸಾಡಲ್ಪಟ್ಟು ಒಣಗಿ ಹೋಗುವನು; ಮತ್ತು ಅವುಗಳನ್ನು ಕೂಡಿಸಿ, ಬೆಂಕಿಯೊಳಗೆ ಹಾಕಿ ಸುಡುತ್ತಾರೆ. ನೀವು ನನ್ನನ್ನು ಆದುಕೊಳ್ಳಲಿಲ್ಲಾ; ಆದರೆ ನಾನು ನಿಮ್ಮನ್ನು ಆದುಕೊಂಡು, ನೀವು ಹೋಗಿ, ಫಲ ಫಲಿಸುವ ಹಾಗೆಯೂ, ನಿಮ್ಮ ಫಲವು ನೆಲೆಯಾಗಿರುವ ಹಾಗೆಯೂ, ನಿಮ್ಮನ್ನು ನೇಮಿಸಿದ್ದೇನೆ. ಲೋಕವು ನಿಮ್ಮನ್ನು ಹಗೆ ಮಾಡಿದರೆ, ನಿಮಗೆ ಮುಂಚೆ ನನ್ನನ್ನು ಹಗೆ ಮಾಡಿತೆಂದು ತಿಳಕೊಳ್ಳಿರಿ! ನೀವು ಲೋಕದವರಾಗಿ

ದ್ದರೆ, ಲೋಕವು ಸ್ವಂತವಾದದ್ದನ್ನು ಸ್ನೇಹಿಸುವದು; ನೀವು ಲೋಕದವರಲ್ಲದೆ ಇರುವದರಿಂದಲೂ, ನಾನು ಲೋಕದೊಳಗಿಂದ ನಿಮ್ಮನ್ನು ಆದುಕೊಂಡದರಿಂದಲೂ, ಲೋಕವು ನಿಮ್ಮನ್ನು ಹಗೆ ಮಾಡುತ್ತದೆ. ನನ್ನಲ್ಲಿ ನಿಮಗೆ ಸಮಾಧಾನ ಇರುವ ಹಾಗೆ, ಇವುಗಳನ್ನು ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಉಪದ್ರವಿರುವದು; ಆದರೆ ಧೈರ್ಯವಾಗಿರಿ; ನಾನು ಲೋಕವನ್ನು ಜಯಿಸಿದ್ದೇನೆ.

ಇವುಗಳನ್ನು ಯೇಸು ಮಾತಾಡಿ, ತನ್ನ ಕಣ್ಣುಗಳನ್ನು ಆಕಾಶಕ್ಕೆ ಯೆತ್ತಿ ಹೇಳಿದ್ದೇನಂದರೆ, — ತಂದೆಯೇ! ಘಳಿಗೆ ಬಂತು; ನಿನ್ನ ಮಗನು ನಿನ್ನನ್ನು ಮಹಿಮೆ ಪಡಿಸುವ ಹಾಗೆ, ನಿನ್ನ ಮಗನನ್ನು ಮಹಿಮೆ ಪಡಿಸು, ನೀನು ಅವನಿಗೆ ಕೊಟ್ಟವರಿಗೆಲ್ಲಾ ಅವನು ನಿತ್ಯಜೀವವನ್ನು ಕೊಡುವ ಹಾಗೆ, ಅವನಿಗೆ ಮಾಂಸವೆಲ್ಲಾದರ ಮೇಲೆ ಅಧಿಕಾರ ಕೊಟ್ಟ ಪ್ರಕಾರವೇ. ನಿತ್ಯಜೀವವು ಇದೇ, — ಅವರು ಒಬ್ಬನೇ ನಿಜವಾದ ದೇವರಾಗಿರುವ ನಿನ್ನನ್ನೂ, ನೀನು ಕಳುಹಿಸಿದ ಯೇಸು ಕ್ರಿಸ್ತನನ್ನೂ ಅರಿಯುವದೇ! ನಾನು ಭೂಮಿಯ ಮೇಲೆ ನಿನ್ನನ್ನು ಮಹಿಮೆ ಪಡಿಸಿದ್ದೇನೆ; ನಾನು ಮಾಡುವದಕ್ಕೆ ನೀನು ನನಗೆ ಕೊಟ್ಟ ಕ್ರಿಯೆಯನ್ನು ತೀರಿಸಿದ್ದೇನೆ; ಮತ್ತು ಈಗ, ತಂದೆಯೇ, ಲೋಕವಿರುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದ ನಿನ್ನ ಬಳಿಯಲ್ಲಿ ನೀನು ನನ್ನನ್ನು ಮಹಿಮೆ ಪಡಿಸು! ನೀನು ಲೋಕದೊಳಗಿಂದ ನನಗೆ ಕೊಟ್ಟ ಮನುಷ್ಯರಿಗೆ ನಿನ್ನ ಹೆಸರನ್ನು ಪ್ರಕಟ ಮಾಡಿದ್ದೇನೆ. ಅವರಿಗೋಸ್ಕರ ನಾನು ಬೇಡಿಕೊಳ್ಳುತ್ತೇನೆ; ಲೋಕಕ್ಕೋಸ್ಕರವಲ್ಲಾ, ನೀನು ನನಗೆ ಕೊಟ್ಟವರಿಗೋಸ್ಕರವೇ, ಅವರು ನಿನ್ನವರಾಗಿರುವದರಿಂದ ಬೇಡಿಕೊಳ್ಳುತ್ತೇನೆ. ನಾನು ಇನ್ನು ಲೋಕದಲ್ಲಿ ಇರುವದಿಲ್ಲಾ; ಇವರು ಲೋಕದಲ್ಲಿ ಇರುತ್ತಾರೆ. ನಾನು ನಿನ್ನ ಬಳಿಗೆ ಬರುತ್ತೇನೆ. ಪರಿಶುದ್ಧ ತಂದೆಯೇ, ನೀನು ನನಗೆ ಕೊಟ್ಟವರನ್ನು, ಅವರು ನಮ್ಮ ಹಾಗೆ ಒಂದಾಗಿರುವ ಹಾಗೆ, ನಿನ್ನ ಹೆಸರಿನಲ್ಲಿ ಕಾಪಾಡು! ಲೋಕದೊಳಗಿಂದ ಅವರನ್ನು ಯೆತ್ತಿ ತೆಗಿಯ ಬೇಕೆಂದಲ್ಲಾ, ಕೇಡಿಗೆ ಅವರನ್ನು ತಪ್ಪಿಸಿ ಕಾಪಾಡಬೇಕೆಂದು ಬೇಡಿಕೊಳ್ಳುತ್ತೇನೆ. ನಾನು ಲೋಕದವನಲ್ಲದ ಪ್ರ

ಕಾರ, ಅವರು ಲೋಕದವರಲ್ಲ; ನಿನ್ನ ಸತ್ಯದಿಂದ ಅವರನ್ನು ಪರಿಶುದ್ಧ ಮಾಡು! ನಿನ್ನ ವಾಕ್ಯವು ಸತ್ಯವೇ! ಆದರೆ ಇವರಿಗೋಸ್ಕರ ಮಾತ್ರವಲ್ಲ, ಇವರ ವಾಕ್ಯದ ಮೂಲವಾಗಿ ನನ್ನಲ್ಲಿ ವಿಶ್ವಾಸ ಇಡುವದಕ್ಕೆ ಇರುವವರಿಗೋಸ್ಕರ ಸಹಾ, ಅವರೆಲ್ಲರೂ ಒಂದಾಗ ಬೇಕೆಂದೂ, ನೀನು ನನ್ನನ್ನು ಕಳುಹಿಸಿದಿಯೆಂತ ಲೋಕವು ನಂಬುವ ಹಾಗೆ, ತಂದೆಯಾದ ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರು ಸಹಾ ನಮ್ಮಲ್ಲಿ ಒಂದಾಗ ಬೇಕೆಂದೂ ಬೇಡಿಕೊಳ್ಳುತ್ತೇನೆ. ತಂದೆಯೇ, ನೀನು ನನಗೆ ಕೊಟ್ಟವರು ನೀನು ನನಗೆ ಕೊಟ್ಟ ಮಹಿಮೆಯನ್ನು ನೋಡುವ ಹಾಗೆ, ನಾನು ಇರುವಲ್ಲಿ ಅವರು ಸಹಾ ನನ್ನ ಸಂಗಡಲಿರ ಇಚ್ಛೆಯಿಸುತ್ತೇನೆ.

ಇವುಗಳನ್ನು ಹೇಳಿದ ಮೇಲೆ ಯೇಸು ವಾಡಿಕೆಯ ಪ್ರಕಾರ ಇಪ್ಪೇಗುಡ್ಡಕ್ಕೆ ಹೊರಟು ಹೋದನು. ಆತನ ಶಿಷ್ಯರು ಸಹಾ ಆತನನ್ನು ಹಿಂಬಾಲಿಸಿದರು. ಆಗ ಯೇಸು, — ನೀವೆಲ್ಲರೂ ಈ ರಾತ್ರೆ ನನ್ನಲ್ಲಿ ಆತಂಕ ಪಡುವಿರಿ; ಯಾಕಂದರೆ ಕುರುಬನನ್ನು ಹೊಡಿಯುವೆನು, ಮಂದೆಯ ಕುರಿಗಳು ಚದರಿ ಹೋಗುವವು ಯೆಂದು ಬರದದೆ; ಆದರೆ ನಾನು ಯೆದ್ದ ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆನು, ಯೆಂದು ಅವರಿಗೆ ಹೇಳಿದನು. ಪೇತ್ರನು ಆತನಿಗೆ ಪ್ರತ್ಯುತ್ತರವಾಗಿ, — ಯೆಲ್ಲರೂ ನಿನ್ನಲ್ಲಿ ಆತಂಕ ಪಟ್ಟರೂ, ನಾನು ಯೆಂದೂ ಆತಂಕ ಪಡೆನು, ಅನ್ನಲು, ಯೇಸು ಅವನಿಗೆ, — ನಿಶ್ಚಯವಾಗಿ ನಿನಗೆ ಹೇಳುತ್ತೇನೆ, ಈ ರಾತ್ರೆಯಲ್ಲಿ ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನನ್ನು ಅಲ್ಲಗಳೆಯುವಿ, ಅಂದನು. ಆತನಿಗೆ ಪೇತ್ರನು, — ನಿನ್ನ ಸಂಗಡ ಸಾಯ ಬೇಕಾದರೂ, ನಿನ್ನನ್ನು ಅಲ್ಲಗಳೆಯೆನು, ಅಂದನು. ಅದೇ ಪ್ರಕಾರ ಶಿಷ್ಯರೆಲ್ಲರೂ ಹೇಳಿದರು.

ಆ ಮೇಲೆ ಯೇಸು ಶಿಷ್ಯರ ಸಂಗಡ ಕಿದ್ರೋನ್ ಹಳ್ಳದ ಆಚೆಗೆ ಹೋಗಿ, ಅಲ್ಲಿ ಇದ್ದ ಗೆಥ್ಸೇಮನೆಯೆಂಬ ತೋಟದೊಳಗೆ ಆತನೂ ಆತನ ಶಿಷ್ಯರೂ ಪ್ರವೇಶಿಸಿದರು. ಆದರೆ ಯೇಸು ಅನೇಕ ಸಾರಿ ತನ್ನ ಶಿಷ್ಯರ ಸಂಗಡ ಅಲ್ಲಿ ಕೂಡಿಕೊಂಡದರಿಂದ, ಆ ಸ್ಥಳವು ಆತನನ್ನು ಒಪ್ಪಿಸಿ ಕೊಟ್ಟ ಯೂದ

ನಿಗೂ ತಿಳಿದಿತ್ತು. ತರುವಾಯ ಅವರು ಆ ಸ್ಥಳಕ್ಕೆ ಬಂದಾಗ, ಯೇಸು ತನ್ನ ಶಿಷ್ಯರಿಗೆ,—ನಾನು ಅಲ್ಲಿ ಹೋಗಿ ಪ್ರಾರ್ಥನೆ ಮಾಡಿ ಬರುವ ಪರ್ಯಂತರ ಇಲ್ಲಿ ಕೂತುಕೊಳ್ಳಿರಿ! ಯೆಂದು ಹೇಳಿದನು. ಪೇತ್ರನನ್ನೂ ಯಾಕೋಬನನ್ನೂ ಯೋಹಾನನನ್ನೂ ಕೂಡಾ ಕರದು, ದುಖ್ಖ ವ್ಯಸನ ಪಡಲಾರಂಭಿಸಿ,—ನನ್ನ ಪ್ರಾಣವು ಮರಣದ ಮಟ್ಟಿಗೂ ದುಖ್ಖಾಕ್ರಾಂತವಾಗಿದೆ; ಇಲ್ಲಿ ಇದ್ದು, ನನ್ನ ಸಂಗಡ ಯೆಚ್ಚರವಾಗಿರಿ! ಯೆಂದು ಹೇಳಿ, ಸ್ವಲ್ಪ ದೂರ ಹೋಗಿ, ಮೋರೆ ಕೆಳಗಾಗಿ ಬಿದ್ದು,—ನನ್ನ ತಂದೆಯೇ, ಸಾಧ್ಯವಾದರೆ, ಈ ಕುಡಿಕೆ ನನ್ನನ್ನು ಬಿಟ್ಟು



ಹೋಗಲಿ! ಆದಾಗ್ಯೂ ನನ್ನ ಚಿತ್ತದ ಪ್ರಕಾರವಲ್ಲ, ನಿನ್ನ ಚಿತ್ತದ ಪ್ರಕಾರವೇ ಆಗಲಿ! ಯೆಂದು ಪ್ರಾರ್ಥಿಸಿ, ಶಿಷ್ಯರ ಬಳಿಗೆ ಬಂದು, ಅವರು ನಿದ್ದೆ ಮಾಡುವದನ್ನು ಕಂಡು, ಪೇತ್ರನಿಗೆ,—ಸೀಮೋನನೇ, ನಿದ್ದೆ ಮಾಡುತ್ತಿಯಾ? ಒಂದೇ ತಾಸಾದರೂ ಯೆಚ್ಚರವಾಗಿರಲಾರಿರಾ? ಶೋಧನೆಯಲ್ಲಿ ಪ್ರವೇಶಿಸದ ಹಾಗೆ ಯೆಚ್ಚರವಾಗಿದ್ದು ಪ್ರಾರ್ಥಿಸಿರಿ! ಆತ್ಮವು ಸಿದ್ಧವಾಗಿದೆ, ಆದರೆ ಮಾಂಸವು ಬಲಹೀನವಾಗಿದೆ, ಅಂದನು. ತಿರಿಗಿ ಹೋಗಿ, ಯೆರಡನೇ ಸಾರಿ,—ನನ್ನ ತಂದೆಯೇ, ನಾನು ಅದನ್ನು ಕುಡಿದ ಹೊರತು ಈ ಕುಡಿಕೆಯು ನನ್ನನ್ನು ಬಿಟ್ಟು ಹೋಗ ಕೂಡದಾದರೆ, ನಿನ್ನ ಚಿತ್ತವು ಆಗಲಿ! ಯೆಂದು ಪ್ರಾರ್ಥಿಸಿ, ಬಂದು, ಅವರು ತಿರಿಗಿ ನಿದ್ದೆ ಮಾಡುವದನ್ನು ಕಂಡನು; ಯಾಕಂದರೆ ಅವರ ಕಣ್ಣುಗಳು ಭಾರವಾಗಿದ್ದವು. ಮತ್ತು ಆತನಿಗೆ ಯೇನು ಉತ್ತರ ಕೊಡ ಬೇಕೆಂದು ತಿಳಿಯದೆ ಇದ್ದರು. ಆಗಲವರನ್ನು ಬಿಟ್ಟು, ತಿರಿಗಿ ಹೋಗಿ, ಮೂರನೇ

ಸಾರಿ ಅದೇ ಮಾತು ಹೇಳಿ ಪ್ರಾರ್ಥಿಸಿದನು. ಇದಲ್ಲದೆ ಪರಲೋಕದಿಂದ ಬಂದ ದೂತನು ಆತನಿಗೆ ಕಾಣಿಸಿಕೊಂಡು, ಆತನನ್ನು ಬಲಪಡಿಸಿದನು. ಮತ್ತು ಆತನು ಹೋರಾಟದಲ್ಲಿದ್ದು, ಇನ್ನೂ ಚುರುಕಾಗಿ ಪ್ರಾರ್ಥಿಸಿದನು. ಇದಲ್ಲದೆ ಆತನ ಬೆವರು ಭೂಮಿಗೆ ಬೀಳುವ ರಕ್ತದ ದೊಡ್ಡ ಬಿಂದುಗಳ ಹಾಗಾಯಿತು. ಆ ಮೇಲೆ ತನ್ನ ಶಿಷ್ಯರ ಬಳಿಗೆ ಬಂದು, ಅವರಿಗೆ,—ಇನ್ನು ನಿದ್ದೆ ಮಾಡಿ ವಿಶ್ರಮಿಸಿಕೊಳ್ಳಿರಿ; ಇಗೋ, ಘಳಿಗೆ ಸಮೀಪವಾಯಿತು! ಮನುಷ್ಯನ ಮಗನು ಪಾಪಿಗಳ ಕೈಗೆ ಒಪ್ಪಿಸಲ್ಪಡುತ್ತಾನೆ. ಯೇಳಿರಿ, ಹೋಗುವಾ! ಇಗೋ, ನನ್ನನ್ನು ಒಪ್ಪಿಸಿ ಕೊಡುವವನು ಸಮೀಪವಾಗಿದ್ದಾನೆ, ಅಂದನು.

---

೩೩. ಯೆಹೂದ್ಯರು ಯೇಸುವನ್ನು ಹಿಡಿದು, ನ್ಯಾಯ ತೀರಿಸಿದ್ದು. ಪೇತ್ರನು ಅಲ್ಲಗಳೆದದ್ದು. ಯೂದನ ಮರಣವು.

(ಮತ್ಥ. ೨೬, ೪೭–೭೫. ೨೭, ೧–೧೦. ಮಾರ್ಕ. ೧೪, ೪೩–೭೨. ೧೫, ೧. ಲೂಕ. ೨೨, ೪೭–೭೧. ೨೩, ೧. ಯೋ. ೧೮, ೩–೨೮.)

(ಶ್ರಮಸಪ್ತಕದ ಶುಕ್ರವಾರ.)

ಯೇಸು ಇನ್ನೂ ಮಾತಾಡುತ್ತಿರುವಾಗ, ಇಗೋ, ಯೂದನು ಜನರ ಗುಂಪನ್ನೂ ಪ್ರಧಾನಯಾಜಕರ ಮತ್ತು ಫರಿಸಾಯರ ಊಳಿಗದವರನ್ನೂ ತೆಗೆದುಕೊಂಡು, ದೀಪಗಳೂ ಕತ್ತಿಗಳೂ ದೊಣ್ಣೆಗಳೂ ಸಹಿತವಾಗಿ ಅಲ್ಲಿಗೆ ಬಂದನು. ಆಗ ಯೇಸು ತನ್ನ ಮೇಲೆ ಬರುವವುಗಳನ್ನೆಲ್ಲಾ ತಿಳಿದು, ಹೊರಗೆ ಹೋಗಿ, ಅವರಿಗೆ,—ಯಾರನ್ನು ಹುಡುಕುತ್ತೀರಿ? ಅಂದನು. ಅದಕ್ಕೆ ಪ್ರತ್ಯುತ್ತರವಾಗಿ,—ನಜರೇತಿನವನಾದ ಯೇಸುವನ್ನು! ಅಂದರು. ಯೇಸು ಅವರಿಗೆ,—ನಾನೇ! ಅಂದನು. ಆತನವರಿಗೆ—ನಾನೇ! ಅಂದಾಗ, ಅವರು ಹಿಂದಕ್ಕೆ ಹೋಗಿ ನೆಲಕ್ಕೆ ಬಿದ್ದರು. ತಿರಿಗಿ ಅವರಿಗೆ,—ಯಾರನ್ನು ಹುಡುಕುತ್ತೀರಿ? ಅಂದಾಗ, ಅವರು,—ನಜರೇತಿನವನಾದ ಯೇಸುವನ್ನು! ಅಂದರು. ಯೇ

ನು,—ನಾನೇ ಯೆಂದು ನಿಮಗೆ ಹೇಳಿದೆನು; ಆದದರಿಂದ ನನ್ನನ್ನು ಹುಡುಕಿದರೆ, ಇವರನ್ನು ಹೋಗಗೊಡಿಸಿರಿ! ಯೆಂದು ಉತ್ತರ ಕೊಟ್ಟನು.—ಆದರೆ ಆತನನ್ನು ಒಪ್ಪಿಸಿ ಕೊಡುವವನು,—ನಾನು ಯಾವನನ್ನು ಮುದ್ದಿಡುತ್ತೇನೋ, ಅವನೇ! ಅವನನ್ನೇ ಹಿಡಿಯಿರಿ! ಯೆಂದು ಅವರಿಗೆ ಗುರುತನ್ನು ಹೇಳಿ ಕೊಟ್ಟಿದ್ದನು. ಸಂಗಡಲೇ, ಅವನು ಯೇಸುವಿನ ಬಳಿಗೆ ಬಂದು,—ಶುಭವಾಗಲಿ! ಯೆಂದು ಆತನನ್ನು ಮುದ್ದಿಟ್ಟನು. ಆದರೆ ಯೇಸು ಅವನಿಗೆ,—ಸ್ನೇಹಿತನೇ, ಯಾಕೆ ಬಂದಿ? ಯೂದನೇ! ಮುದ್ದಿನಿಂದ ಮನುಷ್ಯನ ಮಗನನ್ನು ಒಪ್ಪಿಸುತ್ತೀಯೋ? ಅಂದನು. ಆಗ ಅವರು ಹತ್ತರ ಬಂದು, ಯೇಸುವಿನ ಮೇಲೆ ಕೈ ಹಾಕಿ, ಆತನನ್ನು ಹಿಡಿದರು. ಆತನ ಸುತ್ತಲಿರುವವರು ಆಗ ಹೋಗುವದನ್ನು ನೋಡಿ,—ಕರ್ತನೇ! ಕತ್ತಿಯಿಂದ ಹೊಡಿಯೋಣವೋ? ಯೆಂದು ಆತನಿಗೆ ಹೇಳಿದರು. ಮತ್ತು ಸೀಮೋನನೆಂಬ ಪೇತ್ರನು ಕತ್ತಿ ಉಂಟಾದವನಾಗಿ, ಅದನ್ನು ಹಿರಿದು, ಪ್ರಧಾನಯಾಜಕನ ದಾಸನನ್ನು ಹೊಡದು, ಅವನ ಬಲಕಿವಿಯನ್ನು ಹರಿಯ ಕಡಿದನು. ಆ ದಾಸನ ಹೆಸರು ಮಲ್ಖನು. ಆಗ ಯೇಸು ಪೇತ್ರನಿಗೆ,—ನಿನ್ನ ಕತ್ತಿಯನ್ನು ಒರೆಯಲ್ಲಿ ತಿರಿಗಿ ಹಾಕು; ಯಾಕಂದರೆ ಕತ್ತಿಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ನಾಶವಾಗುವರು! ನನಗೆ ಹನ್ನೆರಡು ಗಣಗಳಿಗಿಂತ ಹೆಚ್ಚಾದ ದೂತರನ್ನು ಕಳುಹಿಸುವ ಹಾಗೆ ಈಗಲೇ ನನ್ನ ತಂದೆಯನ್ನು ಬೇಡಿಕೊಳ್ಳಲಾರೆನೆಂದು ನೆನಸುತ್ತೀಯೋ? ಹಾಗಾದರೆ ಹೀಗೆ ಆಗ ಬೇಕೆಂಬ ಬರಹಗಳು ಹ್ಯಾಗೆ ಈಡೇರುವವು? ಅಂದನು. ಮತ್ತು ಆ ದಾಸನ ಕಿವಿಯನ್ನು ಮುಟ್ಟಿ, ಅವನನ್ನು ಗುಣ ಮಾಡಿದನು.—ಅದೇ ಘಳಿಗೆಯಲ್ಲಿ ಯೇಸು ಸಮೂಹಗಳಿಗೆ,—ಕಳ್ಳನಿಗೆ ವಿರೋಧವಾಗಿ ಬಂದ ಹಾಗೆ ಕತ್ತಿಗಳಿಂದಲೂ ದೊಣ್ಣೆಗಳಿಂದಲೂ ನನ್ನನ್ನು ಹಿಡಿಯ ಹೊರಟು ಬಂದಿರೋ? ದಿನಾಲೂ ದೇವಾಲಯದಲ್ಲಿ ಬೋಧಿಸುತ್ತ ನಿಮ್ಮಲ್ಲಿ ಕೂತುಕೊಂಡಿದ್ದೆನು; ಆಗ ನನ್ನನ್ನು ಹಿಡಿಯಲಿಲ್ಲ; ಆದರೆ ಇದು ನಿಮ್ಮ ಘಳಿಗೆಯೂ ಕತ್ತಲೆಯ ಅಧಿಕಾರವೂ ಆಗಿದೆ, ಅಂದನು. ಆಗ ಶಿಷ್ಯರೆಲ್ಲರು ಆತನನ್ನು ಬಿಟ್ಟು ಓಡಿ ಹೋದರು. ಮತ್ತು ಒಬ್ಬ ಯೌವನ

ಸ್ಥನು ಬರೀ ಮೈಯ್ಯಿಗೆ ನಾರುಮಡಿ ಸುತ್ತಿಕೊಂಡವನಾಗಿ ಆತನನ್ನು ಹಿಂ
ಬಾಲಿಸುವಾಗ, ಆ ಯೌವನಸ್ಥರು ಅವನನ್ನು ಹಿಡಿದರು; ಆದರೆ ಅವನು
ನಾರುಮಡಿಯನ್ನು ಬಿಟ್ಟು ಬಿಟ್ಟು, ಬೆತ್ತಲೆಯಾಗಿ ಅವರ ಕೈಯೊಳಗಿಂದ ತ
ಪ್ಪಿಸಿಕೊಂಡು, ಓಡಿ ಹೋದನು.

ಆಮೇಲೆ ಆ ಜನರ ಗುಂಪೂ ಸಹಸ್ರಾಧಿಪತಿಯೂ ಯೆಹೂದ್ಯರ ಉ
ಳಿಗದವರೂ ಯೇಸುವನ್ನು ಹಿಡಿದು, ಆತನನ್ನು ಕಟ್ಟಿ, ಮೊದಲು ಅನ್ನನ
ಬಳಿಗೆ ತಕ್ಕೊಂಡು ಹೋದರು; ಯಾಕಂದರೆ ಇವನು ಆ ವರುಷದ ಪ್ರಧಾನ
ಯಾಜಕನಾದ ಕಾಯಫನಿಗೆ ಮಾವನಾಗಿದ್ದನು. ಅನ್ನನು ಆತನನ್ನು ಕಟ್ಟಿದ
ವನಾಗಿ ಪ್ರಧಾನಯಾಜಕನಾದ ಕಾಯಫನ ಬಳಿಗೆ ಕಳುಹಿಸಿದನು. ಇವ
ನ ಸಂಗಡ ಪ್ರಧಾನಯಾಜಕರೂ ಶಾಸ್ತ್ರಿಗಳೂ ಹಿರಿಯರೂ ಯೆಲ್ಲರೂ ಕೂ
ಡಿಕೊಂಡರು.

ಇದಲ್ಲದೆ ಸೀಮೋನ್ ಪೇತ್ರನೂ ಬೇರೊಬ್ಬ ಶಿಷ್ಯನೂ ಯೇಸುವನ್ನು
ಹಿಂಬಾಲಿಸಿದರು. ಈ ಶಿಷ್ಯನ ಗುರುತು ಪ್ರಧಾನಯಾಜಕನಿಗೆ ತಿಳಿದಿರುವ
ದರಿಂದ, ಯೇಸುವಿನ ಸಂಗಡ ಪ್ರಧಾನಯಾಜಕನ ಅಂಗಳದಲ್ಲಿ ಪ್ರವೇಶಿಸಿ
ದನು. ಆದರೆ ಪೇತ್ರನು ಬಾಗಲಿನ ಬಳಿಯಲ್ಲಿ ಹೊರಗೆ ನಿಂತಿದ್ದನು. ಹೀ
ಗಿರುವಾಗ ಆ ಬೇರೆ ಶಿಷ್ಯನು ಹೊರಗೆ ಹೋಗಿ, ಬಾಗಲು ಕಾಯುವವಳ
ಸಂಗಡ ಮಾತಾಡಿ, ಪೇತ್ರನನ್ನು ಒಳಗಿನ ಅಂಗಳಕ್ಕೆ ಕರಕೊಂಡು ಬಂದನು.
ಬಾಗಲು ಕಾಯುವ ದಾಸಿಯು ಪೇತ್ರನಿಗೆ,—ನೀನು ಸಹಾ ಈ ಮನುಷ್ಯ
ನ ಶಿಷ್ಯರಲ್ಲಿ ಸೇರಿದವನಲ್ಲವೋ? ಅಂದಾಗ, ಅವನು ಅಲ್ಲಗಳದು,—ಅಲ್ಲ,
ನಾನರಿಯೆ! ನೀನು ಯೇನು ಹೇಳುತ್ತೀಯೋ ನನಗೆ ತಿಳಿಯುವದಿಲ್ಲ, ಅಂದ
ನು. ಆದರೆ ದಾಸರೂ ಉಳಿಗದವರೂ ಛಳಿ ಕಾಲ ಆದದರಿಂದ ಇದ್ದಲಿನ
ಬೆಂಕಿಯನ್ನು ಹೊತ್ತಿಸಿ, ಛಳಿ ಕಾಸಿಕೊಳ್ಳುತ್ತಾ ನಿಂತಿರುವಾಗ, ಪೇತ್ರನು ಅವರ
ಸಂಗಡ ನಿಂತು, ಛಳಿ ಕಾಸಿಕೊಳ್ಳುತ್ತಿದ್ದನು.

ಪ್ರಧಾನಯಾಜಕನು ಆತನ ಶಿಷ್ಯರನ್ನು ಕುರಿತೂ ಆತನ ಬೋಧನೆಯ
ನ್ನು ಕುರಿತೂ ಯೇಸುವನ್ನು ವಿಚಾರಿಸಿದಾಗ, ಯೇಸು ಅವನಿಗೆ ಪ್ರತ್ಯುತ್ತ

ರವಾಗಿ ಹೇಳಿದ್ದೇನಂದರೆ, — ನಾನು ಬಹಿರಂಗವಾಗಿ ಲೋಕದ ಮುಂದೆ ಮಾತಾಡಿದ್ದೇನೆ; ಯೆಹೂದ್ಯರು ಯಾವಾಗಲೂ ಕೂಡಿ ಬರುವ ಸಭೆಮನೆಯಲ್ಲಿಯೂ ದೇವಾಲಯದಲ್ಲಿಯೂ ನಾನು ಯಾವಾಗಲೂ ಬೋಧಿಸಿದ್ದೇನೆ; ಗುಪ್ತವಾಗಿ ಯೇನೂ ಮಾತಾಡಲಿಲ್ಲ; ಯಾಕೆ ನನ್ನನ್ನು ವಿಚಾರಿಸುತ್ತೀ? ಕೇಳಿದವರನ್ನು ನಾನು ಅವರ ಸಂಗಡ ಮಾತಾಡಿದ್ದು ಯೇನೆಂದು ವಿಚಾರಿಸು! ಇಗೋ, ನಾನು ಹೇಳಿದ್ದನ್ನು ಅವರು ಬಲ್ಲರು. ಆತನು ಇದನ್ನು ಹೇಳಲಾಗಿ, ಊಳಿಗದವರಲ್ಲಿ ಹತ್ತರ ನಿಂತವನೊಬ್ಬನು ಯೇಸುವಿಗೆ ಪೆಟ್ಟು ಹೊಡದು, — ಪ್ರಧಾನಯಾಜಕನಿಗೆ ಹೀಗೆ ಉತ್ತರ ಕೊಡುತ್ತೀಯೋ? ಅಂದನು. ಯೇಸು ಅವನಿಗೆ ಪ್ರತ್ಯುತ್ತರವಾಗಿ, — ನಾನು ಕೆಟ್ಟದ್ದನ್ನು ಮಾತಾಡಿದರೆ, ಕೆಟ್ಟದ್ದರ ವಿಷಯವಾಗಿ ಸಾಕ್ಷಿ ಕೊಡು! ಒಳ್ಳೇದನ್ನು ಮಾತಾಡಿದರೆ, ಯಾಕೆ ನನ್ನನ್ನು ಹೊಡಿಯುತ್ತೀ? ಅಂದನು. ಆಗ ಪ್ರಧಾನಯಾಜಕರೂ ಮಂತ್ರಿಸಭೆಯೆಲ್ಲವೂ ಯೇಸುವನ್ನು ಕೊಲ್ಲುವದಕ್ಕೆ ಆತನಿಗೆ ವಿರೋಧವಾಗಿ ಸಾಕ್ಷಿಯನ್ನು ಹುಡುಕಿ, ಕಂಡುಕೊಳ್ಳದೆ ಹೋದರು; ಯಾಕಂದರೆ ಅನೇಕರು ಆತನಿಗೆ ವಿರೋಧವಾಗಿ ಅಪಸಾಕ್ಷಿ ಹೇಳಿದರು, ಆದರೆ ಅವರ ಸಾಕ್ಷಿಗಳು ಒಪ್ಪಿಗೆ ಆಗಲಿಲ್ಲ. ಕಡೆಯಲ್ಲಿ ಇಬ್ಬರು ಅಪಸಾಕ್ಷಿಗಳು ಬಂದು, — ಕೈಕೆಲಸವಾದ ಈ ದೇವಾಲಯವನ್ನು ನಾನು ಕೆಡವಿ, ಮೂರು ದಿನದೊಳಗೆ ಕೈಕೆಲಸವಲ್ಲದ ಬೇರೊಂದು ಕಟ್ಟುವೆನೆಂದು ಅವನು ಹೇಳಿದ್ದನ್ನು ಕೇಳಿದ್ದೇವೆ, ಅಂದರು. ಹಾಗೂ ಅವರ ಸಾಕ್ಷಿ ಒಪ್ಪಿಗೆ ಆಗಲಿಲ್ಲ. ಪ್ರಧಾನಯಾಜಕನು ಯೆದ್ದು, ಆತನಿಗೆ, — ನೀನು ಯೇನೂ ಪ್ರತ್ಯುತ್ತರ ಕೊಡುವದಿಲ್ಲವೋ? ಇವರು ನಿನ್ನ ಮೇಲೆ ಸಾಕ್ಷಿ ಹೇಳುವದು ಯೇನು? ಅಂದನು. ಆದರೆ ಯೇಸು ಸುಮ್ಮನಿದ್ದನು. ಆಗ ಪ್ರಧಾನಯಾಜಕನು ಪ್ರತ್ಯುತ್ತರವಾಗಿ, — ನೀನು ದೇವರ ಮಗನಾದ ಕ್ರಿಸ್ತನಾಗಿದ್ದೀಯೋ ನಮಗೆ ಹೇಳ ಬೇಕೆಂದು, ನಿನಗೆ ಜೀವವುಳ್ಳ ದೇವರ ಆಣೆ ಇಡುತ್ತೇನೆ, ಅನ್ನಲಾಗಿ, ಯೇಸು, — ನೀನು ಹೇಳಿದ್ದು ಸರಿ! ಆದಾಗ್ಯೂ ಇನ್ನು ಮೇಲೆ ಮನುಷ್ಯನ ಮಗನು ಬಲದ ಬಲಪಾರ್ಶ್ವದಲ್ಲಿ ಕೂತಿರುವದನ್ನೂ, ಆಕಾಶದ ಮೇಘಗಳ ಮೇಲೆ ಬರುವದನ್ನೂ ನೋಡುವಿರೆಂದು

ನಿಮಗೆ ಹೇಳುತ್ತೇನೆ, ಅಂದನು. ಆಗ ಪ್ರಧಾನಯಾಜಕನು ತನ್ನ ವಸ್ತ್ರಗಳನ್ನು ಹರಕೊಂಡು, —ಅವನು ದೂಷಿಸಿದ್ದಾನೆ! ಸಾಕ್ಷಿಗಳು ಇನ್ನು ಯಾತಕ್ಕೆ? ಇಗೋ, ಈಗಲೇ ಅವನ ದೂಷಣೆಯನ್ನು ಕೇಳಿದಿರಿ? ನಿಮಗೆ ಹ್ಯಾಗೆ ತೋರುತ್ತದೆ? ಅನ್ನಲು, ಅವರು ಪ್ರತ್ಯುತ್ತರವಾಗಿ, —ಮರಣಕ್ಕೆ ಪಾತ್ರನಾಗಿದ್ದಾನೆ, ಯೆಂದು ಹೇಳಿದರು.

ಸ್ವಲ್ಪ ಕಾಲದ ಮೇಲೆ ಮತ್ತೊಬ್ಬನು ಪೇತ್ರನನ್ನು ನೋಡಿ, —ನೀನು ಸಹಾ ಅವರಲ್ಲಿ ಒಬ್ಬನಾಗಿದ್ದೀ, ಅಂದಾಗ, ಅವನು, —ಆ ಮನುಷ್ಯನನ್ನು ಅರಿಯೆನು! ಯೆಂದು ಆಣೆ ಇಟ್ಟು, ತಿರಿಗಿ ಅಲ್ಲಗಳೆದನು. —ಸ್ವಲ್ಪ ಹೊತ್ತಾದ ಮೇಲೆ ಅಲ್ಲಿ ನಿಂತವರು ಪೇತ್ರನ ಬಳಿಗೆ ಬಂದು, —ನೀನು ಸಹಾ ಅವರಲ್ಲಿ ಒಬ್ಬನು, ನಿಶ್ಚಯ! ನಿನ್ನ ಮಾತು ನಿನ್ನನ್ನು ತೋರಿಸುತ್ತದೆ, ಅಂದರು. ಮತ್ತು ಪೇತ್ರನು ಕಿವಿ ಕಡಿದು ಹಾಕಿದವನ ನೆಂಟನಾಗಿಯೂ ಪ್ರಧಾನಯಾಜಕನ ದಾಸನಾಗಿಯೂ ಇರುವ ಒಬ್ಬನು, —ನಿನ್ನನ್ನು ತೋಟದಲ್ಲಿ ಅವನೊಂದಿಗೆ ನಾನು ನೋಡಲಿಲ್ಲವೋ? ಅಂದಾಗ, ಅವನು, —ಆ ಮನುಷ್ಯನನ್ನು ಅರಿಯೆನು! ಯೆಂದು ಶಪಿಸಿಕೊಳ್ಳಲೂ ಆಣೆ ಇಟ್ಟುಕೊಳ್ಳಲೂ ಆರಂಭಿಸಿದನು. ಆಗ ಕೋಳಿ ಕೂಗಿತು, ಮತ್ತು ಕರ್ತನು ತಿರುಗಿಕೊಂಡು, ಪೇತ್ರನ ಮೇಲೆ ದೃಷ್ಟಿ ಇಟ್ಟನು. ಆಗ ಪೇತ್ರನು, —ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನನ್ನು ಅಲ್ಲಗಳೆಯುವಿ ಯೆಂದು ಕರ್ತನು ತನಗೆ ಹೇಳಿದ ಮಾತು ಜ್ಞಾಪಕ ಮಾಡಿಕೊಂಡನು. ಆಗ ಪೇತ್ರನು ಹೊರಗೆ ಹೋಗಿ, ಬಹಳವಾಗಿ ಅತ್ತನು. ಇದಲ್ಲದೆ ಯೇಸುವನ್ನು ಹಿಡಿದ ಜನರು ಆತನಿಗೆ ಹಾಸ್ಯ ಮಾಡಿ, ಹೊಡದು, ಆತನಿಗೆ ಮುಸುಕು ಹಾಕಿ, ಮುಖಕ್ಕೆ ಬಡಿದು, —ನಿನ್ನನ್ನು ಬಡಿದವನ್ಯಾರೆಂದು ಪ್ರವಾದನೆ ಹೇಳು! ಯೆಂಬದಾಗಿ ಆತನನ್ನು ಕೇಳಿದರು. ಈ ಮೊದಲಾದ ಅನೇಕ ದೂಷಣೆಗಳನ್ನು ಆತನಿಗೆ ಹೇಳಿದರು.

ಬೆಳಗಾಗುತ್ತಿರುವಾಗ ಜನರ ಹಿರಿಯಸಭೆಯೂ ಪ್ರಧಾನಯಾಜಕರೆಲ್ಲರೂ ಶಾಸ್ತ್ರಿಗಳೂ ಕೂಡಿಕೊಂಡು, ಆತನನ್ನು ಕೊಲ್ಲಿಸುವದಕ್ಕೆ ಆತನಿಗೆ ವಿರೋಧವಾಗಿ ಆಲೋಚನೆ ಮಾಡಿ, ಆತನನ್ನು ತಮ್ಮ ಮಂತ್ರಿಸಭೆಗೆ ತಕ್ಕೊಂಡು

ಹೋಗಿ, —ನೀನು ಕ್ರಿಸ್ತನಾಗಿದ್ದೀಯೋ? ನಮಗೆ ಹೇಳು! ಅಂದರು. ಆತನು ಅವರಿಗೆ, —ನಾನು ನಿಮಗೆ ಹೇಳಿದರೆ, ನಂಬುವದೇ ಇಲ್ಲಾ; ನಾನು ಕೇಳಿದರೂ, ಉತ್ತರ ಕೊಡುವದೇ ಇಲ್ಲಾ, ಮತ್ತು ನನ್ನನ್ನು ಬಿಡುವದಿಲ್ಲಾ; ಈಗಿನಿಂದ ಮನುಷ್ಯನ ಮಗನು ದೇವರ ಬಲದ ಬಲಪಾರ್ಶ್ವದಲ್ಲಿ ಕೂತುಕೊಂಡಿರುವನು! ಅಂದಾಗ, ಯೆಲ್ಲರೂ, —ಹಾಗಾದರೆ ನೀನು ದೇವರ ಮಗನೋ? ಅನ್ನಲು, ಆತನು ಅವರಿಗೆ, —ನಾನೇ ಯೆಂದು ನೀವು ಹೇಳುತ್ತೀರಿ, ಅಂದನು. ಆಗಲವರು, —ನಮಗೆ ಸಾಕ್ಷಿ ಇನ್ಯಾಕೆ ಬೇಕು? ನಾವೇ ಅವನ ಬಾಯಿಂದ ಕೇಳಿದ್ದೇವೆ, ಅಂದರು. ತರುವಾಯ ಯೇಸುವನ್ನು ಕಟ್ಟಿಸಿ, ಕಾಯಫನ ಬಳಿಯಿಂದ ನ್ಯಾಯಸ್ಥಾನಕ್ಕೆ ತಕ್ಕೊಂಡು ಹೋಗಿ, ಅಧಿಪತಿಯಾದ ಪಾಂತ್ಯ ಪಿಲಾತನಿಗೆ ಒಪ್ಪಿಸಿದರು. ಅದು ಹೊತ್ತರೆಯಾಗಿತ್ತು. ಆದರೆ ಅವರು ಕಳಂಕವಾಗದೆ ಪಸ್ಕವನ್ನು ತಿನ್ನುವ ಹಾಗೆ, ನ್ಯಾಯಸ್ಥಾನದಲ್ಲಿ ಪ್ರವೇಶಿಸಲಿಲ್ಲಾ.

ಆಗ ಆತನನ್ನು ಒಪ್ಪಿಸಿ ಕೊಟ್ಟ ಯೂದನು, ಆತನು ಆಜ್ಞೆ ನಿರ್ಣಯಿಸಲ್ಪಟ್ಟನೆಂದು ನೋಡಿ, ಪಶ್ಚಾತ್ತಾಪ ಪಟ್ಟು, ಪ್ರಧಾನಯಾಜಕರಿಗೂ ಹಿರಿಯರಿಗೂ ಆ ಮೂವತ್ತು ರೂಪಾಯಿಗಳನ್ನು ತಿರಿಗಿ ತಂದು, —ನಾನು ನಿರಪರಾಧವಾದ ರಕ್ತವನ್ನು ಒಪ್ಪಿಸಿ ಕೊಟ್ಟು ಪಾಪ ಮಾಡಿದೆನು, ಅಂದನು. ಆದರೆ ಅವರು, —ನಮಗೆ ಯೇನು? ನೀನೇ ನೋಡಿಕೋ! ಅಂದರು. ಆಗ ಆ ರೂಪಾಯಿಗಳನ್ನು ದೇವಾಲಯದೊಳಗೆ ಹಾಕಿ ಬಿಟ್ಟು, ಹೊರಟು ಹೋಗಿ, ಉರ್ಲು ಹಾಕಿಕೊಂಡು, ಬೋರಲ ಬಿದ್ದು, ನಡು ಒಡದು ಹೋಗಿ, ಅವನ ಕರಳುಗಳೆಲ್ಲಾ ಚೆಲ್ಲಲ್ಪಟ್ಟವು. (ಅಪ. ಕ್ರಿ. ೧, ೧೮.) ಆಗ ಪ್ರಧಾನಯಾಜಕರು ಆ ರೂಪಾಯಿಗಳನ್ನು ತೆಗದು, —ರಕ್ತದ ಕ್ರಯವಾದದರಿಂದ ಅವುಗಳನ್ನು ಬೊಕ್ಕಸದಲ್ಲಿ ಹಾಕ ಬಾರದು, ಯೆಂದು ಹೇಳಿ, ಆಲೋಚನೆ ಮಾಡಿ, ಅವುಗಳಿಂದ ಪರದೇಶಿಗಳನ್ನು ಹೂಣುವದಕ್ಕೆ ಕುಂಬಾರನ ಹೊಲವನ್ನು ಕೊಂಡುಕೊಂಡರು. ಆದದರಿಂದ ಆ ಹೊಲಕ್ಕೆ ರಕ್ತದ ಹೊಲವೆಂಬ ಹೆಸರು ವುಂಟಾಯಿತು.

೩೪. ಪಿಲಾತನು ಯೇಸುವಿಗೆ ನ್ಯಾಯತೀರಿಸಿ, ಕ್ರೂಜೆಗೆ ಹಾಕಿಸಿದ್ದು.

(ಮತ್ಥ. ೨೭, ೧೧—೩೪. ಮಾರ್ಕ. ೧೫, ೨—೨೪. ಲೂಕ. ೨೩, ೨—೨೪. ಯೋ. ೧೮, ೨೯—೪೦. ೧೯, ೧—೧೮.)

ಪಿಲಾತನು ಯೇಸುವನ್ನು ತಕ್ಕೊಂಡು ಬಂದ ಯೆಹೂದ್ಯರ ಬಳಿಗೆ ಹೊರಗೆ ಬಂದು,—ಈ ಮನುಷ್ಯನಿಗೆ ವಿರೋಧವಾಗಿ ಯೇನು ದೂರನ್ನು ತರುತ್ತೀರಿ? ಅಂದಾಗ, ಅವರು ಅವನಿಗೆ,—ಇವನು ಅಕ್ರಮಗಾರನಲ್ಲದಿದ್ದರೆ, ನಾವು ಅವನನ್ನು ಒಪ್ಪಿಸಲಿಕ್ಕಿಲ್ಲ, ಅಂದರು. ಆಗ ಪಿಲಾತನು ಅವರಿಗೆ,—ನೀವೇ ಅವನನ್ನು ತಕ್ಕೊಂಡು, ನಿಮ್ಮ ನ್ಯಾಯಪ್ರಮಾಣದ ಪ್ರಕಾರ ಅವನಿಗೆ ನ್ಯಾಯ ತೀರಿಸಿರಿ, ಅಂದಾಗ, ಯೆಹೂದ್ಯರು ಅವನಿಗೆ,—ನಾವು ಯಾವನನ್ನಾದರೂ ಕೊಂದು ಹಾಕ ಕೂಡದು, ಯೆಂದು ಆತನ ಮೇಲೆ ದೂರು ಹೇಳಲಾರಂಭಿಸಿದ್ದೇನಂದರೆ,—ಇವನು ಜನಾಂಗವನ್ನು ತಿರುಗ ಬೀಳ ಮಾಡಿ, ತಾನು ಕ್ರಿಸ್ತನೆಂಬ ಅರಸನಾಗಿದ್ದೇನೆಂದು ಹೇಳಿ, ಕೈಸರನಿಗೆ ತೆರಿಗೆ ಕೊಡದ ಹಾಗೆ ಅಡ್ಡಿ ಮಾಡುವದನ್ನು ಕಂಡಿದ್ದೇವೆ. ಆಗ ಪಿಲಾತನು ತಿರಿಗಿ ನ್ಯಾಯಸ್ಥಾನದಲ್ಲಿ ಪ್ರವೇಶಿಸಿ, ಯೇಸುವನ್ನು ಕರದು, ಆತನಿಗೆ,—ನೀನು ಯೆಹೂದ್ಯರ ಅರಸನೋ? ಅನ್ನಲು, ಯೇಸು ಅವನಿಗೆ ಪ್ರತ್ಯುತ್ತರವಾಗಿ,—ನಿನ್ನಷ್ಟಕ್ಕೆ ನೀನೇ ಇದನ್ನು ಹೇಳುತ್ತೀಯೋ? ಬೇರೊಬ್ಬರು ನನ್ನ ವಿಷಯವಾಗಿ ನಿನಗೆ ಹೇಳಿದ್ದಾರೋ? ಅನ್ನಲು, ಪಿಲಾತನು,—ನಾನು ಯೆಹೂದ್ಯನೋ? ನಿನ್ನ ಜನಾಂಗವೂ ಪ್ರಧಾನಯಾಜಕರೂ ನಿನ್ನನ್ನು ನನಗೆ ಒಪ್ಪಿಸಿದ್ದಾರೆ; ಯೇನು ಮಾಡಿದ್ದೀ? ಯೆಂದು ಉತ್ತರ ಕೊಟ್ಟನು. ಯೇಸು ಪ್ರತ್ಯುತ್ತರವಾಗಿ ಹೇಳಿದ್ದು,—ನನ್ನ ರಾಜ್ಯವು ಈ ಲೋಕದ್ದಲ್ಲ; ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ, ನಾನು ಯೆಹೂದ್ಯರಿಗೆ ಒಪ್ಪಿಸಲ್ಪಡದ ಹಾಗೆ ನನ್ನ ಊಳಿಗದವರು ಯುದ್ಧ ಮಾಡುವರು. ಪಿಲಾತನು ಆತನಿಗೆ,—ಹಾಗಾದರೆ ನೀನು ಅರಸನೋ? ಅನ್ನಲು, ಯೇಸು ಹೇಳಿದ್ದು,—ನಾನು ಅರಸನಾಗಿದ್ದೇನೆಂದು ನೀನೇ ಹೇಳುತ್ತೀ; ನಾನು ಸತ್ಯಕ್ಕೆ ಸಾಕ್ಷಿಕೊಡುವದಕ್ಕೋಸ್ಕರವೇ ಹುಟ್ಟಿ, ಅದಕ್ಕೋಸ್ಕರವೇ ಲೋಕಕ್ಕೆ ಬಂದಿ

ದ್ದೇನೆ; ಸತ್ಯದವರೆಲ್ಲರು ನನ್ನ ಶಬ್ದವನ್ನು ಕೇಳುತ್ತಾರೆ. ಪಿಲಾತನು ಆತನಿಗೆ,—ಸತ್ಯವು ಅಂದರೇನು? ಅಂದನು. ಇದನ್ನು ಹೇಳಿ, ತಿರಿಗಿ ಯೆಹೂದ್ಯರ ಬಳಿಗೆ ಹೊರಗೆ ಬಂದು, ಅವರಿಗೆ ಹೇಳಿದ್ದೇನಂದರೆ,—ನಾನು ಅವನಲ್ಲಿ ಯಾವ ಅಪರಾಧವನ್ನೂ ಕಾಣೆನು. ಇದಲ್ಲದೆ ಪ್ರಧಾನಯಾಜಕರೂ ಹಿರಿಯರೂ ಆತನ ಮೇಲೆ ಬಹಳ ದೂರುಗಳನ್ನು ಹೇಳುವಾಗ, ಆತನು ಯೇನೂ ಉತ್ತರ ಕೊಡಲಿಲ್ಲ. ಆಗ ಪಿಲಾತನು ಆತನಿಗೆ,—ಯೇನೂ ಉತ್ತರ ಹೇಳುವದಿಲ್ಲವೋ? ಇವರು ನಿನ್ನ ಮೇಲೆ ಯೆಷ್ಟು ದೂರು ಹೇಳುತ್ತಾರೆಂದು ಕೇಳುವದಿಲ್ಲವೋ? ಅನ್ನಲು, ಯೇಸು ಅವನಿಗೆ ವೊಂದು ಮಾತಿಗಾದರೂ ಉತ್ತರ ಕೊಡದೆ ಇರುವದರಿಂದ, ಪಿಲಾತನು ಆಶ್ಚರ್ಯ ಪಟ್ಟನು. ಆದರೆ ಅವರು,—ಅವನು ಗಲಿಲಾಯದಿಂದ ಆರಂಭ ಮಾಡಿ, ಇಲ್ಲಿಯ ಮಟ್ಟಿಗೂ ಯೆಹೂದದಲ್ಲೆಲ್ಲಾ ಬೋಧಿಸುತ್ತಾ, ಜನರನ್ನು ಯೆಬ್ಬಿಸುತ್ತಾನೆ, ಯೆಂದು ದೃಢವಾಗಿ ಹೇಳಿದರು. ಪಿಲಾತನು ಗಲಿಲಾಯವೆಂದು ಕೇಳಿದಾಗ,—ಈ ಮನುಷ್ಯನು ಗಲಿಲಾಯದವನೋ? ಯೆಂದು ವಿಚಾರಿಸಿದನು. ಮತ್ತು ಆತನು (ಗಲಿಲಾಯಕ್ಕೆ ಚತುರಧಿಪತಿಯಾದ) ಹೆರೋದನ ಅಧಿಕಾರದೊಳಗೆ ಇದ್ದಾನೆಂದು ತಿಳಿದು, ಆ ದಿವಸಗಳಲ್ಲಿ ಯೆರೂಸಲೇಮಿನಲ್ಲಿದ್ದ ಹೆರೋದನ ಬಳಿಗೆ ಆತನನ್ನು ಕಳುಹಿಸಿದನು. ಇದಲ್ಲದೆ ಹೆರೋದನು ಯೇಸುವನ್ನು ನೋಡಿ ಸಂತೋಷ ಪಟ್ಟನು; ಯಾಕಂದರೆ ಆತನ ವಿಷಯವಾಗಿ ಅನೇಕ ಮಾತುಗಳನ್ನು ಕೇಳಿದದರಿಂದ, ಬಹು ಕಾಲದಿಂದ ಆತನನ್ನು ನೋಡ ಬೇಕೆಂದಿದ್ದನು; ಮತ್ತು ಆತನಿಂದಾಗುವ ವೊಂದು ಗುರುತನ್ನು ನೋಡ ನಿರೀಕ್ಷಿಸಿದನು. ಹೀಗಿರುವದರಿಂದ ಆತನನ್ನು ಬಹು ಮಾತುಗಳಿಂದ ವಿಚಾರಿಸುವಾಗ, ಆತನು ಅವನಿಗೆ ಯೇನೂ ಉತ್ತರ ಕೊಡಲಿಲ್ಲ. ಇದಲ್ಲದೆ ಪ್ರಧಾನಯಾಜಕರೂ ಶಾಸ್ತ್ರಿಗಳೂ ಆತನ ಮೇಲೆ ದೃಢವಾಗಿ ದೂರು ಹೇಳುತ್ತಾ ನಿಂತಿದ್ದರು. ಮತ್ತು ಹೆರೋದನು ತನ್ನ ಸೈನ್ಯದವರ ಸಂಗಡ ಆತನನ್ನು ತಿರಸ್ಕರಿಸಿ ಹಾಸ್ಯ ಮಾಡಿ, ಪ್ರಕಾಶವಾದ ವಸ್ತ್ರವನ್ನು ಆತನಿಗೆ ಹೊದ್ದಿಸಿ, ಆತನನ್ನು ಪಿಲಾತನಿಗೆ ತಿರಿಗಿ ಕಳುಹಿಸಿದನು. ಇದಲ್ಲದೆ ಪಿಲಾತನೂ ಹೆರೋದನೂ ಆ ದಿ

ವಸದಲ್ಲಿ ಒಬ್ಬರಿಗೊಬ್ಬರು ಸ್ನೇಹಿತರಾದರು, ಯಾಕಂದರೆ ಮುಂಚೆ ಒಬ್ಬರಿಗೊಬ್ಬರು ಶತ್ರುಗಳಾಗಿದ್ದರು.

ಮತ್ತು ಪಿಲಾತನು ಪ್ರಧಾನಯಾಜಕರನ್ನೂ ಅಧಿಪತಿಗಳನ್ನೂ ಜನರನ್ನೂ ಕೂಡಾ ಕರಸಿ, ಅವರಿಗೆ ಹೇಳಿದ್ದೇನಂದರೆ,—ನೀವು ಈ ಮನುಷ್ಯನನ್ನು, ಜನರನ್ನು ತಿರುಗ ಬೀಳ ಮಾಡುವವನೆಂದು ನನ್ನ ಬಳಿಗೆ ತಂದಿದ್ದೀರಿ; ಮತ್ತು ಇಗೋ, ನಾನು ನಿಮ್ಮ ಮುಂದೆ ವಿಚಾರಿಸಿ, ನೀವು ಅವನ ಮೇಲೆ ದೂರು ಹೇಳುವವುಗಳಲ್ಲಿ ಒಂದು ಅಪರಾಧವನ್ನಾದರೂ ಈ ಮನುಷ್ಯನಲ್ಲಿ ಕಾಣಲಿಲ್ಲ; ಹೆರೋದನು ಸಹಾ ಕಾಣಲಿಲ್ಲ; ಅವನ ಬಳಿಗೆ ನಿಮ್ಮನ್ನು ಕಳುಹಿಸಿದೆನಲ್ಲಾ? ಮತ್ತು ಇಗೋ, ಮರಣಕ್ಕೆ ಪಾತ್ರವಾದದ್ದೇನಾದರೂ ಅವನಿಗೆ ತೀರ್ಪು ಆಗಲಿಲ್ಲ; ಹೀಗಿರುವದರಿಂದ ಅವನನ್ನು ಶಿಕ್ಷಿಸಿ ಬಿಡಿಸುವೆನು. ಹಬ್ಬದ ಸಮಯದಲ್ಲಿ ಅಧಿಪತಿಯು ಸಮೂಹಕ್ಕೆ ಅವರು ಇಚ್ಛೆಯಿಸುವ ಒಬ್ಬ ಸೆರೆಯವನನ್ನು ಬಿಡುವ ಮರ್ಯಾದೆ ಇತ್ತು. ಆ ಸಮಯದಲ್ಲಿ ಬರಬ್ಬನೆಂಬ ಒಬ್ಬ ಪ್ರಸಿದ್ಧನಾದ ಸೆರೆಯವನು ಇದ್ದನು. ಇವನು ಪಟ್ಟಣದಲ್ಲಿ ಉಂಟಾದ ಒಂದು ಕಲಹಕ್ಕೋಸ್ಕರವೂ ಕೊಲೆಗೋಸ್ಕರವೂ ಸೆರೆಯಲ್ಲಿ ಹಾಕಲ್ಪಟ್ಟಿದ್ದನು. ಆಗ ಸಮೂಹವು ಗದ್ದಲ ಮಾಡಿ, ಅವನು ಯಾವಾಗಲೂ ತಮಗೆ ಮಾಡಿದ ಪ್ರಕಾರ ಮಾಡ ಬೇಕೆಂದು ಬೇಡಿಕೊಳ್ಳಲಾರಂಭಿಸಿತು. ಪಿಲಾತನು ಅವರಿಗೆ,—ನಿಮಗೆ ಯಾವನನ್ನು ಬಿಡ ಬೇಕು? ಬರಬ್ಬನನ್ನೋ, ಕ್ರಿಸ್ತನೆಂಬ ಯೇಸುವನ್ನೋ? ಅಂದನು. ಯಾಕಂದರೆ ಅವರು ಹೊಟ್ಟೆಕಿಚ್ಚಿನಿಂದ ಆತನನ್ನು ಒಪ್ಪಿಸಿದರೆಂದು ತಿಳುಕೊಂಡನು. ಇದಲ್ಲದೆ ಅವನು ಪೀಠದ ಮೇಲೆ ಕೂತಿರುವಾಗ, ಅವನ ಹೆಂಡತಿಯು,—ನಿನಗೆ ಆ ನೀತಿವಂತನ ಗೊಡವೆ ಬೇಡ, ಯಾಕಂದರೆ ಈ ಹೊತ್ತು ಸ್ವಪ್ನದಲ್ಲಿ ಆತನ ವಿಷಯವಾಗಿ ಬಹಳ ಶ್ರಮೆಪಟ್ಟೆನು, ಯೆಂದು ಅವನ ಬಳಿಗೆ ಹೇಳಿ ಕಳುಹಿಸಿದಳು. ಆದರೆ ಪ್ರಧಾನಯಾಜಕರೂ ಹಿರಿಯರೂ,—ಬರಬ್ಬನನ್ನು ಬೇಡಿಕೊಂಡು, ಯೇಸುವನ್ನು ನಾಶನ ಮಾಡ ಬೇಕು, ಯೆಂದು ಸಮೂಹದವರನ್ನು ಸಮ್ಮತಿಪಡಿಸಿದರು. ಆಗ ಅಧಿಪತಿಯು ಯೇಸುವನ್ನು ತಿರಿಗಿ ಬಿಡಿಸ

ಬೇಕೆಂದಿದ್ದು, ಅವರಿಗೆ,—ಈ ಹಬ್ಬದಲ್ಲಿ ಯಾವನನ್ನು ನಿಮಗೆ ಬಿಡ ಬೇಕು! ಅನ್ನಲು, ಯೆಲ್ಲರೂ ಕೂಡಾ,—ಇವನನ್ನು ತೆಗದು ಹಾಕು, ಬರಬ್ಬನನ್ನು ನಮಗೆ ಬಿಡಿಸು! ಯೆಂದು ಕೂಗಿದರು. ಪಿಲಾತನು ಅವರಿಗೆ,—ಹಾಗಾದರೆ ಕ್ರಿಸ್ತನೆಂಬ ಯೇಸುವನ್ನು ಯೇನು ಮಾಡಲಿ? ಯೆಂದು ಹೇಳಲು, ಅವರೆಲ್ಲರೂ,—ಕ್ರೂಜೆಗೆ ಹಾಕು! ಕ್ರೂಜೆಗೆ ಹಾಕು! ಯೆಂದು ಕೂಗಿದರು. ಆದರೆ ಮೂರನೇ ಸಾರಿ ಅವರಿಗೆ,—ಯಾಕೆ? ಕೆಟ್ಟದ್ದೇನು ಮಾಡಿದ್ದಾನೆ? ನಾನು ಮರಣಕ್ಕೆ ಪಾತ್ರವಾದ ಅಪರಾಧ ಒಂದನ್ನಾದರೂ ಅವನಲ್ಲಿ ಕಾಣಲಿಲ್ಲ; ಆದದರಿಂದ ಅವನನ್ನು ಶಿಕ್ಷಿಸಿ ಬಿಡಿಸುವೆನು, ಅಂದನು. ಆದರೆ ಅವರು ಅವನನ್ನು ಕ್ರೂಜೆಗೆ ಹಾಕ ಬೇಕೆಂದು ಮಹಾ ಶಬ್ದಗಳಿಂದ ಬೇಡಿಕೊಂಡು, ತೊಂದರೆ ಪಡಿಸಿದರು. ಮತ್ತು ಅವರ ಶಬ್ದಗಳೂ ಪ್ರಧಾನಯಾಜಕರ ಶಬ್ದಗಳೂ ಪ್ರಬಲವಾದವು. ಆಗ ಪಿಲಾತನು ಗುಲ್ಲು ಹೆಚ್ಚಾಗುವದೇ ಹೊರತು ಪ್ರಯೋಜನವೇನೂ ಇಲ್ಲವೆಂದು ನೋಡಿ, ನೀರನ್ನು ತೆಗದುಕೊಂಡು, ಸಮೂಹದ ಮುಂದೆ ಕೈಗಳನ್ನು ತೊಳದು,—ಈ ನೀತಿವಂತನ ರಕ್ತಕ್ಕೆ ನಿರಪರಾಧಿಯಾಗಿದ್ದೇನೆ; ನೀವೇ ನೋಡಿಕೊಳ್ಳಿರಿ! ಅನ್ನಲಾಗಿ, ಜನರೆಲ್ಲಾ ಪ್ರತ್ಯುತ್ತರವಾಗಿ,—ಅವನ ರಕ್ತವು ನಮ್ಮ ಮೇಲೆಯೂ ನಮ್ಮ ಮಕ್ಕಳ ಮೇಲೆಯೂ ಬರಲಿ! ಅಂದರು. ಆಗ ಪಿಲಾತನು ಅವರ ವಿಜ್ಞಾಪನೆಯ ಮೇರೆಗೆ ಆಗ ಬೇಕೆಂದು ನಿರ್ಣಯಿಸಿ, ಬರಬ್ಬನನ್ನು ಅವರಿಗೆ ಬಿಡಿಸಿ, ಯೇಸುವನ್ನು ಬಾರುಗಳಿಂದ ಹೊಡಿಸಿ, ಕ್ರೂಜೆಗೆ ಹಾಕುವದಕ್ಕೆ ಒಪ್ಪಿಸಿದನು.

ಆಗ ಅಧಿಪತಿಯ ರಾಣುವೆಯವರು ಯೇಸುವನ್ನು ಕಾವಲ ಮನೆಗೆ ತಕ್ಕೊಂಡು ಹೋಗಿ, ಕಾವಲಿಯವರನ್ನೆಲ್ಲಾ ಆತನ ಹತ್ತರ ಕೂಡಿಸಿ, ಆತನ ವಸ್ತ್ರಗಳನ್ನು ತೆಗದು ಬಿಟ್ಟು, ರಕ್ತಾಂಬರದ ಹೊಲ್ಲಿಯನ್ನು ಆತನಿಗೆ ಹೊದ್ದಿಸಿ, ಮುಳ್ಳುಗಳಿಂದ ಕಿರೀಟವನ್ನು ಹೆಣೆದು, ಆತನ ತಲೆಯ ಮೇಲೆ ಇಟ್ಟು, ಆತನ ಬಲಕೈಗೆ ಬೆತ್ತ ಕೊಟ್ಟು, ಆತನ ಮುಂದೆ ಮೊಣಕಾಲೂರಿ,—ಯೆಹೂದ್ಯರ ಅರಸನೇ, ಶುಭವಾಗಲಿ! ಯೆಂದು ಆತನಿಗೆ ಹಾಸ್ಯ ಮಾಡಿದರು. ಮತ್ತು ಆತನ ಮೇಲೆ ಉಗುಳಿ, ಬೆತ್ತ ತಕ್ಕೊಂಡು, ಆತನ ತಲೆಯ ಮೇಲೆ

ಹೊಡದರು. ಆಗ ಪಿಲಾತನು ತಿರಿಗಿ ಹೊರಗೆ ಬಂದು, ಅವರಿಗೆ ಹೇಳಿದ್ದೇನಂದರೆ, — ಇಗೋ, ನಾನು ಅವನಲ್ಲಿ ಯಾವ ಅಪರಾಧವನ್ನೂ ಕಾಣೆನೆಂದು ನೀವು ತಿಳುಕೊಳ್ಳುವ ಹಾಗೆ, ಅವನನ್ನು ನಿಮಗೋಸ್ಕರ ಹೊರಗೆ ತರುತ್ತೇನೆ. ಆಗ ಯೇಸು ಮುಳ್ಳಿನ ಕಿರೀಟವನ್ನೂ ರಕ್ತಾಂಬರವನ್ನೂ ಧರಿಸಿ ಕೊಂಡವನಾಗಿ ಹೊರಗೆ ಬರಲು, ಪಿಲಾತನು ಅವರಿಗೆ, — ಇಗೋ, ಈ ಮನುಷ್ಯನು! ಅಂದನು. ಪ್ರಧಾನಯಾಜಕರೂ ಓಲಗದವರೂ ಆತನನ್ನು ನೋಡಿದಾಗ, — ಕ್ರೂಜೆಗೆ ಹಾಕು! ಕ್ರೂಜೆಗೆ ಹಾಕು! ಯೆಂದು ಕೂಗಿದರು. ಪಿಲಾತನು ಅವರಿಗೆ, — ನೀವೇ ಆತನನ್ನು ತಕ್ಕೊಂಡು ಕ್ರೂಜೆಗೆ ಹಾಕಿರಿ! ಯಾಕಂದರೆ ನಾನು ಆತನಲ್ಲಿ ಯೇನೂ ಅಪರಾಧ ಕಾಣೆನು, ಅಂದನು. ಯೆಹೂದ್ಯರು ಅವನಿಗೆ ಪ್ರತ್ಯುತ್ತರವಾಗಿ, — ನಮ್ಮ ನ್ಯಾಯಪ್ರಮಾಣದ ಪ್ರಕಾರ ಅವನು ಸಾಯ ಬೇಕು, ಯಾಕಂದರೆ ತನ್ನನ್ನು ದೇವರ ಮಗನೆಂದು ಮಾಡಿಕೊಂಡಿದ್ದಾನೆ, ಅಂದರು. ಪಿಲಾತನು ಈ ಮಾತು ಕೇಳಿ, ಇನ್ನೂ ಭಯ ಪಟ್ಟು, ತಿರಿಗಿ ನ್ಯಾಯಸ್ಥಾನದಲ್ಲಿ ಪ್ರವೇಶಿಸಿ, ಯೇಸುವಿಗೆ, — ನೀನು ಯೆಲ್ಲಿಂದ ಬಂದವನು? ಅಂದನು. ಆದರೆ ಯೇಸು ಅವನಿಗೆ ಉತ್ತರ ಕೊಡಲಿಲ್ಲ. ಹೀಗಿರುವಾಗ ಪಿಲಾತನು ಆತನಿಗೆ, — ನೀನು ನನ್ನ ಸಂಗಡ ಮಾತಾಡುವದಿಲ್ಲವೋ? ನಿನ್ನನ್ನು ಕ್ರೂಜೆಗೆ ಹಾಕಿಸುವದಕ್ಕೆ ಅಧಿಕಾರವೂ, ನಿನ್ನನ್ನು ಬಿಡಿಸುವದಕ್ಕೆ ಅಧಿಕಾರವೂ ನನಗುಂಟೆಂದು ತಿಳಿಯುವದಿಲ್ಲವೋ? ಅಂದನು. ಯೇಸು ಪ್ರತ್ಯುತ್ತರವಾಗಿ ಹೇಳಿದ್ದು, — ನಿನಗೆ ಮೇಲಿನಿಂದ ಕೊಡಲ್ಪಟ್ಟಿದ್ದ ಹೊರತು ನನ್ನ ಮೇಲೆ ನಿನಗೆ ಯೇನೂ ಅಧಿಕಾರವಿರದು; ಆದದರಿಂದ ನಿನಗೆ ನನ್ನನ್ನು ಒಪ್ಪಿಸಿದವನಿಗೆ ಹೆಚ್ಚಾದ ಪಾಪ ಉಂಟು. ಆಗ ಪಿಲಾತನು ಆತನನ್ನು ತಿರಿಗಿ ಬಿಡಿಸ ಹುಡುಕಿದನು, ಆದರೆ ಯೆಹೂದ್ಯರು, — ಇವನನ್ನು ಬಿಡಿಸಿದರೆ, ನೀನು ಕೈಸರನ ಸ್ನೇಹಿತನಲ್ಲ; ತನ್ನನ್ನು ಅರಸನಾಗ ಮಾಡಿಕೊಳ್ಳುವ ವೊಬ್ಬೊಬ್ಬನು ಕೈಸರನಿಗೆ ವಿರೋಧವಾಗಿ ಮಾತಾಡುತ್ತಾನೆ, ಯೆಂದು ಕೂಗಿ ಹೇಳಿದರು. ಪಿಲಾತನು ಈ ಮಾತು ಕೇಳಿ, ಯೇಸುವನ್ನು ಹೊರಗೆ ಕರಕೊಂಡು ಹೋಗಿ, ಗಬ್ಬತವೆಂಬ ಸ್ಥಳದಲ್ಲಿ ಪೀಠದ ಮೇಲೆ ಕೂತುಕೊಂಡು,



ಯೆಹೂದ್ಯರಿಗೆ, — ಇಗೋ, ನಿಮ್ಮ ಅರಸನು! ಅಂದನು. ಆದರೆ ಅವರು, — ತೆಗದು ಹಾಕು! ತೆಗದು ಹಾಕು! ಅವನನ್ನು ಕ್ರೂಜೆಗೆ ಹಾಕು! ಕ್ರೂಜೆಗೆ ಹಾಕು! ಯೆಂದು ಕೂಗಿದರು. ಪಿಲಾತನು ಅವರಿಗೆ, — ನಿಮ್ಮ ಅರಸನನ್ನು ಕ್ರೂಜೆಗೆ ಹಾಕಲೋ? ಅಂದಾಗ, ಪ್ರಧಾನಯಾಜಕರು, — ಕೈಸರನೇ ಹೊರ್ತು ನಮಗೆ ಅರಸನು ಇಲ್ಲಾ! ಯೆಂದು ಉತ್ತರ ಕೊಟ್ಟರು. ಆಗ ಕ್ರೂಜೆಗೆ ಹಾಕಲ್ಪಡುವದಕ್ಕೆ ಆತನನ್ನು ಅವರಿಗೆ ಒಪ್ಪಿಸಿದನು.

ಮತ್ತು ಆತನಿಗೆ ಹಾಸ್ಯ ಮಾಡಿದ ಮೇಲೆ, ರಕ್ತಾಂಬರವನ್ನು ಆತನಿಂದ ತೆಗದು, ಸ್ವಂತ ವಸ್ತ್ರಗಳನ್ನು ಆತನಿಗೆ ಹೊದ್ದಿಸಿ, ಆತನನ್ನು ಕ್ರೂಜೆಗೆ ಹಾಕುವದಕ್ಕೆ ತಕ್ಕೊಂಡು ಹೋದರು. ಆತನು ತನ್ನ ಕ್ರೂಜೆಯನ್ನು ಹೊತ್ತುಕೊಂಡು, ಕಪಾಲಸ್ಥಳವೆಂದೂ, ಇಬ್ರಿಯರ ಮಾತಿನಲ್ಲಿ ಗೊಲ್ಗೊಥವೆಂದೂ ಕರೆಯಲ್ಪಟ್ಟ ಸ್ಥಳಕ್ಕೆ ಬಂದನು. ಆತನನ್ನು ತಕ್ಕೊಂಡು ಹೋಗುವಾಗ, ಅವರು ಹೊಲದಿಂದ ಬಂದ ಕುರೇನ್ಯನಾದ ಸೀಮೋನನೆಂಬವನನ್ನು ಹಿಡಿದು, ಯೇಸುವಿನ ಹಿಂದೆ ಕ್ರೂಜೆಯನ್ನು ಹೊರುವ ಹಾಗೆ ಅವನನ್ನು ಬಲವಂತ ಮಾಡಿದರು. ಇದಲ್ಲದೆ ಜನರೂ, ಆತನ ನಿಮಿತ್ತ ಬಡಕೊಂಡು ಅಳುವ ಹೆಂಗಸರೂ ಬಹು ಸಮೂಹವಾಗಿ ಆತನನ್ನು ಹಿಂಬಾಲಿಸಿದರು. ಆಗ ಯೇಸು ಅವರ ಕಡೆಗೆ ತಿರುಗಿಕೊಂಡು ಹೇಳಿದ್ದೇನಂದರೆ, — ಯೆರೂಸಲೇಮಿನ

ಕುಮಾರ್ತೆಗಳೇ, ನನ್ನ ನಿಮಿತ್ತ ಅಳಬೇಡಿರಿ; ನಿಮ್ಮ ನಿಮಿತ್ತವೂ ನಿಮ್ಮ ಮಕ್ಕಳ ನಿಮಿತ್ತವೂ ಅಳಿರಿ! ಯಾಕಂದರೆ ಆಗಾ, ಬೆಟ್ಟಗಳಿಗೆ,—ನಮ್ಮ ಮೇಲೆ ಬೀಳಿರಿ! ಗುಡ್ಡಗಳಿಗೆ,—ನಮ್ಮನ್ನು ಮುಚ್ಚಿರಿ! ಯೆಂದು ಹೇಳಲಾರಂಭಿಸುವ ದಿವಸಗಳು ಬರುತ್ತವೆ; ಯಾಕಂದರೆ ಹಸಿ ಮರದಲ್ಲಿ ಇವುಗಳನ್ನು ಮಾಡಿದರೆ, ಒಣಗಿದ್ದರಲ್ಲಿ ಯೇನಾಗುವದು? ಇದಲ್ಲದೆ ದುಷ್ಟರಾದ ಬೇರೆ ಇಬ್ಬರು, ಆತನ ಸಂಗಡ ಸಂಹರಿಸಲ್ಪಡುವದಕ್ಕೆ ಒಯ್ಯಲ್ಪಟ್ಟರು. ಮತ್ತು ಆ ಸ್ಥಳಕ್ಕೆ ಬಂದಾಗ, ಆತನಿಗೆ ಪಿತ್ತಕಲಿಸಿದ ಹುಳಿರಸವನ್ನು ಕುಡಿಯ ಕೊಟ್ಟರು. ಅದನ್ನು ರುಚಿ ನೋಡಿ, ಕುಡಿಯಲೊಲ್ಲದೆ ಇದ್ದನು. ಅಲ್ಲಿ ಆತನನ್ನು, ಆತನ ಸಂಗಡ ಈ ಕಡೆ ಆ ಕಡೆಯಾಗಿ ಬೇರೆ ಇಬ್ಬರನ್ನೂ, ಮಧ್ಯದಲ್ಲಿ ಯೇಸುವನ್ನೂ ಕ್ರೂಜೆಗೆ ಹಾಕಿದರು. ಆತನು ಅನೀತಿವಂತರ ಸಂಗಡ ಯೆಣಿಸಲ್ಪಟ್ಟನೆಂಬ ಬರಹವು (ಯೆಶ. ೫೩, ೧೨.) ಹೀಗೆ ಈಡೇರಿತು. ಆದರೆ ಯೇಸು,—(೧) ತಂದೆಯೇ, ಅವರಿಗೆ ಮನ್ನಿಸು! ಮಾಡುವದೇನೆಂದು ಅರಿಯರು, ಅಂದನು.

---

೩೫. ಯೇಸುವಿನ ಮರಣವು. ಆತನನ್ನು ಹೂಳಿಟ್ಟದ್ದು.

(ಮತ್ಥ. ೨೭, ೩೫—೬೬. ಮಾರ್ಕ. ೧೫, ೨೫—೪೭. ಲೂಕ. ೨೩, ೩೫—೫೬. ಯೋ. ೧೯, ೧೯—೪೨.)

ಇದಲ್ಲದೆ ಪಿಲಾತನು ಯೇಸುವಿನ ದೂರನ್ನು ತಿಳಿಸುವ ಮೇಲ್ಬರಹವನ್ನು ಬರಸಿ, ಕ್ರೂಜೆಯಲ್ಲಿ ಆತನ ತಲೆಯ ಮೇಲ್ಗಡೆ ಹಚ್ಚಿಸಿದನು. ಅದರಲ್ಲಿ ಬರದದ್ದೇನಂದರೆ,—ಯೆಹೂದ್ಯರ ಅರಸನಾಗಿರುವ ನಜರೇತಿನವನಾದ ಯೇಸು. ಈ ಮೇಲ್ಬರಹವನ್ನು ಯೆಹೂದ್ಯರಲ್ಲಿ ಅನೇಕರು ಓದಿಕೊಂಡರು; ಯಾಕಂದರೆ ಯೇಸು ಕ್ರೂಜೆಗೆ ಹಾಕಲ್ಪಟ್ಟ ಸ್ಥಳವು ಪಟ್ಣಕ್ಕೆ ಸಮೀಪವಾಗಿತ್ತು. ಮತ್ತು ಅದು ಇಬ್ರೀಯ ಗ್ರೇಕ ರೋಮಿಯ ಭಾಷೆಗಳಲ್ಲಿ ಬರದಿತ್ತು. ಹೀಗಿರಲಾಗಿ ಯೆಹೂದ್ಯರ ಪ್ರಧಾನಯಾಜಕರು ಪಿಲಾತನಿಗೆ,—ಯೆಹೂದ್ಯರ ಅರಸನೆಂದಲ್ಲಾ, ಅವನು ಯೆಹೂದ್ಯರ ಅರಸನಾಗಿದ್ಧೇನೆಂದು ಹೇ

ಳಿದನೆಂಬದಾಗಿ ಬರೆಯ ಬೇಕು, ಅಂದಾಗ, ಪಿಲಾತನು ಪ್ರಶ್ನೋತ್ತರವಾಗಿ, — ನಾನು ಬರದದ್ದನ್ನು ಬರದಿದ್ದೇನೆ, ಅಂದನು.


ಇದಲ್ಲದೆ ರಾಣುವೆಯವರು ಯೇಸುವನ್ನು ಕ್ರೂಜೆಗೆ ಹಾಕಿದ ಮೇಲೆ ಆತನ ವಸ್ತ್ರಗಳನ್ನು ತೆಗದು, ವೊಬ್ಬೊಬ್ಬ ರಾಣುವೆಯವನಿಗೆ ವೊಂದೊಂದು ಪಾಲಾಗಿ, ನಾಲ್ಕು ಪಾಲು ಮಾಡಿದರು. ಅಂಗಿಯನ್ನು ಸಹಾ ತಕ್ಕೊಂಡರು; ಆದರೆ ಅಂಗಿಯು ಹೊಲಿಗೆ ಇಲ್ಲದೆ, ಮೇಲಿನಿಂದಲೇ ಯೆಲ್ಲಾ ನೈದದ್ದಾಗಿರುವದರಿಂದ, — ಅದನ್ನು ಹರಿಯದೆ, ಯಾರಿಗೆ ಆಗುವದೋ ಅದಕ್ಕೋಸ್ಕರ ಚೀಟು ಹಾಕುವಾ, ಯೆಂದು ತಮ್ಮೊಳಗೆ ಹೇಳಿಕೊಂಡರು. ಹೀಗೆಯೇ, — ನನ್ನ ವಸ್ತ್ರಗಳನ್ನು ತಮ್ಮಲ್ಲಿ ಪಾಲಿಟ್ಟು, ನನ್ನ ಅಂಗೀಗೋಸ್ಕರ ಚೀಟು ಹಾಕಿದರು, ಯೆಂದು ಪ್ರವಾದಿ (ಕೀರ್ತ. ೨೨, ೧೮.) ಹೇಳಿದ ವಾಕ್ಯವು ಈಡೇರಿತು.

ಮತ್ತು ರಾಣುವೆಯವರು ಅಲ್ಲಿ ಕೂತುಕೊಂಡು, ಆತನನ್ನು ಕಾಯುತ್ತಿದ್ದರು. ಮತ್ತು ಜನರು ನೋಡುತ್ತಾ ನಿಂತರು. ಹಾದು ಹೋಗುವವರು ತಮ್ಮ ತಲೆಗಳನ್ನು ಅಲ್ಲಾಡಿಸಿಕೊಂಡು, — ದೇವಾಲಯವನ್ನು ಕೆಡವಿ, ಮೂರು ದಿವಸಗಳಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ! ನೀನು ದೇವರ ಮಗನಾಗಿದ್ದರೆ, ಕ್ರೂಜೆಯಿಂದ ಇಳಿದು ಬಾ! ಯೆಂದು ಆತನನ್ನು ದೂಷಿಸಿದರು. ಅದೇ ಮೇರೆಗೆ ಪ್ರಧಾನಯಾಜಕರೂ ಶಾಸ್ತ್ರಿಗಳೂ ಹಿರಿಯರ ಸಂಗಡ ಆತನಿಗೆ ಹಾಸ್ಯ ಮಾಡಿ, — ಬೇರೊಬ್ಬರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿಕೊಳ್ಳಲಾರನು! ಅವನು ಇಸ್ರಯೇಲಿನ ಅರಸನಾಗಿದ್ದರೆ, ಕ್ರೂಜೆಯಿಂದ ಈಗ ಇಳಿದು ಬರಲಿ, ಆಗ ಅವನಲ್ಲಿ ವಿಶ್ವಾಸವಿಡುತ್ತೇವೆ! ದೇವರನ್ನು ನಂಬಿದನು; ಅವನಿಗೆ ಬೇಕಾದರೆ, ಈಗ ಇವನನ್ನು ಬಿಡಿಸಲಿ! ದೇವರ ಮಗನಾಗಿದ್ದೇನೆಂದು ಹೇಳಿದನಲ್ಲಾ? ಅಂದರು. ಮತ್ತು ರಾಣುವೆಯವರು ಸಹಾ ಆತನನ್ನು ಹಾಸ್ಯ ಮಾಡಿದರು. ಮತ್ತು ತೂಗಿರುವ ದುಷ್ಟರಲ್ಲಿ ವೊಬ್ಬನು, — ನೀನು ಕ್ರಿಸ್ತನಾಗಿದ್ದರೆ, ನಿನ್ನನ್ನೂ ನಮ್ಮನ್ನೂ ರಕ್ಷಿಸು! ಯೆಂದು ಆತನನ್ನು ದೂಷಿಸಿದನು. ಆದರೆ ಬೇರೊಬ್ಬನು ಅವನನ್ನು ಗದರಿಸಿ, — ಅದೇ ಆಜ್ಞೆಯಲ್ಲಿರುವ ನೀನು

ದೇವರಿಗೆ ಭಯಪಡುವದಿಲ್ಲವೋ? ನಮಗಾದರೆ ನ್ಯಾಯವಾಗಿದೆ, ಯಾಕಂದರೆ ನಾವು ಮಾಡಿದವುಗಳಿಗೆ ತಕ್ಕದ್ದನ್ನು ಹೊಂದುತ್ತೇವೆ; ಆದರೆ ಈತನು ಅಯೋಗ್ಯವಾದದ್ದೇನೂ ಮಾಡಲಿಲ್ಲ, ಯೆಂದು ಹೇಳಿ, ಯೇಸುವಿಗೆ, — ಕರ್ತನೇ, ನಿನ್ನ ರಾಜ್ಯದೊಳಗೆ ಬರುವಾಗ ನನ್ನನ್ನು ಜ್ಞಾಪಕ ಮಾಡಿಕೋ! ಅಂದನು. ಯೇಸು ಅವನಿಗೆ, — (೨.) ನಿಶ್ಚಯವಾಗಿ ನಿನಗೆ ಹೇಳುತ್ತೇನೆ, ಈ ಹೊತ್ತು ನನ್ನ ಸಂಗಡ ಪರದೈಸಿನಲ್ಲಿ ಇರುವಿ! ಅಂದನು.

ಆದರೆ ಯೇಸುವಿನ ಕ್ರೂಜೆಗೆ ಸಮೀಪವಾಗಿ ಆತನ ತಾಯಿಯೂ, ಆತನ ತಾಯಿಯ ಸಹೋದರಿಯೂ, ಕ್ಲೆಯೋಫನ ಹೆಂಡತಿಯಾದ ಮರೀಯಳೂ, ಮಗ್ದಲದವಳಾದ ಮರೀಯಳೂ ನಿಂತಿದ್ದರು. ಯೇಸು ತನ್ನ ತಾಯಿಯೂ, ತಾನು ಪ್ರೀತಿ ಮಾಡಿದ ಶಿಷ್ಯನೂ (ಅಂದರೆ ಯೋಹಾನನು), ಹತ್ತರ ನಿಂತಿರುವದನ್ನು ನೋಡಿ, ತನ್ನ ತಾಯಿಗೆ, — (೩.) ಸ್ತ್ರೀಯೇ, ಇಗೋ, ನಿನ್ನ ಮಗನು! ಅಂದನು. ಆಗ ಶಿಷ್ಯನಿಗೆ, — ಇಗೋ, ನಿನ್ನ ತಾಯಿ! ಅಂದನು. ಆ ಘಳಿಗೆಯಿಂದ ಆ ಶಿಷ್ಯನು ಅವಳನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡನು.

ಆದರೆ ಆರನೇ ತಾಸಿನಿಂದ ಒಂಭತ್ತನೇ ತಾಸಿನವರೆಗೂ ದೇಶವೆಲ್ಲಾದರ ಮೇಲೆ ಕತ್ತಲಾಯಿತು; ಸೂರ್ಯನು ಕತ್ತಲಾದನು. ಮತ್ತು ಒಂಭತ್ತನೇ ತಾಸಿನಲ್ಲಿ ಯೇಸು ಮಹಾ ಶಬ್ದದಿಂದ, — (೪.) ಎಲೀ! ಎಲೀ! ಲಮ್ಮಾ ಸಬಕ್ಥಾನಿ? ಅದೇನಂದರೆ, — ನನ್ನ ದೇವರೇ! ನನ್ನ ದೇವರೇ! ಯಾಕೆ ನನ್ನನ್ನು ಕೈಬಿಟ್ಟಿ? (ಕೀರ್ತ. ೨೨, ೧.) ಯೆಂದು ಕೂಗಿದನು. ಹತ್ತರ ನಿಂತವರಲ್ಲಿ ಕೆಲವರು ಅದನ್ನು ಕೇಳಿ, — ಇಗೋ, ಎಲೀಯನನ್ನು ಕರೆಯುತ್ತಾನೆ, ಅಂದರು. — ಆ ಮೇಲೆ ಯೇಸು ಈಗ ಯೆಲ್ಲಾ ತೀರಿತೆಂದು ತಿಳಕೊಂಡು, ಬರಹವು ನೆರವೇರುವ ಹಾಗೆ, — (೫.) ದಾಹವಾಯಿತು! ಅಂದನು. ಹುಳಿರಸ ತುಂಬಿದ ಪಾತ್ರೆಯು ಅಲ್ಲಿ ಇತ್ತು. ಸಂಗಡಲೇ ಅವರಲ್ಲಿ ಒಬ್ಬನು ಓಡಿ ಹೋಗಿ, ಪಾಚಿಯನ್ನು ತೆಗದುಕೊಂಡು, ಹುಳಿರಸದಿಂದ ತ್ವವಿಸಿ, ಕೋಲಿಗೆ ಸಿಕ್ಕಿಸಿ, ಆತನ ಬಾಯಿಗೆ ಹಾಕಿ, ಆತನಿಗೆ ಕುಡಿಯ ಕೊಟ್ಟನು. ಮಿಕ್ಕಾದವರು, — ಬಿಡು! ಎಲೀಯನು ಬಂದು, ಅವನನ್ನು ರಕ್ಷಿಸುವನೋನೋ



ಡೋಣ, ಅಂದರು. —ಆ ಹುಳಿರಸವನ್ನು ಯೇಸು ತಕ್ಕೊಂಡ ಮೇಲೆ, —(೬.) ತೀರಿತು! ಯೆಂದು ಹೇಳಿದನು. ಆಗ ಯೇಸು ಮಹಾ ಶಬ್ದದಿಂದ ಕೂಗಿ, —(೭.) ತಂದೆಯೇ! ನಿನ್ನ ಕೈಗಳಲ್ಲಿ ನನ್ನ ಆತ್ಮವನ್ನು ಒಪ್ಪಿಸುತ್ತೇನೆ, ಯೆಂದು ಹೇಳಿ, ತಲೆ ಬಾಗಿಸಿ, ಆತ್ಮವನ್ನು ಒಪ್ಪಿಸಿದನು.

ಆಗ ಇಗೋ, ದೇವಾಲಯದ ತೆರೆಯು ಮೇಲಿನಿಂದ ಕೆಳಗಿನ ಪರ್ಯಂತರ ಯೆರಡಾಗಿ ಹರಿದು ಹೋಯಿತು; ಭೂಮಿಯು ಕಂಪಿಸಿತು; ಬಂಡೆಗಳು ಸೀಳಿ ಹೋದವು; ಸಮಾಧಿಗಳು ತೆರೆಯಲ್ಪಟ್ಟವು, ಮತ್ತು ನಿದ್ದೆ ಮಾಡಿದ ಅನೇಕ ಪರಿಶುದ್ಧರ ಶರೀರಗಳು ಯೆಬ್ಬಿಸಲ್ಪಟ್ಟವು; ಆತನು ಯೆದ್ದ ಮೇಲೆ, ಅವರು ಸಮಾಧಿಗಳಿಂದ ಹೊರಟು, ಪರಿಶುದ್ಧ ಪಟ್ಟಣದಲ್ಲಿ ಪ್ರವೇಶಿಸಿ, ಅನೇಕರಿಗೆ ಕಾಣಿಸಿಕೊಂಡರು. ಆದರೆ ಶತಾಧಿಪತಿಯೂ ಅವನ ಸಂಗಡ ಯೇಸುವನ್ನು ಕಾಯುವವರೂ ಭೂಕಂಪವನ್ನೂ ಆದ ಕಾರ್ಯಗಳನ್ನೂ ನೋಡಿ, ಬಹು ಭಯ ಪಟ್ಟು, ದೇವರನ್ನು ಮಹಿಮೆ ಪಡಿಸಿ, —ನಿಶ್ಚಯವಾಗಿ ಈ ಮನುಷ್ಯನು ನೀತಿವಂತನೂ ದೇವರ ಮಗನೂ ಆಗಿದ್ದನು, ಅಂದರು. ಮತ್ತು ಆ ನೋಟಕ್ಕೆ ಕೂಡಿ ಬಂದ ಸಮೂಹಗಳೆಲ್ಲಾ ಆದವುಗಳನ್ನು ನೋಡಿ, ಯೆದೆ ಬಡಕೊಂಡು ತಿರಿಗಿ ಹೋದರು.

ಆಗ ಯೆಹೂದ್ಯರು, ದೊಡ್ಡದಾದ ಆ ಸಬ್ಬಥಿನ ದಿವಸಕ್ಕೆ ಸಿದ್ಧ ಮಾಡುವ ದಿವಸವಿರುವದರಿಂದ, ಸಬ್ಬಥಿನಲ್ಲಿ ಶರೀರಗಳು ಕ್ರೂಜೆಯಲ್ಲಿ ಇರದ ಹಾಗೆ, ಅವರ ಕಾಲುಗಳನ್ನು ಮುರಿದು, ಅವರನ್ನು ಇಳಿಸ ಬೇಕೆಂದು ಪಿ

ಲಾತನನ್ನು ಬೇಡಿಕೊಂಡರು. ಆಗ ರಾಣುವೆಯವರು ಬಂದು, ಯೇಸುವಿನ ಸಂಗಡ ಕ್ರೂಜೆಗೆ ಹಾಕಲ್ಪಟ್ಟ ಮೊದಲನೆಯವನ ಕಾಲುಗಳನ್ನೂ ಮತ್ತೊಬ್ಬನ ಕಾಲುಗಳನ್ನೂ ಮುರಿದು, ಯೇಸುವಿನ ಬಳಿಗೆ ಬಂದು, ಆತನು ಸತ್ತು ಆಯಿತೆಂದು ನೋಡಿ, ಆತನ ಕಾಲುಗಳನ್ನು ಮುರಿಯಲಿಲ್ಲ; ಆದರೆ ರಾಣುವೆಯವರಲ್ಲಿ ಒಬ್ಬನು ಭಲ್ಲೆಯಿಂದ ಆತನ ಪಕ್ಕೆ ತಿವಿದನು; ಸಂಗಡಲೇ ರಕ್ತವೂ ನೀರೂ ಹೊರಗೆ ಬಂತು. ಆತನ ಯೆಲುವು ಮುರಿಯಲ್ಪಡದು ಯೆಂಬ ಬರಹವು (೨ ಮೋಶೆ. ೧೨, ೪೬.) ಈಡೇರುವ ಹಾಗೆ ಇವು ಉಂಟಾದವು. ಇನ್ನೂ ಬೇರೆ ಬರಹವು (ಜಕ್. ೧೨, ೧೦.),—ಅವರು ತಾವು ತಿವಿದವನನ್ನು ನೋಡುವರು ಯೆಂದು ಹೇಳುತ್ತದೆ.—ಮತ್ತು ಇಗೋ, ಅರಿಮಥಾಯದವನಾದ ಯೋಸೇಫನೆಂಬ ಒಬ್ಬ ಮನುಷ್ಯನಿದ್ದನು; ಇವನು ಘನವುಳ್ಳ ಮಂತ್ರಿಯೂ, ನೀತಿವಂತನಾದ ಒಳ್ಳೇ ಮನುಷ್ಯನೂ, ಯೆಹೂದ್ಯರ ಭಯದಿಂದ ಗುಪ್ತವಾಗಿ ಯೇಸುವಿನ ಶಿಷ್ಯನೂ ಆಗಿದ್ದು, ಅವರ ಆಲೋಚನೆಗೂ ಕೃತ್ಯಕ್ಕೂ ಸಮ್ಮತಿಪಡದೆ ಇದ್ದನು; ಅವನು ತಾನು ದೇವರ ರಾಜ್ಯವನ್ನು ನಿರೀಕ್ಷಿಸುತ್ತಿದ್ದನು. ಇವನು ಬಂದು, ಧೈರ್ಯವಾಗಿ ಪಿಲಾತನ ಬಳಿಗೆ ಪ್ರವೇಶಿಸಿ, ಯೇಸುವಿನ ಶರೀರವನ್ನು ಕೇಳಿಕೊಂಡನು. ಆದರೆ ಪಿಲಾತನು ಅವನು ಆಗಲೇ ಸತ್ತನೋ ಯೆಂದು ಆಶ್ಚರ್ಯ ಪಟ್ಟು, ಶತಾಧಿಪತಿಯನ್ನು ಕರದು,—ಅವನು ಸತ್ತು ಹೋದನೋ? ಯೆಂದು ವಿಚಾರಿಸಿದನು. ಶತಾಧಿಪತಿಯಿಂದ ಅದನ್ನು ತಿಳಿದುಕೊಂಡ ಮೇಲೆ ಶರೀರವನ್ನು ಯೋಸೇಫನಿಗೆ ಕೊಟ್ಟು ಬಿಟ್ಟನು. ಯೋಸೇಫನು ನಾರುಮಡಿ ತೆಗದುಕೊಂಡು ಬಂದು, ಯೇಸುವಿನ ಶರೀರವನ್ನು ಇಳಿಸಿದನು. ಇದಲ್ಲದೆ ಮೊದಲು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದ ನಿಕೊದೇಮನು ಸಹಾ ಕಲಿಸಿದ ಬೋಳವೂ ಅಗರೂ ಹೆಚ್ಚುಕಡಿಮೆ ನೂರು ಶೇರು ತೆಗದುಕೊಂಡು ಬಂದನು. ಆಗ ಯೇಸುವಿನ ಶರೀರವನ್ನು ತಕ್ಕೊಂಡು, ಯೆಹೂದ್ಯರಲ್ಲಿ ಹೂಣಿಡುವ ಮರಿಯಾದೆಯ ಪ್ರಕಾರ ಅದನ್ನು ಸುಗಂಧಗಳ ಸಂಗಡ ಶುದ್ಧ ಬಟ್ಟೆಗಳಿಂದ ಸುತ್ತಿ, ಯೋಸೇಫನು ತಾನು ಬಂಡೆಯಲ್ಲಿ ಕೊಡಿಸಿದಂಥಾ, ಯಾವನೂ ಯೆಂದೂ

ಇಡಲ್ಪಡದಂಥಾ ತನ್ನ ಹೊಸ ಸಮಾಧಿಯೊಳಗೆ ಅದನ್ನು ಇಟ್ಟರು. ಮತ್ತು ಆತನ ಸಂಗಡ ಗಲಿಲಾಯದಿಂದ ಬಂದ ಹೆಂಗಸರು ಸಹಾ ಹಿಂಬಾಲಿಸಿ, ಸಮಾಧಿಯನ್ನೂ ಆತನ ಶರೀರವು ಇಡಲ್ಪಟ್ಟ ರೀತಿಯನ್ನೂ ನೋಡಿದರು. ಮತ್ತು ಯೋಸೇಫನು ಸಮಾಧಿಯ ಬಾಗಲಿಗೆ ದೊಡ್ಡ ಕಲ್ಲನ್ನು ಹೊರಳಿಸಿ ಹೋದನು. ತರುವಾಯ ಆ ಹೆಂಗಸರು ತಿರಿಗಿ ಹೋಗಿ, ಸುಗಂಧಗಳನ್ನೂ ತೈಲಗಳನ್ನೂ ಸಿದ್ಧ ಮಾಡಿ, ಕಟ್ಟಳೆಯ ಮೇರೆಗೆ ಸಬ್ಬಥಿನಲ್ಲಿ ಸುಮ್ಮನೇ ಇದ್ದರು.

(ಶ್ರಮಸಪ್ತಕದ ಶನಿವಾರ.)

ಮರುದಿವಸದಲ್ಲಿ ಪ್ರಧಾನಯಾಜಕರೂ ಫರಿಸಾಯರೂ ಪಿಲಾತನ ಬಳಿಗೆ ಕೂಡಿ ಬಂದು, — ಧಣಿಯೇ, ಆ ಮೋಸಗಾರನು ಬದುಕುತ್ತಿರುವಾಗ, — ಮೂರು ದಿವಸಗಳ ಮೇಲೆ ಯೇಳುತ್ತೇನೆ ಯೆಂದು ಹೇಳಿದ್ದನ್ನು ಜ್ಞಾಪಕ ಮಾಡಿಕೊಳ್ಳುತ್ತೇವೆ; ಆದಕಾರಣ ಅವನ ಶಿಷ್ಯರು ರಾತ್ರಿಯಲ್ಲಿ ಬಂದು, ಅವನನ್ನು ಕದ್ದುಕೊಂಡು ಹೋಗಿ, ಸತ್ತವರೊಳಗಿಂದ ಯೆದ್ದಿದ್ದಾನೆಂದು ಜನರಿಗೆ ಹೇಳಿದರೆ, ಮೊದಲಿನ ಮೋಸಕ್ಕಿಂತ ಕಡೇದು ಕೆಟ್ಟದ್ದಾಗದ ಹಾಗೆ, ಸಮಾಧಿಯನ್ನು ಮೂರನೇ ದಿವಸದ ಪರ್ಯಂತರ ಭದ್ರ ಮಾಡುವದಕ್ಕೆ ಅಪ್ಪಣೆ ಕೊಡ ಬೇಕು, ಅಂದರು. ಪಿಲಾತನು ಅವರಿಗೆ, — ನಿಮಗೆ ಕಾವಲು ಉಂಟು; ಹೋಗಿ, ನಿಮ್ಮ ಕೈಲಾದ ಮಟ್ಟಿಗೂ ಭದ್ರ ಮಾಡಿರಿ! ಅನ್ನಲಾಗಿ, ಅವರು ಹೋಗಿ, ಕಲ್ಲಿಗೆ ಮುದ್ರೆ ಹಾಕಿ, ಸಮಾಧಿಯನ್ನು ಕಾವಲಿಯಿಂದ ಭದ್ರ ಮಾಡಿದರು. — ಮತ್ತು ಸಬ್ಬಥ್ ಆದ ಮೇಲೆ ಮಗ್ದಲದವಳಾದ ಮರೀಯಳೂ, ಆ ಮತ್ತೊಬ್ಬ ಮರೀಯಳೂ, ಜೆಬೆದಾಯನ ಹೆಂಡತಿಯಾದ ಸಾಲೊಮೆಯೂ ಆತನನ್ನು ಅಭಿಷೇಕಿಸುವ ಹಾಗೆ ಸುಗಂಧಗಳನು ಕೊಂಡುಕೊಂಡರು.

---

೩೬. ಯೇಸುವಿನ ಪುನರುತ್ಥಾನವು. ಮಗ್ದಲದವಳಾದ ಮರೀಯಳಿಗೆ ಯೇಸು ಪ್ರತ್ಯಕ್ಷವಾದದ್ದು.

(ಮತ್ತ. ೨೮, ೧—೧೫. ಮಾರ್ಕ. ೧೬, ೧—೧೧. ಲೂಕ. ೨೪, ೧—೧೨. ಯೋ. ೨೦, ೧—೧೮.)

(ಪುನರುತ್ಥಾನದ ಆದಿತ್ಯವಾರ.)

ಸಬ್ಬಥಿನ ಮಾರನೇ ದಿವಸ ಅರುಣೋದಯವಾದಾಗ ಇಗೋ, ಮಹಾ ಭೂಕಂಪ ಉಂಟಾಯಿತು; ಯಾಕಂದರೆ ಕರ್ತನ ದೂತನು ಆಕಾಶದಿಂದ ಇಳಿದು, ಹತ್ತರ ಬಂದು, ಬಾಗಲಿಂದ ಕಲ್ಲನ್ನು ಹೊರಳಿಸಿ, ಅದರ ಮೇಲೆ ಕೂತುಕೊಂಡನು; ಅವನ ರೂಪವು ಮಿಂಚಿನ ಹಾಗೆಯೂ, ಅವನ ವಸ್ತ್ರವು ಹಿಮದ ಹಾಗೆ ಬಿಳುಪಾಗಿಯೂ ಇತ್ತು. ಅವನ ಭಯದಿಂದ ಕಾಯುವವರು ಕಳವಳಪಟ್ಟು, ಸತ್ತವರ ಹಾಗಾದರು. ತರುವಾಯ ಅವರಲ್ಲಿ ಕೆಲವರು ಪಟ್ಣಕ್ಕೆ ಬಂದು, ಆದವುಗಳನ್ನೆಲ್ಲಾ ಪ್ರಧಾನಯಾಜಕರಿಗೆ ತಿಳಿಸಿದರು. ಇವರು ಹಿರಿಯರ ಸಂಗಡ ಕೂಡಿಕೊಂಡು, ಆಲೋಚನೆ ಮಾಡಿ, ರಾಣುವೆಯವರಿಗೆ ಬಹಳ ಹಣ ಕೊಟ್ಟು, — ಅವನ ಶಿಷ್ಯರು ರಾತ್ರಿಯಲ್ಲಿ ಬಂದು, ನಾವು ನಿದ್ದೆ ಮಾಡುವ ವೇಳೆಯಲ್ಲಿ ಅವನನ್ನು ಕದ್ದುಕೊಂಡು ಹೋದರು, ಯೆಂದು ಹೇಳಿರಿ! ಇದು ಅಧಿಪತಿಗೆ ಸುದ್ದಿಯಾದರೆ, ನಾವು ಅವನನ್ನು ಸಮ್ಮತಿ ಪಡಿಸಿ, ನಿಮಗೆ ಭಯವಿಲ್ಲದ ಹಾಗೆ ಮಾಡುವೆವು, ಅಂದರು. ಅವರು ಆ ಹಣವನ್ನು ತಕ್ಕೊಂಡು, ಬೋಧಿಸಲ್ಪಟ್ಟ ಹಾಗೆ ಮಾಡಿದರು.

ಅದೇ ದಿವಸದಲ್ಲಿ ಸೂರ್ಯನು ಉದಯಿಸುವಾಗಲೇ ಮಗ್ದಲದವಳಾದ ಮರೀಯಳೂ ಆ ಮತ್ತೊಬ್ಬ ಮರೀಯಳೂ ಸಾಲೋಮೆಯೂ ಸಮಾಧಿಯ ಬಳಿಗೆ ಬಂದು, — ಸಮಾಧಿಯ ಬಾಗಲಿಂದ ನಮಗೆ ಯಾರು ಕಲ್ಲನ್ನು ತೆಗದು ಹೊರಳಿಸುವರು? ಯೆಂದು ತಮ್ಮೊಳಗೆ ಹೇಳಿಕೊಂಡು, ಕಣ್ಣು ಯೆತ್ತುವಾಗ, ಮಹಾ ದೊಡ್ಡದಾಗಿದ್ದ ಆ ಕಲ್ಲು ಹೊರಳಿಸಿ ತೆಗಿಯಲ್ಪಟ್ಟಿರುವದನ್ನು ನೋಡಿದರು. ಮಗ್ದಲದವಳಾದ ಮರೀಯಳು ಸೀಮೋನ್ ಪೇತ್ರನ ಬಳಿಗೂ, ಯೇಸು ಸ್ನೇಹಿಸಿದ ಆ ಬೇರೆ ಶಿಷ್ಯನ ಬಳಿಗೂ ಓಡಿ ಬಂದು, ಅವರಿಗೆ, — ಕರ್ತನನ್ನು ಸಮಾಧಿಯೊಳಗಿಂದ ತಕ್ಕೊಂಡು ಹೋಗಿದ್ದಾರೆ; ಆತನನ್ನು

ಯಲ್ಲಿ ಇಟ್ಟಿದ್ದಾರೋ ಅರಿಯೆವು, ಅಂದಳು. ಬೇರೆ ಸ್ತ್ರೀಯರು ಒಳಗೆ ಹೋಗಿ, ಕರ್ತನಾದ ಯೇಸುವಿನ ಶರೀರವನ್ನು ಕಾಣಲಿಲ್ಲ. ಇದರ ವಿಷಯ ಅವರು ಸಂದೇಹ ಪಡುತ್ತಿರುವಾಗ, ಬಿಳೀ ಅಂಗಿ ತೊಟ್ಟುಕೊಂಡಿರುವ ಒಬ್ಬ ಯೌವನಸ್ಥನು ಬಲಪಾರ್ಶ್ವದಲ್ಲಿ ಕೂತಿರುವದನ್ನು ನೋಡಿ ಭಯಭ್ರಾಂತರಾದರು. ಮತ್ತು ಇಗೋ, ಮಿಂಚುವ ವಸ್ತ್ರಗಳುಳ್ಳ ಇಬ್ಬರು ಮನುಷ್ಯರು ಅವರ ಬಳಿಯಲ್ಲಿ ನಿಂತಿದ್ದರು. ಅವರು ಭಯಸ್ಥರಾಗಿ ಮುಖವನ್ನು ನೆಲಕ್ಕೆ ಬಾಗಿಸುವಾಗ, ಅವರು ಅವರಿಗೆ ಹೇಳಿದ್ದು,—ನೀವು ಭಯಪಡ ಬೇಡಿರಿ! ಯಾಕಂದರೆ ಕ್ರೂಜೆಗೆ ಹಾಕಲ್ಪಟ್ಟ ನಜರೇತಿನ ಯೇಸುವನ್ನು ಹುಡುಕುತ್ತೀರಿ; ನೀವು ಬದುಕುವವನನ್ನು ಸತ್ತವರಲ್ಲಿ ಹುಡುಕುವದೇನು? ಆತನು ಇಲ್ಲಿ ಇಲ್ಲ, ಯಾಕಂದರೆ ತಾನು ಹೇಳಿದ ಪ್ರಕಾರ ಯೆದ್ದಿದ್ದಾನೆ; ಕರ್ತನು ಮಲಗಿದ್ದ ಸ್ಥಳವನ್ನು ಬಂದು ನೋಡಿರಿ! ಆತನು ಗಲಿಲಾಯದಲ್ಲಿದ್ದಾಗ, ಮನುಷ್ಯನ ಮಗನು ಪಾಪಿಷ್ಟರಾದ ಮನುಷ್ಯರ ಕೈಗಳಿಗೆ ಒಪ್ಪಿಸಲ್ಪಟ್ಟು, ಕ್ರೂಜೆಗೆ ಹಾಕಲ್ಪಟ್ಟು, ಮೂರನೇ ದಿವಸದಲ್ಲಿ ಯೇಳ ಬೇಕೆಂಬದಾಗಿ ನಿಮಗೆ ಹೇಳಿದ್ದನ್ನು ಜ್ಞಾಪಕ ಮಾಡಿಕೊಳ್ಳಿರಿ! ಮತ್ತು ಬೇಗ ಹೋಗಿ, ಸತ್ತವರೊಳಗಿಂದ ಯೆದ್ದಿದ್ದಾನೆಂದು ಆತನ ಶಿಷ್ಯರಿಗೆ ಹೇಳಿರಿ! ಇಗೋ, ಆತನು ನಿಮಗೆ ಹೇಳಿದ ಪ್ರಕಾರ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ; ಅಲ್ಲಿ ಆತನನ್ನು ಕಾಣುವಿರಿ! ಸ್ತ್ರೀಯರು ಭಯದಿಂದಲೂ ಮಹಾ ಸಂತೋಷದಿಂದಲೂ ಬೇಗ ಸಮಾಧಿಯನ್ನು ಬಿಟ್ಟು ಹೊರಟು, ಆತನ ಶಿಷ್ಯರಿಗೆ ತಿಳಿಸುವದಕ್ಕೆ ಓಡಿ ಹೋದರು. ಆದರೆ ಯಾರಿಗೂ ಯೇನೂ ಹೇಳಲಿಲ್ಲ.

ಪೇತ್ರನೂ ಆ ಬೇರೆ ಶಿಷ್ಯನೂ (ಮಗ್ದಲದವಳಾದ ಮರೀಯಳ ಮೊದಲನೇ ಮಾತನ್ನು ಕೇಳಿ), ಹೊರಟು ಹೋಗಿ, ಸಮಾಧಿಗೆ ಬಂದರು. ಅವರಿಬ್ಬರೂ ಕೂಡಾ ಓಡಿದರು. ಆದರೆ ಆ ಬೇರೆ ಶಿಷ್ಯನು ಪೇತ್ರನಿಗಿಂತ ಬೇಗ ಓಡಿ, ಮೊದಲು ಸಮಾಧಿಗೆ ಬಂದನು; ಬಾಗಿ ನೋಡಿ, ಬಿದ್ದಿರುವ ಬಟ್ಟೆಗಳನ್ನು ಕಂಡನು, ಆದರೆ ಒಳಗೆ ಹೋಗಲಿಲ್ಲ. ಆ ಮೇಲೆ ಸೀಮೋನ್ ಪೇತ್ರನು ಅವನನ್ನು ಹಿಂದಟ್ಟಿ ಬಂದು, ಸಮಾಧಿಯೊಳಗೆ ಪ್ರವೇ

ಶಿಸಿ, ಬಿದ್ದಿರುವ ಬಟ್ಟೆಗಳನ್ನೂ, ಆತನ ತಲೆಯ ಮೇಲಿದ್ದ ಕೈವಸ್ತ್ರವು ಬಟ್ಟೆಗಳ ಸಂಗಡ ಅಲ್ಲಾ, ಬೇರೆ ವೊಂದು ಕಡೆಯಲ್ಲಿ ಬಿದ್ದಿರುವದನ್ನೂ ನೋಡಿದನು; ಆಗ ಮೊದಲು ಸಮಾಧಿಗೆ ಬಂದ ಆ ಬೇರೆ ಶಿಷ್ಯನು ಸಹಾ ಹೊಕ್ಕು ನೋಡಿ, ನಂಬಿದನು; ಯಾಕಂದರೆ ಆತನು ಸತ್ತವರೊಳಗಿಂದ ಯೇಳ ಬೇಕೆಂಬ ಬರಹವು ಅವರಿಗೆ ಇನ್ನೂ ತಿಳಿಯಲಿಲ್ಲಾ. ಆಗ ಶಿಷ್ಯರು ತಿರಿಗಿ ಮನೆಗೆ ಹೋದರು.

ಆದರೆ ಮಗ್ದಲದವಳಾದ ಮರಿಯಳು (ಆ ಇಬ್ಬರು ಶಿಷ್ಯರನ್ನು ಹಿಂಬಾಲಿಸಿ, ಸಮಾಧಿಗೆ ತಿರಿಗಿ ಬಂದು,) ಅಳುತ್ತಾ ಸಮಾಧಿಯ ಸಮೀಪದಲ್ಲಿ ಹೊರಗೆ ನಿಂತಿದ್ದಳು. ಅವಳು ಅಳುತ್ತಾ ಸಮಾಧಿಯೊಳಗೆ ಬಾಗಿ ನೋಡಿ, ಬಿಳೀ ವಸ್ತ್ರಧರಿಸಿಕೊಂಡ ಇಬ್ಬರು ದೂತರು ಯೇಸುವಿನ ಶರೀರವು ಇದ್ದಲ್ಲಿ ವೊಬ್ಬನು ತಲೆಯ ಪಕ್ಕದ, ವೊಬ್ಬನು ಪಾದಗಳ ಪಕ್ಕದ ಕೂತಿರುವದನ್ನು ಕಂಡಳು. ಅವರು ಅವಳಿಗೆ,—ಸ್ತ್ರೀಯೇ, ನೀನು ಅಳುವದೇನು? ಅನ್ನಲು, ಅವಳು ಅವರಿಗೆ,—ನನ್ನ ಕರ್ತನನ್ನು ತಕ್ಕೊಂಡು ಹೋಗಿದ್ದಾರೆ; ಆತನನ್ನು ಯೆಲ್ಲಿ ಇಟ್ಟಿದ್ದಾರೋ ಅರಿಯೆನು, ಅಂದಳು. ಇದನ್ನು ಹೇಳುತ್ತಾ ಹಿಂದೆ ತಿರುಗಿಕೊಂಡು, ಯೇಸು ನಿಂತಿರುವದನ್ನು ಕಂಡು, ಆತನು ಯೇಸುವೆಂದು ತಿಳಿಯದೆ ಇದ್ದಳು. ಯೇಸು ಅವಳಿಗೆ,—ಸ್ತ್ರೀಯೇ, ನೀನು ಅಳುವದೇನು? ಯಾರನ್ನು ಹುಡುಕುತ್ತೀ? ಅನ್ನಲು, ಅವಳು ಆತನನ್ನು ತೋಟಗಾರನೆಂದು ನೆನಸಿ, ಆತನಿಗೆ,—ಅಯ್ಯಾ, ನೀನು ಆತನನ್ನು ತಕ್ಕೊಂಡು ಹೋಗಿದ್ದರೆ, ಆತನನ್ನು ಯೆಲ್ಲಿ ಇಟ್ಟಿದ್ದೀ ಯೆಂದು ನನಗೆ ಹೇಳು! ಆಗ ನಾನು ಆತನನ್ನು ತಕ್ಕೊಂಡು ಹೋಗುವೆನು, ಅಂದಳು. ಯೇಸು ಅವಳಿಗೆ,—ಮರಿಯಳೇ! ಅನ್ನಲು, ಅವಳು ತಿರುಗಿಕೊಂಡು, ಆತನಿಗೆ,—ರಬ್ಬೂನಿ! ಅಂದಳು. ಅದೇನಂದರೆ, ಬೋಧಕನೇ!—ಯೇಸು ಅವಳಿಗೆ ಹೇಳಿದ್ದೇನಂದರೆ,—ನನ್ನನ್ನು ಮುಟ್ಟಬೇಡ, ಯಾಕಂದರೆ ನಾನು ಇನ್ನೂ ನನ್ನ ತಂದೆಯ ಬಳಿಗೆ ಯೇರಿ ಹೋಗಲಿಲ್ಲಾ; ಆದರೆ ನನ್ನ ಸಹೋದರರ ಬಳಿಗೆ ಹೋಗಿ, ನನ್ನ ತಂದೆಯೂ ನಿಮ್ಮ ತಂದೆಯೂ, ನನ್ನ ದೇವರೂ ನಿಮ್ಮ ದೇವರೂ ಆಗಿರುವವನ ಬಳಿಗೆ ಯೇರಿ

ಹೋಗುತ್ತೇನೆಂದು ಅವರಿಗೆ ಹೇಳು! — ಮಗ್ದಲದವಳಾದ ಮರಿಯಳು ಬಂದು, ದುಃಖಪಟ್ಟು ಅಳುವವರಾದ ಆತನ ಸಂಗಡ ಇದ್ದವರಿಗೆ, — ಕರ್ತನನ್ನು ನೋಡಿದ್ದೇನೆ, ಇವುಗಳನ್ನು ನನಗೆ ಹೇಳಿದನು, ಯೆಂದು ತಿಳಿಸಿದಳು. ಇವರು, ಆತನು ಬದುಕುತ್ತಾನೆ, ಅವಳಿಗೆ ಕಾಣಿಸಿ ಕೊಂಡನು ಯೆಂಬುವದನ್ನು ಕೇಳಿ ನಂಬಲಿಲ್ಲ; ಅವಳ ಮಾತು ಅವರಿಗೆ ಹರಟೆಯ ಹಾಗೆ ಕಾಣಿಸಿತು.

---

೩೭. ಯೇಸು ಎಮ್ಮವೂಸಿಗೆ ಹೋಗುವ ಶಿಷ್ಯರಿಗೂ, ಪೇತ್ರನಿಗೂ, ಕೂಡಿರುವ ಶಿಷ್ಯರಿಗೂ, ಥೋಮನಿಗೂ ಪ್ರತ್ಯಕ್ಷವಾದದ್ದು.

(ಮಾರ್ಕ. ೧೬, ೧೨—೧೪. ಲೂಕ. ೨೪, ೧೩—೪೯. ಯೋಹಾ. ೨೦, ೧೯—೨೯.)

ಮತ್ತು ಇಗೋ, ಶಿಷ್ಯರಲ್ಲಿ ಇಬ್ಬರು ಅದೇ ದಿವಸದಲ್ಲಿ ಯೆರೂಸಲೇಮಿಗೆ ಅರವತ್ತು ಸ್ತಾದ್ಯಗಳಷ್ಟು (ಯೆಂಟು ಮೈಲುಗಳು) ದೂರವಾದ ಎಮ್ಮವೂಸೆಂಬ ಗ್ರಾಮಕ್ಕೆ ಹೋಗುತ್ತಾ, ಸಂಭವಿಸಿದ ಈ ಯೆಲ್ಲಾ ಕಾರ್ಯಗಳ ವಿಷಯವಾಗಿ ತಮ್ಮೊಳಗೆ ಸಂಭಾಷಿಸಿಕೊಳ್ಳುತ್ತಿದ್ದರು. ಅವರು ಸಂಭಾಷಿಸಿಕೊಂಡು ತರ್ಕಿಸುತ್ತಿರಲಾಗಿ, ಯೇಸು ತಾನೇ ಸಮೀಪಕ್ಕೆ ಬಂದು, ಅವರ ಸಂಗಡ ಹೋದನು. ಆದರೆ ಆತನನ್ನು ತಿಳಿಯದ ಹಾಗೆ, ಅವರ ಕಣ್ಣುಗಳು ಹಿಡಿಯಲ್ಪಟ್ಟವು. ಆತನು ಅವರಿಗೆ, — ನೀವು ನಡಿಯುತ್ತಾ ದುಃಖಪಟ್ಟು, ನಿ



ಮ್ಮೊಳಗೆ ಸಂಭಾಷಿಸಿಕೊಳ್ಳುವ ಈ ಮಾತುಗಳು ಯೇನು? ಅಂದಾಗ, ಕ್ಲೆಯೊಫನೆಂಬ ಒಬ್ಬನು ಉತ್ತರ ಕೊಟ್ಟು, ಆತನಿಗೆ,—ನೀನೊಬ್ಬನೇ ಯೆರೂಸಲೇಮಿನಲ್ಲಿ ಪರವಾಸಿಯಾಗಿದ್ದು, ಈ ದಿವಸಗಳಲ್ಲಿ ಅದರೊಳಗೆ ಆದವುಗಳನ್ನು ತಿಳಿಯದೆ ಇದ್ದೀಯೋ? ಅಂದನು. ಆತನು ಅವರಿಗೆ,—ಯೆಂಥವುಗಳನ್ನು? ಅಂದಾಗ, ಅವರು ಆತನಿಗೆ ಹೇಳಿದ್ದು,—ನಜರೇತಿನವನಾದ ಯೇಸುವಿನ ಸಂಗತಿಗಳನ್ನೇ; ದೇವರ ಮುಂದೆಯೂ ಸಮಸ್ತ ಜನರ ಮುಂದೆಯೂ ಕ್ರಿಯೆಯಲ್ಲಿಯೂ ವಾಕ್ಯದಲ್ಲಿಯೂ ಬಲವುಳ್ಳ ಪ್ರವಾದಿಯಾದ ಮನುಷ್ಯನಾಗಿದ್ದ ಆತನನ್ನು ಪ್ರಧಾನಯಾಜಕರೂ ನಮ್ಮ ಅಧಿಪತಿಗಳೂ ಮರಣದ ನಿರ್ಣಯಕ್ಕೆ ಒಪ್ಪಿಸಿ, ಕ್ರೂಜೆಗೆ ಹಾಕಿಸಿದ್ದಾರೆ; ಆದರೆ ನಾವು ಇಸ್ರಯೇಲಿಗೆ ವಿಮೋಚನೆ ಮಾಡ ಬೇಕಾದವನು ಈತನೇ ಯೆಂದು ನಿರೀಕ್ಷಿಸಿದೆವು; ಇವೆಲ್ಲವುಗಳಲ್ಲದೆ, ಇವುಗಳು ಆಗಿ ಈ ಹೊತ್ತು ಮೂರನೇ ದಿವಸ ನಡಿಯುತ್ತದೆ. ಮತ್ತು ನಂಮಲ್ಲಿರುವ ಕೆಲವು ಹೆಂಗಸರು ಸಹಾ ಬೆಳಿಗ್ಗೆ ಸಮಾಧಿಗೆ ಹೋಗಿ, ಆತನ ಶರೀರವನ್ನು ಕಾಣದೆ, ಬಂದು,—ಆತನು ಬದುಕುತ್ತಾನೆಂದು ಹೇಳುವ ದೂತರ ದರ್ಶನವನ್ನು ಸಹಾ ನೋಡಿದ್ದೇವೆ, ಯೆಂದು ಹೇಳಿ, ನಮ್ಮನ್ನು ಆಶ್ಚರ್ಯಪಡಿಸಿದರು. ಹೀಗಿರುವದರಿಂದ ನಮ್ಮ ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋಗಿ, ಆ ಹೆಂಗಸರು ಹೇಳಿದ ಹಾಗೆಯೇ ಕಂಡರು; ಆದರೆ ಆತನನ್ನು ಕಾಣಲಿಲ್ಲಾ.—ಆಗಲಾತನು ಅವರಿಗೆ ಹೇಳಿದ್ದೇನಂದರೆ,—ಓ ಬುದ್ಧಿಹೀನರೇ! ಪ್ರವಾದಿಗಳು ಹೇಳಿದವುಗಳನ್ನೆಲ್ಲಾ ನಂಬುವದಕ್ಕೆ ಮಂದಹೃದಯವುಳ್ಳವರೇ! ಕ್ರಿಸ್ತನು ಈ ಶ್ರಮೆಗಳನ್ನುಪಟ್ಟು, ತನ್ನಮಹಿಮೆಯಲ್ಲಿ ಪ್ರವೇಶಿಸ ಬೇಕಾಗಿರಲಿಲ್ಲವಾ? ಆಗಲಾತನು ಮೋಶೆಯಿಂದಲೂ ಪ್ರವಾದಿಗಳೆಲ್ಲರಿಂದಲೂ ಆರಂಭಿಸಿ, ಸಮಸ್ತ ಬರಹಗಳಲ್ಲಿ ತನ್ನ ವಿಷಯವಾದವುಗಳನ್ನು ಅವರಿಗೆ ವಿವರಿಸಿದನು. ಅವರು ಹೋಗುವ ಗ್ರಾಮಕ್ಕೆ ಸಮೀಪಿಸಿದಾಗ, ಆತನು ಇನ್ನೂ ದೂರ ಹೋಗ ಬೇಕೆಂಬ ಹಾಗೆ ಮಾಡಿದನು. ಆಗಲವರು,—ನಮ್ಮ ಸಂಗಡ ಇರು! ಸಾಯಂಕಾಲವಾಯಿತು, ಹಗಲು ಸಂದು ಹೋಯಿತು, ಯೆಂದು ಆ

ತನಿಗೆ ಬಲವಂತ ಮಾಡಿದದರಿಂದ, ಅವರ ಸಂಗಡ ಇರುವದಕ್ಕೆ ಪ್ರವೇಶಿಸಿದನು. ಆತನು ಅವರ ಸಂಗಡ ಊಟಕ್ಕೆ ಕೂತುಕೊಂಡಿರುವಾಗ, ಯೇನಾಯಿತಂದರೆ, ಆತನು ರೊಟ್ಟಿ ತಕ್ಕೊಂಡು, ಸ್ತೋತ್ರ ಮಾಡಿ, ಮುರಿದು, ಅವ



ರಿಗೆ ಕೊಟ್ಟನು. ಆಗ ಅವರ ಕಣ್ಣುಗಳು ತೆರೆಯಲ್ಪಟ್ಟು, ಆತನ ಗುರುತು ತಿಳಿದರು; ಮತ್ತು ಆತನು ಅವರನ್ನು ಬಿಟ್ಟು, ಕಾಣದೆ ಹೋದನು. ಆಗ,—ಆತನು ಮಾರ್ಗದಲ್ಲಿ ನಮ್ಮ ಸಂಗಡ ಮಾತಾಡಿ, ಬರಹಗಳನ್ನು ನಮಗೆ ತೆರೆಯುವಾಗ, ನಮ್ಮ ಹೃದಯವು ನಮ್ಮೊಳಗೆ ಉರಿಯಲಿಲ್ಲವೋ? ಯೆಂದು ತಮ್ಮೊಳಗೆ ಹೇಳಿಕೊಂಡು, ಅದೇ ಘಳಿಗೆಯಲ್ಲಿ ಯೆದ್ದು, ಯೆರೂಸಲೇಮಿಗೆ ತಿರಿಗಿ ಹೋದರು.—ತರುವಾಯ ಕ್ರಿಸ್ತನು ಪೇತ್ರನಿಗೆ ಕಾಣಿಸಿಕೊಂಡನು. (೧ ಕೊರ್. ೧೫, ೫.) ಆದದರಿಂದ ಆ ಇಬ್ಬರು ಶಿಷ್ಯರು ಹನ್ನೊಂದು ಮಂದಿಯೂ ಅವರ ಸಂಗಡಿಗರೂ ಕೂಡಿರುವಲ್ಲಿ ಬಂದಾಗ, ಇವರು ಅವರಿಗೆ,—ಕರ್ತನು ನಿಜವಾಗಿ ಯೆದ್ದಿದ್ದಾನೆ; ಸೀಮೋನನಿಗೆ ಕಾಣಿಸಿಕೊಂಡಿದ್ದಾನೆ, ಯೆಂದು ಹೇಳಿದರು. ಮತ್ತು ತಾವೇ ಮಾರ್ಗದಲ್ಲಿ ಆದವುಗಳನ್ನೂ ಆತನು ರೊಟ್ಟಿ ಮುರಿಯುವದರಲ್ಲಿ ತಮಗೆ ತಿಳಿಯಲ್ಪಟ್ಟನೆಂಬುವದನ್ನೂ ಅವರಿಗೆ ವಿವರಿಸಿದರು.

ಇವುಗಳನ್ನು ಅವರು ಮಾತಾಡುತ್ತಿರುವಾಗ, ಅವರು ಕೂಡಿರುವಲ್ಲಿ ಯೆಹೂದ್ಯರ ಭಯಕ್ಕೋಸ್ಕರ ಬಾಗಿಲುಗಳು ಮುಚ್ಚಿದ್ದವು. ಆಗ ಯೇಸು ಬಂದು, ತಾನೇ ಊಟಕ್ಕೆ ಕೂತುಕೊಂಡವರಾದ ಹನ್ನೊಂದು ಮಂದಿಗೆ ಕಾಣಿಸಿಕೊಂಡು, ಅವರ ಮಧ್ಯದಲ್ಲಿ ನಿಂತು, ಅವರಿಗೆ,—ನಿಮಗೆ ಸಮಾಧಾನವಾಗಲಿ!


ಅಂದನು. ಆದರೆ ಅವರು ದಿಗಿಲು ಪಟ್ಟು, ಭಯಸ್ಥರಾಗಿ, ಆತ್ಮವನ್ನು ಕಂಡೆವೆಂದು ನೆನಸಿದರು. ಆಗಲಾತನು ಅವರಿಗೆ ಹೇಳಿದ್ದೇನಂದರೆ, —ಯಾಕೆ ಕಳವಳಗೊಳ್ಳುತ್ತೀರಿ? ಯಾಕೆ ನಿಮ್ಮ ಹೃದಯಗಳಲ್ಲಿ ಆಲೋಚನೆಗಳು ಯೇರುತ್ತವೆ? ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ! ನಾನೇ ಅಲ್ಲವೋ? ನನ್ನನ್ನು ಮುಟ್ಟಿ ನೋಡಿರಿ! ಯಾಕಂದರೆ ಮಾಂಸವೂ ಯೆಲುವುಗಳೂ ನನಗೆ ಉಂಟೆಂದು ನೀವು ನೋಡುವ ಪ್ರಕಾರ ಆತ್ಮಕ್ಕೆ ಇಲ್ಲ. ಇದನ್ನು ಹೇಳಿ, ತನ್ನ ಕೈಕಾಲುಗಳನ್ನೂ ಪಕ್ಕೆಯನ್ನೂ ಅವರಿಗೆ ತೋರಿಸಿದನು. ಆಗ ಶಿಷ್ಯರು ಕರ್ತನನ್ನು ನೋಡಿ ಸಂತೋಷ ಪಟ್ಟರು. ಆದರೆ ಅವರು ಸಂತೋಷದಿಂದ ಇನ್ನೂ ನಂಬದೆ ಆಶ್ಚರ್ಯ ಪಡುವಾಗ, ಅವರಿಗೆ, —ಇಲ್ಲಿ ತಿನ್ನುವ ಪದಾರ್ಥ ಯೇನಾದರು ನಿಮಗೆ ಉಂಟೋ? ಅಂದನು. ಅವರು ಸುಟ್ಟ ಮೀನಿನ ತುಂಡನ್ನೂ ಸ್ವಲ್ಪ ಜೇನುಕೊಟ್ಟೆಯನ್ನೂ ಆತನಿಗೆ ಕೊಟ್ಟರು; ಆತನು ತೆಗದುಕೊಂಡು ಅವರ ಮುಂದೆ ತಿಂದನು. ಮತ್ತು ಆತನು, ಯೆದ್ದಿದ್ದ ತನ್ನನ್ನು ನೋಡಿದವರನ್ನು ಅವರು ನಂಬದೆ ಹೋದ ಕಾರಣ, ಅವರ ಅವಿಶ್ವಾಸವನ್ನೂ ಹೃದಯದ ಕಾಠಿಣ್ಯವನ್ನೂ ಗದರಿಸಿ, ಅವರಿಗೆ ಹೇಳಿದ್ದೇನಂದರೆ, —ಮೋಶೆಯ ನ್ಯಾಯಪ್ರಮಾಣದಲ್ಲಿಯೂ ಪ್ರವಾದಿಗಳಲ್ಲಿಯೂ ಕೀರ್ತನೆಗಳಲ್ಲಿಯೂ ನನ್ನನ್ನು ಕುರಿತು ಬರದಿರುವವುಗಳೆಲ್ಲಾ ಈಡೇರ ಬೇಕೆಂದು, ನಾನು ಇನ್ನು ನಿಮ್ಮ ಸಂಗಡ ಇದ್ದಾಗ ನಿಮಗೆ ಹೇಳಿದ ವಾಕ್ಯಗಳು ಇವೇ. ಆಗಲವರು ಬರಹಗಳನ್ನು ಗ್ರಹಿಸುವ ಹಾಗೆ, ಅವರ ಬುದ್ಧಿಯನ್ನು ತೆರದು, ಅವರಿಗೆ ಹೇಳಿದ್ದೇನಂದರೆ, —ಹೀಗೆ ಬರದದೆ, ಮತ್ತು ಹೀಗೆ ಕ್ರಿಸ್ತನು ಶ್ರಮೆಪಟ್ಟು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಯೇಳಲೂ, ಯೆರೂಸಲೇಮಿನಿಂದ ಆರಂಭವಾಗಿ ಯೆಲ್ಲಾ ಜನಾಂಗಗಳಿಗೆ ಮಾನಸಾಂತರವೂ ಪಾಪಪರಿಹಾರವೂ ಆತನ ಹೆಸರಿನಲ್ಲಿ ಸಾರಲ್ಪಡಲೂ ಬೇಕಾಗಿತ್ತು. ನೀವು ಇವುಗಳಿಗೆ ಸಾಕ್ಷಿಗಳಾಗಿದ್ದೀರಿ. ಆಗ ಯೇಸು ತಿರಿಗಿ ಅವರಿಗೆ, —ನಿಮಗೆ ಸಮಾಧಾನವಾಗಲಿ! ತಂದೆಯು ನನ್ನನ್ನು ಕಳುಹಿಸಿದ ಮೇರೆಗೆ ನಾನು ನಿಮ್ಮನ್ನು ಕಳುಹಿಸುತ್ತೇನೆ, ಅಂದನು. ಇದನ್ನು ಹೇಳಿ, ಅವರ ಮೇಲೆ ಊದಿ, ಅವರಿಗೆ, —ಪರಿ

ಶುದ್ಧಾತ್ಮವನ್ನು ಪೊಂದಿರಿ! ಯಾರ ಪಾಪಗಳನ್ನು ಬಿಡುತ್ತೀರೋ ಅವರಿಗೆ ಬಿಟ್ಟವೆ; ಯಾರವುಗಳನ್ನು ಪಿಡಿಯುತ್ತೀರೋ ಪಿಡಿಯಲ್ಪಟ್ಟವೆ, ಅಂದನು.

ಆದರೆ ಪನ್ನೆರಡು ಮಂದಿಯಲ್ಲಿ ವೊಬ್ಬನಾದ ಥೋಮನು ಯೇಸು ಬಂದಾಗ ಅವರ ಸಂಗಡ ಇರಲಿಲ್ಲ. ಆದದರಿಂದ ಬೇರೆ ಶಿಷ್ಯರು,—ಕರ್ತನನ್ನು ನೋಡಿದೆವು! ಯೆಂದು ಅವನಿಗೆ ಪೇಳಿದಾಗ, ಅವನು ಅವರಿಗೆ,—ನಾನು ಮೊಳೆಗಳ ಗುರುತನ್ನು ಆತನ ಕೈಗಳಲ್ಲಿ ನೋಡಿ, ನನ್ನ ಬೆರಳನ್ನು ಮೊಳೆಗಳ ಗುರುತಿನಲ್ಲಿ ಪಾಕಿ, ಆತನ ಪಕ್ಕೆಯಲ್ಲಿ ನನ್ನ ಕೈ ಪಾಕಿದ ಪೊರತು ನಂಬುವದಿಲ್ಲ, ಅಂದನು.

(ಪಸ್ಕದ ಮೇಲಿನ ಮೊದಲನೇ ಆದಿತ್ಯವಾರ.)

ಮತ್ತು ಯೆಂಟು ದಿವಸಗಳಾದ ಮೇಲೆ ಆತನ ಶಿಷ್ಯರೂ, ಅವರ ಸಂಗಡ ಥೋಮನೂ ವೊಳಗಿರುವಾಗ, ಬಾಗಲು ಮುಚ್ಚಿರಲಾಗಿ ಯೇಸು ಬಂದು, ಮಧ್ಯದಲ್ಲಿ ನಿಂತು,—ನಿಮಗೆ ಸಮಾಧಾನವಾಗಲಿ! ಅಂದನು. ತರುವಾಯ ಥೋಮನಿಗೆ,—ನಿನ್ನ ಬೆರಳನ್ನು ಇಲ್ಲಿಗೆ ಚಾಚಿ, ನನ್ನ ಕೈಗಳನ್ನು ನೋಡು; ಮತ್ತು ನಿನ್ನ ಕೈ ಚಾಚಿ, ನನ್ನ ಪಕ್ಕೆಯಲ್ಲಿ ಪಾಕು; ಮತ್ತು ಅವಿಶ್ವಾಸಿಯಾಗಿರದೆ, ವಿಶ್ವಾಸಿಯಾಗಿರು! ಅಂದನು. ಥೋಮನು ಪ್ರತ್ಯುತ್ತರವಾಗಿ ಆತನಿಗೆ,—




ನನ್ನ ಕರ್ತನೇ! ನನ್ನ ದೇವರೇ! ಅನ್ನಲು, ಯೇಸು ಅವನಿಗೆ,—ಥೋಮನೇ, ನನ್ನನ್ನು ನೋಡಿದದರಿಂದ ವಿಶ್ವಾಸಿಸಿದಿ; ನೋಡದೆ ವಿಶ್ವಾಸಿಸುವವರು ಭಾಗ್ಯವಂತರು! ಅಂದನು.

೩೮. ಯೇಸು ಗಲಿಲಾಯಸಮುದ್ರದ ತೀರದಲ್ಲಿ ಕೂಡಿರುವ ಶಿಷ್ಯರಿಗೆ ಕಾಣಿಸಿಕೊಂಡದ್ದು.

(ಯೋ. ೨೧, ೧–೨೫.)

ಇವುಗಳಾದ ಮೇಲೆ ಯೇಸು ತಿರಿಗಿ ಗಲಿಲಾಯಸಮುದ್ರದ ಸಮೀಪದಲ್ಲಿ ತನ್ನ ಶಿಷ್ಯರಿಗೆ ತನ್ನನ್ನು ತೋರಿಸಿಕೊಂಡನು. ಅದು ಹ್ಯಾಗಂದರೆ, ಸೀಮೋನ್ ಪೇತ್ರನೂ ಥೋಮನೂ ನಥಾನಯೇಲನೂ ಜೆಬೆದಾಯನವರಾದ ಯೋಹಾನನೂ ಯಾಕೋಬನೂ ಆತನ ಶಿಷ್ಯರಲ್ಲಿ ಇನ್ನಿಬ್ಬರೂ ಕೂಡಿರಲಾಗಿ, ಸೀಮೋನ್ ಪೇತ್ರನು ಅವರಿಗೆ,—ಮೀನು ಹಿಡಿಯ ಹೋಗುತ್ತೇನೆ, ಅಂದನು. ಅವರು,—ನಾವು ಸಹಾ ನಿನ್ನ ಸಂಗಡ ಬರುತ್ತೇವೆ, ಯೆಂದು ಅವನಿಗೆ ಹೇಳಿ, ಹೊರಟು ಸಂಗಡಲೇ ಹಡಗವನ್ನೇರಿ, ಆ ರಾತ್ರೆಯಲ್ಲಿ ಯೇನೂ ಹಿಡಿಯಲಿಲ್ಲಾ. ಆದರೆ ಹೊತ್ತಾರೆ ಯೇಸು ಧಡದಲ್ಲಿ ನಿಂತಿದ್ದನು; ಆದಾಗ್ಯೂ ಆತನು ಯೇಸುವೆಂದು ಶಿಷ್ಯರಿಗೆ ತಿಳಿಯಲಿಲ್ಲಾ. ಆಗ ಯೇಸು ಅವರಿಗೆ,—ಮಕ್ಕಳೇ, ಉಣ್ಣುವದಕ್ಕೆ ಯೇನಾದರು ಉಂಟೋ? ಅನಲು, ಅವರು ಆತನಿಗೆ,—ಇಲ್ಲಾ! ಅಂದರು. ಆತನು ಅವರಿಗೆ,—ಹಡಗದ ಬಲಗಡೆಯಲ್ಲಿ ಬಲೆ ಹಾಕಿರಿ, ಆಗ ಶಿಕ್ಕುವದು! ಅಂದನು. ಈ ಮೇರೆಗೆ ಅವರು ಹಾಕಲಾಗಿ, ಮೀನುಗಳ ಸಮೂಹದ ನಿಮಿತ್ತ ಅದನ್ನು ಇನ್ನು ಯೆಳೆಯಲಾರದೆ ಹೋದರು. ಆಗ ಯೇಸು ಪ್ರೀತಿ ಮಾಡಿದ ಶಿಷ್ಯ



ನು ಪೇತ್ರನಿಗೆ,—ಆತನು ಕರ್ತನು! ಅಂದನು. ಸೀಮೋನ್ ಪೇತ್ರನು, ಆತನು ಕರ್ತನೆಂದು ಕೇಳಿ, ತಾನು ಬೆತ್ತಲೆಯಾಗಿದ್ದದರಿಂದ ವಲ್ಲಿಯನ್ನು ನಡುವಿಗೆ ಕಟ್ಟಿಕೊಂಡು, ಸಮುದ್ರದೊಳಗೆ ಹಾರಿದನು. ಆದರೆ ಮಿಕ್ಕಾದ ಶಿಷ್ಯರು ಭೂಮಿಗೆ ದೂರವಾಗಿರದೆ ಹೆಚ್ಚುಕಡಿಮೆ ಇನ್ನೂರು ಮೊಳದಷ್ಟು ಇದ್ದದರಿಂದ, ಮೀನುಗಳ ಬಲೆಯನ್ನು ಯೆಳೆಯುತ್ತಾ ಹಡಗದಲ್ಲಿ ಬಂದರು. ಅವರು ಭೂಮಿಗೆ ಇಳಿದಾಗ, ಕೆಂಡಗಳನ್ನೂ, ಅವುಗಳ ಮೇಲೆ ಇಟ್ಟ ಮೀನನ್ನೂ ರೊಟ್ಟಿಯನ್ನೂ ನೋಡಿದರು. ಯೇಸು ಅವರಿಗೆ,—ನೀವು ಈಗ ಹಿಡಿದ ಮೀನುಗಳಲ್ಲಿ ಕೆಲವು ತನ್ನಿರಿ! ಅನ್ನಲು, ಸೀಮೋನ್ ಪೇತ್ರನು ಯೇರಿ, ನೂರ ಐವತ್ತು ಮೂರು ದೊಡ್ಡ ಮೀನು ತುಂಬಿರುವ ಬಲೆಯನ್ನು ಭೂಮಿಗೆ ಯೆಳದನು. ಅಷ್ಟು ಇದ್ದಾಗ್ಯೂ ಬಲೆ ಹರಿಯಲಿಲ್ಲಾ. ಯೇಸು ಅವರಿಗೆ,—ಬಂದು ಊಟ ಮಾಡಿರಿ! ಅಂದನು. ಆದರೆ ಶಿಷ್ಯರು ಆತನು ಕರ್ತನೆಂದು ತಿಳಿದದರಿಂದ, ಅವರಲ್ಲಿ ಯಾವನಾದರೂ ಆತನಿಗೆ,—ನೀನು ಯಾರು? ಯೆಂದು ಕೇಳ ಧೈರ್ಯ ಪಡಲಿಲ್ಲಾ. ಹೀಗಿರಲಾಗಿ ಯೇಸು ಬಂದು, ರೊಟ್ಟಿಯನ್ನೂ ಮೀನನ್ನೂ ಸಹಾ ತೆಗದು, ಅವರಿಗೆ ಕೊಟ್ಟನು. ಯೇಸು ಸತ್ತವರೊಳಗಿಂದ ಯೆದ್ದ ಮೇಲೆ ತನ್ನ ಶಿಷ್ಯರಿಗೆ ಪ್ರತ್ಯಕ್ಷವಾದದ್ದು ಇದು ಮೂರನೇ ಸಾರಿ.

ಅವರು ಊಟ ಮಾಡಿದ ಮೇಲೆ ಯೇಸು ಸೀಮೋನ್ ಪೇತ್ರನಿಗೆ,—ಯೋನನ ಮಗನಾದ ಸೀಮೋನನೇ, ಇವರಿಗಿಂತ ಹೆಚ್ಚಾಗಿ ನೀನು ನನ್ನನ್ನು ಪ್ರೀತಿ ಮಾಡುತ್ತೀಯೋ? ಅನ್ನಲು, ಅವನು ಆತನಿಗೆ,—ಹೌದು, ಕರ್ತನೇ, ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲೆ! ಅನ್ನಲು, ಆತನು ಅವನಿಗೆ,—ನನ್ನ ಕುರಿಮರಿಗಳನ್ನು ಮೇಯಿಸು! ಅಂದನು. ತಿರಿಗಿ ಯೆರಡನೇ ಸಾರಿ ಯೇಸು ಅವನಿಗೆ,—ಯೋನನ ಮಗನಾದ ಸೀಮೋನನೇ, ನನ್ನನು-ಪ್ರೀತಿ ಮಾಡುತ್ತೀಯೋ? ಅನ್ನಲು, ಅವನು ಆತನಿಗೆ,—ಹೌದು, ಕರ್ತನೇ, ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲೆ! ಅನ್ನಲು, ಆತನು ಅವನಿಗೆ,—ನನ್ನ ಕುರಿಗಳನ್ನು ಮೇಯಿಸು! ಅಂದನು. ಮೂರನೇ ಸಾರಿ ಯೇಸು ಅವ

ನಿಗೆ,—ಯೋನನ ಮಗನಾದ ಸೀಮೋನನೇ, ನನ್ನನ್ನು ಸ್ನೇಹಿಸುತ್ತೀಯೋ? ಅನ್ನಲು, ತನಗೆ ಮೂರನೇ ಸಾರಿ ನನ್ನನ್ನು ಸ್ನೇಹಿಸುತ್ತೀಯೋ? ಯೆಂದು ಹೇಳಿದದರಿಂದ ಪೇತ್ರನು ದುಃಖ ಪಟ್ಟು, ಆತನಿಗೆ,—ಕರ್ತನೇ, ನಿನಗೆ ಯೆಲ್ಲಾ ತಿಳಿದದೆ; ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲೆ! ಅನ್ನಲು, ಯೇಸು ಅವನಿಗೆ ಹೇಳಿದ್ದು,—ನನ್ನ ಕುರಿಗಳನ್ನು ಮೇಯಿಸು! ನಿಶ್ಚಯ ನಿಶ್ಚಯವಾಗಿ ನಿನಗೆ ಹೇಳುತ್ತೇನೆ, ನೀನು ಯೌವನಸ್ಥನಾಗಿದ್ದಾಗ ನಡು ಕಟ್ಟಿಕೊಂಡು, ಬೇಕಾದಲ್ಲಿ ಸಂಚರಿಸುತ್ತಿದ್ದಿ; ಆದರೆ ಮುಪ್ಪಾಗಲು ನಿನ್ನ ಕೈಗಳನ್ನು ಚಾಚುವಿ; ಬೇರಾಬ್ಬನು ನಿನ್ನ ನಡು ಕಟ್ಟಿ, ನಿನ್ನನ್ನು ಬೇಡವಾದಲ್ಲಿಗೆ ತಕ್ಕೊಂಡು ಹೋಗುವನು. ಪೇತ್ರನು ಯೆಂಥಾ ಮರಣದಿಂದ ದೇವರನ್ನು ಮಹಿಮೆ ಪಡಿಸುವನೆಂದು ಸೂಚಿಸಿ, ಯೇಸು ಇದನ್ನು ಹೇಳಿದನು. ಇದನ್ನು ಹೇಳಿದ ಮೇಲೆ ಆತನು ಅವನಿಗೆ,—ನನ್ನ ಹಿಂದೆ ಬಾ! ಅಂದನು.—ಆದರೆ ಪೇತ್ರನು ತಿರುಗಿಕೊಂಡು, ಯೇಸು ಪ್ರೀತಿ ಮಾಡಿದಂಥಾ, ಊಟದಲ್ಲಿ ಆತನ ಯೆದೆಯ ಬಳಿಯಲ್ಲಿ ಕೂತುಕೊಂಡು,—ಕರ್ತನೇ, ನಿನ್ನನ್ನು ಒಪ್ಪಿಸಿ ಕೊಡುವವನು ಯಾರು? ಯೆಂದು ಹೇಳಿದಂಥಾ ಶಿಷ್ಯನು ಹಿಂಬಾಲಿಸುವದನ್ನು ನೋಡಿದನು. ಇವನನ್ನು ಪೇತ್ರನು ನೋಡಿ, ಯೇಸುವಿಗೆ,—ಕರ್ತನೇ, ಇವನು ಯೇನು ಮಾಡ ಬೇಕು? ಅನ್ನಲು, ಯೇಸು ಅವನಿಗೆ,—ನಾನು ಬರುವ ಪರ್ಯಂತರ ಅವನು ಇರ ಬೇಕೆಂದು ನನಗೆ ಮನಸ್ಸಿದ್ದರೆ, ನಿನಗೆ ಯೇನು? ನೀನು ನನ್ನ ಹಿಂದೆ ಬಾ! ಅಂದನು. ಹೀಗಿರುವದರಿಂದ ಆ ಶಿಷ್ಯನು ಸಾಯಲಿಕ್ಕಿಲ್ಲವೆಂಬ ಮಾತು ಸಹೋದರರಲ್ಲಿ ಹೊರಟಿತು. ಆದಾಗ್ಯೂ ಯೇಸು,—ಅವನು ಸಾಯಲಿಕ್ಕಿಲ್ಲಾ, ಯೆಂದಲ್ಲಾ,—ನಾನು ಬರುವ ಪರ್ಯಂತರ ಅವನು ಇರ ಬೇಕೆಂದು ನನಗೆ ಮನಸ್ಸಿದ್ದರೆ, ನಿನಗೆ ಯೇನು? ಯೆಂದು ಅವನಿಗೆ ಹೇಳಿದನು.

೫೯. ಯೇಸು ಶಿಷ್ಯರಿಗೆ ಗಲಿಲಾಯದ ಬೆಟ್ಟದಲ್ಲಿ ಕಾಣಿಸಿಕೊಂಡದ್ದು. ಪರಲೋಕಕ್ಕೆ ಯೇರಿ ಹೋದದ್ದು. ಮಥ್ಥಿಯನನ್ನು ಆದುಕೊಂಡದ್ದು.

(ಮತ್ಥ. ೨೮, ೧೬–೨೦. ಮಾರ್ಕ. ೧೬, ೧೫–೨೦. ಲೂಕ. ೨೪, ೪೯–೫೩. ಅಪ್. ಕ್ರಿ. ೧, ೧–೨೬.)

ಆಗ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಯೇಸು ತಮಗೆ ನೇಮಿಸಿದ ಬೆಟ್ಟಕ್ಕೆ ಹೊರಟು ಹೋಗಿ, ಆತನನ್ನು ಕಂಡು, ಆತನಿಗೆ ನಮಸ್ಕರಿಸಿದರು; ಆದರೆ ಕೆಲವರು ಸಂದೇಹ ಪಟ್ಟರು. (ಅಲ್ಲಿ ಐನೂರರ ಮೇಲೆ ಹೆಚ್ಚಾದ ಸಹೋದರರಿಗೆ ಒಂದೇ ವೇಳೆ ಕಾಣಿಸಿಕೊಂಡನು. ೧ ಕೊರ. ೧೫, ೬.) ಮತ್ತು ಯೇಸು ಹತ್ತರ ಬಂದು, ತನ್ನ ಶಿಷ್ಯರ ಸಂಗಡ ಮಾತಾಡಿ ಹೇಳಿದ್ದೇನಂದರೆ, — ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸಮಸ್ತ ಅಧಿಕಾರವು ನನಗೆ ಕೊಡಲ್ಪಟ್ಟದೆ; ಆದದರಿಂದ ನೀವು ಹೊರಟು ಹೋಗಿ, ಸಮಸ್ತ ಜನಾಂಗಗಳನ್ನು ಶಿಷ್ಯರಾಗ ಮಾಡಿ, ತಂದೆಯ ಮತ್ತು ಮಗನ ಮತ್ತು ಪರಿಶುದ್ಧಾತ್ಮದ ಹೆಸರಿನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದವುಗಳನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿರಿ! ವಿಶ್ವಾಸಿಸಿ ಸ್ನಾನ ಹೊಂದುವವನು ರಕ್ಷಿಸಲ್ಪಡುವನು, ಆದರೆ ವಿಶ್ವಾಸಿಸದವನು ಆಜ್ಞೆನಿರ್ಣಯ ಪಡುವನು. ಇದಲ್ಲದೆ ಈ ಲಕ್ಷಣಗಳು ವಿಶ್ವಾಸಿಸುವವರನ್ನು ಹಿಂಬಾಲಿಸುವವು, ಯಾವವಂದರೆ—ನನ್ನ ಹೆಸರಿನಲ್ಲಿ ದೆವ್ವಗಳನ್ನು ಹೊರಡಿಸುವರು, ಹೊಸ ಭಾಷೆಗಳಲ್ಲಿ ಮಾತಾಡುವರು, ಸರ್ಪಗಳನ್ನು ಯೆತ್ತುವರು; ಮರಣಾಕರವಾದದ್ದೇನಾದರು ಕುಡಿದರೂ, ಅವರಿಗೆ ನಷ್ಟವಾಗುವದಿಲ್ಲಾ; ಅಸೌಖ್ಯವಾಗಿರುವವರ ಮೇಲೆ ಕೈಗಳನ್ನಿಡುವರು, ಆಗ ಗುಣವಾಗುವರು! ಇಗೋ, ನಾನು ಲೋಕಾಂತದವರೆಗೂ ಯೆಲ್ಲಾ ದಿವಸಗಳಲ್ಲಿ ನಿಮ್ಮ ಸಂಗಡ ಇದ್ಧೇನೆ.

ಯೇಸು ಶ್ರಮೆ ಪಟ್ಟ ಮೇಲೆ ನಾಲ್ವತ್ತು ದಿವಸಗಳ ಪರ್ಯಂತರ ತನ್ನ ಶಿಷ್ಯರಿಗೆ ಕಾಣಿಸಿಕೊಂಡು, ದೇವರ ರಾಜ್ಯದವುಗಳನ್ನು ಹೇಳುತ್ತಾ, ಅನೇಕ ಗುರುತುಗಳಿಂದ ತನ್ನನ್ನು ಬದುಕುವವನಾಗಿ ತೋರಿಸಿದನು. ಮತ್ತು ಅವರ

ಸಂಗಡ (ಯೆರೂಸಲೇಮಿನಲ್ಲಿ) ಕೂಡಿಕೊಂಡು, — ನೀವು ಯೆರೂಸಲೇಮನ್ನು ಬಿಡದೆ, ನನ್ನಿಂದ ಕೇಳಿದ ತಂದೆಯ ವಾಗ್ದತ್ತಕ್ಕೋಸ್ಕರ ಕಾದುಕೊಂಡಿರ ಬೇಕು; ಯಾಕಂದರೆ ಯೋಹಾನನು ನೀರಿನಿಂದ ಸ್ನಾನ ಕೊಟ್ಟನು, ಆದರೆ ಇನ್ನು ಬಹಳ ದಿವಸ ಹೋಗುವದಕ್ಕಿಂತ ಮುಂಚೆ ನೀವು ಪರಿಶುದ್ಧಾತ್ಮದಿಂದ ಸ್ನಾನ ಹೊಂದುವಿರಿ, ಯೆಂದು ಅವರಿಗೆ ಅಪ್ಪಣೆ ಕೊಟ್ಟನು. ಆದದರಿಂದ ಅವರು ಕೂಡಿ ಬಂದು, — ಕರ್ತನೇ, ಈ ಕಾಲದಲ್ಲಿ ಇಸ್ರಾಯೇಲಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸುತ್ತೀಯೋ? ಯೆಂದು ಆತನನ್ನು ಕೇಳಿದರು. ಆತನು ಅವರಿಗೆ, — ತಂದೆಯು ಸ್ವಂತ ಅಧಿಕಾರದಲ್ಲಿ ಇಟ್ಟುಕೊಂಡ ಕಾಲಗಳನ್ನೂ ಸಮಯಗಳನ್ನೂ ತಿಳಿಯುವದು ನಿಮ್ಮದಲ್ಲಾ; ಆದರೆ ಪರಿಶುದ್ಧಾತ್ಮವು ನಿಮ್ಮ ಮೇಲೆ ಬಂದಾಗ, ನೀವು ಬಲವನ್ನು ಹೊಂದಿ, ಯೆರೂಸಲೇಮಿನಲ್ಲಿಯೂ ಸಮಸ್ತ ಯೆಹೂದ ಸಮಾರ್ಯಗಳಲ್ಲಿಯೂ ಭೂಮಿಯ ಅಂತ್ಯದವರೆಗೂ ನನಗೆ ಸಾಕ್ಷಿಗಳಾಗಿರುವಿರಿ! ಅಂದನು.

ಆ ಮೇಲೆ ಆತನು ಅವರನ್ನು ಬೆಥಾನ್ಯದ ವರೆಗೂ (ಇಪ್ಪೇಗುಡ್ಡಕ್ಕೆ) ಹೊರಗೆ ಕರಕೊಂಡು ಹೋಗಿ, ತನ್ನ ಕೈಗಳನ್ನು ಯೆತ್ತಿ, ಅವರನ್ನು ಆಶೀರ್ವದಿಸಿದನು. ಆತನು ಅವರನ್ನು ಆಶೀರ್ವದಿಸುತ್ತಿರುವಾಗ, ಅವರನ್ನು ಬಿಟ್ಟು,



ಅವರು ನೋಡುತ್ತಿರಲಾಗಿ ಯೆತ್ತಲ್ಪಟ್ಟನು; ಮೇಘವು ಆತನನ್ನು ಅವರ ಕಣ್ಣುಗಳಿಗೆ ಮರೆಯಾಗಿ ತೆಗದುಕೊಂಡು ಹೋಯಿತು. ಮತ್ತು ಆತನು ಪರಲೋಕಕ್ಕೆ ಯೆತ್ತಲ್ಪಟ್ಟು, ದೇವರ ಬಲಪಾರ್ಶ್ವದಲ್ಲಿ ಕೂತುಕೊಂಡನು. ಆತನು ಹೋಗುತ್ತಿರುವಾಗ ಶಿಷ್ಯರು ಆಕಾಶವನ್ನು ದೃಷ್ಟಿಸಲಾಗಿ, ಇಗೋ, ಬಿಳೀ ವ

ಸ್ತ್ರಗಳನ್ನು ಉಟ್ಟುಕೊಂಡ ಇಬ್ಬರು ಪುರುಷರು ಅವರ ಬಳಿಯಲ್ಲಿ ನಿಂತುಕೊಂಡು,—ಗಲಿಲಾಯದವರೇ, ಯಾಕೆ ಆಕಾಶವನ್ನು ದೃಷ್ಟಿಸುತ್ತಾ ನಿಂತುಕೊಂಡಿದ್ದೀರಿ? ನಿಂಮಲ್ಲಿಂದ ಪರಲೋಕಕ್ಕೆ ಯೆತ್ತಲ್ಪಟ್ಟವನಾದ ಈ ಯೇಸು ಯಾವ ರೀತಿಯಿಂದ ಪರಲೋಕಕ್ಕೆ ಹೋಗುವದನ್ನು ನೀವು ನೋಡಿದಿರೋ, ಅದೇ ರೀತಿಯಿಂದ ಬರುವನು, ಅಂದರು. ಮತ್ತು ಅವರು ಇಪ್ಪೇಗುಡ್ಡದಿಂದ ಯೆರೂಸಲೇಮಿಗೆ ಮಹಾ ಸಂತೋಷದಿಂದ ತಿರಿಗಿ ಬಂದರು. ಬಂದಾಗ, ತಮ್ಮ ಉಪ್ಪರಿಗೆಗೆ ಹೋದರು. ಅಲ್ಲಿ ಪೇತ್ರನೂ ಯಾಕೋಬನೂ ಯೋಹಾನನೂ ಅಂದ್ರೇಯನೂ ಫಿಲಿಪ್ಪನೂ ಥೋಮನೂ ಬರ್ತೊಲೊಮಾಯನೆಂಬ ನಥಾನಯೇಲನೂ ಮಥ್ಥಾಯನೂ ಅಲ್ಫಾಯನ ಮಗನಾದ ಯಾಕೋಬನೂ ಜೆಲೋತನೆಂಬ ಸೀಮೋನನೂ ಯಾಕೋಬನ ಮಗನಾದ ಯೂದನೂ ಇರುತ್ತಿದ್ದರು. ಇವರೆಲ್ಲರು ಸ್ತ್ರೀಯರ ಸಂಗಡಲೂ ಯೇಸುವಿನ ತಾಯಿಯಾದ ಮರೀಯಳ ಸಂಗಡಲೂ ಯೇಕಮನಸ್ಸಾಗಿ ಪ್ರಾರ್ಥನೆ ವಿಜ್ಞಾಪನೆಗಳಲ್ಲಿ ನೆಲೆಗೊಂಡಿದ್ದರು; ಮತ್ತು ದೇವರನ್ನು ಹೊಗಳುತ್ತಾ ಸ್ತೋತ್ರ ಮಾಡುತ್ತಾ, ಯಾವಾಗಲೂ ದೇವಾಲಯದಲ್ಲಿ ಇದ್ದರು.

ಆ ದಿವಸಗಳಲ್ಲಿ ಹೆಚ್ಚುಕಡಿಮೆ ನೂರ ಇಪ್ಪತ್ತು ಮಂದಿ ಶಿಷ್ಯರು ಇರಲಾಗಿ, ಅವರ ಮಧ್ಯದಲ್ಲಿ ಪೇತ್ರನು ಯೆದ್ದು ಹೇಳಿದ್ದೇನಂದರೆ,—ಸಹೋದರರೇ, ಯೇಸುವನ್ನು ಹಿಡಿದವರಿಗೆ ದಾರಿ ತೋರಿಸಿದವನಾದ ಯೂದನನ್ನು ಕುರಿತು ಪರಿಶುದ್ಧಾತ್ಮವು ದಾವೀದನ ಬಾಯಿಂದ ಮುಂದಾಗಿ ಹೇಳಿದ ಆ ಬರಹವು ಈಡೇರ ಬೇಕಾಗಿತ್ತು. ಹ್ಯಾಗಂದರೆ ಅವನು ನಮ್ಮ ಸಂಗಡ ಯೆಣಿಸಲ್ಪಟ್ಟು, ಈ ಸೇವೆಯಲ್ಲಿ ಪಾಲು ಹೊಂದಿದವನಾಗಿ, ಅನ್ಯಾಯದ ಸಂಬಳದಿಂದ ಹೊಲವನ್ನು ಕೊಂಡುಕೊಂಡು, ಬೋರಲ ಬಿದ್ದು ನಡು ಒಡದು ಹೋಗಿ, ಅವನ ಕರುಳುಗಳೆಲ್ಲಾ ಚೆಲ್ಲಲ್ಪಟ್ಟವು. ಇದು ಯೆರೂಸಲೇಮಿನಲ್ಲಿ ವಾಸವಾಗಿರುವವರೆಲ್ಲರಿಗೆ ತಿಳಿಯು ಬಂದದರಿಂದ, ಆ ಹೊಲಕ್ಕೆ ರಕ್ತದ ಹೊಲವೆಂಬ ಹೆಸರಾಯಿತು. ಯಾಕಂದರೆ,—ಅವನ ನಿವಾಸವು ಹಾಳಾಗಲಿ, ಅದರಲ್ಲಿ ವಾಸ ಮಾಡುವವನು ಇಲ್ಲದೆ ಹೋಗಲಿ! ಮತ್ತು—ಅವನ ಅಧ್ಯಕ್ಷತ್ವವನ್ನು ಬೇ


ರೊಬ್ಬನು ತಕ್ಕೊಳ್ಳಲಿ! ಯೆಂದು ಕೀರ್ತನೆಗಳ ಪುಸ್ತಕದಲ್ಲಿ (೬೯, ೨೬. ೧೦೯, ೮.) ಬರದದೆ. ಹೀಗಿರುವದರಿಂದ ಯೋಹಾನನ ಸ್ನಾನವು ಮೊದಲ್ಗೊಂಡು, ಕರ್ತನಾದ ಯೇಸು ನಮ್ಮಲ್ಲಿಂದ ಯೆತ್ತಲ್ಪಟ್ಟ ದಿವಸದ ವರೆಗೂ, ಆತನು ನಮ್ಮಲ್ಲಿ ಬರುತ್ತಾ, ಹೋಗುತ್ತಾ, ಇದ್ದ ಕಾಲವೆಲ್ಲಾ ನಮ್ಮ ಸಂಗಡ ಇದ್ದ ಜನರಾದ ಇವರಲ್ಲಿ ವೊಬ್ಬನು ನಮ್ಮ ಕೂಡಾ ಆತನ ಪುನರುತ್ಥಾನಕ್ಕೆ ಸಾಕ್ಷಿ ಆಗ ಬೇಕು! ಆಗಲವರು ಯುಸ್ತನೆಂಬ ಉಪನಾಮವುಳ್ಳ ಬರ್ಸಬನೆಂಬ ಯೋಸೇಫನೂ ಮತ್ಥಿಯನೂ ಇವರಿಬ್ಬರನ್ನು ನಿಲ್ಲಿಸಿ, ಪ್ರಾರ್ಥನೆ ಮಾಡಿದ್ದೇನಂದರೆ,—ಯೆಲ್ಲರ ಹೃದಯಗಳನ್ನು ತಿಳಿದವನಾದ ಕರ್ತನೇ, ಯೂದನು ಸ್ವಸ್ಥಳಕ್ಕೆ ಹೋಗುವ ಹಾಗೆ ಅಪರಾಧಿಯಾಗಿ ಕಳೆದುಕೊಂಡ ಅಪೋಸ್ತಲತನವೆಂಬ ಸೇವೆಯಲ್ಲಿ ಪಾಲನ್ನು ಹೊಂದುವದಕ್ಕೆ, ಈ ಇಬ್ಬರೊಳಗೆ ನೀನು ಆದುಕೊಂಡವನನ್ನು ತೋರಿಸು! ಆಗಲವರು ಚೀಟುಗಳನ್ನು ಹಾಕಿಕೊಳ್ಳುವಾಗ, ಮತ್ಥಿಯನಿಗೆ ಚೀಟು ಬಂದದರಿಂದ, ಅವನು ಹನ್ನೊಂದು ಅಪೋಸ್ತಲರ ಸಂಗಡ ಯೆಣಿಸಲ್ಪಟ್ಟನು.

---

೪೦. ಪರಿಶುದ್ಧಾತ್ಮವು ಹೊಯ್ಯಲ್ಪಟ್ಟದ್ದು.

(ಅಪ್. ಕ್ರಿ. ೨, ೧–೪೭.)

ಪಂಚಾಶತ್ತಿನ ದಿವಸವು ಪೂರ್ಣವಾದಾಗ, ಶಿಷ್ಯರೆಲ್ಲರೂ ಯೇಕ ಮನಸ್ಸಾಗಿ ವೊಂದು ಸ್ಥಳದಲ್ಲಿ ಇರಲಾಗಿ, ಬೀಸುವ ಬಿರುಗಾಳಿಯಂತಿರುವ ಶಬ್ದವು ಫಕ್ಕನೆ ಆಕಾಶದಲ್ಲಿ ಉಂಟಾಗಿ, ಅವರು ಕೂತುಕೊಂಡಿರುವ ಮನೆಯೆಲ್ಲಾ ತುಂಬಿತು; ಮತ್ತು ಬೆಂಕಿಯ ಉರಿಯಂತೆ ಭಾಗವಾದ ನಾಲಿಗೆಗಳು ಅವರಿಗೆ ಕಾಣಿಸಿ, ಅವರಲ್ಲಿ ವೊಬ್ಬೊಬ್ಬನ ಮೇಲೆ ಕೂತುಕೊಂಡವು; ಮತ್ತು ಯೆಲ್ಲರೂ ಪರಿಶುದ್ಧಾತ್ಮದಿಂದ ತುಂಬಿದವರಾಗಿ, ಆತ್ಮವು ಅವರಿಗೆ ನುಡಿಯ ಕೊಟ್ಟ ಪ್ರಕಾರ ಬೇರೆ ಭಾಷೆಗಳಿಂದ ಮಾತಾಡಲಾರಂಭಿಸಿದರು.—ಆಕಾಶದ ಕೆಳಗೆ ಇರುವ ಸಕಲ ಜನಾಂಗಗಳೊಳಗೆ ಭಕ್ತಿಯುಳ್ಳ ಜನರಾದ ಯೆಹೂದ್ಯರು ಯೆ



ರೂಸಲೇಮಿನಲ್ಲಿ ವಾಸವಾಗಿದ್ದರು. ಆ ಶಬ್ದವು ಉಂಟಾಗುವಾಗ, ಸಮೂಹವು ಕೂಡಿ ಬಂದು, ಕಳವಳ ಪಟ್ಟಿತು, ಯಾಕಂದರೆ ಒಬ್ಬೊಬ್ಬನು ತನ್ನ ತನ್ನ ಭಾಷೆಯಲ್ಲಿ ಅವರು ಮಾತಾಡುವದನ್ನು ಕೇಳಿದನು. ಆಗ ಯೆಲ್ಲರೂ ಭ್ರಮಿಸಿ, ಆಶ್ಚರ್ಯಪಟ್ಟು, ಒಬ್ಬರಿಗೊಬ್ಬರು ಹೇಳಿಕೊಂಡದ್ದೇನಂದರೆ,—ಇಗೋ, ಮಾತಾಡುವ ಇವರೆಲ್ಲರು ಗಲಿಲಾಯದವರಲ್ಲವೋ? ಹಾಗಾದರೆ ನಮ್ಮಲ್ಲಿ ಒಬ್ಬೊಬ್ಬರು ತಮ್ಮ ತಮ್ಮ ಹುಟ್ಟುಭಾಷೆಯಲ್ಲಿ ಕೇಳುವದೇನು? ಪಾರ್ಥ್ಯರೂ ಮೇದ್ಯರೂ ಎಲಾಮ್ಯರೂ, ಮೆಸೊಪೊತಾಮ್ಯ ಯೆಹೂದ್ಯ ಕಪ್ಪದೋಕ್ಯ ಪೊಂತ್ಯ ಆಸ್ಯ ಫ್ರುಗ್ಯ ಪಂಫುಲ್ಯ ಐಗುಪ್ತ ದೇಶಗಳಲ್ಲಿಯೂ, ಕುರೇನೆಗೆ ಸಮೀಪವಾದ ಲುಬ್ಯದ ಸೀಮೆಗಳಲ್ಲಿಯೂ ವಾಸವಾಗಿರುವವರೂ, ಪರವಾಸ ಮಾಡುವ ರೋಮೀಯರೂ, ಯೆಹೂದ್ಯರೂ ಮತ ಸೇರಿದವರೂ, ಕ್ರೇತ್ಯರೂ ಅರಾಬ್ಯರೂ ಆಗಿರುವ ನಾವು, ಅವರು ನಮ್ಮ ಭಾಷೆಗಳಲ್ಲಿ ದೇವರ ಮಹತ್ತಾದವುಗಳನ್ನು ನುಡಿಯುವದನ್ನು ಕೇಳುತ್ತೇವೆ.—ಯೆಲ್ಲರೂ ಭ್ರಮಿಸಿ, ಸಂದೇಹ ಪಟ್ಟು, ಒಬ್ಬರಿಗೊಬ್ಬರು,—ಇದು ಯೇನಾದೀತು? ಅಂದರು. ಬೇರೆ ಕೆಲವರು ಹಾಸ್ಯ ಮಾಡಿ,—ಅವರು ಸೀಯಾದ ದ್ರಾಕ್ಷಾರಸದಿಂದ ತುಂಬಿದವರಾಗಿದ್ದಾರೆ, ಅಂದರು. ಆದರೆ ಪೇತ್ರನು ಹನ್ನೊಂದು ಮಂದಿಯ ಸಂಗಡ ನಿಂತುಕೊಂಡು, ತನ್ನ ಶಬ್ದವನ್ನೆತ್ತಿ, ಅವರಿಗೆ ಹೇಳಿದ್ದೇನಂದರೆ,—ಯೆಹೂದ್ಯರಾದ ಜನರೇ, ಯೆರೂಸಲೇಮಿನಲ್ಲಿ ವಾಸ

ಮಾಡುವವರೆಲ್ಲರೇ, ನನ್ನ ಮಾತುಗಳಿಗೆ ಕಿವಿ ಕೊಡಿರಿ! ಯೇನಂದರೆ ನೀವು ನೆನಸುವ ಪ್ರಕಾರ ಇವರು ಮತ್ತರಲ್ಲಾ, ಯಾಕಂದರೆ ಇದು ಹಗಲಿನ ಮೂರನೇ ತಾಸು; ಆದರೆ ಇದು ಪ್ರವಾದಿಯಾದ ಯೋವೆಲನ ಮುಖಾಂತರವಾಗಿ(೨, ೨೮–೩೨.)ಹೇಳಿದ್ದು,—ಕಡೇ ದಿನಗಳಲ್ಲಿ ಯೇನಾಗುವದಂದರೆ, ಮಾಂಸವೆಲ್ಲಾದರ ಮೇಲೆ ನನ್ನ ಆತ್ಮವನ್ನು ಹೊಯ್ಯುವೆನು; ನಿಮ್ಮ ಕುಮಾರ ಕುಮಾರ್ತಿಗಳು ಪ್ರವಾದಿಸುವರು; ನಿಮ್ಮ ಯೌವನಸ್ಥರು ದರ್ಶನಗಳನ್ನು ನೋಡುವರು; ನಿಮ್ಮ ಹಿರಿಯರು ಕನಸುಗಳನ್ನು ಕಾಣುವರು. ಆ ದಿನಗಳಲ್ಲಿ ನನ್ನ ದಾಸರ ಮೇಲೆಯೂ ನನ್ನ ದಾಸಿಗಳ ಮೇಲೆಯೂ ನನ್ನ ಆತ್ಮವನ್ನು ಹೊಯ್ಯುವೆನು; ಆಗಲವರು ಪ್ರವಾದಿಸುವರು. ಮತ್ತು ಮೇಲಿರುವ ಆಕಾಶದಲ್ಲಿ ಅದ್ಭುತಗಳನ್ನೂ, ಕೆಳಗಿರುವ ಭೂಮಿಯಲ್ಲಿ ಲಕ್ಷಣಗಳನ್ನೂ, ರಕ್ತವನ್ನೂ ಬೆಂಕಿಯನ್ನೂ ಹೊಗೆಯ ಹಬೆಯನ್ನೂ ಕೊಡುವೆನು; ಕರ್ತನ ಪ್ರಸಿದ್ಧಿಯಾದ ಮಹಾ ದಿನವು ಬರುವದಕ್ಕೆ ಮುಂಚೆ ಸೂರ್ಯನು ಕತ್ತಲೆಗೂ, ಚಂದ್ರನು ರಕ್ತಕ್ಕೂ ಮಾರ್ಪಡುವರು; ಮತ್ತು ಆಗುವದೇನಂದರೆ, ಕರ್ತನ ಹೆಸರನ್ನು ಕರೆಯುವವರೆಲ್ಲರು ರಕ್ಷಿಸಲ್ಪಡುವರೆಂದು ದೇವರು ಹೇಳುತ್ತಾನೆ. ಇಸ್ರಾಯೇಲ್ಯರಾದ ಜನರೇ, ಈ ವಾಕ್ಯಗಳನ್ನು ಕೇಳಿರಿ! ನಿಮಗೂ ತಿಳಿದಿರುವ ಪ್ರಕಾರ ದೇವರು ನಿಮ್ಮ ಮಧ್ಯದಲ್ಲಿ ಆತನ ಮುಖಾಂತರವಾಗಿ ನಡಿಸಿದ ಬಲವಾದ ಕ್ರಿಯೆಗಳಿಂದಲೂ ಅದ್ಭುತಗಳಿಂದಲೂ ಲಕ್ಷಣಗಳಿಂದಲೂ ದೇವರು ನಮಗೆ ತೋರಿಸಿದ ಮನುಷ್ಯನಾದ ನಜರೇತಿನ ಯೇಸುವನ್ನೇ, ದೇವರ ನಿಶ್ಚಯವಾದ ಚಿತ್ತ ಮುಂತಿಳುವಿಕೆಗಳಿಂದ ಒಪ್ಪಿಸಲ್ಪಟ್ಟವನಾಗಿ, ನೀವು ಹಿಡಿದು, ಅನ್ಯಾಯವಾದ ಕೈಗಳಿಂದ ಮೊಳೆ ಜಡಿದು ಕೊಂದು ಹಾಕಿದಿರಿ. ದೇವರು ಮರಣದ ವ್ಯಥೆಗಳನ್ನು ಬಿಚ್ಚಿ, ಆತನನ್ನು ಯೆಬ್ಬಿಸಿದನು; ಯಾಕಂದರೆ ಆತನು ಅದರಿಂದ ಹಿಡಿಯಲ್ಪಡುವದು ಅಸಾಧ್ಯವಾಗಿತ್ತು; ಹ್ಯಾಗಂದರೆ ಆತನನ್ನು ಕುರಿತು ದಾವೀದನು(ಕೀರ್ತ. ೧೬, ೧೧.)ಹೇಳುವದೇನಂದರೆ,—ನನ್ನ ಪ್ರಾಣವನ್ನು ಪಾತಾಳದಲ್ಲಿ ಬಿಡದೆ, ನಿನ್ನ ಪರಿಶುದ್ಧನನ್ನು ಕೊಳೆಯುವಿಕೆ ನೋಡಗೊಡಿಸದೆ ಇರುವಿ! ಸಹೋದರರಾದ ಜನರೇ! ಮೂಲಪಿ

ತ್ಮವಾದ ದಾವೀದನ ವಿಷಯ ಧೈರ್ಯವಾಗಿ ನಿಮ್ಮ ಸಂಗಡ ಮಾತಾಡಬಹುದು. ಅವನು ತೀರಿ ಹೋಗಿ ಹೂಳಲ್ಪಟ್ಟನು; ಅವನ ಸಮಾಧಿಯು ಇಂದಿನ ವರೆಗೂ ನಮ್ಮಲ್ಲಿ ಅದೆ. ಅವನು ಪ್ರವಾದಿಯಾಗಿದ್ದು, ತನ್ನ ಸಿಂಹಾಸನದ ಮೇಲೆ ಕೂತುಕೊಳ್ಳುವದಕ್ಕೆ ಕ್ರಿಸ್ತನನ್ನು ಮಾಂಸದ ಪ್ರಕಾರ ತನ್ನ ತೊಡೆಯ ಫಲದಿಂದ ಯೆಬ್ಬಿಸುವೆನೆಂದು, ದೇವರು ಆಣೆಯಿಂದ ತನಗೆ ಪ್ರಮಾಣ ಮಾಡಿದನೆಂದು ತಿಳಿದು, ಕ್ರಿಸ್ತನ ಪುನರುತ್ಥಾನವನ್ನು ಕುರಿತು, ಆತನ ಪ್ರಾಣವು ಪಾತಾಳದಲ್ಲಿ ಬಿಡಲ್ಪಡದೆ ಇರುವದನ್ನೂ, ಆತನ ಮಾಂಸವು ಕೊಳೆಯುವಿಕೆ ನೋಡದೆ ಇರುವದನ್ನೂ ಮುನ್ನೋಡಿ ಮಾತಾಡಿದನು. ಈ ಯೇಸುವನ್ನು ದೇವರು ಯೆಬ್ಬಿಸಿದ್ದಾನೆ; ಅದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ. ಹೀಗಿರುವದರಿಂದ ಆತನು ದೇವರ ಬಲಗೈಯಿಂದ ಯೆತ್ತಲ್ಪಟ್ಟು, ಪರಿಶುದ್ಧಾತ್ಮದ ವಾಗ್ದತ್ತವನ್ನು ತಂದೆಯಿಂದ ಹೊಂದಿ, ನೀವು ಈಗ ನೋಡಿ ಕೇಳುವದನ್ನು ಹೊಯಿದಿದ್ದಾನೆ. ಯಾಕಂದರೆ ದಾವೀದನು ಆಕಾಶಗಳಿಗೆ ಯೇರಿ ಹೋಗಲಿಲ್ಲ; ಆದರೆ, — ನಾನು ನಿನ್ನ ಶತ್ರುಗಳನ್ನು ನಿನ್ನ ಪಾದಗಳಿಗೆ ಪೀಠವಾಗಿ ಇಡುವ ವರೆಗೂ ನನ್ನ ಬಲಪಾರ್ಶ್ವದಲ್ಲಿ ಕೂತುಕೋ! ಯೆಂದು ಕರ್ತನು ನನ್ನ ಕರ್ತನಿಗೆ ಹೇಳಿದನೆಂಬದಾಗಿ ಆತನೇ (ಕೀರ್ತ. ೧೧೦, ೧.) ಹೇಳುತ್ತಾನೆ. ಆದದರಿಂದ ನೀವು ಕ್ರೂಜೆಗೆ ಹಾಕಿದ ಈ ಯೇಸುವನ್ನೇ ದೇವರು ಕರ್ತನಾಗಿಯೂ ಕ್ರಿಸ್ತನಾಗಿಯೂ ಮಾಡಿದ್ದಾನೆಂದು ಇಸ್ರಾಯೇಲನ ಮನೆಯೆಲ್ಲಾ ನಿಶ್ಚಯವಾಗಿ ತಿಳುಕೊಳ್ಳಲಿ!

ಇದನ್ನು ಕೇಳಿ, ಅವರು ಹೃದಯದಲ್ಲಿ ತಿವಿಯಲ್ಪಟ್ಟು, ಪೇತ್ರನಿಗೂ ಮಿಕ್ಕಾದ ಅಪೊಸ್ತಲರಿಗೂ, — ಸಹೋದರರಾದ ಜನರೇ, ಯೇನು ಮಾಡುವಾ? ಅಂದರು. ಪೇತ್ರನು ಅವರಿಗೆ, — ನಿಮ್ಮಲ್ಲಿ ಒಬ್ಬೊಬ್ಬನು ಮಾನಸಾಂತರ ಪಟ್ಟು, ನೀವೆಲ್ಲರೂ ಪಾಪಗಳ ಪರಿಹಾರಕ್ಕೋಸ್ಕರ ಯೇಸು ಕ್ರಿಸ್ತನ ಹೆಸರಿನಲ್ಲಿ ಸ್ನಾನ ಹೊಂದಿರಿ! ಆಗ ಪರಿಶುದ್ಧಾತ್ಮದ ವರವನ್ನು ಹೊಂದುವಿರಿ. ಯಾಕಂದರೆ ವಾಗ್ದತ್ತವು ನಮ್ಮ ದೇವರಾದ ಕರ್ತನು ಕರೆಯುವಷ್ಟರಾದ ನಿಮಗೂ ನಿಮ್ಮ ಮಕ್ಕಳಿಗೂ ದೂರದಲ್ಲಿರುವವರೆಲ್ಲರಿಗೂ ಇರುತ್ತದೆ, ಅಂದನು. ಇನ್ನು

ಬೇರೆ ಅನೇಕ ಮಾತುಗಳಿಂದ ಸಾಕ್ಷಿ ಕೊಟ್ಟು, ಬುದ್ಧಿ ಹೇಳಿ, — ಈ ಮೂರ್ಖ ಸಂತತಿಯಿಂದ ತಪ್ಪಿಸಿಕೊಳ್ಳಿರಿ! ಅಂದನು. ಆಗಲವನ ವಾಕ್ಯವನ್ನು ಸಂತೋಷವಾಗಿ ಅಂಗೀಕರಿಸಿದವರು ಸ್ನಾನ ಹೊಂದಿದರು. ಆ ದಿನದಲ್ಲಿ ಹೆಚ್ಚುಕಡಿಮೆ ಮೂರು ಸಾವಿರ ಪ್ರಾಣಗಳು ಸೇರಿಸಲ್ಪಟ್ಟವು. ಅವರು ಅಪೊಸ್ತಲರ ಬೋಧನೆಯಲ್ಲಿಯೂ ಅನ್ಯೋನ್ಯದಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನೆಲೆಯಾಗಿದ್ದರು. ಮತ್ತು ಯೆಲ್ಲಾ ಪ್ರಾಣಗಳಿಗೂ ಭಯವಾಯಿತು. ಅನೇಕ ಅದ್ಭುತಗಳೂ ಲಕ್ಷಣಗಳೂ ಅಪೊಸ್ತಲರ ಕೈಯಿಂದ ಉಂಟಾದವು. ಮತ್ತು ವಿಶ್ವಾಸಿಗಳೆಲ್ಲರೂ ಕೂಡಿ ಇದ್ದು, ಯೆಲ್ಲವನ್ನು ಹುದುವಾಗಿ ಅನುಭವಿಸಿ, ಆಸ್ತಿ ಸೊತ್ತುಗಳನ್ನು ಮಾರಿ ಬಿಟ್ಟು, ಒಬ್ಬೊಬ್ಬರಿಗೆ ಬೇಕಾದ ಹಾಗೆ ಯೆಲ್ಲರಿಗೆ ಹಂಚಿ ಕೊಟ್ಟರು. ಮತ್ತು ದಿನಾಲೂ ಯೇಕಮನಸ್ಸಾಗಿ ದೇವಾಲಯದಲ್ಲಿ ನೆಲೆಯಾಗಿದ್ದು, ಮನೆ ಮನೆಯಲ್ಲಿ ರೊಟ್ಟಿ ಮುರಿದು, ದೇವರನ್ನು ಹೊಗಳುತ್ತಾ, ಜನರೆಲ್ಲರ ದಯ ಹೊಂದುತ್ತಾ, ಆನಂದದಲ್ಲಿಯೂ ಹೃದಯದ ಸಾಧುತ್ವದಲ್ಲಿಯೂ ಆಹಾರವನ್ನು ತೆಗದುಕೊಳ್ಳುತ್ತಿದ್ದರು. ಕರ್ತನು ರಕ್ಷಿಸಲ್ಪಡುವವರನ್ನು ದಿನ ದಿನಕ್ಕೆ ಸಭೆಯಲ್ಲಿ ಸೇರಿಸಿದನು.

---

೪೧. ಕುಂಟನನ್ನು ಸ್ವಸ್ಥ ಮಾಡಿದ್ದು. ಪೇತ್ರನೂ ಯೋಹಾನನೂ ಸೆರೆಯಲ್ಲಿ ಬಿದ್ದದ್ದು.

(ಅಪ್. ಕ್ರಿ. ೩, ೧–೨೬. ೪, ೧–೨೧.)

ಮತ್ತು ಪೇತ್ರನೂ ಯೋಹಾನನೂ ಪ್ರಾರ್ಥನೆಯ ತಾಸಾದ ಹೊಂಭತ್ತನೇ ತಾಸಿಗೆ ದೇವಾಲಯಕ್ಕೆ ಕೂಡಾ ಯೇರಿ ಹೋದರು. ಆಗ ತನ್ನ ತಾಯಿಯ ಗರ್ಭದಿಂದಲೇ ಕುಂಟನಾದ ಒಬ್ಬ ಮನುಷ್ಯನನ್ನು ದೇವಾಲಯದಲ್ಲಿ ಪ್ರವೇಶಿಸುವವರಿಂದ ಭಿಕ್ಷೆ ಬೇಡುವದಕ್ಕೋಸ್ಕರ ದೇವಾಲಯದ ಸುಂದರವೆಂಬ ಹೆಸರುಳ್ಳ ಬಾಗಲಲ್ಲಿ ಯೆಂದಿನ ಪ್ರಕಾರವೇ ಕುಂಡ್ರಿಸಿದರು. ಅವನು ದೇವಾಲಯದಲ್ಲಿ ಪ್ರವೇಶಿಸುವದಕ್ಕಿರುವ ಪೇತ್ರನನ್ನೂ ಯೋಹಾನನನ್ನೂ ನೋ

ಡಿ, ಭಿಕ್ಷೆ ಬೇಡಲಾಗಿ, ಪೇತ್ರನು ಯೋಹಾನನ ಕೂಡಾ ಅವನ ಮೇಲೆ ಕಣ್ಣಿಟ್ಟು,—ನಮ್ಮನ್ನು ನೋಡು! ಅಂದನು. ಅವನು,—ಅವರಿಂದ ಯೇನಾದರೂ ಹೊಂದುವೆನು ಯೆಂದು ನೆನಸಿ, ಅವರ ಮೇಲೆ ದೃಷ್ಟಿ ಇಟ್ಟನು. ಆಗ ಪೇತ್ರನು,—ಬೆಳ್ಳಿಯೂ ಭಂಗಾರವೂ ನನಗೆ ಇಲ್ಲ, ಆದರೆ ನನಗೆ ಇರುವದನ್ನು ನಿನಗೆ ಕೊಡುತ್ತೇನೆ; ನಜರೇತಿನವನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಯೆದ್ದು ನಡದುಕೋ! ಯೆಂದು ಹೇಳಿ, ಅವನ ಬಲಗೈಯನ್ನು ಹಿಡಿದು, ಅವನನ್ನು ಯೆತ್ತಿದನು. ಸಂಗಡಲೇ ಅವನ ಕಾಲುಗಳ ಗಿರಿಗೆಗಳು ಸ್ಥಿರವಾದವು, ಮತ್ತು ಅವನು ಹಾರಿ ನಿಂತು ನಡದನು. ಮತ್ತು ನಡಿಯುತ್ತಾ, ಹಾರುತ್ತಾ, ದೇವರನ್ನು ಹೊಗಳುತ್ತಾ, ಅವರ ಸಂಗಡ ದೇವಾಲಯದೊಳಗೆ ಪ್ರವೇಶಿಸಿದನು. ಮತ್ತು ಜನರೆಲ್ಲರು ಅವನು ನಡಿಯುತ್ತಾ, ದೇವರನ್ನು ಹೊಗಳುತ್ತಾ ಇರುವದನ್ನು ನೋಡಿ,—ದೇವಾಲಯದ ಸುಂದರ ಬಾಗಲಲ್ಲಿ ಭಿಕ್ಷೆಗೆ ಕೂತುಕೊಂಡವನು ಇವನೇ ಯೆಂದು ತಿಳಿದು, ಅವನಿಗೆ ಸಂಭವಿಸಿದಕ್ಕೆ ಭ್ರಮೆಯಿಂದಲೂ ವಿಸ್ಮಯದಿಂದಲೂ ತುಂಬಾದರು. ಸ್ವಸ್ಥವಾದ ಆ ಕುಂಟನು ಪೇತ್ರನನ್ನೂ ಯೋಹಾನನ್ನೂ ಹಿಡಿದಿರಲಾಗಿ, ಜನರೆಲ್ಲರು ಭ್ರಮೆಗೊಂಡು, ಅವರ ಬಳಿಗೆ ಸಾಲಮೋನನದೆಂಬ ಮಂಟಪಕ್ಕೆ ವೋಡಿ ಕೂಡಿ ಬಂದರು. ಪೇತ್ರನು ಅದನ್ನು ನೋಡಿ, ಜನರಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ಇಸ್ರಾಯೇಲ್ಯರಾದ ಜನರೇ! ಇದಕ್ಕೆ ನೀವು ಆಶ್ಚರ್ಯ ಪಡುವದೇನು? ನಾವು ಸ್ವಂತ ಬಲದಿಂದಲಾದರೂ ಭಕ್ತಿಯಿಂದಲಾದರೂ ಇವನನ್ನು ನಡಿಯ ಮಾಡಿದೆವೆಂದು, ನಮ್ಮ ಮೇಲೆ ಕಣ್ಣಿಡುವದೇನು? ಅಬ್ರಹಾಮನ, ಇಸಾಕನ, ಯಾಕೋಬನ ದೇವರಾದ ನಮ್ಮ ಪಿತೃಗಳ ದೇವರು ತನ್ನ ಮಗನಾದ ಯೇಸುವನ್ನು ಮಹಿಮೆ ಪಡಿಸಿದ್ದಾನೆ; ಆತನನ್ನು ನೀವು ವೊಪ್ಪಿಸಿಕೊಟ್ಟು, ಬಿಡಿಸುವದಕ್ಕೆ ನಿರ್ಣಯಿಸಿದ ಪಿಲಾತನ ಸಮ್ಮುಖದಲ್ಲಿ ಅಲ್ಲಗಳದಿರಿ; ನೀವು ಪರಿಶುದ್ಧತ್ವವೂ ನೀತಿಯೂ ಉಳ್ಳವನನ್ನು ಅಲ್ಲಗಳದು, ಕೊಲೆಗಾರನಾದ ಮನುಷ್ಯನನ್ನು ನಿಮಗೆ ದಯಪಾಲಿಸುವದಕ್ಕೆ ಬೇಡಿಕೊಂಡಿರಿ, ಮತ್ತು ಜೀವದ ನಾಯಕನನ್ನು ಕೊಂದಿರಿ! ಆತನನ್ನು ದೇವರು ಸತ್ತವರೊಳ

ಗಿಂದ ಯೆಬ್ಬಿಸಿದನು; ಅದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ಮತ್ತು ಆತನ ಹೆಸರು ನೀವು ನೋಡುವಂಥಾ ಈವನನ್ನು, ಆತನ ಹೆಸರಿನ ವಿಶ್ವಾಸದಿಂದಲೇ, ಸ್ಥಿರ ಮಾಡಿ ಅದೆ. ಆತನ ಮೂಲಕವಾದ ವಿಶ್ವಾಸವು ನಿಂಮೆಲ್ಲರ ಸನ್ನಿಧಿಯಲ್ಲಿ ಅವನಿಗೆ ಈ ಅಂಗಕ್ಷೇಮವನ್ನು ಉಂಟು ಮಾಡಿತು. ಆದರೆ ಸಹೋದರರೇ, ನಿಮ್ಮ ಅಧಿಪತಿಗಳ ಪ್ರಕಾರವೇ ನೀವು ಅಜ್ಞಾನದಿಂದ ಮಾಡಿದಿರೆಂದು ಬಲ್ಲೆನು. ಆದಕಾರಣ ಕರ್ತನ ಸಮ್ಮುಖದಿಂದ ವಿಶ್ರಾಂತಿಯ ಕಾಲಗಳು ಬರುವ ಹಾಗೆ, ನಿಮ್ಮ ಪಾಪಗಳು ಅಳಿಸಲ್ಪಡುವದಕ್ಕೆ ಮಾನಸಾಂತರ ಪಟ್ಟು, ತಿರುಗಿಕೊಳ್ಳಿರಿ! ಯಾಕಂದರೆ ಮೋಶೆಯು ಪಿತೃಗಳಿಗೆ (೫ ಮೋಶೆ. ೧೮, ೧೫.) ಹೇಳಿದ್ದೇನಂದರೆ,—ನಿಮ್ಮ ದೇವರಾದ ಕರ್ತನು ನನ್ನ ಹಾಗಿರುವ ಪ್ರವಾದಿಯನ್ನು ನಿಮ್ಮ ಸಹೋದರರೊಳಗಿಂದ ನಿಮಗೆ ಯೆಬ್ಬಿಸುವನು; ಆತನು ನಿಮಗೆ ಹೇಳುವ ಯೆಲ್ಲಾ ವಿಷಯಗಳಲ್ಲಿ ಆತನನ್ನು ನೀವು ಕೇಳ ಬೇಕು; ಮತ್ತು ಆ ಪ್ರವಾದಿಯನ್ನು ಕೇಳದೆ ಇರುವ ಪ್ರಾಣಿಗಳೆಲ್ಲಾ ಜನರೊಳಗಿಂದ ನಾಶವಾಗಿ ಹೋಗುವವು. ಮತ್ತು ಯೆಲ್ಲಾ ಪ್ರವಾದಿಗಳು ಈ ದಿವಸಗಳನ್ನು ಮುಂತಿಳಿಸಿದರು. ನಿನ್ನ ಬೀಜದಿಂದ ಭೂಮಿಯ ಸಮಸ್ತ ಸಂತತಿಗಳು ಆಶೀರ್ವದಿಸಲ್ಪಡುವವೆಂದು ಅಬ್ರಹಾಮನಿಗೆ ಹೇಳಿ, ದೇವರು ನಮ್ಮ ಪಿತೃಗಳಿಗೆ ಮಾಡಿದ ಒಡಂಬಡಿಕೆಯ ಮಕ್ಕಳಾಗಿ ನೀವು ಇರುತ್ತೀರಿ; ನಿಮಗೆ ಮೊದಲು ದೇವರು ತನ್ನ ಮಗನಾದ ಯೇಸುವನ್ನು ಯೆಬ್ಬಿಸಿ, ಒಬ್ಬೊಬ್ಬನನ್ನು ನಿಮ್ಮ ಕೆಟ್ಟತನಗಳಿಂದ ತೊಲಗಿಸುವದರಲ್ಲಿ ನಿಮ್ಮನ್ನು ಆಶೀರ್ವದಿಸುವದಕ್ಕೆ ಆತನನ್ನು ಕಳುಹಿಸಿದ್ದಾನೆ.

ಅವರು ಜನರ ಸಂಗಡ ಮಾತಾಡುತ್ತಿರಲಾಗಿ, ಯಾಜಕರೂ ದೇವಾಲಯದ ಅಧಿಪತಿಯೂ ಸದ್ದುಕಾಯರೂ, ಅವರು ಜನರಿಗೆ ಬೋಧಿಸಿದ್ದಕ್ಕೂ, ಯೇಸುವಿನ ಮುಖಾಂತರ ಸವದ ಪುನರುತ್ಥಾನವನ್ನು ಪ್ರಸಂಗಿಸುವದಕ್ಕೂ ಕರಕರೆ ಪಟ್ಟು, ಅವರಿಗೆ ವಿರೋಧವಾಗಿ ಯೆದ್ದು, ಅವರ ಮೇಲೆ ಕೈ ಹಾಕಿ, ಅವರನ್ನು ಮಾರನೇ ದಿವಸದ ವರೆಗೂ ಶೆರೆಯಲ್ಲಿ ಇಟ್ಟರು; ಯಾಕಂದರೆ ಸಂಜೆಯಾಗಿತ್ತು. ಆದರೆ ವಾಕ್ಯವನ್ನು ಕೇಳಿದವರಲ್ಲಿ ಅನೇಕರು ವಿಶ್ವಾಸಿಸಿದರು. ಗಂಡ

ಸರ ಲೆಕ್ಕವು ಹೆಚ್ಚುಕಡಿಮೆ ಐದುಸಾವಿರವಾಗಿತ್ತು.

ಮಾರನೇ ದಿವಸ ಅಧಿಪತಿಗಳೂ ಹಿರಿಯರೂ ಶಾಸ್ತ್ರಿಗಳೂ ಪ್ರಧಾನಯಾಜಕನಾದ ಅನ್ನನೂ ಕಾಯಫನೂ ಪ್ರಧಾನಯಾಜಕನ ನೆಂಟರೆಲ್ಲರೂ ಯೆರೂಸಲೇಮಿಗೆ ಕೂಡಿಬರೋಣ ಆಯಿತು. ಇವರು ಅವರನ್ನು ಮಧ್ಯದಲ್ಲಿ ನಿಲ್ಲಿಸಿ,—ನೀವು ಯಾವ ಬಲದಿಂದ ಇಲ್ಲವೆ ಯಾವ ಹೆಸರಿನಿಂದ ಇದನ್ನು ಮಾಡಿದಿರಿ? ಯೆಂದು ಕೇಳಿದರು. ಆಗ ಪೇತ್ರನು ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಅವರಿಗೆ ಹೇಳಿದ್ದೇನಂದರೆ,—ಜನರ ಅಧಿಪತಿಗಳೇ, ಇಸ್ರಾಯೇಲನ ಹಿರಿಯರೇ! ರೋಗಿಷ್ಟನಾದ ಮನುಷ್ಯನಿಗೆ ಉಂಟಾದ ಉಪಕಾರದ ವಿಷಯ, ಅವನು ಹ್ಯಾಗೆ ಸ್ವಸ್ಥವಾದನೆಂದು ನಾವು ಈಹೊತ್ತು ವಿಚಾರಿಸಲ್ಪಟ್ಟರೆ, ನಿಮ್ಮೆಲ್ಲರಿಗೆ ಇದು ತಿಳಿದಿರಲಿ,—ನೀವು ಕ್ರೂಜೆಗೆ ಹಾಕಿದವನೂ, ಸತ್ತವರೊಳಗಿಂದ ದೇವರು ಯೆಬ್ಬಿಸಿದವನೂ ಆಗಿರುವ ನಜರೇತಿನವನಾದ ಯೇಸುಕ್ರಿಸ್ತನ ಹೆಸರಿನಿಂದಲೇ ಇವನು ನಿಮ್ಮ ಮುಂದೆ ಸ್ವಸ್ಥವಾಗಿ ನಿಂತುಕೊಂಡಿದ್ದಾನೆ. ಆತನೇ ಮನೆ ಕಟ್ಟುವವರಾದ ನಿಮ್ಮಿಂದ ತಿರಸ್ಕರಿಸಲ್ಪಟ್ಟ ಕೋಣಾಗ್ರದ್ದಾದ ಕಲ್ಲಾಗಿದ್ದಾನೆ. ಮತ್ತ್ಯಾವನಲ್ಲಿಯೂ ರಕ್ಷಣೆ ಇಲ್ಲ; ಹ್ಯಾಗಂದರೆ ಅದರಿಂದ ನಾವು ರಕ್ಷಿಸಲ್ಪಡಬೇಕೆಂದು, ಆಕಾಶದ ಕೆಳಗೆ ಮನುಷ್ಯರಲ್ಲಿ ಕೊಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲ.—ಆದರೆ ಪೇತ್ರನ ಮತ್ತು ಯೋಹಾನನ ಧೈರ್ಯವನ್ನು ನೋಡಿ, ಅವರು ಕಲಿಯದವರು ಯೆಂದು ಅರಿತು, ಆಶ್ಚರ್ಯಪಟ್ಟು, ಅವರು ಯೇಸುವಿನ ಸಂಗಡ ಇದ್ದರೆಂದು ತಿಳಿದುಕೊಂಡರು. ಸ್ವಸ್ಥವಾದ ಆ ಮನುಷ್ಯನು ಅವರ ಸಂಗಡ ನಿಂತಿರುವದನ್ನು ನೋಡಿದಾಗ, ಅವರಿಗೆ ಅಡ್ಡಿಯ ಮಾತು ಇಲ್ಲದೆ ಹೋಯಿತು. ಆದರೆ ಅವರನ್ನು ಸಭೆಯ ಹೊರಗೆ ಹೋಗ ಆಜ್ಞಾಪಿಸಿ, ತಮ್ಮೊಳಗೆ ಆಲೋಚಿಸಿಕೊಂಡು, ಹೇಳಿದ್ದೇನಂದರೆ,—ಈ ಮನುಷ್ಯರನ್ನು ಯೇನು ಮಾಡುವಾ? ಯಾಕಂದರೆ ಪ್ರಸಿದ್ಧವಾದ ಅದ್ಭುತವು ಇವರಿಂದ ಆಯಿತೆಂದು ಯೆರೂಸಲೇಮಿನಲ್ಲಿ ವಾಸ ಮಾಡುವವರೆಲ್ಲರಿಗೆ ತಿಳಿದದೆ; ಅದನ್ನು ಅಲ್ಲಗಳೆಯಲಾರೆವು. ಆದರೆ ಅದು ಜನರಲ್ಲಿ ಹೆಚ್ಚಾಗಿ ಪ್ರಖ್ಯಾತವಾಗದ ಹಾಗೆ, ಈ ಹೆಸರಿನಲ್ಲಿ ಇನ್ನು ಯಾವ

ಮನುಷ್ಯನ ಸಂಗಡಲಾದರೂ ಮಾತಾಡ ಬಾರದೆಂದು ಅವರಿಗೆ ಖಂಡಿತವಾಗಿ ಬೆದರಿಸುವಾ!–ಈಗಲು ಅವರನ್ನು ಕರಸಿ, ಯೇಸುವಿನ ಹೆಸರಿನಲ್ಲಿ ಯೆಷ್ಟು ಮಾತ್ರವೂ ಮಾತಾಡಲೂ ಬೋಧಿಸಲೂ ಬಾರದೆಂದು ಅವರಿಗೆ ಆಜ್ಞಾಪಿಸಿದರು. ಆದರೆ ಪೇತ್ರನೂ ಯೋಹಾನನೂ ಅವರಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,–ದೇವರಿಗಿಂತ ನಿಮ್ಮನ್ನು ಹೆಚ್ಚಾಗಿ ಕೇಳುವದು ನ್ಯಾಯವೋ ನಿರ್ಣಯಿಸಿರಿ! ಯಾಕಂದರೆ ನಾವು ನೋಡಿದವುಗಳನ್ನೂ ಕೇಳಿದವುಗಳನ್ನೂ ಮಾತಾಡದೆ ಇರಲಾರೆವು.–ಆದರೆ ಇವರು ಅವರನ್ನು ದಂಡಿಸುವ ಮಾರ್ಗವನ್ನು ಕಾಣದೆ, ಅವರನ್ನು ಅಧಿಕವಾಗಿ ಬೆದರಿಸಿ, ಜನರ ನಿಮಿತ್ತ ಬಿಟ್ಟು ಬಿಟ್ಟರು; ಯಾಕಂದರೆ ಆದ ಕಾರ್ಯಕ್ಕೋಸ್ಕರ ಯೆಲ್ಲರೂ ದೇವರನ್ನು ಮಹಿಮೆ ಪಡಿಸಿದರು; ಯಾಕಂದರೆ ಸ್ವಸ್ಥ ಮಾಡುವ ಗುರುತು ಉಂಟಾದ ಆ ಮನುಷ್ಯನು ನಾಲ್ವತ್ತು ವರುಷದ ಮೇಲಿನವನಾಗಿದ್ದನು.

ಅವರು ಬಿಡಿಸಲ್ಪಟ್ಟು, ತಮ್ಮ ಜನರ ಬಳಿಗೆ ಬಂದು, ಪ್ರಧಾನಯಾಜಕರೂ ಹಿರಿಯರೂ ತಮಗೆ ಹೇಳಿದವುಗಳನ್ನೆಲ್ಲಾ ತಿಳಿಸಿದರು. ಇವರು ಕೇಳಿ, ಯೇಕಮನಸ್ಸಾಗಿ ದೇವರ ಕಡೆಗೆ ಶಬ್ದವನೆತ್ತಿ ಹೇಳಿದ್ದೇನಂದರೆ,–ಪ್ರಭುವೇ, ಆಕಾಶವನ್ನೂ ಭೂಮಿಯನ್ನೂ ಸಮುದ್ರವನ್ನೂ ಅವುಗಳೊಳಗೆ ಇರುವ ಯೆಲ್ಲವುಗಳನ್ನೂ ನಿರ್ಮಿಸಿದ ದೇವರು ನೀನೇ! ಜನಾಂಗಗಳು ಗುಲ್ಲು ಮಾಡುವದೂ, ಜನಗಳು ವ್ಯರ್ಥವಾದದ್ದನ್ನು ಯೋಚಿಸುವದೂ ಯಾಕೆ? ಕರ್ತನಿಗೆ ವಿರೋಧವಾಗಿಯೂ ಆತನ ಕ್ರಿಸ್ತನಿಗೆ ವಿರೋಧವಾಗಿಯೂ ಭೂರಾಜರು ನಿಂತುಕೊಂಡು, ಅಧಿಪತಿಗಳು ಕೂಡಿಕೊಂಡರೆಂದು, ನಿನ್ನ ಸೇವಕನಾದ ದಾವೀದನ ಬಾಯಿಂದ (ಕೀರ್ತ. ೨, ೧. ೨.) ಹೇಳಿದವನು ನೀನೇ! ನಿಜವಾಗಿ ನೀನು ಅಭಿಷೇಕಿಸಿದ ನಿನ್ನ ಪರಿಶುದ್ಧ ಮಗನಾದ ಯೇಸುವಿಗೆ ವಿರೋಧವಾಗಿ ಹೆರೋದನೂ ಪೊಂತ್ಯ ಪಿಲಾತನೂ ಜನಾಂಗಗಳ ಸಂಗಡಲೂ ಇಸ್ರಯೇಲಿನ ಜನರ ಸಂಗಡಲೂ ಕೂಡಿಕೊಂಡರು. ಮತ್ತು ಕರ್ತನೇ, ಈಗ ಅವರ ಬೆದರಿಸುವಿಕೆಗಳನ್ನು ನೋಡಿ, ಸ್ವಸ್ಥ ಮಾಡುವದಕ್ಕೂ, ನಿನ್ನ ಪರಿಶುದ್ಧ ಮಗನಾದ ಯೇಸುವಿನ ಹೆಸರಿನಿಂದ ಲಕ್ಷಣಗಳೂ ಅದ್ಭುತಗಳೂ ಆಗುವದ

ಕ್ಕೂ ನಿನ್ನ ಕೈಯನ್ನು ಚಾಚಿ, ನಿನ್ನ ವಾಕ್ಯವನ್ನು ಪೂರ್ಣ ಧೈರ್ಯದಿಂದ ಮಾತಾಡುವದಕ್ಕೆ ನಿನ್ನ ದಾಸರಿಗೆ ಕೊಡು!—ಅವರು ಪ್ರಾರ್ಥಿಸಲಾಗಿ, ಅವರು ಕೂಡಿಕೊಂಡಿರುವ ಸ್ಥಳವು ಕದಲಿತು, ಮತ್ತು ಯೆಲ್ಲರೂ ಪರಿಶುದ್ಧಾತ್ಮದಿಂದ ತುಂಬಿದವರಾಗಿ, ದೇವರ ವಾಕ್ಯವನ್ನು ಧೈರ್ಯವಾಗಿ ನುಡಿದರು.

---

೪೨. ಅನನೀಯನೂ ಸಪ್ಫೀರಳೂ. ಅಪೊಸ್ತಲರೆಲ್ಲರು ಸೆರೆಯಲ್ಲಿ ಬಿದ್ದದ್ದು.

(ಅಪ್ ಕೃ. ೪, ೩೨—೩೭. ೫, ೧—೪೨.)

ವಿಶ್ವಾಸಿಸುವವರ ಸಮೂಹದ ಹೃದಯವೂ ಆತ್ಮವೂ ವೊಂದೇ ಆಗಿತ್ತು. ಮತ್ತು ಒಬ್ಬನಾದರೂ ತನಗೆ ಉಂಟಾದವುಗಳಲ್ಲಿ ಒಂದಾದರೂ ತನ್ನದೆಂದು ಹೇಳಲಿಲ್ಲ, ಆದರೆ ಯೆಲ್ಲಾ ಅವರಿಗೆ ಹೊದುವಾಗಿತ್ತು. ಮತ್ತು ಅಪೊಸ್ತಲರು ಮಹಾ ಬಲದಿಂದ ಕರ್ತನಾದ ಯೇಸುವಿನ ಪುನರುತ್ಥಾನಕ್ಕೆ ಸಾಕ್ಷಿ ಕೊಟ್ಟರು; ಮಹಾ ಕೃಪೆಯು ಅವರೆಲ್ಲರ ಮೇಲೆ ಇತ್ತು. ಹ್ಯಾಗಂದರೆ ಅವರೊಳಗೆ ಕೊರತೆ ಪಡುವವನು ಒಬ್ಬನೂ ಇರಲಿಲ್ಲ; ಯಾಕಂದರೆ ಹೊಲಗಳಾದರೂ ಮನೆಗಳಾದರೂ ಉಂಟಾದವರೆಲ್ಲರೂ ಮಾರಿ ಬಿಟ್ಟು, ಮಾರಿದವುಗಳ ಕ್ರಯವನ್ನು ತಂದು, ಅಪೊಸ್ತಲರ ಪಾದಗಳ ಹತ್ತರ ಇಟ್ಟರು; ಮತ್ತು ಒಬ್ಬೊಬ್ಬನಿಗೆ ಅಗತ್ಯವಿದ್ದ ಹಾಗೆ ಹಂಚಿ ಕೊಡಲ್ಪಟ್ಟಿತು. ಮತ್ತು ದ್ವೀಪವಾದ ಕುಪ್ರದಲ್ಲಿ ಹುಟ್ಟಿದ ಲೇವ್ಯನಾದ ಬರ್ನಬನೆಂಬ ಯೋಸೆಯು ಭೂಮಿ ಉಂಟಾದವನಾಗಿ ಅದನ್ನು ಮಾರಿಬಿಟ್ಟು, ಅಪೊಸ್ತಲರ ಪಾದಗಳ ಹತ್ತರ ಇಟ್ಟನು.—ಆದರೆ ಅನನೀಯನೆಂಬ ಒಬ್ಬ ಮನುಷ್ಯನು ತನ್ನ ಹೆಂಡತಿಯಾದ ಸಪ್ಫೀರಳ ಸಂಗಡ ಒಂದು ಆಸ್ತಿಯನ್ನು ಮಾರಿಬಿಟ್ಟನು. ಅವನು ಹೆಂಡತಿಗೂ ತಿಳಿದಿರಲಾಗಿ ಕ್ರಯದಲ್ಲಿ ಒಂದು ಪಾಲು ಮಡಗಿಕೊಂಡು, ವೊಂದು ಪಾಲು ತಂದು, ಅಪೊಸ್ತಲರ ಪಾದಗಳ ಹತ್ತರ ಇಟ್ಟನು.

ಆಗ ಪೇತ್ರನು,—ಅನನೀಯನೇ, ನೀನು ಪರಿಶುದ್ಧಾತ್ಮಕ್ಕೆ ಸುಳ್ಳಾಡಿ, ಆ ಹೊಲದ ಕ್ರಯದಲ್ಲಿ ವೊಂದು ಪಾಲು ಮಡಗಿ ಕೊಳ್ಳುವ ಹಾಗೆ, ಸೈತಾನನು ಯಾಕೆ ನಿನ್ನ ಹೃದಯವನ್ನು ತುಂಬಿಸಿದ್ದಾನೆ? ಅದು ನಿಂನಲ್ಲಿ ಇತ್ತು, ನಿನ್ನದಾಗಿತ್ತಲ್ಲವೋ? ಮಾರಿದ ಮೇಲೆ ನಿನ್ನ ವಶವಾಗಿತ್ತಲ್ಲವೋ? ಯಾಕೆ ಈ ಕಾರ್ಯವನ್ನು ನಿನ್ನ ಹೃದಯದಲ್ಲಿ ಇಟ್ಟು ಕೊಂಡೀ? ಮನುಷ್ಯರಿಗಲ್ಲ, ದೇವರಿಗೆ ಸುಳ್ಳಾಡಿದಿ! ಅಂದನು. ಅನನೀಯನು ಈ ಮಾತುಗಳನ್ನು ಕೇಳಿ, ಬಿದ್ದು, ಪ್ರಾಣ ಬಿಟ್ಟನು. ಮತ್ತು ಇವುಗಳನ್ನು ಕೇಳುವವರೆಲ್ಲರಿಗೆ ಮಹಾ ಭಯ ಉಂಟಾಯಿತು. ಯೌವನಸ್ಥರು ಯೆದ್ದು ಅವನನ್ನು ಕಟ್ಟಿ, ಹೊತ್ತು ಕೊಂಡು ಹೋಗಿ, ಹೂಣಿಟ್ಟರು.—ಹೆಚ್ಚುಕಡಿಮೆ ಮೂರು ತಾಸಿನ ಹೊತ್ತು ಹೋದ ಮೇಲೆ ಅವನ ಹೆಂಡತಿಯು ಆದದ್ದನ್ನು ತಿಳಿಯದೆ ವೊಳಗೆ ಬಂದಳು. ಪೇತ್ರನು ಅವಳಿಗೆ,—ಅಷ್ಟು ಹಣಕ್ಕೆ ಆ ಹೊಲವನ್ನು ಮಾರಿಬಿಟ್ಟಿರೋ? ನನಗೆ ಹೇಳು! ಅನ್ನಲಾಗಿ, ಅವಳು,—ಹೌದು, ಅಷ್ಟಕ್ಕೆ! ಅಂದಳು. ಆಗ ಪೇತ್ರನು ಅವಳಿಗೆ,—ಕರ್ತನ ಆತ್ಮವನ್ನು ಶೋಧಿಸುವದಕ್ಕೆ ನೀವು ಸಮ್ಮತಿಸಿದ್ದು ಯಾಕೆ? ಇಗೋ ನಿನ್ನ ಗಂಡನನ್ನು ಹೂಣಿಟ್ಟವರ ಪಾದಗಳು ಬಾಗಲಲ್ಲಿ ಅವೆ; ಅವರು ನಿನ್ನನ್ನು ಹೊತ್ತು ಕೊಂಡು ಹೋಗುವರು! ಅಂದನು. ಸಂಗಡಲೇ ಅವಳು ಅವನ ಪಾದಗಳ ಹತ್ತರ ಬಿದ್ದು, ಪ್ರಾಣ ಬಿಟ್ಟಳು. ಯೌವನಸ್ಥರು ವೊಳಗೆ ಬಂದು, ಅವಳು ಸತ್ತಿರುವದನ್ನು ಕಂಡು, ಅವಳನ್ನು ಹೊತ್ತು ಕೊಂಡು ಹೋಗಿ, ಅವಳ ಗಂಡನ ಹತ್ತರ ಹೂಣಿಟ್ಟರು. ಮತ್ತೆ ಸಮಸ್ತ ಸಭೆಗೂ ಇವುಗಳನ್ನು ಕೇಳುವವರೆಲ್ಲರಿಗೂ ಮಹಾ ಭಯವಾಯಿತು.

ಇದಲ್ಲದೆ ಅಪೊಸ್ತಲರ ಕೈಗಳಿಂದ ಜನರಲ್ಲಿ ಅನೇಕ ಲಕ್ಷಣಗಳೂ ಅದ್ಭುತಗಳೂ ಉಂಟಾದವು; ಮತ್ತು ಜನರು ಅವರನ್ನು ಮಹಿಮೆ ಪಡಿಸಿದರು. ಮತ್ತು ವಿಶ್ವಾಸಿಸುವವರ ಸಮೂಹಗಳು ಹೆಚ್ಚಾಗಿ ಕರ್ತನಿಗೆ ಸೇರಿಸಲ್ಪಟ್ಟವು. ಹೀಗಿರುವದರಿಂದ ಪೇತ್ರನು ಬರಲಾಗಿ, ಅವನ ನೆರಳಾದರೂ ಅವರಲ್ಲಿ ಯಾವನ ಮೇಲಾದರೂ ಬಿದ್ದೀತೋ ಯೆಂದು, ರೋಗಿಷ್ಟರನ್ನು ಬೀದಿಗಳಲ್ಲಿ ಹಾ

ರಗೆ ತಂದು, ಮಂಚಗಳ ಮೇಲೆಯೂ ಹಾಸಿಕೆಗಳ ಮೇಲೆಯೂ ಇಟ್ಟರು.
ಇದಲ್ಲದೆ ಸುತ್ತಲಿರುವ ಪಟ್ಟಣಗಳ ಸಮೂಹವು ಸಹಾ ಗುಂಪಾಗಿ ರೋಗಿಷ್ಟ
ರನ್ನೂ ಅಶುದ್ಧಾತ್ಮಗಳಿಂದ ಕಷ್ಟ ಪಡುವವರನ್ನೂ ತೆಗೆದುಕೊಂಡು ಬಂದ
ರು; ಅವರೆಲ್ಲರೂ ಸ್ವಸ್ಥವಾದರು. ಆಗ ಪ್ರಧಾನಯಾಜಕನೂ ಅವನ ಸಂಗಡ
ಇದ್ದ ಸದ್ದುಕಾಯರ ಮತವೆಲ್ಲವೂ ಯೆದ್ದು, ಆಸಕ್ತಿಯಿಂದ ತುಂಬಿದವರಾಗಿ,
ಅಪೊಸ್ತಲರ ಮೇಲೆ ತಮ್ಮ ಕೈಗಳನ್ನು ಹಾಕಿ, ಅವರನ್ನು ಪಟ್ಟಣದ ಸೆರೆ
ಮನೆಯಲ್ಲಿ ಇಟ್ಟರು. ಆದರೆ ರಾತ್ರಿಯಲ್ಲಿ ಕರ್ತನ ದೂತನು ಸೆರೆಮನೆಯ
ಬಾಗಲುಗಳನ್ನು ತೆರೆದು, ಅವರನ್ನು ಹೊರಗೆ ನಡಿಸಿ,—ನೀವು ಹೋಗಿ,
ದೇವಾಲಯದಲ್ಲಿ ನಿಂತುಕೊಂಡು, ಈ ಜೀವದ ಮಾತುಗಳನ್ನೆಲ್ಲಾ ಜನರಿಗೆ
ಹೇಳಿರಿ! ಅಂದನು. ಅವರು ಕೇಳಿ, ಬೆಳಿಗ್ಗೆ ದೇವಾಲಯಕ್ಕೆ ಹೋಗಿ ಬೋ
ಧಿಸಿದರು. ಆದರೆ ಪ್ರಧಾನಯಾಜಕನು ಮಂತ್ರಿಸಭೆಯನ್ನು ಕೂಡಾ ಕರ
ಸಿ, ಅವರನ್ನು ತರಬೇಕೆಂದು ಸೆರೆಮನೆಗೆ ಕಳುಹಿಸಿದನು. ಊಳಿಗದವರು
ತಿರಿಗಿ ಬಂದು,—ಸೆರೆಮನೆಯು ಬಹಳ ಭದ್ರವಾಗಿ ಮುಚ್ಚಿ ಇರುವದನ್ನೂ,
ಕಾವಲಿಗಾರರು ಬಾಗಲುಗಳ ಮುಂದೆ ನಿಂತಿರುವದನ್ನೂ ಕಂಡೆವು; ಆದರೆ
ತೆರೆದಾಗ, ವೊಳಗೆ ಯಾರನ್ನೂ ಕಾಣಲಿಲ್ಲಾ, ಯೆಂದು ತಿಳಿಸಿದರು. ಅವರು
ಈ ಮಾತುಗಳನ್ನು ಕೇಳಿ, ಇದು ಯೇನಾದೀತೆಂದು ಅವುಗಳ ವಿಷಯ ಸಂದೇ
ಹ ಪಟ್ಟರು. ಆಗ ವೊಬ್ಬನು ಬಂದು,—ಇಗೋ, ನೀವು ಸೆರೆಯಲ್ಲಿ ಇಟ್ಟ
ಮನುಷ್ಯರು ದೇವಾಲಯದಲ್ಲಿ ನಿಂತುಕೊಂಡು, ಜನರಿಗೆ ಬೋಧಿಸುತ್ತಾ ಇದ್ದಾ
ರೆ, ಯೆಂದು ಅವರಿಗೆ ತಿಳಿಸಿದನು. ಆಗ ಅಧಿಪತಿಯು ಊಳಿಗದವರ ಸಂ
ಗಡ ಹೋಗಿ, ಅವರನ್ನು ಕರಕೊಂಡು ಬಂದನು, ಬಲಾತ್ಕಾರದಿಂದಲ್ಲಾ, ಯಾ
ಕಂದರೆ ತಾವು ಕಲ್ಲೆಸೆಯಲ್ಪಟ್ಟೇವೆಂದು ಜನರಿಗೆ ಭಯ ಪಟ್ಟರು. ಅವರನ್ನು
ಕರಕೊಂಡು ಬಂದು, ಮಂತ್ರಿಸಭೆಯಲ್ಲಿ ನಿಲ್ಲಿಸಿದಾಗ, ಪ್ರಧಾನಯಾಜಕನು
ಅವರನ್ನು ಕೇಳಿದ್ದೇನಂದರೆ,—ಈ ಹೆಸರಿನಲ್ಲಿ ಬೋಧಿಸ ಬಾರದೆಂದು ನಾವು
ನಿಮಗೆ ಖಂಡಿತವಾಗಿ ಆಜ್ಞಾಪಿಸಲಿಲ್ಲವೋ? ಮತ್ತು ಇಗೋ, ಯೆರೂಸಲೇ
ಮನ್ನೆಲ್ಲಾ ನಿಮ್ಮ ಬೋಧನೆಯಿಂದ ತುಂಬಿಸಿದ್ದೀರಿ; ಈ ಮನುಷ್ಯನ ರಕ್ತವ

ನ್ನು ನಮ್ಮ ಮೇಲೆ ಬರ ಮಾಡಬೇಕೆಂದಿದ್ದೀರಿ. ಆಗ ಪೇತ್ರನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ಮನುಷ್ಯರಿಗಿಂತ ಹೆಚ್ಚಾಗಿ ದೇವರಿಗೆ ವಿಧೇಯರಾಗಿರಬೇಕು. ನೀವು ಮರದ ಮೇಲೆ ತೂಗಿಸಿ ಕೊಂದುಹಾಕಿದ ಯೇಸುವನ್ನು ನಿಮ್ಮ ಪಿತೃಗಳ ದೇವರು ಯೆಬ್ಬಿಸಿದ್ದಾನೆ. ದೇವರು ಈತನನ್ನು ನಾಯಕನಾಗಿಯೂ ರಕ್ಷಕನಾಗಿಯೂ ಇಸ್ರಯೇಲಿಗೆ ಮಾನಸಾಂತರವನ್ನೂ ಪಾಪಗಳ ಪರಿಹಾರವನ್ನೂ ಕೊಡುವದಕ್ಕೋಸ್ಕರ ತನ್ನ ಬಲಗೈಯಿಂದ ಯೆತ್ತಿದ್ದಾನೆ; ಮತ್ತು ಈ ಮಾತುಗಳಿಗೆ ನಾವೂ, ತನಗೆ ವಿಧೇಯವಾಗಿರುವವರಿಗೆ ದೇವರು ಕೊಟ್ಟ ಪರಿಶುದ್ಧಾತ್ಮವೂ ಆತನ ಸಾಕ್ಷಿಗಳಾಗಿದ್ದೇವೆ.—ಅವರು ಕೇಳಿ, ಇರಿಯಲ್ಪಟ್ಟು, ಅವರನ್ನು ಕೊಲ್ಲುವದಕ್ಕೆ ಯೋಚನೆ ಮಾಡಿದರು. ಆದರೆ ಸಮಸ್ತ ಜನರಲ್ಲಿ ಘನವುಳ್ಳವನೂ ನ್ಯಾಯಶಾಸ್ತ್ರಿಯೂ ಆಗಿರುವ ಗಮಾಲಿಯೇಲನೆಂಬ ವೊಬ್ಬ ಫರಿಸಾಯನು ಮಂತ್ರಿಸಭೆಯಲ್ಲಿ ಯೆದ್ದು, ಅಪೊಸ್ತಲರನ್ನು ಸ್ವಲ್ಪ ಹೊರಗೆ ಕಳುಹಿಸ ಆಜ್ಞಾಪಿಸಿ, ಅವರಿಗೆ ಹೇಳಿದ್ದೇನಂದರೆ,—ಇಸ್ರಯೇಲ್ಯರಾದ ಜನರೇ, ಈ ಮನುಷ್ಯರ ವಿಷಯವಾಗಿ ನೀವು ಮಾಡಲಿಕ್ಕಿರುವದೇನೆಂದು ನಿಮಗೆ ನೀವೇ ಜಾಗ್ರತೆಯಾಗಿರಿ. ಈ ಮನುಷ್ಯರ ಗೊಡವೆಗೆ ಹೋಗದೆ, ಅವರನ್ನು ಬಿಡಿರಿ; ಯಾಕಂದರೆ ಈ ಆಲೋಚನೆಯೂ ಈ ಕೆಲಸವೂ ಮನುಷ್ಯರದಾಗಿದ್ದರೆ, ಲಯವಾಗುವದು; ಆದರೆ ದೇವರದಾಗಿದ್ದರೆ, ಅದನ್ನು ಲಯ ಮಾಡಲಾರಿರಿ; ವೊಂದು ವೇಳೆ ನೀವು ದೇವವಿರೋಧಿಗಳಾಗಿ ಕಾಣಲ್ಪಡುವಿರಿ! ಅವರು ಇವನಿಗೆ ವೊಪ್ಪಿಕೊಂಡು, ಅಪೊಸ್ತಲರನ್ನು ಕರೆಯ ಕಳುಹಿಸಿ, ಹೊಡಿಸಿ, ಯೇಸುವಿನ ಹೆಸರಿನಲ್ಲಿ ಮಾತಾಡಬಾರದೆಂದು ಆಜ್ಞಾಪಿಸಿ, ಅವರನ್ನು ಬಿಟ್ಟು ಬಿಟ್ಟರು. ಆದರೆ ಇವರು,—ಯೇಸುವಿನ ಹೆಸರಿನ ನಿಮಿತ್ತ ನಿಂದೆ ಪಡುವದಕ್ಕೆ ಯೋಗ್ಯರಾಗಿ ಯೆಣಿಸಲ್ಪಟ್ಟೆವು, ಯೆಂದು ಸಂತೋಷಪಟ್ಟು, ಮಂತ್ರಿಸಭೆಯ ಸಮ್ಮುಖದಿಂದ ಹೊರಟು ಹೋಗಿ, ದಿನಾಲೂ ಬಿಡದೆ ದೇವಾಲಯದಲ್ಲಿಯೂ ಮನೆ ಮನೆಯಲ್ಲಿಯೂ ಬೋಧಿಸುತ್ತಾ, ಕ್ರಿಸ್ತನಾದ ಯೇಸುವನ್ನು ಪ್ರಸಂಗಿಸುತ್ತಾ ಇದ್ದರು.

೪೩. ಮೊದಲನೇ ರಕ್ತಸಾಕ್ಷಿಯಾದ ಸ್ತೆಫನನು. ಯೆರೂಸಲೇಮಿನಲ್ಲಿ ಆದ ದೊಡ್ಡ ಹಿಂಸೆ. ಮಂತ್ರಗಾರನಾದ ಸೀಮೋನನು. ಐಥಿಯೋಪ್ಯನಾದ ನಪುಂಸಕನು.

(ಅಪ್. ಕ್ರಿ. ೬, ೧–೧೫. ೭, ೧–೬೦. ೮, ೧–೪೦.)

ಆ ದಿನಗಳಲ್ಲಿ ಶಿಷ್ಯರು ಹೆಚ್ಚಲಾಗಿ, ಹನ್ನೆರಡು ಮಂದಿಯು ಶಿಷ್ಯರ ಸಮೂಹವನ್ನು ಕರಸಿ ಹೇಳಿದ್ದೇನಂದರೆ, — ನಾವು ದೇವರ ವಾಕ್ಯವನ್ನು ಬಿಟ್ಟು, ಮೇಜುಗಳಿಗೆ ಸೇವೆ ಮಾಡುವದು ಹಿತವಲ್ಲಾ! ಆದದರಿಂದ ಸಹೋದರರೇ, ಪರಿಶುದ್ಧಾತ್ಮದಿಂದಲೂ ಜ್ಞಾನದಿಂದಲೂ ತುಂಬಿರುವಂಥಾ ಸಾಕ್ಷಿಗೊಂಡಿರುವಂಥಾ ಯೇಳು ಜನರನ್ನು ನಿಮ್ಮೊಳಗೆ ನೋಡಿಕೊಳ್ಳಿರಿ; ಅವರನ್ನು ಈ ಅವಶ್ಯ ಕಾರ್ಯಕ್ಕೆ ಇರಿಸುವಾ; ಆದರೆ ನಾವು ಪ್ರಾರ್ಥನೆಯಲ್ಲಿಯೂ ವಾಕ್ಯದ ಸೇವೆಯಲ್ಲಿಯೂ ನೆಲೆಯಾಗಿರುವೆವು. — ಈ ಮಾತು ಸಮೂಹಕ್ಕೆಲ್ಲಾ ಹಿತವಾದದರಿಂದ, ಅವರು ವಿಶ್ವಾಸವೂ ಪರಿಶುದ್ಧಾತ್ಮವೂ ತುಂಬಿರುವ ಸ್ತೆಫನನನ್ನೂ ಫಿಲಿಪ್ಪನನ್ನೂ ಬೇರೆ ಐದು ಜನರನ್ನೂ ಆದುಕೊಂಡು, ಅವರನ್ನು ಅಪೊಸ್ತಲರ ಮುಂದೆ ನಿಲ್ಲಿಸಿದರು. ಇವರು ಪ್ರಾರ್ಥನೆ ಮಾಡಿ, ಅವರ ಮೇಲೆ ಕೈಗಳನ್ನು ಇಟ್ಟರು. — ಮತ್ತು ದೇವರ ವಾಕ್ಯವು ಬೆಳದು, ಶಿಷ್ಯರ ಲೆಖ್ಖವು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚಿತು; ಮತ್ತು ಯಾಜಕರಲ್ಲಿ ಬಹು ಜನರು ವಿಶ್ವಾಸಕ್ಕೆ ವಿಧೇಯರಾದರು.

ಮತ್ತು ಸ್ತೆಫನನು ವಿಶ್ವಾಸದಿಂದಲೂ ಬಲದಿಂದಲೂ ತುಂಬಿದವನಾಗಿ, ದೊಡ್ಡ ಅದ್ಭುತಗಳನ್ನೂ ಲಕ್ಷಣಗಳನ್ನೂ ಜನರಲ್ಲಿ ನಡಿಸಿದನು. ಆಗ ಕೆಲವರು ಯೆದ್ದು, ಅವನ ಸಂಗಡ ತರ್ಕಿಸಿದರು; ಆದರೆ ಅವನ ಜ್ಞಾನವನ್ನೂ, ಅವನು ಮಾತಾಡಿದ ಆತ್ಮವನ್ನೂ ಯೆದುರಿಸಲಾರದೆ ಇದ್ದರು. ಆಗಲವರು ಜನರನ್ನೂ ಹಿರಿಯರನ್ನೂ ಶಾಸ್ತ್ರಿಗಳನ್ನೂ ಪ್ರೇರೇಪಿಸಿ, ಅವನ ಮೇಲೆ ಬಿದ್ದು, ಅವನನ್ನು ಮಂತ್ರಿಸಭೆಗೆ ವೈದುಕೊಂಡು ಹೋಗಿ, ಅಬದ್ಧ ಸಾಕ್ಷಿಗಳನ್ನು ನಿಲ್ಲಿಸಿದರು; ಇವರು ಹೇಳಿದ್ದೇನಂದರೆ, — ಈ ಮನುಷ್ಯನು ಈ ಪರಿಶುದ್ಧ ಸ್ಥಳಕ್ಕೂ ನ್ಯಾಯಪ್ರಮಾಣಕ್ಕೂ ವಿರೋಧವಾಗಿ ದೂಷಣೆಯ ಮಾ

ಶುಗಳನ್ನು ಆಡುವದು ಬಿಡುವದಿಲ್ಲ; ಯೇನಂದರೆ, —ನಜರೇತಿನವನಾದ ಯೇಸು ಈ ಸ್ಥಳವನ್ನು ಲಯ ಮಾಡಿ, ಮೋಶೆಯು ನಮಗೆ ಕೊಟ್ಟ ಸಂಪ್ರದಾಯಗಳನ್ನು ಮಾರ್ಪಡಿಸುವನೆಂದು, ಅವನು ಹೇಳಿದ್ದನ್ನು ಕೇಳಿದೆವು. ಮತ್ತು ಮಂತ್ರಿಸಭೆಯಲ್ಲಿ ಕೂತುಕೊಂಡವರೆಲ್ಲರು ಅವನ ಮೇಲೆ ಕಣ್ಣಿಟ್ಟು, ಅವನ ಮುಖವು ದೂತನ ಮುಖದ ಹಾಗೆ ಇರುವದನ್ನು ನೋಡಿದರು. ಆಗ ಪ್ರಧಾನಯಾಜಕನು, —ಇವು ಹಾಗೋ? ಅನ್ನಲಾಗಿ, ಅವನು ದೇವರು ಇಸ್ರಯೇಲಿನಲ್ಲಿ ಮಾಡಿದ ಮಹಾ ಕ್ರಿಯೆಗಳ ವಿಷಯವಾಗಿಯೂ ಪ್ರಜೆಯ ಕಠಿಣತ್ವದ ವಿಷಯವಾಗಿಯೂ ಮಾತಾಡಿ, ಕಡೆಗೆ ಹೇಳಿದ್ದೇನಂದರೆ, —ಬಾಗ್ಗದ ಕುತ್ತಿಗೆಯುಳ್ಳವರೇ, ನೀವು ಯಾವಾಗಲೂ ಪರಿಶುದ್ಧಾತ್ಮಕ್ಕೆ ಯೆದುರು ಬೀಳುತ್ತೀರಿ! ನಿಮ್ಮ ಪಿತೃಗಳು ಹ್ಯಾಗೋ, ಹಾಗೆಯೇ ನೀವು! ಪ್ರವಾದಿಗಳಲ್ಲಿ ನಿಮ್ಮ ಪಿತೃಗಳು ಹಿಂಸಿಸದವನ್ಯಾರು? ನೀವು ಈಗ ಒಪ್ಪಿಸಿ ಕೊಟ್ಟು ಕೊಂದು ಹಾಕಿದ ನೀತಿವಂತನ ಬರುವಿಕೆಯ ವಿಷಯವಾಗಿ ಮುಂತಿಳಿಸಿದವರನ್ನು ಅವರು ಕೊಂದು ಹಾಕಿದರು; ನೀವು ನ್ಯಾಯಪ್ರಮಾಣವನ್ನು ಹೊಂದಿ ಕೈಕೊಳ್ಳಲಿಲ್ಲ! —ಅವರು ಇವುಗಳನ್ನು ಕೇಳಿ, ತಮ್ಮ ಹೃದಯಗಳಲ್ಲಿ ಇರಿಯಲ್ಪಟ್ಟು, ಅವನ ಮೇಲೆ ಹಲ್ಲು ಕಡಿದರು. ಆದರೆ ಅವನು ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಆಕಾಶವನ್ನು ದೃಷ್ಟಿಸಿ, ದೇವರ ಮಹಿಮೆಯನ್ನೂ, ದೇವರ ಬಲಪಾರ್ಶ್ವದಲ್ಲಿ ಯೇಸು ನಿಂತುಕೊಂಡಿರುವದನ್ನೂ ನೋಡಿ, —ಇಗೋ, ಆಕಾಶಗಳು ತೆರದಿರುವದನ್ನೂ, ಮನುಷ್ಯನ ಮಗನು ದೇವರ ಬಲಪಾರ್ಶ್ವದಲ್ಲಿ ನಿಂತುಕೊಂಡಿರುವದನ್ನೂ ನೋಡುತ್ತೇನೆ! ಅಂದನು. ಆಗಲವರು ಮಹಾ ಶಬ್ದದಿಂದ ಕೂಗಿ, ತಮ್ಮ ಕಿವಿಗಳನ್ನು ಮುಚ್ಚಿಕೊಂಡು, ಯೇಕ ಮನಸ್ಸಾಗಿ ಅವನ ಮೇಲೆ ಬಿದ್ದು, ಅವನನ್ನು ಪಟ್ಣದ ಹೊರಗೆ ಹಾಕಿ ಕಲ್ಲೆಸೆದರು. ಮತ್ತು ಸಾಕ್ಷಿಯವರು ತಮ್ಮ ವಸ್ತ್ರಗಳನ್ನು ಸೌಲನೆಂಬ ಹಾಬ್ಬ ಯೌವನಸ್ಥನ ಪಾದಗಳ ಹತ್ತರ ಇಟ್ಟರು. ಆಗ, —ಕರ್ತನಾದ ಯೇಸುವೇ, ನನ್ನ ಆತ್ಮವನ್ನು ಅಂಗೀಕರಿಸು! ಯೆಂದು ಕರದು ಹೇಳುವ ಸ್ತೆಫನನನ್ನು ಕಲ್ಲೆಸೆದರು. ಅವನು ಮೊಣಕಾಲೂರಿಕೊಂಡು, ಮಹಾ ಶಬ್ದದಿಂದ, —



ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸ ಬೇಡ! ಯೆಂದು ಕೂಗಿದನು. ಇದನ್ನು ಹೇಳಿ, ನಿದ್ದೆ ಹೋದನು.

ಮತ್ತು ಸೌಲನು ಅವನ ಕೊಲೆಗೆ ಸಮ್ಮತಿ ಪಡುತ್ತಿದ್ದನು. (ಇವನು ಕಿಲಿಕ್ಯದ ಪಟ್ಟಣವಾದ ತಾರ್ಸದವನಾದ ಯೆಹೂದ್ಯನೂ, ಬೆನ್ಯಮೀನನ ಕುಲದವನೂ ಆಗಿದ್ದನು. ಅವನು ರೋಮ ಪಟ್ಟಣವಾಸದವನಾಗಿ ಹುಟ್ಟಿ, ಯೆರೂಸಲೇಮಿನಲ್ಲಿ ಗಮಾಲಿಯೇಲನ ಪಾದಗಳ ಬಳಿಯ ಸಾಕಲ್ಪಟ್ಟು, ನ್ಯಾಯಪ್ರಮಾಣದ ಪ್ರಕಾರ ಫರಿಸಾಯನಾಗಿದ್ದನು. ಫರಿಸಾಯರ ಮರ್ಯಾದೆಯ ಪ್ರಕಾರ ಒಂದು ಕೈಕೆಲಸ ಕಲಿತು ಗುಡಾರ ಮಾಡುವವನಾಗಿದ್ದನು*.) ಮತ್ತು ಆ ಕಾಲದಲ್ಲಿ ಯೆರೂಸಲೇಮಿನಲ್ಲಿರುವ ಸಭೆಗೆ ದೊಡ್ಡ ಹಿಂಸೆಯಾಯಿತು. ಅಪೊಸ್ತಲರ ಹೊರತು ಮಿಕ್ಕಾದವರೆಲ್ಲರು ಯೆಹೂದ್ಯ ಸಮಾರ್ಯ ದೇಶಗಳಲ್ಲಿ ಚದರಿ ಹೋದರು. ಆದರೆ ಸೌಲನು ಮನೆ ಮನೆಗಳಲ್ಲಿ ಹೊಕ್ಕು, ಗಂಡಸರನ್ನೂ ಹೆಂಗಸರನ್ನೂ ಯೆಳದು, ಸೆರೆಯಲ್ಲಿ ಒಪ್ಪಿಸಿ ಕೊಟ್ಟು, ಸಭೆಯನ್ನು ಹಾಳು ಮಾಡಿದನು. ಆದದರಿಂದ ಚದರಿ ಹೋದವರು ವಾಕ್ಯವನ್ನು ಪ್ರಸಂಗಿಸುತ್ತಾ ಅಲ್ಲಲ್ಲಿಗೆ ಹೋದರು. ಆಗ ಆ ಯೇಳ್ವರಲ್ಲಿ ಒಬ್ಬನಾದ ಸುವಾರ್ತಿಕನಾಗಿರುವ ಫಿಲಿಪ್ಪನು (ಅಪ್. ಕ್ರಿ. ೨೧, ೮.) ಸಮಾರ್ಯ ಪಟ್ಟಣಕ್ಕೆ ಇಳಿದು ಹೋಗಿ, ಅವರಿಗೆ ಕ್ರಿಸ್ತನನ್ನು ಸಾರಿದನು. ಮತ್ತು ಸಮೂಹಗಳು ಫಿಲಿಪ್ಪನು ಮಾಡಿದ ಗುರುತುಗಳನ್ನು ಕೇಳಿ ನೋಡಿ, ಅವನು ಹೇಳಿದವುಗಳಿಗೆ ಯೇಕ ಮನಸ್ಸಾಗಿ ಕಿವಿ ಕೊಟ್ಟರು;

* ಫಿಲ್. ೩, ೫. ಅಪ್. ಕ್ರಿ. ೨೨, ೩. ೨೮. ೧೮, ೩.

ಯಾಕಂದರೆ ಅನೇಕರಲ್ಲಿರುವ ಅಶುದ್ಧಾತ್ಮಗಳು ಮಹಾ ಶಬ್ದದಿಂದ ಕೂಗಿ ಹೊರಟು ಬಂದವು, ಮತ್ತು ಅನೇಕ ಪಕ್ಷವಾಯುವಿನವರೂ ಕುಂಟರೂ ಸ್ವಸ್ಥ ಮಾಡಲ್ಪಟ್ಟರು; ಮತ್ತು ಆ ಪಟ್ಟಣದಲ್ಲಿ ಮಹಾ ಸಂತೋಷ ಉಂಟಾಯಿತು. — ಆದರೆ ಸೀಮೋನನೆಂಬ ಒಬ್ಬ ಮನುಷ್ಯನು ಮಂತ್ರ ನಡಿಸುವವನಾಗಿಯೂ, ತನ್ನನ್ನು ದೊಡ್ಡವನೆಂದು ಹೇಳಿಕೊಂಡು, ಸಮಾರ್ಯ ಜನಾಂಗವನ್ನು ಭ್ರಮೆಗೊಳಿಸುವವನಾಗಿಯೂ ಆ ಪಟ್ಟಣದಲ್ಲಿ ಇದ್ದನು; ಮತ್ತು ಹಿರಿಕಿರಿಯರೆಲ್ಲರು ಅವನ ಮೇಲೆ ಮನಸ್ಸಿಟ್ಟರು. ಆದರೆ ಗಂಡಸರೂ ಹೆಂಗಸರೂ ದೇವರ ರಾಜ್ಯವನ್ನೂ ಯೇಸು ಕ್ರಿಸ್ತನ ಹೆಸರನ್ನೂ ಕುರಿತವುಗಳನ್ನು ಪ್ರಸಂಗಿಸುವ ಫಿಲಿಪ್ಪನನ್ನು ವಿಶ್ವಾಸಿಸಿದಾಗ, ಸ್ನಾನ ಹೊಂದಿದರು. ಆಗ ಸೀಮೋನನು ತಾನೇ ವಿಶ್ವಾಸಿಸಿ, ಸ್ನಾನ ಹೊಂದಿ, ಫಿಲಿಪ್ಪನನ್ನು ಬಿಡದೆ, ಗುರುತುಗಳೂ ಮಹಾ ಬಲವಾದ ಕ್ರಿಯೆಗಳೂ ಉಂಟಾಗುವದನ್ನು ನೋಡಿ ಭ್ರಮೆಗೊಂಡನು. ಆದರೆ ಸಮಾರ್ಯವು ದೇವರ ವಾಕ್ಯವನ್ನು ಅಂಗೀಕರಿಸಿತೆಂದು ಯೆರೂಸಲೇಮಿನಲ್ಲಿರುವ ಅಪೊಸ್ತಲರು ಕೇಳಿ, ಪೇತ್ರನನ್ನೂ ಯೋಹಾನನನ್ನೂ ಅವರ ಬಳಿಗೆ ಕಳುಹಿಸಿದರು. ಇವರು ಇಳಿದು ಹೋಗಿ, ಅವರು ಪರಿಶುದ್ಧಾತ್ಮವನ್ನು ಹೊಂದ ಬೇಕೆಂದು ಅವರಿಗೋಸ್ಕರ ಪ್ರಾರ್ಥಿಸಿದರು; ಆಗ ಅವರ ಮೇಲೆ ಕೈಗಳನ್ನು ಇಟ್ಟಾಗ, ಪರಿಶುದ್ಧಾತ್ಮವನ್ನು ಹೊಂದಿದರು. ಅಪೊಸ್ತಲರ ಕೈಯಿಡುವಿಕೆಯಿಂದ ಪರಿಶುದ್ಧಾತ್ಮವು ಕೊಡಲ್ಪಡುತ್ತದೆ ಯೆಂದು ಸೀಮೋನನು ನೋಡಿ, ಅವರಿಗೆ ಹಣ ತಂದು, — ನಾನು ಯಾವನ ಮೇಲೆ ಕೈಗಳನ್ನು ಇಡುತ್ತೇನೋ, ಅವನು ಪರಿಶುದ್ಧಾತ್ಮವನ್ನು ಹೊಂದುವ ಹಾಗೆ ನನಗೂ ಈ ಅಧಿಕಾರ ಕೊಡಿರಿ! ಅಂದನು. ಆದರೆ ಪೇತ್ರನು ಅವನಿಗೆ ಹೇಳಿದ್ದು, — ದೇವರ ವರವನ್ನು ಹಣದಿಂದ ಕೊಂಡುಕೊಳ್ಳ ಬಹುದೆಂದು ನೀನು ನೆನಸಿದ ಕಾರಣ, ನಿನ್ನ ಬೆಳ್ಳಿಯು ನಿನ್ನ ಸಂಗಡ ನಾಶವಾಗಲಿ! ಈ ಕಾರ್ಯದಲ್ಲಿ ನಿನಗೆ ಪಾಲು ಇಲ್ಲಾ, ಯಾಕಂದರೆ ನಿನ್ನ ಹೃದಯವು ದೇವರ ಮುಂದೆ ನೆಟ್ಟಗಲ್ಲಾ; ಆದದರಿಂದ ಈ ಕೆಟ್ಟತನವನ್ನು ಬಿಟ್ಟು, ಮಾನಸಾಂತರ ಪಟ್ಟು, ನಿನ್ನ ಹೃದಯದ ಯೋಚನೆಯು ನಿನಗೆ ಮನ್ನಿಸಲ್ಪಟ್ಟೀತೇ

ನೋ! ಬೇಡಿಕೋ! — ಮತ್ತು ಅವರು ಕರ್ತನ ವಾಕ್ಯವನ್ನು ಸಾಕ್ಷಿ ಹೇಳಿದ ಮೇಲೆ, ಯೆರೂಸಲೇಮಿಗೆ ತಿರಿಗಿ ಬರುವಾಗ, ಸಮಾರ್ಯರ ಅನೇಕ ಗ್ರಾಮಗಳಲ್ಲಿ ಸುವಾರ್ತೆ ಪ್ರಸಂಗಿಸಿದರು.

ಮತ್ತು ಕರ್ತನ ದೂತನು ಫಿಲಿಪ್ಪನ ಸಂಗಡ ಮಾತಾಡಿ ಹೇಳಿದ್ದೇನಂದರೆ, — ನೀನು ಯೆದ್ದು, ಯೆರೂಸಲೇಮಿನಿಂದ ಗಾಜಕ್ಕೆ ಇಳಿದು ಹೋಗುವ ಮಾರ್ಗವಾದ ತೆಂಕಣ ಕಡೆಗೆ ಹೊರಟು ಹೋಗು! ಅವನು ಯೆದ್ದು ಹೊರಟನು. ಆಗ ಇಗೋ, ಐಥಿಯೋಪ್ಯನಾದ ನಪುಂಸಕನೂ, ಐಥಿಯೋಪ್ಯದ ರಾಣಿಯಾದ ಕಂದಾಕೆಯ ಪ್ರಭುವೂ, ಅವರ ಸಮಸ್ತ ಬೊಕ್ಕಸದ ಮೇಲೆ ಅಧಿಕಾರಿಯೂ ಆಗಿರುವ ದೊಡ್ಡ ಮನುಷ್ಯನು. ಅವನು ಆರಾಧನೆಗೋಸ್ಕರ ಯೆರೂಸಲೇಮಿಗೆ ಬಂದು, ತಿರಿಗಿ ಹೋಗಿ ತನ್ನ ರಥದ ಮೇಲೆ ಕೂತುಕೊಂಡು, ಪ್ರವಾದಿಯಾದ ಯೆಶಾಯನ ಪುಸ್ತಕ ಓದುತ್ತಾ ಇದ್ದನು. ಆಗ ಆತ್ಮವು ಫಿಲಿಪ್ಪನಿಗೆ, — ಹತ್ತರ ಹೋಗಿ, ಆ ರಥಕ್ಕೆ ಕೂಡಿಕೋ! ಯೆಂದು ಹೇಳಿತು. ಫಿಲಿಪ್ಪನು ಹತ್ತರಕ್ಕೆ ಓಡಿ, ಅವನು ಪ್ರವಾದಿಯಾದ ಯೆಶಾಯನ ಪುಸ್ತಕ ಓದುವದನ್ನು ಕೇಳಿ, — ಓದುವವುಗಳನ್ನು ತಿಳಕೊಳ್ಳುತ್ತೀಯೋ? ಅಂದನು. ಅದಕ್ಕೆ ಅವನು, — ಒಬ್ಬನು ನನಗೆ ಉಪದೇಶಿಸಿದ ಹೊರತು ಹ್ಯಾಗೆ ತಿಳಕೊಂಡೇನು? ಯೆಂದು ಹೇಳಿ, — ನೀನು ಯೇರಿ ನನ್ನ ಸಂಗಡ ಕೂತ್ರಬೇಕು, ಯೆಂದು ಫಿಲಿಪ್ಪನನ್ನು ಬೇಡಿಕೊಂಡನು. ಅವನು ಓದುತ್ತಿದ್ದ ಬರಹದ ವಚನವೇನಂದರೆ, — ಕುರಿಯ ಹಾಗೆ ಅವನು ಕೊಲ್ಲಲ್ಪಡುವದಕ್ಕೆ ನಡಿಸಲ್ಪಟ್ಟನು; ಕತ್ತರಿಸುವವನ ಮುಂದೆ ನಿಶ್ಶಬ್ದವಾಗಿರುವ ಕುರಿಮರಿಯ ಹಾಗೆ ತನ್ನ ಬಾಯಿಯನ್ನು ತೆರಿಯುವದಿಲ್ಲಾ. (ಯೆಶ್. ೫೩, ೭.) ಆಗ ನಪುಂಸಕನು ಫಿಲಿಪ್ಪನಿಗೆ ಪ್ರತ್ಯುತ್ತರವಾಗಿ, — ಪ್ರವಾದಿಯು ಯಾರ ವಿಷಯವಾಗಿ ಇದನ್ನು ಹೇಳುತ್ತಾನೆ? ತನ್ನ ವಿಷಯವಾಗಿಯೋ, ಬೇರೊಬ್ಬನ ವಿಷಯವಾಗಿಯೋ? ದಯ ಮಾಡಿ ಹೇಳ ಬೇಕು, ಅಂದನು. ಆಗ ಫಿಲಿಪ್ಪನು ತನ್ನ ಬಾಯಿ ತೆರದು, ಆ ಬರಹದಿಂದ ಆರಂಭ ಮಾಡಿ, ಅವನಿಗೆ ಯೇಸುವನ್ನು ಪ್ರಸಂಗಿಸಿದನು. ಅವರು ಮಾರ್ಗದಲ್ಲಿ ಹೋಗುತ್ತಿರಲಾಗಿ, ನೀರಿನ ಬಳಿಗೆ ಬಂ

ದರು. ಆಗ ನಪುಂಸಕನು,—ಇಗೋ ನೀರು; ನಾನು ಸ್ನಾನ ಹೊಂದುವದಕ್ಕೆ ಅಡ್ಡಿ ಯೇನು? ಅಂದನು. ಫಿಲಿಪ್ಪನು,—ನೀನು ಪೂರ್ಣ ಹೃದಯದಿಂದ ವಿಶ್ವಾಸಿಸಿದರೆ ಆಗ ಬಹುದು, ಅನ್ನಲು,—ಯೇಸುಕ್ರಿಸ್ತನು ದೇವರ ಮಗನಾಗಿದ್ದಾನೆಂದು ವಿಶ್ವಾಸಿಸುತ್ತೇನೆ, ಯೆಂಬದಾಗಿ ಅವನು ಪ್ರತ್ಯುತ್ತರ ಹೇಳಿ, ರಥ ನಿಲ್ಲಿಸ ಅಪ್ಪಣೆ ಕೊಟ್ಟನು. ಆಗ ಇಬ್ಬರೂ ನೀರಿನಲ್ಲಿ ಇಳಿದು ಹೋದರು, ಮತ್ತು ಫಿಲಿಪ್ಪನು ಅವನಿಗೆ ಸ್ನಾನ ಕೊಟ್ಟನು. ಅವರು ನೀರಿನಿಂದ ಯೇರಿ ಬಂದಾಗ, ಕರ್ತನ ಆತ್ಮವು ಫಿಲಿಪ್ಪನನ್ನು ಯೆತ್ತಿಕೊಂಡು ಹೋಯಿತು; ನಪುಂಸಕನು ಅವನನ್ನು ಇನ್ನು ನೋಡಲಿಲ್ಲ; ಮತ್ತು ಸಂತೋಷದಿಂದ ತನ್ನ ಮಾರ್ಗವಾಗಿ ಹೋದನು. ಆದರೆ ಫಿಲಿಪ್ಪನು ಅಜೋತಿನಲ್ಲಿ ಕಾಣಲ್ಪಟ್ಟು, ಕೈಸರೈಯಕ್ಕೆ ಬರುವ ಪರಿಯಂತರ ಪಟ್ಟಣಗಳೆಲ್ಲಾ ಹಾದು ಹೋಗಿ, ಸುವಾರ್ತೆ ಪ್ರಸಂಗಿಸಿದನು.

---

೪೪. ಸೌಲನ ಸಂವರ್ತನ.

(ಅಪ್. ಕ್ರಿ. ೯, ೧—೨೦. ೨೨, ೧—೧೬. ೨೬, ೯—೧೮.)

ಮತ್ತು ಸೌಲನು ಕರ್ತನ ಶಿಷ್ಯರಿಗೆ ವಿರೋಧವಾಗಿ ಇನ್ನೂ ಬೆದರಿಕೆಯಿಂದಲೂ ಕೊಲೆಯಿಂದಲೂ ಉಸುರು ಬಿಡುತ್ತ, ಪ್ರಧಾನಯಾಜಕರಿಂದ ಅಧಿಕಾರವನ್ನು ಹೊಂದಿ, ಪರಿಶುದ್ಧರಲ್ಲಿ ಗಂಡಸರನ್ನೂ ಹೆಂಗಸರನ್ನೂ ಕಟ್ಟಿ ಹಾಕಿ, ಸೆರೆಮನೆಗಳಲ್ಲಿ ಒಪ್ಪಿಸಿ, ಅವರು ಕೊಲ್ಲಲ್ಪಡುವ ಹಾಗೆ ಸಮ್ಮತಿಸಿದನು. ಮತ್ತು ಯೆಲ್ಲಾ ಸಭೆಮನೆಗಳಲ್ಲಿ ಅನೇಕ ಸಾರಿ ಅವರನ್ನು ದಂಡಿಸಿ, ಅವರು ದೂಷಿಸುವ ಹಾಗೆ ಬಲಾತ್ಕಾರ ಮಾಡಿದನು. ಮತ್ತು ಅವರ ಮೇಲೆ ಅಧಿಕವಾಗಿ ವೈರಭ್ರಮೆಗೊಂಡು, ಪರಪಟ್ಟಣಗಳ ಪರಿಯಂತರ ಹಿಂಸಿಸಿದನು. ಹೀಗಿರಲಾಗಿ ಅವನು ಪ್ರಧಾನಯಾಜಕನ ಬಳಿಗೆ ಹೋಗಿ, ತಾನು ಆ ಮಾರ್ಗಸ್ಥರಾದ ಗಂಡಸರನ್ನೂ ಹೆಂಗಸರನ್ನೂ ಕಂಡರೆ, ಅವರನ್ನು ಕಟ್ಟಿ, ಶಿಕ್ಷಿಸುವದಕ್ಕೆ ಯೆರೂಸಲೇಮಿಗೆ ಕರಕೊಂಡು ಬರುವ ಹಾಗೆ, ದಮಸ್ಕದಲ್ಲಿರುವ (ಯೆಹೂ

ದ್ವರ) ಸಭೆಗಳಿಗೆ ಪತ್ರಿಕೆಗಳನ್ನು ಕೊಡ ಬೇಕೆಂದು, ಅವನನ್ನು ಬೇಡಿ ಕೊಂಡನು. ಕಾಗದಗಳನ್ನು ಹೊಂದಿ ದಮಸ್ಕಕ್ಕೆ ಹೊರಟು ಹೋದನು. ದಮಸ್ಕಕ್ಕೆ ಸಮೀಪಿಸುವಾಗ, ಮಧ್ಯಾಹ್ನದಲ್ಲಿ ಅವನ ಸುತ್ತಲೂ ಅವನ ಸಂಗಡ ಪ್ರಯಾಣ ಮಾಡುವವರ ಸುತ್ತಲೂ ಸೂರ್ಯನಿಗಿಂತ ಕಾಂತಿಯುಳ್ಳ ಬೆಳಕು ಥಕ್ಕನೇ ಆಕಾಶದಿಂದ ಮಿಂಚುವದನ್ನು ಮಾರ್ಗದಲ್ಲಿ ಕಂಡನು. ಅವರೆಲ್ಲರೂ ನೆಲಕ್ಕೆ ಬಿದ್ದ ಮೇಲೆ, ಅವನ ಸಂಗಡ ಮಾತಾಡಿ, ಇಬ್ರಿಯಭಾಷೆಯಲ್ಲಿ, —ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸಿಸುತ್ತೀ? ಯೆಂದು ಹೇಳುವ ಶಬ್ದವನ್ನು ಕೇಳಿದನು. ಆಗ ಅವನು, —ಕರ್ತನೇ ನೀನು ಯಾರು? ಯೆಂದು ಉತ್ತರ ಕೊಡಲಾಗಿ, ಕರ್ತನು ಅವನಿಗೆ, —ನಾನು ನೀನು ಹಿಂಸಿಸುವ ನಜರೇತಿನವನಾದ ಯೇಸುವೆ! ಮುಳ್ಳುಗಳ ಮೇಲೆ ಒದೆಯುವದು ನಿನಗೆ ಕಠಿಣವು, ಅಂದನು. ಅವನು ನಡುಗಿ, ಭ್ರಮಿಸಿ, —ಕರ್ತನೇ, ನಾನು ಯೇನು ಮಾಡ ಇಚ್ಛೆಯಿಸುತ್ತೀ? ಅನ್ನಲು, ಕರ್ತನು ಅವನಿಗೆ, —ನೀನು ಯೆದ್ದು ಪಟ್ಟಣದಲ್ಲಿ ಪ್ರವೇಶಿಸು! ಅಲ್ಲಿ ನೀನು ಮಾಡ ಬೇಕಾದದ್ದು ನಿನಗೆ ಹೇಳಲ್ಪಡುವದು, ಅಂದನು. ಅವನ ಸಂಗಡ ಇದ್ದವರು ಬೆಳಕನ್ನು ನೋಡಿ, ಶಬ್ದವನ್ನು ಕೇಳಿ, ಯಾರನ್ನೂ ನೋಡದೆ, ಭಯಸ್ಥರಾಗಿಯೂ ಮೂಕರಾಗಿಯೂ ನಿಂತರು; ಆದರೆ ಅವನ ಸಂಗಡ ಮಾತಾಡುವವನ ಮಾತುಗಳನ್ನು ಕೇಳಲಿಲ್ಲ. ಸೌಲನು ನೆಲದಿಂದ ಯೆದ್ದು ತನ್ನ ಕಣ್ಣುಗಳನ್ನು ತೆರೆಯುವಾಗ, ಆ ಬೆಳಕಿನ ಮಹಿಮೆಯಿಂದ ಕಣ್ಣು ಕಾಣದೆ ಯಾರನ್ನೂ ನೋಡಲಿಲ್ಲ. ಆಗ ಅವರ ಸಂಗಡ ಇದ್ದವರು ಅವನನ್ನು ಕೈಹಿಡಿದು, ನಡಿಸಿ, ದಮಸ್ಕಕ್ಕೆ ಕರಕೊಂಡು ಬಂದರು. ಮತ್ತು ಅವನು ಮೂರು ದಿವಸ ಕಣ್ಣು ಕಾಣದೆ, ಉಣ್ಣಲಿಲ್ಲ ಕುಡಿಯಲಿಲ್ಲ. ಆದರೆ ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು. ಅವನು ಯೆಹೂದ್ಯರೆಲ್ಲರಿಂದ ಸಾಕ್ಷಿಗೊಂಡ, ನ್ಯಾಯಪ್ರಮಾಣದ ಪ್ರಕಾರ ಭಕ್ತಿಯುಳ್ಳವನಾಗಿದ್ದನು. ಅವನಿಗೆ ಕರ್ತನು ದರ್ಶನದಲ್ಲಿ, —ಅನನೀಯನೇ! ಯೆಂದು ಕರದನು. ಅವನು, —ಇಗೋ ಇದ್ದೇನೆ, ಕರ್ತನೇ! ಅನ್ನಲಾಗಿ, ಕರ್ತನು ಅವನಿಗೆ ಹೇಳಿದ್ದು, —ನೀನು ಯೆದ್ದು ನೆಟ್ಟಾನ ಬೀದಿ ಯೆಂಬ ಬೀದಿಗೆ ಹೋಗಿ, ಯೂದನ

ಮನೆಯಲ್ಲಿ ತಾರ್ಸದವನಾದ ಸೌಲನನ್ನು ಹುಡುಕು; ಯಾಕಂದರೆ ಇಗೋ, ಪ್ರಾರ್ಥಿಸುತ್ತಾನೆ; ಮತ್ತು ದರ್ಶನದಲ್ಲಿ ಅನನೀಯನೆಂಬ ಒಬ್ಬ ಮನುಷ್ಯನು ಪ್ರವೇಶಿಸಿ, ತಾನು ದೃಷ್ಟಿಯನ್ನು ಹೊಂದುವ ಹಾಗೆ ತನ್ನ ಮೇಲೆ ಕೈಇಟ್ಟದ್ದನ್ನು ಕಂಡಿದ್ದಾನೆ. ಆಗ ಅನನೀಯನು ಪ್ರತ್ಯುತ್ತರವಾಗಿ, —ಕರ್ತನೇ, ಈ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನ ಪರಿಶುದ್ಧರಿಗೆ ಬಹಳ ಕೇಡು ಮಾಡಿದ್ದಾನೆಂದು, ಅನೇಕರಿಂದ ಕೇಳಿದ್ದೇನೆ; ಮತ್ತು ಇಲ್ಲಿ ನಿನ್ನ ಹೆಸರನ್ನು ಕರಿಯುವವರೆಲ್ಲರನ್ನು ಕಟ್ಟುವದಕ್ಕೆ ಪ್ರಧಾನಯಾಜಕರಿಂದ ಅವನಿಗೆ ಅಧಿಕಾರ ಉಂಟು, ಅಂದನು. ಆಗ ಕರ್ತನು ಅವನಿಗೆ ಹೇಳಿದ್ದು, —ನೀನು ಹೋಗು, ಯಾಕಂದರೆ ಇವನು ಜನಾಂಗಗಳ ಮುಂದೆಯೂ ಅರಸರ ಮುಂದೆಯೂ ಇಸ್ರಾಯೇಲನ ಮಕ್ಕಳ ಮುಂದೆಯೂ ನನ್ನ ಹೆಸರನ್ನು ಯೆತ್ತುವದಕ್ಕೆ ನನಗೆ ಆಯಲ್ಪಟ್ಟ ಪಾತ್ರೆಯಾಗಿದ್ದಾನೆ; ಮತ್ತು ಅವನು ನನ್ನ ನಾಮಕ್ಕೋಸ್ಕರ ಯೆಷ್ಟು ಶ್ರಮೆ ಪಡಬೇಕೆಂದು ಅವನಿಗೆ ತೋರಿಸುವೆನು. ಆಗ ಅನನೀಯನು ಹೊರಟು ಹೋಗಿ, ಆ ಮನೆಯಲ್ಲಿ ಪ್ರವೇಶಿಸಿ, ಅವನ ಬಳಿಗೆ ಬಂದು, ನಿಂತುಕೊಂಡು, ಅವನ ಮೇಲೆ ಕೈಗಳನ್ನಿಟ್ಟು, ಅವನಿಗೆ, —ಸಹೋದರನಾದ ಸೌಲನೇ, ಮೇಲೆ ನೋಡು! ನೀನು ಬಂದ ಮಾರ್ಗದಲ್ಲಿ ನಿನಗೆ ಪ್ರತ್ಯಕ್ಷವಾದ ಯೇಸುವೆಂಬ ಕರ್ತನು, ನೀನು ನೋಡುವ ಹಾಗೆಯೂ ಪರಿಶುದ್ಧಾತ್ಮದಿಂದ ತುಂಬಿಸಲ್ಪಡುವ ಹಾಗೆಯೂ ನನ್ನನ್ನು ಕಳುಹಿಸಿದ್ದಾನೆ, ಅಂದನು. ಸಂಗಡಲೇ ಶಿಪ್ಪುಗಳ ಹಾಗೆ ಇರುವವುಗಳು ಅವನ ಕಣ್ಣುಗಳಿಂದ ಬಿದ್ದವು; ಅವನು ಕ್ಷಣದಲ್ಲಿ ದೃಷ್ಟಿಯನ್ನು ಹೊಂದಿ, ಅನನೀಯನ ಮೇಲೆ ಕಣ್ಣಿಟ್ಟನು. ಮತ್ತು ಇವನು ಹೇಳಿದ್ದು, —ನಮ್ಮ ಪಿತೃಗಳ ದೇವರು ತನ್ನ ಚಿತ್ತವನ್ನು ತಿಳಿಯುವದಕ್ಕೂ, ಆ ನೀತಿವಂತನನ್ನು ನೋಡುವದಕ್ಕೂ, ಆತನ ಬಾಯಿಯೊಳಗಿಂದ ಶಬ್ದವನ್ನು ಕೇಳುವದಕ್ಕೂ ನಿನ್ನನ್ನು ಮುನ್ನೇಮಿಸಿದ್ದಾನೆ; ಯಾಕಂದರೆ ಆತನಿಗೆ ಸಾಕ್ಷಿಯಾಗಿ ನೀನು ನೋಡಿ, ಕೇಳಿದವುಗಳನ್ನು ಸಮಸ್ತ ಮನುಷ್ಯರಿಗೆ ಹೇಳ ಬೇಕು; ಈಗ ಯಾಕೆ ತಡ ಮಾಡುತ್ತೀ? ಯೆದ್ದು ಸ್ನಾನ ಹೊಂದಿ, ಕರ್ತನ ಹೆಸರನ್ನು ಕರದು, ನಿನ್ನ ಪಾಪಗಳನ್ನು ತೊಳದು ಬಿಡು! ಆಗ ಸೌಲನು ಯೆದ್ದು, ಸ್ನಾನ

ಹೊಂದಿ, ಊಟ ಮಾಡಿ, ಬಲಗೊಂಡನು; ಮತ್ತು ಅವನು ದಮಸ್ಕದಲ್ಲಿರುವ ಶಿಷ್ಯರ ಸಂಗಡ ಕೆಲವು ದಿವಸಗಳು ಇದ್ದನು. ಮತ್ತು ಸಂಗಡಲೇ ಸಭೆಮನೆಗಳಲ್ಲಿ ಕ್ರಿಸ್ತನನ್ನು, ಈತನು ದೇವರ ಮಗನೆಂದು ಸಾರಿದನು. ಆದರೆ ಕೇಳುವವರೆಲ್ಲರು ಭ್ರಮೆಗೊಂಡು,—ಈ ಹೆಸರನ್ನು ಕರೆಯುವವರನ್ನು ಯೆರೂಸಲೇಮಿನಲ್ಲಿ ಹಾಳು ಮಾಡಿ, ಇಲ್ಲಿಯೂ ಅಂಥವರನ್ನು ಕಟ್ಟಿ, ಪ್ರಧಾನಯಾಜಕರ ಹತ್ತರ ಒಯ್ಯುವದಕ್ಕೋಸ್ಕರವೇ ಬಂದವನು ಇವನೇ ಅಲ್ಲವೋ? ಯೆಂದು ಹೇಳಿದರು. ಆದರೆ ಸೌಲನು ಹೆಚ್ಚು ಬಲಗೊಂಡು, ಈತನೇ ಕ್ರಿಸ್ತನೆಂದು ಸ್ಥಾಪಿಸಿ, ದಮಸ್ಕದಲ್ಲಿರುವ ಯೆಹೂದ್ಯರನ್ನು ಭಂಗಪಡಿಸಿದನು. ಬಹು ದಿವಸಗಳಾದ ಮೇಲೆ ಯೆಹೂದ್ಯರು ಅವನನ್ನು ಕೊಲ್ಲುವದಕ್ಕೆ ಆಲೋಚನೆ ಮಾಡಿದರು; ಆದರೆ ಅವರ ಆಲೋಚನೆಯು ಸೌಲನಿಗೆ ತಿಳಿಯ ಬಂತು. ಇದಲ್ಲದೆ ಅವರು ಅವನನ್ನು ಕೊಲ್ಲ ಬೇಕೆಂದು ಪಟ್ಣದ ಬಾಗಲುಗಳನ್ನು ರಾತ್ರೆ ಹಗಲು ಜಾಗ್ರತೆಯಾಗಿ ಕಾಯುತ್ತಿದ್ದರು. ಆಗ ಶಿಷ್ಯರು ರಾತ್ರೆಯಲ್ಲಿ ಅವನನ್ನು ಕರಕೊಂಡು ಹೋಗಿ, ಪುಟ್ಟಿಯಲ್ಲಿ ಇಟ್ಟು, ಗೋಡೆಯಿಂದ ಇಳಿಸಿದರು. ಆಮೇಲೆ ಸೌಲನು ಯೆರೂಸಲೇಮಿಗೆ ಬಂದು, ಶಿಷ್ಯರಲ್ಲಿ ಸೇರ ಬೇಕೆಂದು ಪ್ರಯತ್ನಮಾಡುವಾಗ, ಅವರೆಲ್ಲರೂ ಅವನು ಶಿಷ್ಯನೆಂದು ನಂಬದೆ, ಅವನಿಗೆ ಭಯಪಟ್ಟರು. ಆದರೆ ಬರ್ನಬನು ಅವನನ್ನು ಕೈಹಿಡಿದು, ಅಪೊಸ್ತಲರ ಬಳಿಗೆ ಕರಕೊಂಡು ಬಂದು, ಅವನು ಮಾರ್ಗದಲ್ಲಿ ಕರ್ತನನ್ನು ಕಂಡದ್ದನ್ನೂ, ಕರ್ತನು ಅವನ ಸಂಗಡ ಮಾತಾಡಿದ್ದನ್ನೂ, ದಮಸ್ಕದಲ್ಲಿ ಯೇಸುವಿನ ಹೆಸರಿನಲ್ಲಿ ಧೈರ್ಯವಾಗಿ ಪ್ರಸಂಗಿಸಿದ್ದನ್ನೂ ಅವರಿಗೆ ತಿಳಿಸಿದನು. ಆಗಲವನು ಯೆರೂಸಲೇಮಿನಲ್ಲಿ ಅವರ ಸಂಗಡ ಬರುತ್ತಾ ಹೋಗುತ್ತಾ, ಕರ್ತನಾದ ಯೇಸುವಿನ ಹೆಸರಿನಲ್ಲಿ ಧೈರ್ಯವಾಗಿ ಪ್ರಸಂಗಿಸಿದನು. ಮತ್ತು ಕೆಲವರು ಅವನನ್ನು ಕೊಲ್ಲುವದಕ್ಕೆ ಪ್ರಯತ್ನಮಾಡಿದರು. ಆದರೆ ಅವನು ದೇವಾಲಯದಲ್ಲಿ ಪ್ರಾರ್ಥಿಸುವಾಗ ಆದದ್ದೇನಂದರೆ, ಅವನು ಪರವಶವಾಗಿ, ಕರ್ತನು,—ನೀನು ತ್ವರೆ ಪಟ್ಟು, ಶೀಘ್ರವಾಗಿ ಯೆರೂಸಲೇಮಿನಿಂದ ಹೊರಟು ಹೋಗು! ಯಾಕಂದರೆ ನೀನು ನನಗೋಸ್ಕರ ಕೊಡುವ ಸಾಕ್ಷಿಯ

ನ್ನು ಅವರು ಹೊಂದರು, ಯೆಂದು ಅವನಿಗೆ ಹೇಳುವದನ್ನು ಕಂಡನು. ಆಗ ಅವನು,—ಕರ್ತನೇ, ನಿಂನಲ್ಲಿ ವಿಶ್ವಾಸ ಇಡುವವರನ್ನು ಯೆಲ್ಲಾ ಸಭೆಮನೆಗಳಲ್ಲಿ ಸೆರೆಹಿಡಿದು, ಹೊಡಿಸಿ, ಮತ್ತು ನಿನ್ನ ಸಾಕ್ಷಿಯಾದ ಸ್ತೆಫನನ ರಕ್ತವು ಚೆಲ್ಲಲ್ಪಡುವಾಗ, ನಾನು ಹತ್ತರ ನಿಂತುಕೊಂಡು, ಅವನನ್ನು ತೆಗದು ಹಾಕುವದಕ್ಕೆ ಸಮ್ಮತಿ ಪಟ್ಟು, ಅವನನ್ನು ಕೊಲ್ಲುವವರ ವಸ್ತ್ರಗಳನ್ನು ಕಾಯುತ್ತಾ ಇದ್ದದನ್ನು ಬಲ್ಲರು, ಅಂದನು. ಆಗ ಕರ್ತನು ಅವನಿಗೆ ಹೇಳಿದ್ದು,—ಹೋಗು, ನಿನ್ನನ್ನು ಜನಾಂಗಗಳ ಬಳಿಗೆ ದೂರ ಕಳುಹಿಸುವೆನು; ಯಾಕಂದರೆ ಪಾಪಪರಿಹಾರವನ್ನೂ, ನಂನಲ್ಲಿ ವಿಶ್ವಾಸ ಇಡುವವರಲ್ಲಿ ಪರಿಶುದ್ಧವಾದ ಬಾಧ್ಯತೆಯನ್ನೂ ಹೊಂದುವದಕ್ಕೋಸ್ಕರ ಅವರ ಕಣ್ಣುಗಳನ್ನು ತೆರದು, ಅವರನ್ನು ಕತ್ತಲೆಯೊಳಗಿಂದ ಬೆಳಕಿಗೂ ಸೈತಾನನ ಅಧಿಕಾರದೊಳಗಿಂದ ದೇವರಕಡೆಗೂ ತಿರುಗಿಸುವದಕ್ಕೆ ನಿನ್ನನ್ನು ತಪ್ಪಿಸಿ, ನೀನು ನೋಡಿದವುಗಳಿಗೂ, ನಾನು ಕಾಣಿಸಿ ಕೊಂಡು ಪ್ರತ್ಯಕ್ಷವಾಗಿ ನಿನಗೆ ತಿಳಿಸುವದಕ್ಕಿರುವ ಕಾರ್ಯಗಳಿಗೂ ಸಾಕ್ಷಿಯಾಗಿಯೂ ಊಳಿಗದವನಾಗಿಯೂ ನಿನ್ನನ್ನು ಮುನ್ನೇಮಿಸ ಬೇಕೆಂದು ನಿನಗೆ ಪ್ರತ್ಯಕ್ಷವಾಗಿದ್ದೇನೆ.—ಮತ್ತು ಸಹೋದರರು ಪೌಲನನ್ನು ಕೈಸರೈಯಕ್ಕೆ ಕರಕೊಂಡು ಹೋಗಿ, ತಾರ್ಸಕ್ಕೆ ಕಳುಹಿಸಿದರು.

---

೪೫. ಪೇತ್ರನು ಮಾಡಿದ ಸಂಚಾರ. ಐನೆಯನು. ತಬೀಥಳು. ಶತಾಧಿಪತಿಯಾದ ಕೊರ್ನೇಲ್ಯನು.

(ಅಪೊ.ಕ್ರಿ. ೯, ೩೧—೪೩. ೧೦, ೧—೪೮.)

ಹೀಗಿರುವದರಿಂದ ಸಮಸ್ತ ಯೆಹೂದ ಗಲಿಲಾಯ ಸಮಾರ್ಯಗಳಲ್ಲಿ ಇರುವ ಸಭೆಗಳು ಸಮಾಧಾನವಾಗಿದ್ದು, ಕಟ್ಟಲ್ಪಟ್ಟು, ದೇವರ ಭಯದಲ್ಲಿಯೂ ಪರಿಶುದ್ಧಾತ್ಮದ ಆದರಣೆಯಲ್ಲಿಯೂ ನಡಕೊಂಡು ಅಭಿವೃದ್ಧಿಯಾದವು. ಮತ್ತು ಪೇತ್ರನು ಯೆಲ್ಲಾ ಕಡೆ ಸಂಚಾರ ಮಾಡುತ್ತಿರಲಾಗಿ, ಲುದ್ದದಲ್ಲಿ ವಾಸವಾಗಿರುವ ಪರಿಶುದ್ಧರ ಬಳಿಗೆ ಬಂದನು. ಅಲ್ಲಿ ಅವನು ಪಕ್ಷವಾಯು

ರೋಗದವನೂ, ಯೆಂಟು ವರುಷಗಳಿಂದ ಮಂಚದ ಮೇಲೆ ಬಿದ್ದವನೂ ಆದ ಐನೆಯನೆಂಬ ವೊಬ್ಬ ಮನುಷ್ಯನನ್ನು ಕಂಡನು. ಅವನಿಗೆ ಪೇತ್ರನು,—ಐನೆಯನೇ, ಕ್ರಿಸ್ತನಾದ ಯೇಸು ನಿನ್ನನ್ನು ಸ್ವಸ್ಥ ಮಾಡುತ್ತಾನೆ; ಯೆದ್ದು, ನಿನ್ನ ಹಾಸಿಗೆಯನ್ನು ಹಾಸಿಕೋ! ಅಂದನು. ಸಂಗಡಲೇ ಯೆದ್ದನು, ಮತ್ತು ಅಲ್ಲಿ ವಾಸವಾಗಿರುವವರೆಲ್ಲರೂ ಅವನನ್ನು ನೋಡಿ, ಕರ್ತನ ಕಡೆಗೆ ತಿರುಗಿ ಕೊಂಡರು.

ಇದಲ್ಲದೆ ಯೊಪ್ಪದಲ್ಲಿ ದೋರ್ಕಳೆಂಬ ಅರ್ಥವುಳ್ಳ ತಬೀಥಳೆಂಬ ಹೆಸರುಳ್ಳ ವೊಬ್ಬ ಶಿಷ್ಯಳು ಇದ್ದಳು. ಅವಳು ಮಾಡಿದ ಒಳ್ಳೇ ಕ್ರಿಯೆಗಳಿಂದಲೂ ಧರ್ಮಗಳಿಂದಲೂ ತುಂಬಿದವಳಾಗಿದ್ದಳು. ಅವಳು ಆ ದಿನಗಳಲ್ಲಿ ರೋಗದಲ್ಲಿ ಬಿದ್ದು ಸತ್ತಳು. ಆಗ ಅವಳನ್ನು ತೊಳೆದು ಮೇಲ್ಮಾಳಿಗೆಯಲ್ಲಿ ಇಟ್ಟರು. ಆದರೆ ಲುದ್ದವು ಯೊಪ್ಪಕ್ಕೆ ಸಮೀಪವಾಗಿರುವದರಿಂದ, ಶಿಷ್ಯರು ಪೇತ್ರನು ಅಲ್ಲಿದ್ದಾನೆಂದು ಕೇಳಿ, ಇಬ್ಬರನ್ನು ಅವನ ಬಳಿಗೆ ಕಳುಹಿಸಿ, ತಡ ಮಾಡದೆ ತಮ್ಮ ಬಳಿಗೆ ಬರ ಬೇಕೆಂದು ಬೇಡಿಕೊಂಡರು. ಆಗ ಪೇತ್ರನು ಯೆದ್ದು, ಅವರ ಸಂಗಡ ಬಂದನು. ಬಂದಾಗ ಅವನನ್ನು ಮೇಲ್ಮಾಳಿಗೆಗೆ ಕರಕೊಂಡು ಹೋದರು. ಮತ್ತು ವಿಧವೆಯರೆಲ್ಲರು ಅಳುತ್ತಾ, ದೋರ್ಕಳು ತಮ್ಮ ಸಂಗಡ ಇದ್ದಾಗ ಮಾಡಿದ ವಸ್ತ್ರಗಳನ್ನೂ ಅಂಗಿಗಳನ್ನೂ ತೋರಿಸುತ್ತಾ, ಅವನ ಹತ್ತಿರ ನಿಂತು ಕೊಂಡರು. ಆದರೆ ಪೇತ್ರನು ಯೆಲ್ಲರನ್ನು ಹೊರಗೆ ಹಾಕಿ, ಮೊಣಕಾಲೂರಿ ಪ್ರಾರ್ಥಿಸಿದನು. ಮತ್ತು ಶರೀರದ ಹತ್ತರ ತಿರುಗಿಕೊಂಡು,—ತಬೀಥಳೇ, ಯೇಳು! ಅಂದನು. ಆಗಲವಳು ತನ್ನ ಕಣ್ಣುಗಳನ್ನು ತೆರೆದು, ಪೇತ್ರನನ್ನು ನೋಡಿ, ಕೂತುಕೊಂಡಳು. ಅವನು ಅವಳಿಗೆ ಕೈಕೊಟ್ಟು, ಅವಳನ್ನು ಯೆಬ್ಬಿಸಿದನು. ಮತ್ತು ಪರಿಶುದ್ಧರನ್ನೂ ವಿಧವೆಯರನ್ನೂ ಕರೆದು, ಅವಳನ್ನು ಬದುಕುವವಳಾಗಿ ಅವರ ಮುಂದೆ ನಿಲ್ಲಿಸಿದನು. ಇದು ಯೊಪ್ಪದಲ್ಲೆಲ್ಲಾ ತಿಳಿಯ ಬಂದದರಿಂದ, ಅನೇಕರು ಕರ್ತನಲ್ಲಿ ವಿಶ್ವಾಸವಿಟ್ಟರು. ಮತ್ತು ಪೇತ್ರನು ಯೊಪ್ಪದಲ್ಲಿ ಸೀಮೋನನೆಂಬ ಒಬ್ಬ ತೊಗಲುಗಾರನ ಸಂಗಡ ವಾಸವಾಗಿದ್ದನು.

ಮತ್ತು ಕೈಸರೈಯದಲ್ಲಿ ಕಾರ್ನೇಲ್ಯನೆಂಬ ವೊಬ್ಬ ಮನುಷ್ಯನಿದ್ದನು. ಅವನು ಇತಾಲಿಕ ಯೆಂಬ ರಾಣುವೆಯಲ್ಲಿ ಶತಾಧಿಪತಿಯೂ, ಭಕ್ತಿಯುಳ್ಳವನೂ, ತನ್ನ ಯೆಲ್ಲಾ ಮನೆಯವರ ಸಂಗಡ ದೇವರಿಗೆ ಭಯ ಪಡುವವನೂ, ಜನರಿಗೆ ಬಹಳ ಧರ್ಮಗಳನ್ನು ಮಾಡುವವನೂ, ದೇವರನ್ನು ಯಾವಾಗಲು ಬೇಡಿಕೊಳ್ಳುವವನೂ ಆಗಿದ್ದನು. ಇವನು ಹಗಲಿನ ಹೊತ್ತುಕಡಿಮೆ ವೊಂಭತ್ತನೇ ತಾಸಿನಲ್ಲಿ ದೇವರ ದೂತನು ತನ್ನ ಹತ್ತರ ಪ್ರವೇಶಿಸಿ,—ಕಾರ್ನೇಲ್ಯನೇ! ಯೆಂದು ತನಗೆ ಕರದದ್ದನ್ನು ದರ್ಶನದಲ್ಲಿ ಪ್ರತ್ಯಕ್ಷವಾಗಿ ಕಂಡನು. ಕಾರ್ನೇಲ್ಯನು ಅವನ ಮೇಲೆ ಕಣ್ಣಿಟ್ಟು, ಭಯ ಪಟ್ಟು,—ಕರ್ತನೇ, ಯೇನು? ಅಂದನು. ದೂತನು ಅವನಿಗೆ ಹೇಳಿದ್ದು,—ನಿನ್ನ ಪ್ರಾರ್ಥನೆಗಳೂ ಧರ್ಮಗಳೂ ದೇವರ ಮುಂದೆ ಜ್ಞಾಪಕವಾಗಿ ಯೇರಿ ಬಂದವು; ಈಗ ಯೊಪ್ಪಕ್ಕೆ ಜನರನ್ನು ಕಳುಹಿಸಿ, ಪೇತ್ರನೆಂಬ ಸೀಮೋನನನ್ನು ಕರಸು; ಇವನು ತೊಗಲುಗಾರನಾದ ಸೀಮೋನನೆಂಬವನ ಸಂಗಡ ವಾಸ ಮಾಡುತ್ತಾನೆ; ಅವನ ಮನೆಯು ಸಮುದ್ರದ ಬಳಿಯಲ್ಲಿ ಅದೆ; ಅವನು ನೀನು ಮಾಡ ಬೇಕಾದದ್ದೇನೆಂದು ಹೇಳುವನು! ಕಾರ್ನೇಲ್ಯನ ಸಂಗಡ ಮಾತಾಡಿದ ದೂತನು ಹೊರಟು ಹೋದಾಗ, ಅವನು ತನ್ನ ಮನೇ ಚಾಕ್ರಿಯವರಲ್ಲಿ ಇಬ್ಬರನ್ನೂ, ತನ್ನ ಬಳಿಯ ಕಾದು ಇದ್ದ ರಾಣುವೆಯವರಲ್ಲಿ ವೊಬ್ಬ ಭಕ್ತಿಯುಳ್ಳವನನ್ನೂ ಕರದು, ಅವರಿಗೆ ಯೆಲ್ಲವನ್ನು ತಿಳಿಸಿ, ಅವರನ್ನು ಯೊಪ್ಪಕ್ಕೆ ಕಳುಹಿಸಿದನು. ಮಾರಣೇ ದಿವಸ ಅವರು ಪ್ರಯಾಣವಾಗಿ ಪಟ್ಣಕ್ಕೆ ಸಮೀಪಿಸಿದಾಗ, ಪೇತ್ರನು ಹೊತ್ತು ಕಡಿಮೆ ಆರನೇ ತಾಸಿನಲ್ಲಿ ಪ್ರಾರ್ಥನೆ ಮಾಡುವದಕ್ಕೋಸ್ಕರ ಮಾಳಿಗೆಗೆ ಯೇರಿದನು. ಆದರೆ ಅವನು ಬಹಳವಾಗಿ ಹಸಿದು, ಊಟ ಮಾಡ ಬೇಕೆಂದಿದ್ದನು. ಅವರು ಸಿದ್ಧ ಮಾಡುತ್ತಿರುವಾಗ ಅವನು ಪರವಶವಾಗಿ, ಆಕಾಶವು ತೆರದಿರುವದನ್ನೂ, ನಾಲ್ಕು ಕೊನೆ ಕಟ್ಟಿದ ದೊಡ್ಡ ದುಪ್ಪಟಿಯ ಹಾಗೆ ಆಗಿರುವಂಥಾ ಭೂಮಿಯ ಮೇಲೆ ಇಳಿಸಲ್ಪಡುವಂಥಾ ವಸ್ತುವು ತನ್ನ ಕಡೆಗೆ ಇಳಿದು ಬರುವದನ್ನೂ ನೋಡಿದನು. ಅದರೊಳಗೆ ಭೂಮಿಯ ಸಕಲ ಚತುಷ್ಪಾದಗಳೂ ಮೃಗಗಳೂ ಕ್ರಿಮಿಗಳೂ ಆಕಾಶದ ಪಕ್ಷಿಗಳೂ ಇದ್ದವು.

ಮತ್ತು,—ಪೇತ್ರನೇ, ಯೆದ್ದು, ಕೊಂದು ತಿನ್ನು! ಯೆಂಬ ಶಬ್ದವು ಅವನಿಗಾಯಿತು. ಆದರೆ ಪೇತ್ರನು,—ಕರ್ತನೇ, ಬೇಡವೇ ಬೇಡಾ! ನಾನು ಯೆಂದೂ ಹೊಲೆಯಾದದ್ದೂ ಅಶುದ್ಧವಾದದ್ದೂ ಯೇನಾದರೂ ತಿನ್ನಲಿಲ್ಲಾ, ಅಂದನು. ಮತ್ತು ಶಬ್ದವು ತಿರಿಗಿ ಯೆರಡನೇ ಸಾರಿ,—ದೇವರು ಶುದ್ಧ ಮಾಡಿದ್ದನ್ನು ನೀನು ಹೊಲೆ ಅನ್ನ ಬೇಡ! ಯೆಂದು ಅವನಿಗೆ ಹೇಳಿತು. ಇದು ಮೂರು ಸಾರಿ ಆಯಿತು. ತರುವಾಯ ಆ ವಸ್ತು ತಿರಿಗಿ ಆಕಾಶಕ್ಕೆ ಯೆತ್ತಲ್ಪಟ್ಟಿತು. ತಾನು ಕಂಡ ನೋಟವು ಯೇನೆಂದು ಪೇತ್ರನು ತನ್ನಲ್ಲಿ ಅನುಮಾನ ಪಡುತ್ತಿರುವಾಗ, ಇಗೋ, ಕೊರ್ನೇಲ್ಯನು ಕಳುಹಿಸಿದ ಜನರು ಸೀಮೋನನ ಮನೆಯನ್ನು ವಿಚಾರಿಸಿ, ಬಾಗಲಿನ ಬಳಿಯಲ್ಲಿ ನಿಂತು ಕೊಂಡು,—ಪೇತ್ರನೆಂಬ ಸೀಮೋನನು ಇಲ್ಲಿ ವಾಸವಾಗಿದ್ದಾನೋ? ಯೆಂದು ಕೂಗಿ ವಿಚಾರಿಸಿದರು. ಆದರೆ ಪೇತ್ರನು ಆ ದರ್ಶನವನ್ನು ಆಲೋಚಿಸುವಾಗ, ಆತ್ಮವು ಅವನಿಗೆ,—ಇಗೋ, ಮೂರು ಜನರು ನಿನ್ನನ್ನು ಹುಡುಕುತ್ತಾರೆ; ಆದದರಿಂದ ನೀನು ಯೆದ್ದು ಇಳಿದು, ಯೇನೂ ಸಂದೇಹ ಪಡದೆ ಅವರ ಸಂಗಡ ಹೋಗು! ಯಾಕಂದರೆ ನಾನು ಅವರನ್ನು ಕಳುಹಿಸಿದ್ದೇನೆ, ಯೆಂದು ಹೇಳಿತು. ಆಗ ಪೇತ್ರನು ಕೊರ್ನೇಲ್ಯನ ಬಳಿಯಿಂದ ಬಂದ ಜನರ ಹತ್ತರ ಇಳಿದು ಹೋಗಿ,—ಇಗೋ, ನೀವು ಹುಡುಕುವವನು ನಾನೇ! ನೀವು ಬಂದ ಕಾರಣವೇನು? ಅಂದನು. ಅವರು,—ಶತಾಧಿಪತಿಯಾದ ಕೊರ್ನೇಲ್ಯನು ನಿನ್ನನ್ನು ತನ್ನ ಮನೆಗೆ ಕರೇಕಳುಹಿಸಿ, ನಿನ್ನಿಂದ ವಾಕ್ಯಗಳನ್ನು ಕೇಳ ಬೇಕೆಂದು ಪರಿಶುದ್ಧ ದೂತನಿಂದ ಅಪ್ಪಣೆ ಹೊಂದಿದನು, ಅಂದರು. ಆಗ ಅವನು ಅವರನ್ನು ಒಳಗೆ ಕರದು ಉಪಚರಿಸಿದನು.

ಮಾರಣೇ ದಿವಸ ಪೇತ್ರನು ಅವರ ಸಂಗಡ ಹೊರಟನು; ಮತ್ತು ಯೊಪ್ಪದವರಾದ ಸಹೋದರರಲ್ಲಿ ಕೆಲವರು ಅವನ ಸಂಗಡ ಹೋದರು. ಮಾರಣೇ ದಿವಸ ಕೈಸರ್ಯೆಯಕ್ಕೆ ಶೇರಿದರು. ಆಗ ಕೊರ್ನೇಲ್ಯನು ತನ್ನ ನೆಂಟರನ್ನೂ ಆಪ್ತ ಸ್ನೇಹಿತರನ್ನೂ ಕೂಡಾ ಕರಸಿ, ಅವರನ್ನು ಯೆದುರು ನೋಡುತ್ತಿದ್ದನು. ಪೇತ್ರನು ಒಳಗೆಬರಲಾಗಿ, ಕೊರ್ನೇಲ್ಯನು ಅವನನ್ನು ಯೆದುರುಗೊಂಡು, ಅ

ವನ ಪಾದಗಳ ಮುಂದೆ ಬಿದ್ದು ನಮಸ್ಕರಿಸಿದನು. ಆದರೆ ಪೇತ್ರನು,—ಯೇಳು, ನಾನೂ ಮನುಷ್ಯನಾಗಿದ್ದೇನೆ! ಯೆಂದು ಹೇಳಿ, ಅವನನ್ನು ಯೆತ್ತಿದನು, ಮತ್ತೆ ಅವನ ಸಂಗಡ ಮಾತಾಡುತ್ತಾ ವೊಳಗೆ ಬಂದು, ಕೂಡಾ ಬಂದಿರುವ ಅನೇಕರನ್ನು ನೋಡಿ, ಅವರಿಗೆ ಹೇಳಿದ್ದೇನಂದರೆ,—ಅನ್ಯಜಾತಿಯವನನ್ನು ಕೂಡಿಕೊಳ್ಳುವದೂ ಮುಟ್ಟುವದೂ ಯೆಹೂದ್ಯನಾದ ಮನುಷ್ಯನಿಗೆ ನ್ಯಾಯವಲ್ಲವೆಂದು ನೀವು ಬಲ್ಲಿರಿ; ಆದರೆ ಯಾವ ಮನುಷ್ಯನನ್ನಾದರೂ ಹೊಲೆಯನೂ ಅಶುದ್ಧನೂ ಯೆಂದು ಹೇಳಬಾರದೆಂಬದಾಗಿ ದೇವರು ನನಗೆ ತೋರಿಸಿದ್ದಾನೆ; ಆದದರಿಂದ ನಾನು ಯೆದುರು ಮಾತಾಡದೆ ಬಂದೆನು! ನೀವು ನನ್ನನ್ನು ಕರಸಿದ ಕಾರಣವೇನೆಂದು ಕೇಳುತ್ತೇನೆ. ಆಗ ಕಾರ್ನೇಲ್ಯನು ಹೇಳಿದ್ದು,—ನಾಲ್ಕು ದಿವಸಗಳ ಹಿಂದೆ ಇಷ್ಟೇ ಹೊತ್ತಿನ ಪರ್ಯಂತರ ಉಪವಾಸ ಮಾಡಿ, ವೊಂಭತ್ತನೇ ತಾಸಿನಲ್ಲಿ ನನ್ನ ಮನೆಯೊಳಗೆ ಪ್ರಾರ್ಥನೆ ಮಾಡುತ್ತಿದ್ದೆನು; ಆಗ ಇಗೋ, ಮಿಂಚುವ ವಸ್ತ್ರ ಧರಿಸಿಕೊಂಡ ಮನುಷ್ಯನು ನನ್ನ ಮುಂದೆ ನಿಂತುಕೊಂಡು ಹೇಳಿದ್ದೇನಂದರೆ,—ಕಾರ್ನೇಲ್ಯನೇ, ನಿನ್ನ ಪ್ರಾರ್ಥನೆ ಕೇಳ ಬಂದದೆ; ನಿನ್ನ ಧರ್ಮಗಳು ದೇವರ ಮುಂದೆ ಜ್ಞಾಪಕವಾಗಿ ಬಂದವೆ; ಆದಕಾರಣ ಯೊಪ್ಪಕ್ಕೆ ಕಳುಹಿಸಿ ಪೇತ್ರನೆಂಬ ಸೀಮೋನನನ್ನು ಕರಸು; ಅವನು ತೊಗಲುಗಾರನಾದ ಸೀಮೋನನ ಮನೆಯಲ್ಲಿ ಸಮುದ್ರದ ಹತ್ತರ ವಾಸ ಮಾಡುತ್ತಾನೆ; ಅವನು ಬಂದು ನಿನ್ನ ಸಂಗಡ ಮಾತಾಡುವನು. ಹೀಗಿರಲಾಗಿ ಸಂಗಡಲೇ ನಿನ್ನ ಬಳಿಗೆ ಕಳುಹಿಸಿದೆನು; ಮತ್ತು ನೀನು ಬಂದದ್ದು ವಾಳ್ಳೇದಾಯಿತು. ಆದದರಿಂದ ದೇವರಿಂದ ನಿನಗೆ ಆಜ್ಞಾಪಿಸಲ್ಪಟ್ಟವುಗಳನ್ನೆಲ್ಲಾ ಕೇಳುವದಕ್ಕೆ ನಾವೆಲ್ಲರೂ ದೇವರ ಮುಂದೆ ಇಲ್ಲಿ ಇದ್ದೇವೆ.

ಆಗ ಪೇತ್ರನು ಬಾಯಿ ತೆರದು ಹೇಳಿದ್ದೇನಂದರೆ,—ದೇವರು ಮುಖದಾಕ್ಷಿಣ್ಯ ನೋಡುವವನಲ್ಲವೆಂದೂ, ಸಕಲ ಜನಾಂಗಗಳಲ್ಲಿ ಆತನಿಗೆ ಭಯಪಟ್ಟು, ನೀತಿಯನ್ನು ನಡಿಸುವವನು ಆತನಿಗೆ ಸಮರ್ಪಕವಾಗಿದ್ದಾನೆಂದೂ ನಿಶ್ಚಯವಾಗಿ ಗ್ರಹಿಸುತ್ತೇನೆ. ಆತನು ಯೆಲ್ಲರ ಕರ್ತನಾಗಿರುವ ಯೇಸು ಕ್ರಿಸ್ತನ ಮುಖಾಂತರವಾಗಿ ಸಮಾಧಾನವನ್ನು ಪ್ರಸಂಗಿಸಿ, ಇಸ್ರಾಯೇಲನ ಮಕ್ಕಳಿ

ಗೆ ಕಳುಹಿಸಿದ ವಾಕ್ಯವನ್ನು ನೀವು ಬಲ್ಲಿರಿ. ಅದೇನಂದರೆ, ನಜರೇತಿನವನಾದ ಯೇಸುವನ್ನು ದೇವರು ಪರಿಶುದ್ಧಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು; ಆತನ ಸಂಗಡ ದೇವರು ಇದ್ದದರಿಂದ, ಆತನು ಉಪಕಾರ ಮಾಡುತ್ತಾ, ಪಿಶಾಚನಿಂದ ಬಲಾತ್ಕಾರ ಪಟ್ಟವರೆಲ್ಲರನ್ನು ಸ್ವಸ್ಥ ಮಾಡುತ್ತಾ, ಸಂಚರಿಸಿದನೆಂಬುವದೇ. ಆತನನ್ನು ಮರದ ಮೇಲೆ ತೂಗ ಹಾಕಿ ಕೊಂದು ಬಿಟ್ಟರು; ಆತನನ್ನು ದೇವರು ಮೂರನೇ ದಿವಸದಲ್ಲಿ ಯೆಬ್ಬಿಸಿ, ಪ್ರತ್ಯಕ್ಷವಾಗ ಮಾಡಿದನು; ಸಮಸ್ತ ಜನರಿಗೆ ಅಲ್ಲ, ಮುಂಚೆ ದೇವರಿಂದ ಆದು ನೇಮಿಸಲ್ಪಟ್ಟು, ಆತನು ಸತ್ತವರೊಳಗಿಂದ ಯೆದ್ದ ಮೇಲೆ ಆತನ ಸಂಗಡ ಉಂಡು ಕುಡಿದ ಸಾಕ್ಷಿಗಳಾದ ನಮಗೆ ಮಾತ್ರವೇ. ಮತ್ತು ಆತನೇ ಬದುಕುವವರಿಗೂ ಸತ್ತವರಿಗೂ ದೇವರಿಂದ ನೇಮಿಸಲ್ಪಟ್ಟ ನ್ಯಾಯಾಧಿಪತಿಯಾಗಿದ್ದಾನೆಂದು ಸಾಕ್ಷಿ ಕೊಟ್ಟು, ಜನರಿಗೆ ಸಾರಬೇಕೆಂದು ನಮಗೆ ಅಪ್ಪಣೆ ಕೊಟ್ಟಿದ್ದಾನೆ. ಆತನ ಹೆಸರಿನಿಂದ ಆತನಲ್ಲಿ ವಿಶ್ವಾಸ ಇಡುವವರೆಲ್ಲರು ಪಾಪಪರಿಹಾರವನ್ನು ಹೊಂದುತ್ತಾರೆಂದು ಪ್ರವಾದಿಗಳೆಲ್ಲರು ಆತನಿಗೆ ಸಾಕ್ಷಿ ಕೊಡುತ್ತಾರೆ. —ಪೇತ್ರನು ಇನ್ನು ಈ ಮಾತುಗಳನ್ನು ಆಡುತ್ತಿರಲಾಗಿ, ವಾಕ್ಯವನ್ನು ಕೇಳುವವರೆಲ್ಲರ ಮೇಲೆ ಪರಿಶುದ್ಧಾತ್ಮನು ಬಿತ್ತು. ಜನಾಂಗಗಳ ಮೇಲೆ ಸಹಾ ಪರಿಶುದ್ಧಾತ್ಮದ ವರವು ಹೊಯ್ಯಲ್ಪಟ್ಟದರಿಂದ, ಪೇತ್ರನ ಸಂಗಡ ಬಂದ ಪರಿಚ್ಛೇದನೆಯವರಾದ ವಿಶ್ವಾಸಿಗಳು ಭ್ರಮೆಗೊಂಡರು. ಆಗ ಪೇತ್ರನು ಪ್ರತ್ಯುತ್ತರವಾಗಿ, —ನಮ್ಮ ಹಾಗೆಯೇ ಪರಿಶುದ್ಧಾತ್ಮವನ್ನು ಹೊಂದಿದ ಇವರು ಸ್ನಾನ ಹೊಂದದ ಹಾಗೆ ಯಾರಾದರು ನೀರು ತಡೆಯ ಬಹುದೇ? ಯೆಂದು ಹೇಳಿ, ಕರ್ತನ ಹೆಸರಿನಲ್ಲಿ ಅವರಿಗೆ ಸ್ನಾನ ಕಾಡ ಬೇಕೆಂದು ಆಜ್ಞಾಪಿಸಿದನು. ಆಗ ಕೆಲವು ದಿವಸ ಇರ ಬೇಕೆಂದು ಅವನನ್ನು ಬೇಡಿಕೊಂಡರು.

ಆದರೆ ಜನಾಂಗಗಳು ದೇವರ ವಾಕ್ಯವನ್ನು ಅಂಗೀಕರಿಸಿದವೆಂದು ಅಪೊಸ್ತಲರೂ ಯೆಹೂದದಲ್ಲಿರುವ ಸಹೋದರರೂ ಕೇಳಿದರು. ಮತ್ತು ಪೇತ್ರನು ಯೆರೂಸಲೇಮಿಗೆ ಯೇರಿ ಬಂದಾಗ, ಪರಿಚ್ಛೇದನೆಯವರು ಅವನ ಸಂಗಡ, —ನೀನು ಅಪರಿಚ್ಛೇದನೆಯವರಾದ ಜನರ ಹತ್ತಿರ ಪ್ರವೇಶಿಸಿ, ಅವರ ಸಂ

ಗಡ ಊಟ ಮಾಡಿದಿ! ಯೆಂದು ವಿವಾದ ಮಾಡಿದರು. ಆಗ ಪೇತ್ರನು ತಾನು ಯೊಪ್ಪಪಟ್ಣದಲ್ಲಿ ಪ್ರಾರ್ಥಿಸುತ್ತಿರುವಾಗ ದರ್ಶನವನ್ನು ಕಂಡದ್ದು ಮೊದಲಾದವುಗಳನ್ನು ಕ್ರಮವಾಗಿ ಅವರಿಗೆ ವಿವರಿಸಿ ಹೇಳಿದ್ದೇನಂದರೆ,—ಪರಿಶುದ್ಧಾತ್ಮವು ಆರಂಭದಲ್ಲಿ ನಮ್ಮ ಮೇಲೆ ಬಿದ್ದ ಪ್ರಕಾರವೇ ಅವರ ಮೇಲೆಯೂ ಬಿದ್ದಾಗ,—ಯೋಹಾನನು ನೀರಿನಿಂದ ಸ್ನಾನ ಕೊಟ್ಟನು; ಆದರೆ ನೀವು ಪರಿಶುದ್ಧಾತ್ಮದಿಂದ ಸ್ನಾನ ಹೊಂದುವಿರಿ, ಯೆಂದು ಕರ್ತನು ಹೇಳಿದ ಮಾತನ್ನು ಜ್ಞಾಪಕ ಮಾಡಿ ಕೊಂಡೆನು; ಆದದರಿಂದ ಕರ್ತನಾದ ಯೇಸುವಿನಲ್ಲಿ ವಿಶ್ವಾಸಿಸಿದ ನಮಗೆ ದೇವರು ಕೊಟ್ಟದಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿದ್ದರೆ, ದೇವರಿಗೆ ಅಡ್ಡಿ ಮಾಡುವದಕ್ಕೆ ನಾನು ಯೆಷ್ಟರವನು?—ಇವುಗಳನ್ನು ಕೇಳಿ ಸುಮ್ಮನಿದ್ದು,—ಹಾಗಾದರೆ ದೇವರು ಜನಾಂಗಗಳಿಗೂ ಜೀವಕ್ಕೆ ಮಾನಸಾಂತರವನ್ನು ಕೊಟ್ಟಿದ್ದಾನೆ, ಯೆಂದು ದೇವರನ್ನು ಮಹಿಮೆ ಪಡಿಸಿದರು.

---

೪೬. ಅಂತಿಯೊಕ್ಯದ ಕ್ರೈಸ್ತರು. ಹೆರೋದನು ಮಾಡಿದ ಹಿಂಸೆ. ಪೌಲನ ಮೊದಲನೆ ಪ್ರಸಂಗಪರ್ಯಟನೆಯ ಆರಂಭ.

ಕು ಪ್ರ.

ಅಪ್. ಕ್ರಿ. ೧೧, ೧೯–೩೦. ೧೨, ೧–೨೫. ೧೩, ೧–೧೨.

ಆದರೆ ಸ್ತೆಫನನಿಗೋಸ್ಕರ ಉಂಟಾದ ಉಪದ್ರದಿಂದ ಚದರಿ ಹೋದವರು ಯೆಹೂದ್ಯರಿಗೆ ಹೊರತು ಮತ್ತಾರಿಗೂ ವಾಕ್ಯವನ್ನು ಹೇಳದೆ ಸಂಚಾರ ಮಾಡಿದರು. ಆದರೆ ಅವರಲ್ಲಿ ಕೆಲವು ಮಂದಿ ಅಂತಿಯೊಕ್ಯಕ್ಕೆ ಬಂದು, ಕರ್ತನಾದ ಯೇಸುವನ್ನು ಪ್ರಸಂಗಿಸಿ, ಗ್ರೇಕರ ಸಂಗಡ ಸಹಾ ಮಾತಾಡಿದರು. ಮತ್ತು ಕರ್ತನ ಕೈ ಅವರ ಸಂಗಡ ಇತ್ತು; ಆದದರಿಂದ ಬಹು ಮಂದಿ ವಿಶ್ವಾಸಿಸಿ, ಕರ್ತನ ಕಡೆಗೆ ತಿರುಗಿಕೊಂಡರು. ಅವರ ವಿಷಯವಾದ ವರ್ತಮಾನವು ಯೆರೂಸಲೇಮಿನಲ್ಲಿರುವ ಸಭೆಯವರ ಕಿವಿಗಳಿಗೆ ಕೇಳಿಸಿದಾಗ, ಅ

ವರು ಬರ್ನಬನನ್ನು ಅಂತಿಯೊಕ್ಯದ ವರೆಗೆ ಹೋಗ ಕಳುಹಿಸಿದರು. ಇವನು ಬಂದು ದೇವರ ಕೃಪೆಯನ್ನು ನೋಡಿ, ಸಂತೋಷ ಪಟ್ಟು,--ಹೃದಯದ ನಿರ್ಣಯದಿಂದ ಕರ್ತನಲ್ಲಿ ನೆಲೆಯಾಗಿರ ಬೇಕು, ಯೆಂದು ಅವರನ್ನು ಬೇಡಿಕೊಂಡನು. ಮತ್ತು ಬಹು ಸಮೂಹವು ಕರ್ತನಿಗೆ ಕೂಡಿಸಲ್ಪಟ್ಟಿತು. ಆಗ ಬರ್ನಬನು ಸೌಲನನ್ನು ಹುಡುಕುವದಕ್ಕೆ ತಾರ್ಸಕ್ಕೆ ಹೊರಟು ಹೋಗಿ, ಅವನನ್ನು ಅಂತಿಯೊಕ್ಯಕ್ಕೆ ಕರ ಕೊಂಡು ಬಂದನು. ಮತ್ತು ಅವರು ಪೂರ್ಣ ವರುಷ ಸಭೆಯ ಸಂಗಡ ಕೂಡಿ ಇದ್ದು, ಬಹು ಸಮೂಹಕ್ಕೆ ಉಪದೇಶ ಮಾಡಿದರು. ಅಂತಿಯೊಕ್ಯದಲ್ಲಿ ಮೊದಲು ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಉಂಟಾಯಿತು.

ಆ ದಿನಗಳಲ್ಲಿ ಅಗಬನೆಂಬ ಒಬ್ಬ ಪ್ರವಾದಿ,—ಲೋಕದಲ್ಲೆಲ್ಲಾ ದೊಡ್ಡ ಬರವು ಉಂಟಾಗುವದು, ಯೆಂದು ಆತ್ಮದ ಮೂಲವಾಗಿ ಸೂಚಿಸಿದನು. ಆಗ ಶಿಷ್ಯರಲ್ಲಿ ಒಬ್ಬೊಬ್ಬನು ಕೈಲಾದ ಮಟ್ಟಿಗೂ ಯೆಹೂದ್ಯದಲ್ಲಿ ವಾಸವಾಗಿರುವ ಸಹೋದರರ ಸೇವೆಗೋಸ್ಕರ ಕಳುಹಿಸ ಬೇಕೆಂದು ನಿರ್ಣಯಿಸಿಕೊಂಡರು. ಅದನ್ನು ಮಾಡಿ, ಬರ್ನಬನ ಮತ್ತು ಸೌಲನ ಮುಖಾಂತರ ಹಿರಿಯರ ಬಳಿಗೆ ಕಳುಹಿಸಿದರು.

ಆ ಕಾಲದಲ್ಲಿ ಅರಸನಾದ ಹೆರೋದನು ಸಭೆಯವರಲ್ಲಿ ಕೆಲವರಿಗೆ ಕೇಡು ಮಾಡ ಕೈಹಾಕಿದನು; ಮತ್ತು ಯೋಹಾನನ ಸಹೋದರನಾದ ಯಾಕೋಬನನ್ನು ಕತ್ತಿಯಿಂದ ಕೊಂದು ಹಾಕಿ, ಅದು ಯೆಹೂದ್ಯರಿಗೆ ಹಿತವಾಗಿದೆ ಯೆಂದು ನೋಡಿ, ಪೇತ್ರನನ್ನು ಸಹಾ ಹಿಡಿಯುವದಕ್ಕೆ ನಿಶ್ಚಯಿಸಿಕೊಂಡನು. ಆಗ ಹುಳಿ ಇಲ್ಲದ ರೊಟ್ಟಿಗಳ ದಿವಸಗಳು ಇದ್ದವು. ಪೇತ್ರನನ್ನು ಹಿಡಿಸಿ, ಸೆರೆಯಲ್ಲಿ ಹಾಕಿಸಿ, ಪಸ್ಕಹಬ್ಬವು ಆದ ಮೇಲೆ ಜನರ ಮುಂದೆ ಅವನನ್ನು ತರಬೇಕೆಂದು, ನಾಲ್ಕು ನಾಲ್ಕು ರಾಣುವೆಯವರಾದ ನಾಲ್ಕು ಗುಂಪುಗಳಿಗೆ ಅವನನ್ನು ಕಾಯುವದಕ್ಕೆ ಒಪ್ಪಿಸಿದನು. ಆದರೆ ಸಭೆಯು ಅವನಿಗೋಸ್ಕರ ಯೆಡೆಬಿಡದೆ ದೇವರಿಗೆ ಪ್ರಾರ್ಥನೆ ಮಾಡುತಿತ್ತು.—ಆದರೆ ಹೆರೋದನು ಅವನನ್ನು ತರುವದಕ್ಕೆ ಇದ್ದ ರಾತ್ರಿಯಲ್ಲೇ ಪೇತ್ರನು ಯೆರಡು ಸಂಕೋಲೆಗ

ಳಿಂದ ಕಟ್ಟಲ್ಪಟ್ಟು, ಇಬ್ಬರು ರಾಣುವೆಯವರ ಮಧ್ಯದಲ್ಲಿ ಮಲಗುತ್ತಿದ್ದನು; ಮ



ತ್ತು ಬಾಗಲಿನ ಹೊರಗೆ ಕಾವಲಿಯವರು ಕಾವಲಾಗಿದ್ದರು. ಆಗ ಇಗೋ, ಕರ್ತನ ದೂತನು ಹತ್ತರ ನಿಂತುಕೊಂಡನು; ಮತ್ತು ಸೆರೆಮನೆಯೊಳಗೆ ಬೆಳಕು ಪ್ರಕಾಶಿಸಿತು; ಅವನು ಪೇತ್ರನ ಪಕ್ಕೆಯನ್ನು ತಟ್ಟಿ,—ಬೇಗ ಯೇಳು! ಯೆಂದು ಅವನನ್ನು ಯೆಬ್ಬಿಸಿದನು; ಆಗ ಅವನ ಸಂಕೋಲೆಗಳು ಕೈಗಳಿಂದ ಕಳಚಿ ಬಿದ್ದವು. ಮತ್ತು ದೂತನು ಅವನಿಗೆ,—ನಡು ಕಟ್ಟಿಕೊಂಡು, ನಿನ್ನ ಕೆರಗಳನ್ನು ಮೆಟ್ಟಿಕೊ, ಅಂದನು. ಅವನು ಹಾಗೆ ಮಾಡಿದನು. ಮತ್ತು ಅವನಿಗೆ,—ನಿನ್ನ ಅಂಗಿಯನ್ನು ಹೊದ್ದುಕೊಂಡು ನನ್ನ ಹಿಂದೆ ಬಾ, ಅಂದನು. ಆಗ ಹೊರಟು ಅವನ ಹಿಂದೆ ಬಂದು, ದೂತನಿಂದ ಉಂಟಾಗುವಂಥಾದ್ದು ನಿಜವೆಂದು ತಿಳಿಯದೆ, ದರ್ಶನವನ್ನು ಕಂಡೆನೆಂದು ನೆನಸಿಕೊಂಡನು. ಅವರು ಮೊದಲನೇ ಯೆರಡನೇ ಪಹರೆಗಳನ್ನು ದಾಟಿ, ಪಟ್ಣಕ್ಕೆ ಹೋಗುವ ಕಬ್ಬಿಣದ ಬಾಗಲಿಗೆ ಬಂದಾಗ, ಅದು ತಾನಾಗಿ ಅವರಿಗೆ ತೆರೆಯಲ್ಪಟ್ಟಿತು. ಅವರು ಹೊರಟು ಬಂದು, ಬೀದಿಯನ್ನು ದಾಟಿದ ಕೂಡಲೇ ದೂತನು ಅವನನ್ನು ಬಿಟ್ಟು ಹೋದನು. ಆಗ ಪೇತ್ರನು ಯೆಚ್ಚತ್ತು ಹೇಳಿದ್ದೇನಂದರೆ,—ಕರ್ತನು ತನ್ನ ದೂತನನ್ನು ಕಳುಹಿಸಿ, ಹೆರೋದನ ಕೈಗೆ ನನ್ನನ್ನು ತಪ್ಪಿಸಿದ್ದಾನೆಂದು ಈಗ ನಿಶ್ಚಯವಾಗಿ ಬಲ್ಲೆನು. ತರುವಾಯ ಅವನು ಮಾರ್ಕನೆಂಬ ಯೋಹಾನನ ತಾಯಿಯಾದ ಮರೀಯಳ ಮನೆಗೆ ಬಂದನು. ಅಲ್ಲಿ ಅನೇಕರು ಕೂಡಿಕೊಂಡು ಪ್ರಾರ್ಥಿಸುತ್ತಿದ್ದರು. ಆದರೆ ಪೇತ್ರನು ಬಾಗಲಿನ ಕದವನ್ನು ತ

ಟ್ಟುವಾಗ, ರೋದೆಯೆಂಬ ಒಬ್ಬ ಚಾಕ್ರಿಯವಳು ಕೇಳುವದಕ್ಕೆ ಬಂದಳು. ಪೇತ್ರನ ಶಬ್ದವನ್ನು ತಿಳಿದು, ಸಂತೋಷದಿಂದ ಬಾಗಲನ್ನು ತೆರೆಯದೆ, ಒಳಗೆ ಓಡಿ,—ಬಾಗಲಿನ ಮುಂದೆ ಪೇತ್ರನು ನಿಂತುಕೊಂಡಿದ್ದಾನೆ ಯೆಂದು ತಿಳಿಸಿದಳು. ಅವರು ಅವಳಿಗೆ,—ಮರುಳಾಗಿದ್ದಿ! ಅಂದರು. ಅವಳು,—ಹೀಗೆ ಅದೆ, ಯೆಂದು ದೃಢವಾಗಿ ಹೇಳಿದಳು. ಅವರು,—ಅವನ ದೂತನು! ಅಂದರು. ಆದರೆ ಪೇತ್ರನು ತಟ್ಟುವದನ್ನು ಬಿಡಲಿಲ್ಲಾ. ಆಗ ಅವರು ತೆರದು, ಅವನನ್ನು ನೋಡಿ ಭ್ರಮೆಗೊಂಡರು. ಆದರೆ ಪೇತ್ರನು ಅವರಿಗೆ ಸುಮ್ಮನೆ ಇರ ಬೇಕೆಂದು ಕೈಯಿಂದ ಸೌಜ್ಞೆ ಮಾಡಿ, ಕರ್ತನು ತನ್ನನ್ನು ಸೆರೆಮನೆಯೊಳಗಿಂದ ಹ್ಯಾಗೆ ಹೊರಗೆ ಬಿಡಿಸಿದನೆಂದು ಅವರಿಗೆ ವಿವರಿಸಿದನು. ತರುವಾಯ ಹೊರಟು ಬೇರೆ ಸ್ಥಳಕ್ಕೆ ಹೋದನು.—ಬೆಳಗಾದ ಮೇಲೆ ಪೇತ್ರನು ಯೇನಾದನೆಂದು ರಾಣುವೆಯವರಲ್ಲಿ ಬಹು ಗದ್ದಲ ಉಂಟಾಯಿತು; ಮತ್ತು ಹೆರೋದನು ಕಾವಲಿಯವರಿಗೆ ನ್ಯಾಯ ತೀರಿಸಿ, ಅವರನ್ನು ಕೊಂದು ಹಾಕಬೇಕೆಂದು ಆಜ್ಞಾಪಿಸಿ, ಕೈಸರೈಯಕ್ಕೆ ಹೋಗಿ ವಾಸ ಮಾಡಿದನು. ಆದರೆ ಒಂದು ದಿನದಲ್ಲಿ ಹೆರೋದನು ರಾಜವಸ್ತ್ರವನ್ನು ಧರಿಸಿಕೊಂಡು, ಪೀಠದ ಮೇಲೆ ಕೂತುಕೊಂಡು, ಅವರಿಗೆ ಪ್ರಸಂಗಿಸಿದನು. ಅದಕ್ಕೆ ಸಮೂಹವು,—ಇದು ದೇವರ ಶಬ್ದವೇ ಹೊರತು ಮನುಷ್ಯನದಲ್ಲಾ! ಯೆಂದು ಕೂಗಿತು. ಅವನು ದೇವರಿಗೆ ಮಹಿಮೆಯನ್ನು ಕೊಡದ ಕಾರಣ, ಸಂಗಡಲೇ ಕರ್ತನ ದೂತನು ಅವನನ್ನು ಹೊಡದನು; ಆದದರಿಂದ ಅವನು ಹುಳಗಳಿಂದ ತಿನ್ನಲ್ಪಟ್ಟು, ಪ್ರಾಣ ಬಿಟ್ಟನು.

ಆದರೆ ದೇವರ ವಾಕ್ಯವು ಬೆಳದು ಪ್ರಬಲವಾಯಿತು. ಮತ್ತು ಬರ್ನಬನೂ ಸೌಲನೂ ಯೆರೂಸಲೇಮಿನಲ್ಲಿ ಸೇವೆಯನ್ನು ಪೂರೈಸಿ, ಮಾರ್ಕನೆಂಬ ಯೋಹಾನನನ್ನು ಕೂಡಾ ಕರಕೊಂಡು ಅಂತಿಯೊಖ್ಯಕ್ಕೆ ತಿರಿಗಿ ಬಂದರು.

ಮತ್ತು ಅಂತಿಯೊಖ್ಯದಲ್ಲಿರುವ ಸಭೆಯಲ್ಲಿ ಕೆಲವು ಪ್ರವಾದಿಗಳೂ ಬೋಧಕರೂ ಇದ್ದರು; ಅವರು ಕರ್ತನಿಗೆ ಆರಾಧನೆ ಮಾಡಿ, ಉಪವಾಸ ಮಾಡುತ್ತಿರುವಾಗ,—ನಾನು ಅವರನ್ನು ಕರದ ಕೆಲಸಕ್ಕೋಸ್ಕರ ಬರ್ನಬನನ್ನೂ

ಸೌಲನನ್ನೂ ನನಗೆ ಯೇರ್ಪಡಿಸಿರಿ! ಯೆಂದು ಪರಿಶುದ್ಧಾತ್ಮವು ಹೇಳಿತು. ಆಗಲವರು ಉಪವಾಸವನ್ನೂ ಪ್ರಾರ್ಥನೆಯನ್ನೂ ಮಾಡಿ, ಅವರ ಮೇಲೆ ಕೈಗಳನ್ನಿಟ್ಟು, ಅವರನ್ನು ಕಳುಹಿಸಿ ಬಿಟ್ಟರು. ಅವರು ಪರಿಶುದ್ಧಾತ್ಮದಿಂದ ಕಳುಹಿಸಲ್ಪಟ್ಟು, (ಬರ್ನಬನ ಜನ್ಮದೇಶವಾಗಿರುವ) ಕುಪ್ರವೆಂಬ ದ್ವೀಪಕ್ಕೆ ಹಡಗಮಾರ್ಗವಾಗಿ ಹೋದರು. ಮತ್ತು ಸಲಮೀಸಿಗೆ ಬಂದು, ಯೆಹೂದ್ಯರ ಸಭಾಮನೆಗಳಲ್ಲಿ ದೇವರ ವಾಕ್ಯವನ್ನು ಪ್ರಸಂಗಿಸಿದರು. ಇದಲ್ಲದೆ ಮಾರ್ಕನೆಂಬ ಯೋಹಾನನು ಅವರಿಗೆ ಊಳಿಗದವನಾಗಿದ್ದನು. ಅವರು ಪಾಫೋಸಿನ ಪರ್ಯಂತರ ದ್ವೀಪವನ್ನು ಹಾದು ಹೋದಾಗ, ಬಾರ್ ಯೇಸುವೆಂಬ ಯೆಹೂದ್ಯನಾದ ಮಂತ್ರಗಾರನಾಗಿರುವ ವಾಬ್ಬ ಸುಳ್ಳು ಪ್ರವಾದಿಯನ್ನು ಕಂಡರು. ಇವನು ಬುದ್ಧಿಯುಳ್ಳ ಮನುಷ್ಯನಾದ ಸೆರ್ಗ್ಯ ಪೌಲನೆಂಬ ಪ್ರತಿಧಾರಿಯ ಸಂಗಡ ಇದ್ದನು. ಇವನು ಬರ್ನಬನನ್ನೂ ಸೌಲನನ್ನೂ ಕರೇ ಕಳುಹಿಸಿ, ದೇವರ ವಾಕ್ಯವನ್ನು ಕೇಳ ಹುಡುಕಿದನು. ಆದರೆ ಮಂತ್ರಗಾರನು ಪ್ರತಿಧಾರಿಯನ್ನು ವಿಶ್ವಾಸದಿಂದ ತಿರುಗಿಸ ಹುಡುಕಿ, ಅವರನ್ನು ಯೆದುರಿಸಿದನು. ಆಗ ಪೌಲನೆಂಬ ಸೌಲನು ಪರಿಶುದ್ಧಾತ್ಮದಿಂದ ತುಂಬಿ, ಅವನ ಮೇಲೆ ಕಣ್ಣಿಟ್ಟು, —ಓ ಸಮಸ್ತ ಕಪಟದಿಂದಲೂ ಸಮಸ್ತ ತಂತ್ರದಿಂದಲೂ ತುಂಬಿದ ಪಿಶಾಚನ ಮಗನೇ, ಯೆಲ್ಲಾ ನೀತಿಗೆ ಶತ್ರುವೇ! ಕರ್ತನ ನೆಟ್ಟಗಾದ ಹಾದಿಯನ್ನು ತಿರುಗಿಸುವದನ್ನು ನೀನು ಬಿಡುವದಿಲ್ಲವೋ? ಈಗ ಇಗೋ, ಕರ್ತನ ಕೈ ನಿನ್ನ ಮೇಲೆ ಅದೆ; ಕಾಲದ ಪರ್ಯಂತರ ಸೂರ್ಯನನ್ನು ನೋಡದೆ ಕುರುಡನಾಗಿರುವಿ! ಅಂದನು. ಸಂಗಡಲೇ ಅವನ ಮೇಲೆ ಕತ್ತಲು ಬಿತ್ತು; ಮತ್ತು ಕೈಲಾಗು ಕಾಡುವವರನ್ನು ಹುಡುಕಿದನು. ಪ್ರತಿಧಾರಿಯು ಆದದ್ದನ್ನು ನೋಡಿ, ಕರ್ತನ ಬೋಧನೆಗೆ ಆಶ್ಚರ್ಯ ಪಟ್ಟು ವಿಶ್ವಾಸಿಸಿದನು. ತರುವಾಯ ಅವರು ಪಂಫುಲ್ಯದಲ್ಲಿರುವ ಪೆರ್ಗೆಗೆ ಬಂದರು. ಅಲ್ಲಿ ಮಾರ್ಕನೆಂಬ ಯೋಹಾನನು ಅವರನ್ನು ಬಿಟ್ಟು, ಯೆರೂಸಲೇಮಿಗೆ ತಿರುಗಿ ಹೋದನು.

---

೪೭. ಪೌಲನ ಮೊದಲನೇ ಪ್ರಸಂಗಪರ್ಯಟಣೆಯ ಅಂತ್ಯ.

ಪಿಸಿದ್ಯದ ಅಂತಿಯೋಕ್ಯ. ಇಕೊನ್ಯ. ಲುಸ್ತ್ರ. ದೆರ್ಬೆ.

ಅಪ್. ಕ್ರಿ. ೧೩, ೧೩–೫೨. ೧೪, ೧–೨೮.

ಪೌಲನೂ ಬರ್ನಬನೂ ಪೆರ್ಗೆಯಿಂದ ಹೊರಟು, ಪಿಸಿದ್ಯದಲ್ಲಿರುವ ಅಂತಿಯೋಕ್ಯಕ್ಕೆ ಬಂದು, ಸಬ್ಬಥ್ ದಿವಸದಲ್ಲಿ ಸಭೆಮನೆಯಲ್ಲಿ ಪ್ರವೇಶಿಸಿ ಕೂತುಕೊಂಡರು. ನ್ಯಾಯಪ್ರಮಾಣವೂ ಪ್ರವಾದಿಗಳ ಗ್ರಂಥವೂ ಪಾರಾಯಣ ಆದ ಮೇಲೆ ಸಭೆಯ ಯಜಮಾನರು ಅವರಿಗೆ,—ಸಹೋದರರಾದ ಜನರೇ, ಜನರಿಗೆ ಹೇಳುವದಕ್ಕೆ ಬುದ್ಧಿಯ ಮಾತು ಯೇನಾದರು ನಿಮಗಿದ್ದರೆ ಹೇಳಿರಿ! ಯೆಂದು ಹೇಳಿ ಕಳುಹಿಸಿದರು. ಆಗ ಪೌಲನು ಯೆದ್ದು, ಕೈಯಿಂದ ಸೊಜ್ಞೆ ಮಾಡಿ, ಹೇಳಿದ್ದೇನಂದರೆ,—ಇಸ್ರಯೇಲರಾದ ಜನರೇ, ದೇವರಿಗೆ ಭಯ ಪಡುವವರೇ, ಕೇಳಿರಿ! ಈ ಇಸ್ರಯೇಲನ ಜನರ ದೇವರು ನಮ್ಮ ಪಿತೃಗಳನ್ನು ಆದುಕೊಂಡು, ಯೆತ್ತರವಾದ ಭುಜದಿಂದ ಐಗುಪ್ತದೊಳಗಿಂದ ಹೊರಗೆ ತಂದನು, ಮತ್ತು ಹೆಚ್ಚುಕಡಿಮೆ ನಾಲ್ವತ್ತು ವರುಷ ಅರಣ್ಯದಲ್ಲಿ ಅವರ ನಡತೆಯನ್ನು ಸಹಿಸಿ, ಕಾನಾನ್ ದೇಶವನ್ನು ಅವರಿಗೆ ಹಂಚಿಕೊಟ್ಟನು. ತರುವಾಯ ಹೆಚ್ಚುಕಡಿಮೆ ನಾನೂರ ಐವತ್ತು ವರುಷಗಳ ಮೇಲೆ ಪ್ರವಾದಿಯಾದ ಸಾಮುವೇಲನ ಪರ್ಯಂತರ ಅವರಿಗೆ ನ್ಯಾಯಾಧಿಪತಿಗಳನ್ನು ಕೊಟ್ಟನು. ಆ ಮೇಲೆ ಅವರು ಅರಸನನ್ನು ಬೇಡಿಕೊಂಡ ಕಾರಣ, ದೇವರು ಅವರಿಗೆ ಸೌಲನನ್ನು ಕೊಟ್ಟನು. ಮತ್ತು ಅವನನ್ನು ತೆಗದು ಹಾಕಿ, ಅವರಿಗೆ ದಾವೀದನನ್ನು ಅರಸನಾಗಿ ಯೆಬ್ಬಿಸಿದನು. ಇವನಿಗೆ ಸಾಕ್ಷಿಯಾಗಿ,—ನನ್ನ ಹೃದಯಕ್ಕೆ ಅನುಸರಣೆಯಾದ ಮನುಷ್ಯನಾಗಿರುವ ದಾವೀದನನ್ನು ಕಂಡುಕೊಂಡೆನು; ಅವನು ನನ್ನ ಅಪೇಕ್ಷೆಗಳನ್ನೆಲ್ಲಾ ತೀರಿಸುವನು ಯೆಂದು ಹೇಳಿದನು. ಇವನ ಬೀಜದಿಂದ ದೇವರು ವಾಗ್ದತ್ತದ ಪ್ರಕಾರ ಇಸ್ರಯೇಲಿಗೆ ರಕ್ಷಕನಾದ ಯೇಸುವನ್ನು ಯೆಬ್ಬಿಸಿದಾನೆ. ಈ ರಕ್ಷಣೆಯ ವಾಕ್ಯವು ನಿಮಗೆ ಕಳುಹಿಸಲ್ಪಟ್ಟದೆ; ಯಾಕಂದರೆ ಯೆರೂಸಲೇಮಿನ ನಿವಾಸಿಗಳೂ, ಅವರ ಅಧಿಪತಿಗಳೂ ಈತನನ್ನು, ಪ್ರತಿ ಸಬ್ಬಥ್ ದಿವಸಗಳಲ್ಲಿ ಓದಿ ಹೇ

ಳುವ ಪ್ರವಾದಿಗಳ ಶಬ್ದಗಳನ್ನು ತಿಳಿಯದೆ, ಆತನಿಗೆ ಆಜ್ಞೆ ನಿರ್ಣಯಿಸಿ, ಮರಣಕ್ಕಾಗುವ ಯಾವ ಕಾರಣವನ್ನಾದರೂ ಕಾಣದೆ, ಆತನನ್ನು ಕೊಲ್ಲ ಬೇಕೆಂದು ಪಿಲಾತನನ್ನು ಬೇಡಿಕೊಂಡರು. ಆದರೆ ದೇವರು ಆತನನ್ನು ಸತ್ತವರೊಳಗಿಂದ ಯೆಬ್ಬಿಸಿದನು; ಆತನು ತನ್ನ ಸಂಗಡ ಗಲಿಲಾಯದಿಂದ ಯೆರೂಸಲೇಮಿಗೆ ಯೇರಿ ಬಂದವರಿಗೆ ಅನೇಕ ದಿವಸಗಳ ಪರ್ಯಂತರ ಕಾಣಲ್ಪಟ್ಟನು; ಇವರು ಜನರ ಮುಂದೆ ಆತನಿಗೆ ಸಾಕ್ಷಿಗಳಾಗಿದ್ದಾರೆ. ಹೀಗಿರುವದರಿಂದ, ಸಹೋದರರಾದ ಜನರೇ, ಈತನ ಮುಖಾಂತರವಾಗಿ ನಿಮಗೆ ಪಾಪಪರಿಹಾರವು ಪ್ರಸಂಗಿಸಲ್ಪಡುತ್ತದೆಂದೂ, ಈತನಲ್ಲಿ ವಿಶ್ವಾಸಿಸುವವರೆಲ್ಲರು ನೀತಿನಿರ್ಣಯ ಪಡುತ್ತಾರೆಂದೂ ನಿಮಗೆ ತಿಳಿದಿರಲಿ! ಹೀಗಿರುವದರಿಂದ, ಪ್ರವಾದಿಗಳು ಹೇಳಿದ್ದು ನಿಮ್ಮ ಮೇಲೆ ಬಾರದ ಹಾಗೆ ನೋಡಿಕೊಳ್ಳಿರಿ! ಅದೇನಂದರೆ,—ತಿರಸ್ಕರಿಸುವವರೇ, ನೋಡಿ, ಭ್ರಮಿಸಿ, ನಾಶವಾಗಿರಿ! ಯಾಕಂದರೆ ಒಬ್ಬನು ನಿಮಗೆ ವಿವರಿಸಿದರೂ, ನೀವು ನಂಬದೆ ಇರುವ ಕೆಲಸವನ್ನು ನಾನು ನಿಮ್ಮ ದಿವಸಗಳಲ್ಲಿ ನಡಿಸುತ್ತೇನೆ.—ಯೆಹೂದ್ಯರು ಸಭೆಮನೆಯೊಳಗಿಂದ ಹೋದ ಮೇಲೆ, ಜನಾಂಗಗಳವರು ತಮಗೆ ಈ ಮಾತುಗಳನ್ನು ಹೇಳ ಬೇಕೆಂದು ಬೇಡಿಕೊಂಡರು. ಮತ್ತು ಕೂಟವು ಅಗಲಿದ ಮೇಲೆ, ಯೆಹೂದ್ಯರಲ್ಲಿಯೂ ಮತಸೇರಿದ ಭಕ್ತಿಯುಳ್ಳವರಲ್ಲಿಯೂ ಅನೇಕರು ಪೌಲನನ್ನೂ ಬರ್ನಬನನ್ನೂ ಹಿಂಬಾಲಿಸಿದರು. ಇವರು ಅವರ ಸಂಗಡ ಮಾತಾಡಿ, ದೇವರ ಕೃಪೆಯಲ್ಲಿ ನೆಲೆಯಾಗಿರ ಬೇಕೆಂದು ಅವರನ್ನು ಸಮ್ಮತಿ ಪಡಿಸಿದರು.—ಮತ್ತು ಬರುವ ಸಬ್ಬತಿನಲ್ಲಿ ಸ್ವಲ್ಪ ಕಡಿಮೆ ಪಟ್ಟಣವೆಲ್ಲಾ ದೇವರ ವಾಕ್ಯವನ್ನು ಕೇಳುವದಕ್ಕೆ ಕೂಡಿ ಬಂತು. ಆಗ ಯೆಹೂದ್ಯರು ಸಮೂಹಗಳನ್ನು ನೋಡಿ, ಹೊಟ್ಟೆಕಿಚ್ಚಿನಿಂದ ತುಂಬಿ, ದೂಷಿಸಿ, ಪೌಲನು ಹೇಳಿದವುಗಳನ್ನು ಯೆದುರಿಸಿದರು. ಆದರೆ ಪೌಲನೂ ಬರ್ನಬನೂ ಧೈರ್ಯ ಪಟ್ಟು ಹೇಳಿದ್ದೇನಂದರೆ,—ನಿಮಗೆ ಮೊದಲು ದೇವರ ವಾಕ್ಯವನ್ನು ಹೇಳ ಬೇಕಾಗಿತ್ತು; ಆದರೆ ನೀವು ಅದನ್ನು ತಳ್ಳಿ, ನಿಮ್ಮನ್ನು ನಿತ್ಯಜೀವಕ್ಕೆ ಅಪಾತ್ರರೆಂದು ಯೆಣಿಸುವದರಿಂದ, ಇಗೋ, ಜನಾಂಗಗಳ ಕಡೆಗೆ ತಿರುಗುತ್ತೇವೆ; ಯಾಕಂದರೆ ನೀನು

ಭೂಮ್ಯಂತ್ಯದವರೆಗೂ ರಕ್ಷಣೆಯಾಗಿರುವದಕ್ಕೆ ನಿನ್ನನ್ನು ಜನಾಂಗಗಳಿಗೆ ಬೆ
ಳಕಾಗಿ ಕೊಟ್ಟಿದ್ದೇನೆ ಯೆಂಬದಾಗಿ ಕರ್ತನು ನಮಗೆ ಆಜ್ಞಾಪಿಸಿದ್ದಾನೆ. (ಯೆಶ.
೪೯, ೬.) ಜನಾಂಗಗಳು ಕೇಳಿ ಸಂತೋಷಪಟ್ಟು, ಕರ್ತನ ವಾಕ್ಯವನ್ನು ಮ
ಹಿಮೆ ಪಡಿಸಿದರು; ಮತ್ತು ನಿತ್ಯಜೀವಕ್ಕೆ ನೇಮಿಸಲ್ಪಟ್ಟವರೆಷ್ಟೂ ವಿಶ್ವಾಸಿಸಿದ
ರು; ಮತ್ತು ಕರ್ತನ ವಾಕ್ಯವು ದೇಶವೆಲ್ಲಾದರಲ್ಲಿ ವಿಸ್ತರಿಸಲ್ಪಟ್ಟಿತು. ಆದರೆ
ಯೆಹೂದ್ಯರು ಪೌಲನಿಗೂ ಬರ್ನಬನಿಗೂ ವಿರೋಧವಾಗಿ ಹಿಂಸೆ ಯೆಬ್ಬಿಸಿ,
ಅವರನ್ನು ತಮ್ಮ ಪ್ರಾಂತ್ಯಗಳಿಂದ ಹೊರಡಿಸಿದರು. ಆದರೆ ಇವರು ತ
ಮ್ಮ ಪಾದಧೂಳನ್ನು ಅವರೆದುರಿಗೆ ಝಾಡಿಸಿ ಹೋಗಿ, ಇಕೋನ್ಯಕ್ಕೆ ಬಂದರು.
ಮತ್ತು ಅಂತಿಯೊಕ್ಯದ ಶಿಷ್ಯರು ಸಂತೋಷದಿಂದಲೂ ಪರಿಶುದ್ಧಾತ್ಮದಿಂದಲೂ
ತುಂಬಿದವರಾದರು.

ಮತ್ತು ಇಕೋನ್ಯದಲ್ಲಿ ಆದದ್ದೇನಂದರೆ,—ಅವರು ಯೆಹೂದ್ಯರ ಸಭೆ
ಮನೆಯಲ್ಲಿ ಕೂಡಾ ಬಂದು, ಯೆಹೂದ್ಯರಲ್ಲಿಯೂ ಗ್ರೇಕರಲ್ಲಿಯೂ ಬಹು
ಸಮೂಹವು ವಿಶ್ವಾಸಿಸುವ ಹಾಗೆ ಮಾತಾಡಿದರು. ಆದರೆ ವಿಶ್ವಾಸಿಸದ
ಯೆಹೂದ್ಯರು ಸಹೋದರರಿಗೆ ವಿರೋಧವಾಗಿ ಜನಾಂಗಗಳ ಮನಸ್ಸುಗಳನ್ನು
ಯೆಬ್ಬಿಸಿ ಕೆಡಿಸಿದರು. ಆದದರಿಂದ ತನ್ನ ಕೃಪೆಯ ವಾಕ್ಯಕ್ಕೆ ಸಾಕ್ಷಿ ಕೊಟ್ಟು, ಅ
ವರ ಕೈಗಳಿಂದ ಲಕ್ಷಣಗಳನ್ನೂ ಅದ್ಭುತಗಳನ್ನೂ ನಡಿಸುವ ಕರ್ತನಲ್ಲಿ ಅವರು
ಧೈರ್ಯವಾಗಿ ಮಾತಾಡಿ, ಬಹು ಕಾಲ ಅಲ್ಲಿ ಇದ್ದರು. ಆದರೆ ಪಟ್ಟದ ಸ
ಮೂಹವು ಭೇದವಾಗಿ, ಕೆಲವರು ಯೆಹೂದ್ಯರ ಕಡೆಯಲ್ಲಿಯೂ ಕೆಲವ
ರು ಅಪೋಸ್ತಲರ ಕಡೆಯಲ್ಲಿಯೂ ಇದ್ದರು; ಮತ್ತು ಅವರನ್ನು ನಿಂದಿಸಿ, ಕ
ಲ್ಲೆಸೆಯ ಬೇಕೆಂದು ಜನಾಂಗಗಳೂ ಯೆಹೂದ್ಯರೂ ಕಲಹ ಉಂಟು ಮಾ
ಡುವಾಗ, ಅವರು ತಿಳಕೊಂಡು, ಲುಕವೋನ್ಯದಲ್ಲಿ ಇರುವ ಲುಸ್ತ್ರವೂ ದೆರ್ಬೆ
ಯೂ ಯೆಂಬ ಪಟ್ಟಗಳಿಗೂ ಸುತ್ತಲಿರುವ ದೇಶಕ್ಕೂ ಓಡಿ ಹೋಗಿ, ಅ
ಲ್ಲಿಯೂ ಸುವಾರ್ತೆ ಪ್ರಸಂಗಿಸುತ್ತಾ ಇದ್ದರು. ಮತ್ತು ಲುಸ್ತ್ರದಲ್ಲಿ ತಾಯಿಗ
ರ್ಭದಿಂದ ಕುಂಟನಾಗಿ, ಯೆಂದೂ ನಡಿಯದೆ, ಕಾಲುಗಳಲ್ಲಿ ಬಲವಿಲ್ಲದ ಒ
ಬ್ಬ ಮನುಷ್ಯನು ಕೂತುಕೊಂಡಿದ್ದನು. ಇವನು ಪೌಲನು ಮಾತಾಡುವದ

ನ್ನು ಕೇಳಿದನು. ಪೌಲನು ಅವನ ಮೇಲೆ ಕಣ್ಣಿಟ್ಟು, ಅವನಲ್ಲಿ ರಕ್ಷಿಸಲ್ಪಡುವದಕ್ಕೆ ವಿಶ್ವಾಸ ಉಂಟೆಂದು ನೋಡಿ, ಮಹಾ ಶಬ್ದದಿಂದ,—ನಿನ್ನ ಪಾದಗಳನ್ನೂರಿ ನೆಟ್ಟಗೆ ನಿಂತುಕೋ! ಅಂದನು. ಆಗಲವನು ಹಾರಿ ನಡೆದನು. ಮತ್ತು ಸಮೂಹಗಳು ಪೌಲನು ಮಾಡಿದ್ದನ್ನು ನೋಡಿ, ತಮ್ಮ ಶಬ್ದವನೆತ್ತಿ,—ದೇವರುಗಳು ಮನುಷ್ಯರೂಪವಾಗಿ ನಮ್ಮ ಬಳಿಗೆ ಇಳಿದು ಬಂದಿದ್ದಾರೆ! ಯೆಂದು ಲುಕವೋನ್ಯ ಭಾಷೆಯಲ್ಲಿ ಹೇಳಿದರು. ಬರ್ನಬನನ್ನು ಬೃಹಸ್ಪತಿಯೆಂದೂ, ಪೌಲನು ಮುಖ್ಯ ಪ್ರಸಂಗಿಯಾಗಿರುವದರಿಂದ ಅವನನ್ನು ಬುಧನೆಂದೂ ಕರೆದರು. ಮತ್ತು ಅವರ ಪಟ್ಟಣದ ಮುಂದೆ ಇರುವ ಬೃಹಸ್ಪತಿಯ ಯಾಜಕನು ಯೆತ್ತುಗಳನ್ನೂ ಹೂಮಾಲೆಗಳನ್ನೂ ಬಾಗಲುಗಳ ಹತ್ತರಕ್ಕೆ ತಂದು, ಸಮೂಹಗಳ ಸಂಗಡ ಅರ್ಪಿಸ ಬೇಕೆಂದಿದ್ದನು. ಆದರೆ ಅಪೊಸ್ತಲರಾದ ಬರ್ನಬನೂ ಪೌಲನೂ ಅದನ್ನು ಕೇಳಿ, ತಮ್ಮ ವಸ್ತ್ರಗಳನ್ನು ಹರಕೊಂಡು, ಸಮೂಹದೊಳಗೆ ಓಡಿ ಹೋಗಿ, ಕೂಗಿ ಹೇಳಿದ್ದೇನಂದರೆ,—ಜನರೇ, ಇವುಗಳನ್ನು ಯಾಕೆ ಮಾಡುತ್ತೀರಿ? ನಾವು ಸಹಾ ನಿಮಗೆ ಸಮಾನ ಸ್ವಭಾವವುಳ್ಳ ಮನುಷ್ಯರಾಗಿದ್ದು, ನೀವು ಈ ವ್ಯರ್ಥವಾದವುಗಳನ್ನು ಬಿಟ್ಟು, ಆಕಾಶವನ್ನೂ ಭೂಮಿಯನ್ನೂ ಸಮುದ್ರವನ್ನೂ ಅವುಗಳಲ್ಲಿ ಇರುವ ಯೆಲ್ಲವುಗಳನ್ನೂ ಸೃಷ್ಟಿಸಿದ ದೇವರ ಬಳಿಗೆ ತಿರುಗಿಕೊಳ್ಳ ಬೇಕೆಂದು ನಿಮಗೆ ಪ್ರಸಂಗಿಸುತ್ತೇವೆ. ಆತನು ಹೋದ ತಲಾಂತರಗಳಲ್ಲಿ ಜನಾಂಗಗಳನ್ನೆಲ್ಲಾ ತಮ್ಮ ತಮ್ಮ ಮಾರ್ಗಗಳಲ್ಲಿ ನಡೆಯಗೊಡಿಸಿದನು; ಆದಾಗ್ಯೂ ಆತನು ಆಕಾಶದಿಂದ ನಮಗೆ ಮಳೆಗಳನ್ನೂ ಫಲಫಲಿಸುವ ಕಾಲಗಳನ್ನೂ ಕೊಟ್ಟು, ನಮ್ಮ ಹೃದಯಗಳನ್ನು ಆಹಾರದಿಂದಲೂ ಆನಂದದಿಂದಲೂ ತುಂಬಿಸಿ, ಒಳ್ಳೇದನ್ನು ಮಾಡಿದನು.—ಇವುಗಳನ್ನು ಹೇಳಿ, ತಮಗೆ ಅರ್ಪಿಸದ ಹಾಗೆ ಸಮೂಹಗಳನ್ನು ತಡಿಯುವದು ಪ್ರಯಾಸವಾಯಿತು.—ತರುವಾಯ ಅಂತಿಯೋಕ್ಯದಿಂದಲೂ ಇಕಾನ್ಯದಿಂದಲೂ ಯೆಹೂದ್ಯರು ಬಂದು, ಸಮೂಹಗಳನ್ನು ಸಮ್ಮತಿ ಪಡಿಸಿ, ಪೌಲನನ್ನು ಕಲ್ಲೆಸದು, ಅವನು ಸತ್ತನೆಂದು ನೆನಸಿ, ಪಟ್ಟಣದ ಹೊರಗೆ ಹಾಕಿದರು. ಆದರೆ ಶಿಷ್ಯರು ಅವನನ್ನು ಸುತ್ತಿಕೊಂಡಿರುವಾಗ, ಅ

ವನು ಯೆದ್ದು, ಪಟ್ಣದಲ್ಲಿ ಪ್ರವೇಶಿಸಿ, ಮಾರನೇ ದಿವಸ ಬರ್ನಬನ ಸಂಗಡ ದೆರ್ಬೇಗೆ ಹೊರಟು ಹೋದನು.

ಅವರು ದೆರ್ಬೇಯಲ್ಲಿ ಸುವಾರ್ತೆ ಪ್ರಸಂಗಿಸಿ, ಅನೇಕರನ್ನು ಶಿಷ್ಯರಾಗ ಮಾಡಿದ ಮೇಲೆ, ಲುಸ್ತ್ರಕ್ಕೂ ಇಕೊನ್ಯಕ್ಕೂ ಪಿಸಿದ್ಯದ ಅಂತಿಯೊಕ್ಯಕ್ಕೂ ತಿರಿಗಿ ಹೋಗಿ, ಶಿಷ್ಯರ ಹೃದಯಗಳನ್ನು ಸ್ಥಿರ ಪಡಿಸಿ, ವಿಶ್ವಾಸದಲ್ಲಿ ನೆಲೆಯಾಗಿರ ಬೇಕೆಂದೂ, ನಾವು ಬಹು ಉಪದ್ರಗಳಿಂದ ದೇವರ ರಾಜ್ಯದಲ್ಲಿ ಪ್ರವೇಶಿಸ ಬೇಕೆಂದೂ ಅವರಿಗೆ ಬುದ್ಧಿ ಹೇಳಿದರು. ಮತ್ತು ಅವರಿಗೆ ಸಭೆಸಭೆಯಲ್ಲಿ ಹಿರಿಯರನ್ನು ನೇಮಿಸಿ, ಉಪವಾಸವಾಗಿ ಪ್ರಾರ್ಥನೆ ಮಾಡಿ, ಅವರು ವಿಶ್ವಾಸಿಸಿದ ಕರ್ತನಿಗೆ ಅವರನ್ನು ಒಪ್ಪಿಸಿದರು. ತರುವಾಯ ಅವರು ಪಿಸಿದ್ಯವನ್ನು ಹಾದು, ಪಂಫುಲ್ಯಕ್ಕೆ ಬಂದರು. ಮತ್ತು ಪೆರ್ಗೆಯಲ್ಲಿ ವಾಕ್ಯವನ್ನು ಹೇಳಿ, ಅತ್ತಾಲ್ಯಕ್ಕೆ ಇಳಿದು ಹೋದರು. ಅಲ್ಲಿಂದ ಹಡಗ ಮಾರ್ಗವಾಗಿ ತಾವು ಪೂರೈಸಿದ ಕೆಲಸಕ್ಕೋಸ್ಕರ ದೇವರ ಕೃಪೆಗೆ ಒಪ್ಪಿಸಲ್ಪಟ್ಟಿದ್ದ (ಸುರ್ಯದ) ಅಂತಿಯೊಕ್ಯಕ್ಕೆ ಸೇರಿದರು. ಸೇರಿ ಸಭೆಯನ್ನು ಕೂಡಾ ಕರಸಿ, ದೇವರು ತಮಗೆ ಮಾಡಿದವುಗಳನ್ನೂ, ಜನಾಂಗಗಳಿಗೆ ವಿಶ್ವಾಸದ ಬಾಗಿಲನ್ನು ತೆರೆದದ್ದನ್ನೂ ತಿಳಿಸಿದರು. ತರುವಾಯ ಅಲ್ಲಿ ಬಹುಕಾಲ ಶಿಷ್ಯರ ಸಂಗಡ ವಾಸವಾಗಿದ್ದರು.

---

೪೮. ಅಪೊಸ್ತಲರ ಕೃತ್ಯ. ಪೌಲನ ಯೆರಡನೇ ಪ್ರಸಂಗಪರ್ಯಾಟನೆಯ ಆರಂಭ. ಲುಸ್ತ್ರ. ತ್ರೋಯ. ಫಿಲಿಪ್ಪಿ.

(ಅಪ್. ಕ್ರಿ. ೧೫, ೧—೪೧. ೧೬, ೧—೪೦.)

ಆ ಮೇಲೆ ಯೆಹೂದ್ಯದಿಂದ ಅಂತಿಯೊಕ್ಯಕ್ಕೆ ಕೆಲವರು ಇಳಿದು ಬಂದು, ಸಹೋದರರಿಗೆ,—ನೀವು ಮೋಶೆಯ ರೀತಿಯ ಪ್ರಕಾರ ಪರಿಚ್ಛೇದನೆ ಹೊಂದಿದ ಹೊರತು ರಕ್ಷಿಸಲ್ಪಡಲಾರಿರಿ! ಯೆಂದು ಬೋಧಿಸಿದರು. ಹೀಗಿ

ರುವದರಿಂದ ಪೌಲನಿಗೂ ಬರ್ನಬನಿಗೂ ಅವರ ಸಂಗಡ ಬಹು ವಿವಾದವೂ ತರ್ಕವೂ ಉಂಟಾಗಲು, ಆ ವಿಷಯದಲ್ಲಿ ಪೌಲನನ್ನೂ ಬರ್ನಬನನ್ನೂ ತಂಮಲ್ಲಿ ಬೇರೆ ಕೆಲವರನ್ನೂ ಯೆರೂಸಲೇಮಿನಲ್ಲಿರುವ ಅಪೊಸ್ತಲರ ಮತ್ತು ಹಿರಿಯರ ಬಳಿಗೆ ಯೇರಿ ಹೋಗ ನೇಮಿಸಿದರು. ಇವರು ಸಭೆಯಿಂದ ಮುಂಕಳುಹಿಸಲ್ಪಟ್ಟು, ಫಾಯಿನಿಕೆಯನ್ನೂ ಸಮಾರ್ಯವನ್ನೂ ಹಾದು ಹೋಗಿ, ಜನಾಂಗಗಳು ತಿರುಗಿಕೊಳ್ಳುತ್ತಾರೆಂಬುವದನ್ನು ತಿಳಿಸಿ, ಸಹೋದರರೆಲ್ಲರನ್ನು ಬಹಳವಾಗಿ ಸಂತೋಷ ಪಡಿಸಿದರು. ಯೆರೂಸಲೇಮಿಗೆ ಸೇರಿ, ಅಪೊಸ್ತಲರಿಂದಲೂ ಹಿರಿಯರಿಂದಲೂ ಅಂಗೀಕರಿಸಲ್ಪಟ್ಟು, ದೇವರು ತಮ್ಮ ಸಂಗಡ ಮಾಡಿದವುಗಳನ್ನು ತಿಳಿಸಿದರು. ಆಗ ಫರಿಸಾಯರ ಮತದವರಾದ ವಿಶ್ವಾಸಿಸಿದ ಕೆಲವರು ಯೆದ್ದು, ಅವರಿಗೆ ಪರಿಛ್ಛೇದನೆ ಮಾಡಿ, ಮೋಶೆಯ ನ್ಯಾಯಪ್ರಮಾಣವನ್ನು ಕೈಕೊಳ್ಳುವದಕ್ಕೆ ಆಜ್ಞಾಪಿಸ ಬೇಕೆಂದು ಹೇಳಿದರು. ಆಗ ಈ ಮಾತನ್ನು ಕುರಿತು ವಿಚಾರಿಸುವ ಬಗ್ಗೆ ಅಪೊಸ್ತಲರೂ ಹಿರಿಯರೂ ಕೂಡಿ ಬಂದರು. ಬಹಳ ತರ್ಕವಾದ ಮೇಲೆ ಪೇತ್ರನು ಯೆದ್ದು, ಅವರಿಗೆ ಹೇಳಿದ್ದೇನಂದರೆ,—ಸಹೋದರರಾದ ಜನರೇ, ಪೂರ್ವದಿವಸಗಳಿಂದ ಜನಾಂಗಗಳು ನನ್ನ ಬಾಯಿಂದ ಸುವಾರ್ತೆಯ ವಾಕ್ಯಗಳನ್ನು ಕೇಳಿ ವಿಶ್ವಾಸಿಸುವ ಹಾಗೆ, ದೇವರು ನಮ್ಮೊಳಗೆ ಆದುಕೊಂಡನೆಂದು ನೀವೇ ಬಲ್ಲಿರಿ; ಮತ್ತು ಹೃದಯಗಳನ್ನು ತಿಳಿದವನಾದ ದೇವರು ವಿಶ್ವಾಸದಿಂದ ಅವರ ಹೃದಯಗಳನ್ನು ಶುಚಿಮಾಡಿ, ನಮಗೂ ಅವರಿಗೂ ಯೇನೂ ಹೆಚ್ಚುಕಡಿಮೆ ಮಾಡದೆ, ನಮ್ಮ ಹಾಗೆ ಅವರಿಗೂ ಪರಿಶುದ್ಧಾತ್ಮವನ್ನು ಕೊಟ್ಟು, ಅವರಿಗೆ ಸಾಕ್ಷಿಕೊಟ್ಟನು. ಹೀಗಿರುವದರಿಂದ ನೀವು ನೊಗವನ್ನು ಶಿಷ್ಯರ ಕುತ್ತಿಗೆಯ ಮೇಲೆ ಇಟ್ಟು, ದೇವರನ್ನು ಶೋಧಿಸುವದು ಯಾಕೆ? ಅವರ ಹಾಗೆಯೇ ನಾವು ಕರ್ತನಾದ ಯೇಸು ಕ್ರಿಸ್ತನ ಕೃಪೆಯಿಂದ ರಕ್ಷಿಸಲ್ಪಡುತ್ತೇವೆಂದು ನಂಬುತ್ತೇವಲ್ಲಾ?—ಆಗ ಸಮೂಹವೆಲ್ಲಾ ಸುಮ್ಮನೇ ಇದ್ದು, ಬರ್ನಬನೂ ಪೌಲನೂ, ದೇವರು ತಮ್ಮ ಮುಖಾಂತ್ರವಾಗಿ ಜನಾಂಗಗಳಲ್ಲಿ ಮಾಡಿದ ಲಕ್ಷಣಗಳನ್ನೂ ಅದ್ಭುತಗಳನ್ನೂ ವಿವರಿಸುವದನ್ನು ಕೇಳಿದರು. ಅವರು ಸುಮ್ಮನೇ ಆದ ಮೇಲೆ ಕರ್ತನ ತ

ಮ್ಮನಾದ (ಗಲಾ. ೧, ೧೯.) ಯಾಕೋಬನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,–ಸಹೋದರರಾದ ಜನರೇ, ನನಗೆ ಕಿವಿ ಕೊಡಿರಿ! ದೇವರು ತನ್ನ ಹೆಸರಿನ ನಿಮಿತ್ತ ಜನಾಂಗಗಳೊಳಗಿಂದ ಪ್ರಜೆಯನ್ನು ತಕ್ಕೊಳ್ಳುವದಕ್ಕೆ ಮೊದಲು ದರ್ಶಿಸಿದ್ದನ್ನು ಸೀಮೋನನು ವಿವರಿಸಿದ್ಧಾನೆ. ಇದಕ್ಕೆ ಪ್ರವಾದಿಗಳ ವಾಕ್ಯವು ಸರಿಯಾಗಿದೆ. ಲೋಕದಾರಂಭದಿಂದ ದೇವರಿಗೆ ತನ್ನ ಕ್ರಿಯೆಗಳೆಲ್ಲಾ ತಿಳಿದವೆ. ಆದದರಿಂದ ಜನಾಂಗಗಳೊಳಗಿಂದ ದೇವರ ಕಡೆಗೆ ತಿರುಗುವವರನ್ನು ಹೆಚ್ಚಾಗಿ ತೊಂದರೆ ಪಡಿಸದೆ, ವಿಗ್ರಹಗಳ ಅಶುಚಿಯಾದವುಗಳಿಂದಲೂ ಜಾರತ್ವದಿಂದಲೂ ಕೊರಳು ಹಿಸಕಲ್ಪಟ್ಟದರಿಂದಲೂ ರಕ್ತದಿಂದಲೂ ತೊಲಗುವದಕ್ಕೆ ಆಜ್ಞಾಪಿಸ ಬೇಕೆಂದು ನಾನು ನಿರ್ಣಯಿಸುತ್ತೇನೆ.–ಆಗ ತಮ್ಮೊಳಗಿಂದ ಆಯಲ್ಪಟ್ಟಂಥಾ ಸಹೋದರರಲ್ಲಿ ನಾಯಕರಾದಂಥಾ ಬರ್ಸಬನೆಂಬ ಯೂದನನ್ನೂ ಸೀಲನನ್ನೂ ಪೌಲನ ಸಂಗಡಲೂ ಬರ್ನಬನ ಸಂಗಡಲೂ ಅಂತಿಯೊಕ್ಯಕ್ಕೆ ಕಳುಹಿಸುವದು ಅಪೊಸ್ತಲರಿಗೂ ಹಿರಿಯರಿಗೂ ಸಮಸ್ತ ಸಭೆಗೂ ವೊಳ್ಳೇದಾಗಿ ತೋಚಿತು. ಇವರ ಕೈಯಿಂದ ಅವರು ಬರದು ಕಳುಹಿಸಿದ್ದು ಯೇನಂದರೆ,–ಅಪೊಸ್ತಲರೂ ಹಿರಿಯರೂ ಸಹೋದರರೂ ಜನಾಂಗಗಳವರಾದ ಸಹೋದರರಿಗೆ ಶುಭವಾಗಲಿ! ನಂಮಲ್ಲಿಂದ ಹೊರಟ ಕೆಲವರು ನಮ್ಮ ಅಪ್ಪಣೆ ಇಲ್ಲದೆ ನಿಮ್ಮ ಹೃದಯಗಳನ್ನು ಗಲಿಬಿಲಿ ಮಾಡಿ, ನಿಮ್ಮನ್ನು ಮಾತುಗಳಿಂದ ಕಳವಳ ಪಡಿಸಿದರೆಂದು ಕೇಳಿದದರಿಂದ, ನಾವು ಯೇಕಮನಸ್ಸಾಗಿದ್ದು, ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನ ನಿಮಿತ್ತ ತಮ್ಮ ಪ್ರಾಣಗಳನ್ನು ವೊಪ್ಪಿಸಿದ ಮನುಷ್ಯರಾದ ನಮ್ಮ ಪ್ರಿಯ ಬರ್ನಬನ ಮತ್ತು ಪೌಲನ ಸಂಗಡ ಆಯಲ್ಪಟ್ಟ ಜನರನ್ನು ನಿಮ್ಮ ಬಳಿಗೆ ಕಳುಹಿಸುವದು ನಮಗೆ ವೊಳ್ಳೇದಾಗಿ ತೋಚಿತು. ಯೇನಂದರೆ ವಿಗ್ರಹಬಲಿಗಳಿಂದಲೂ ರಕ್ತದಿಂದಲೂ ಕೊರಳು ಹಿಸಕಲ್ಪಟ್ಟದರಿಂದಲೂ ಜಾರತ್ವದಿಂದಲೂ ತೊಲಗ ಬೇಕೆಂಬ ಅವಶ್ಯವಾಗಿರುವ ಭಾರಕ್ಕಿಂತ ಹೆಚ್ಚಾದದ್ದನ್ನು ನಿಮ್ಮ ಮೇಲೆ ಇಡದೆ ಇರುವದು ಪರಿಶುದ್ಧಾತ್ಮಕ್ಕೂ ನಮಗೂ ವೊಳ್ಳೇದಾಗಿ ತೋಚಿತು. ಅವುಗಳನ್ನು ಬಿಟ್ಟು, ನಿಂಮನ್ನು ನೀವೇ ಕಾಪಾಡಿಕೊಂಡರೆ, ಚನ್ನಾಗಿ ಮಾಡುವಿರಿ. ಕ್ಷೇಮವಾಗಲಿ!

ಆಗ ಇವರು ಅಪ್ಪಣೆ ತೆಗದುಕೊಂಡು, ಅಂತಿಯೊಕ್ಯಕ್ಕೆ ಬಂದು, ಸಮೂಹವನ್ನು ಕೂಡಾ ಕರಸಿ, ಪತ್ರಿಕೆಯನ್ನು ಕೊಟ್ಟರು. ಅವರು ಓದಿ, ಆದರಣೆ ಹೊಂದಿ, ಸಂತೋಷಪಟ್ಟರು. ಆದರೆ ಸೀಲನಿಗೆ ಅಲ್ಲಿ ನಿಲ್ಲ ಮನಸ್ಸಾಯಿತು.

ಕೆಲವು ದಿವಸಗಳ ಮೇಲೆ ಪೌಲನು ಬರ್ನಬನಿಗೆ,—ನಾವು ದೇವರ ವಾಕ್ಯವನ್ನು ತಿಳಿಸಿದ ಪಟ್ಣಪಟ್ಣದಲ್ಲಿರುವ ನಮ್ಮ ಸಹೋದರರು ಹ್ಯಾಗೆ ಇದ್ದಾರೆಂದು ನೋಡುವದಕ್ಕೆ ತಿರಿಗಿ ಹೋಗುವಾ! ಅಂದನು. ಆಗ ಬರ್ನಬನು ಮಾರ್ಕನೆಂಬ ಯೋಹಾನನನ್ನು ಸಂಗಡ ಕರಕೊಂಡು ಹೋಗ ಬೇಕೆಂದಿದ್ದನು. ಆದರೆ ಪೌಲನು ಪಂಫುಲ್ಯದಲ್ಲಿರುವಾಗ ತಮ್ಮನ್ನು ಬಿಟ್ಟು ಹೋದವನನ್ನು ಕರಕೊಂಡು ಹೋಗುವದು ಯುಕ್ತವಲ್ಲವೆಂದು ಯೋಚಿಸಿದನು. ಆದದರಿಂದ ಅವರು ವೊಬ್ಬರನ್ನೊಬ್ಬರು ಬಿಟ್ಟು ಹೋದರು. ಬರ್ನಬನು ಮಾರ್ಕನನ್ನು ಕರಕೊಂಡು, ಹಡಗಮಾರ್ಗವಾಗಿ ಕುಪ್ರಕ್ಕೆ ಹೋದನು. ಪೌಲನು ಸೀಲನನ್ನು ಆದುಕೊಂಡು, ಸಹೋದರರಿಂದ ದೇವರ ಕೃಪೆಗೆ ವೊಪ್ಪಿಸಲ್ಪಟ್ಟು ಹೊರಟು, ಸಭೆಗಳನ್ನು ಸ್ಥಿರಪಡಿಸುತ್ತಾ ಸುರ್ಯವನ್ನೂ ಕಿಲಿಕ್ಯವನ್ನೂ ಸಂಚರಿಸಿದನು.

ತರುವಾಯ ಅವನು ದೆರ್ಬೆಗೂ ಲುಸ್ತ್ರಕ್ಕೂ ಬಂದನು. ಲುಸ್ತ್ರದಲ್ಲಿ ತಿಮೊಥೆಯನೆಂಬ ವೊಬ್ಬ ಶಿಷ್ಯನಿದ್ದನು. ಇವನ ತಂದೆ ಗ್ರೇಕನು. ಅವನ



ತಾಯಿ ಯೂನಿಕೆಯೂ, ಅಜ್ಜಿ ಲೋಯಿಯೂ ಕಪಟವಿಲ್ಲದ ವಿಶ್ವಾಸದಲ್ಲಿ ನೆಲೆಯಾಗಿದ್ದರು. (೨ ತಿಮೊ. ೧, ೧೫.) ಮತ್ತು ಆ ಯೌವನಸ್ಥನು ಚಿಕ್ಕಂದಿನಿಂದ ಪರಿಶುದ್ಧ ಬರಹಗಳನ್ನು ಅರಿತಿದ್ದನು. (೨ ತಿಮೊ. ೩, ೧೪. ೧೫.) ಅವನು ಲುಸ್ತ್ರದಲ್ಲಿಯೂ ಇಕೊನ್ಯದಲ್ಲಿಯೂ ಇರುವ ಸಹೋದರರಿಂದ ಸಾಕ್ಷಿಗೊಂಡಿದ್ದನು. ಇವನು ತನ್ನ ಸಂಗಡ ಹೊರಟು ಬರಬೇಕೆಂದು ಪೌಲನು ಇಚ್ಛಯಿಸಿದನು. ಅವರು ಪಟ್ಣಗಳನ್ನು ಸಂಚರಿಸುತ್ತಿರುವಾಗ, ಯೆರೂಸಲೇಮಿನಲ್ಲಿರುವ ಅಪೊಸ್ತಲರೂ ಹಿರಿಯರೂ ನೇಮಿಸಿದ ಆಜ್ಞೆಗಳನ್ನು ಕಾಯಬೇಕೆಂದು ಅವರಿಗೆ ಒಪ್ಪಿಸಿದರು. ಹೀಗಿರಲಾಗಿ ಸಭೆಗಳು ವಿಶ್ವಾಸದಲ್ಲಿ ಸ್ಥಿರ ಪಟ್ಟವು; ಮತ್ತು ಅವುಗಳ ಲೆಖ್ಖವು ದಿನದಿನ ಹೆಚ್ಚಿತು.

ಅವರು ಫ್ರುಗ್ಯವನ್ನೂ ಗಲಾತ್ಯ ಸೀಮೆಯನ್ನೂ ಮೂಸ್ಯವನ್ನೂ ಹಾದು, ತ್ರೋಯಕ್ಕೆ ಇಳಿದು ಹೋದರು. ಮತ್ತು ರಾತ್ರಿಯಲ್ಲಿ ಪೌಲನಿಗೆ ದರ್ಶನವು ಕಾಣಿಸಿತು; ಯೇನಂದರೆ ಒಬ್ಬ ಮಕೆದೋನ್ಯ ಮನುಷ್ಯನು,—ನೀನು ಮಕೆದೋನ್ಯಕ್ಕೆ ಬಂದು, ನಮಗೆ ಸಹಾಯ ಮಾಡು! ಯೆಂದು ಅವನನ್ನು ಬೇಡಿಕೊಂಡು ನಿಂತಿದ್ದನು. ಅವನು ಆ ದರ್ಶನವನ್ನು ಕಂಡಾಗಲೇ, ಅವರಿಗೆ ಸುವಾರ್ತೆ ಪ್ರಸಂಗಿಸುವದಕ್ಕೆ ಕರ್ತನು ತಮ್ಮನ್ನು ಕರದಿದ್ಧಾನೆಂದು ತಿಳಕೊಂಡು, ತ್ರೋಯವನ್ನು ಬಿಟ್ಟು ಮಕೆದೋನ್ಯಕ್ಕೆ ಹೋಗಿ, ಮಕೆದೋನ್ಯದ ಆ ಪ್ರಾಂತ್ಯಕ್ಕೆ ಮೊದಲನೇ ಪಟ್ಣವಾಗಿರುವ ಫಿಲಿಪ್ಪಿಗೆ ಸೇರಿದರು. ಆ ಪಟ್ಣದಲ್ಲಿ ಕೆಲವು ದಿವಸಗಳಿದ್ದರು. ಮತ್ತು ಸಬ್ಬಥಿನ ದಿವಸದಲ್ಲಿ ಪಟ್ಣದ ಹೊರಗೆ ನದಿಯ ಸಮೀಪದಲ್ಲಿ ಪ್ರಾರ್ಥನೆ ಮಾಡುವ ಸ್ಥಳಕ್ಕೆ ಹೋಗಿ, ಕೂತುಕೊಂಡು, ಕೂಡಿ ಬಂದಿದ್ದ ಸ್ತ್ರೀಯರ ಸಂಗಡ ಮಾತಾಡಿದರು. ಆಗ ರಕ್ತಾಂಬರ ಮಾರುವವಳೂ ದೇವರಿಗೆ ಭಯ ಪಡುವವಳೂ ಆಗಿರುವ ಲೂದ್ಯಳೆಂಬ ಒಬ್ಬ ಸ್ತ್ರೀಯು ಕೇಳಿದಳು; ಪೌಲನು ಮಾತಾಡಿದವುಗಳಿಗೆ ಲಕ್ಷ್ಯವಿಡುವದಕ್ಕೆ ಕರ್ತನು ಅವಳ ಹೃದಯವನ್ನು ತೆರದನು. ಅವಳೂ ಅವಳ ಮನೆಯೂ ಸ್ನಾನ ಹೊಂದಿದಾಗ,—ನನ್ನನ್ನು ಕರ್ತನಿಗೆ ನಂಬಿಗಸ್ಥಳೆಂದು ನೀವು ನೆನಸಿಕೊಂಡರೆ, ನನ್ನ ಮನೆಯೊಳಗೆ ಬಂದು ಇರಿ! ಯೆಂದು ಬೇಡಿಕೊಂಡು, ಪೌಲ

ನಿಗೂ ಅವನ ಸಂಗಡ ಇದ್ದ ಸೀಲನೂ ತಿಮೊಥೆಯನೂ ಲೂಕನೂ ಯೆಂಬ ಮೂವರು ಸಹಾಯಸ್ಥರಿಗೂ ಬಲವಂತ ಮಾಡಿದಳು.—ತರುವಾಯ ಪೌಲನೂ ಅವನ ಸಂಗಡ ಇದ್ದವರೂ ಪ್ರಾರ್ಥನೆಗೆ ಹೋಗುವಾಗ, ಕಣಿ ಹೇಳುವದರಿಂದ ತನ್ನ ಯಜಮಾನರಿಗೆ ಬಹಳ ಆದಾಯವನ್ನು ಉಂಟು ಮಾಡುವಂಥಾ ಪಾಬ್ಬ ದಾಸಿ ಅವರೆದುರಿಗೆ ಬಂದಳು. ಇವಳು ಅವರನ್ನು ಹಿಂಬಾಲಿಸಿ,—ಈ ಮನುಷ್ಯರು ನಮಗೆ ರಕ್ಷಣೆಯ ಮಾರ್ಗವನ್ನು ತಿಳಿಸುವ ಮಹೋನ್ನತವಾದ ದೇವರ ದಾಸರಾಗಿದ್ದಾರೆ! ಯೆಂದು ಕೂಗಿದಳು. ಇದನ್ನು ಅನೇಕ ದಿವಸ ಮಾಡಿದಳು. ಆದರೆ ಪೌಲನು ಕರಕರೆ ಪಟ್ಟು, ತಿರುಗಿಕೊಂಡು,—ಅವಳಿಂದ ಹೊರಗೆ ಬರ ಯೇಸು ಕ್ರಿಸ್ತನ ಹೆಸರಿನಲ್ಲಿ ನಿನಗೆ ಆಜ್ಞಾಪಿಸುತ್ತೇನೆ! ಯೆಂದು ಆತ್ಮಕ್ಕೆ ಹೇಳಿದನು. ಅದೇ ಘಳಿಗೆಯಲ್ಲಿ ಅದು ಅವಳಿಂದ ಹೊರಗೆ ಬಂತು. ಆದರೆ ಅವಳ ಯಜಮಾನರು ತಮ್ಮ ಆದಾಯದ ನಿರೀಕ್ಷೆಯು ಹೋಯಿತೆಂದು ನೋಡಿ, ಪೌಲನನ್ನೂ ಸೀಲನನ್ನೂ ಅಧಿಪತಿಗಳ ಬಳಿಗೆ ಯೆಳದರು. ಮತ್ತು ಅವರನ್ನು ಸೈನ್ಯಾಧಿಪತಿಗಳ ಬಳಿಗೆ ತಂದು ಹೇಳಿದ್ದೇನಂದರೆ,—ಯೆಹೂದ್ಯರಾದ ಈ ಮನುಷ್ಯರು ನಮ್ಮ ಪಟ್ಟಣವನ್ನು ಕಳವಳ ಪಡಿಸಿ, ರೋಮಿಯರಾದ ನಾವು ಅಂಗೀಕರಿಸಲೂ ಮಾಡಲೂ ಬಾರದ ರೀತಿಗಳನ್ನು ತಿಳಿಸುತ್ತಾರೆ. ಮತ್ತು ಸೈನ್ಯಾಧಿಪತಿಗಳು ಅವರ ವಸ್ತ್ರಗಳನ್ನು ಹರಿದು ಹಾಕಿ, ಬೆತ್ತಗಳಿಂದ ಹೊಡಿಯ ಆಜ್ಞಾಪಿಸಿದರು. ಅವರಿಗೆ ಶಾನೆ ಪೆಟ್ಟು ಹೊಡದು, ಅವರನ್ನು ಶೆರೆಮನೆಯಲ್ಲಿ ಹಾಕಿ, ಭದ್ರವಾಗಿ ಕಾಯ ಬೇಕೆಂದು ಶೆರೆಕಾವಲಿಗಾರನಿಗೆ ಅಪ್ಪಣೆ ಕೊಟ್ಟರು. ಇವನು ಇಂಥಾ ಅಪ್ಪಣೆ ಹೊಂದಿ, ಅವರನ್ನು ಒಳಗಿನ ಶೆರೆಮನೆಯಲ್ಲಿ ಹಾಕಿ, ಅವರ ಕಾಲುಗಳನ್ನು ಕೊಳದಲ್ಲಿ ಹಾಕಿ ಬಿಗಿ ಮಾಡಿದನು. ಆದರೆ ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥಿಸಿ, ದೇವರಿಗೆ ಹಾಡಿದರು. ಶೆರೆಯವರು ಅದನ್ನು ಕೇಳಿದರು. ಆಗ ಫಕ್ಕನೆ ಮಹಾ ಭೂಕಂಪ ಉಂಟಾದದರಿಂದ, ಶೆರೆಮನೆಯ ಅಸ್ತಿವಾರಗಳು ಕದಲಿದವು; ಆಕ್ಷಣವೇ ಬಾಗಲುಗಳೆಲ್ಲಾ ತೆರೆಯಲ್ಪಟ್ಟವು; ಯೆಲ್ಲರ ಬಂಧಗಳು ಬಿಟ್ಟಿ ಹೋದವು. ಆಗ ಶೆ

ರೆಕಾವಲಿಗಾರನು ನಿದ್ದೆ ತಿಳಿದು, ಸೆರೆಮನೆಯ ಬಾಗಿಲುಗಳು ತೆರೆದಿರುವದನ್ನು ನೋಡಿ, ಸೆರೆಯವರು ಓಡಿ ಹೋದರೆಂದು ನೆನಸಿ, ಕತ್ತಿ ಹಿಡಿದು, ತನ್ನನ್ನು ಕೊಂದುಕೊಳ್ಳುವದಕ್ಕೆ ಇದ್ದನು. ಆದರೆ ಪೌಲನು ಮಹಾ ಶಬ್ದದಿಂದ,—ನಿನಗೆ ಯಾವ ಕೇಡೂ ಮಾಡಿಕೊಳ್ಳ ಬೇಡ! ನಾವೆಲ್ಲರೂ ಇಲ್ಲಿ ಇದ್ದೇವೆ! ಯೆಂದು ಕೂಗಿದನು. ಆಗಲವನು,—ದೀಪ ಬೇಕು! ಯೆಂದು ಕೂಗಿ, ಒಳಗೆ ಹೋಗಿ, ನಡಗುತ್ತಾ ಪೌಲನ ಮತ್ತು ಸೀಲನ ಮುಂದೆ ಬಿದ್ದನು. ಮತ್ತು ಅವರನ್ನು ಹೊರಗೆ ತಂದು,—ಅಯ್ಯಗಳೇ; ನಾನು ರಕ್ಷಿಸಲ್ಪಡುವ ಹಾಗೆ ಯೇನು ಮಾಡ ಬೇಕು? ಅಂದನು. ಅವರು,—ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡು, ಆಗ ನೀನೂ ನಿನ್ನ ಮನೆಯವರೂ ರಕ್ಷಿಸಲ್ಪಡುವಿರಿ! ಯೆಂದು ಹೇಳಿ, ಅವನಿಗೂ ಅವನ ಮನೆಯವರೆಲ್ಲರಿಗೂ ದೇವರ ವಾಕ್ಯವನ್ನು ಹೇಳಿದರು. ಆಗ ಅವನು ರಾತ್ರಿಯ ಅದೇ ಘಳಿಗೆಯಲ್ಲಿ ಅವರನ್ನು ತಕ್ಕೊಂಡು, ಅವರ ಘಾಯಗಳನ್ನು ತೊಳದನು. ಮತ್ತು ಆಗಲೇ ಅವನೂ ಅವನ ಮನೆಯವರೆಲ್ಲರೂ ಸ್ನಾನ ಹೊಂದಿದರು. ತರುವಾಯ ಅವರನ್ನು ತನ್ನ ಮನೆಗೆ ಕರಕೊಂಡು ಹೋಗಿ, ಭೋಜನ್ನಿಟ್ಟು, ಮನೆಯವರೆಲ್ಲರ ಸಂಗಡ ದೇವರಲ್ಲಿ ವಿಶ್ವಸವಿಟ್ಟು ಆನಂದ ಪಟ್ಟನು. ಬೆಳಗಾದ ಮೇಲೆ ಸೈನ್ಯಾಧಿಪತಿಗಳು,—ಆ ಮನುಷ್ಯರನ್ನು ಬಿಟ್ಟು ಬಿಡು! ಯೆಂದು ಕೋಲುಕಾರರ ಸಂಗಡ ಹೇಳಿ ಕಳುಹಿಸಿದರು. ಆದರೆ ಪೌಲನು ಅವರಿಗೆ,—ರೋಮಿಯರಾದ ನಮ್ಮನ್ನು ಅವರು ನ್ಯಾಯ ವಿಚಾರಿಸದೆ, ಬಹಿರಂಗವಾಗಿ ಹೊಡದು, ಸೆರೆಯಲ್ಲಿ ಹಾಕಿ, ಈಗ ಅಂತರಂಗವಾಗಿ ಹೊರಗೆ ಬಿಡುತ್ತಾರೋ? ಹಾಗಲ್ಲಾ! ಅವರೇ ಬಂದು, ನಮ್ಮನ್ನು ಹೊರಗೆ ಕರಕೊಂಡು ಹೋಗಲಿ! ಅಂದನು. ಕೋಲುಕಾರರು ಸೈನ್ಯಾಧಿಪತಿಗಳಿಗೆ ಈ ಮಾತುಗಳನ್ನು ತಿಳಿಸಿದಾಗ, ಅವರು ಭಯ ಪಟ್ಟು, ಬಂದು, ಅವರನ್ನು ಹೊರಗೆ ತಂದು, ಪಟ್ಣವನ್ನು ಬಿಟ್ಟು ಹೋಗ ಬೇಕೆಂದು ಬೇಡಿಕೊಂಡರು. ಅವರು ಸೆರೆಮನೆಯಿಂದ ಹೊರಟು, ಲೂದ್ಯಳ ಬಳಿಗೆ ಬಂದು, ಸಹೋದರರನ್ನು ಕಂಡು, ಆದರಿಸಿ, ಹೊರಟು ಹೋದರು.


೪೯. ಪೌಲನ ಯೆರಡನೇ ಪ್ರಸಂಗಪರ್ಯಾಟಣೆಯ ಅಂತ್ಯ. ಥೆಸ್ಸಲೊನೀಕೆ. ಬೆರೋಯ. ಅಥೇನೆ. ಕೊರಿಂಥ.

(ಅಪ್. ಕ್ರಿ. ೧೭, ೧—೩೪. ೧೮, ೧—೨೨.)

ತರುವಾಯ ಪೌಲನೂ ಅವನ ಸಂಗಡ ಇದ್ದವರೂ ಥೆಸ್ಸಲೊನೀಕೆಗೆ ಬಂದರು. ಅಲ್ಲಿ ಯೆಹೂದ್ಯರ ಸಭೆಮನೆ ಇತ್ತು. ಪೌಲನು ತನ್ನ ವಾಡಿಕೆಯ ಪ್ರಕಾರ ಅವರ ಬಳಿಗೆ ಪ್ರವೇಶಿಸಿ, ಮೂರು ಸಬ್ಬಥುಗಳಲ್ಲಿ ಬರಹಗಳ ವಿಷಯವಾಗಿ ಅವರ ಸಂಗಡ ಸಂಭಾಷಣೆ ಮಾಡಿ, ಕ್ರಿಸ್ತನು ಶ್ರಮೆ ಪಟ್ಟು, ಸತ್ತವರೊಳಗಿಂದ ಯೇಳ ಬೇಕಾಗಿತ್ತೆಂದೂ, ನಾನು ನಿಮಗೆ ತಿಳಿಸುವ ಯೇಸುವೇ ಕ್ರಿಸ್ತನು ಯೆಂದೂ ವ್ಯಾಖ್ಯಾನ ಮಾಡಿ ಸ್ಥಾಪಿಸಿದನು. ಆಗಲು ಅವರಲ್ಲಿ ಕೆಲವರು ಸಮ್ಮತಿ ಪಟ್ಟು, ಭಕ್ತಿಯುಳ್ಳ ಗ್ರೇಕರ ಬಹು ಸಮೂಹದ ಸಂಗಡಲೂ, ಪ್ರಧಾನ ಸ್ತ್ರೀಯರಲ್ಲಿ ಅನೇಕರ ಸಂಗಡಲೂ ಪೌಲನಿಗೂ ಸೀಲನಿಗೂ ಕೂಡಿಕೊಂಡರು. ಆಗ ಅವಿಶ್ವಾಸಿಗಳಾದ ಯೆಹೂದ್ಯರು ಹೊಟ್ಟೆಕಿಚ್ಚು ಪಟ್ಟು, ನೀಚರಾದ ಕೆಲವು ದುಷ್ಟ ಜನರನ್ನು ಕರಕೊಂಡು, ಗುಂಪು ಕೂಡಿಸಿ, ಪಟ್ಣವನ್ನು ಗಲಿಬಿಲಿ ಮಾಡಿ, ಯಾಸೋನನ ಮನೆಯ ಕವಿದು, ಅವರನ್ನು ಹೊರಗೆ ತರುವದಕ್ಕೆ ಪ್ರಯತ್ನ ಮಾಡಿದರು. ಆದರೆ ಅವರನ್ನು ಕಾಣದೆ, ಯಾಸೋನನನ್ನೂ ಇನ್ನು ಕೆಲವು ಸಹೋದರರನ್ನೂ ಪಟ್ಣದ ಅಧಿಪತಿಗಳ ಬಳಿಗೆ ಯೆಳದು ಕೂಗಿದ್ದೇನಂದರೆ,—ಲೋಕವನ್ನು ಗಲಿಬಿಲಿ ಮಾಡುವವರಾದ ಇವರು ಇಲ್ಲಿಗೂ ಬಂದಿದ್ದಾರೆ; ಯಾಸೋನನು ಅವರನ್ನು ಅಂಗೀಕರಿಸಿದ್ದಾನೆ; ಇವರೆಲ್ಲರೂ ಯೇಸುವೆಂಬ ಬೇರೆ ಅರಸನು ಇದ್ದಾನೆಂದು ಹೇಳಿ, ಕೈಸರನ ಆಜ್ಞೆಗಳಿಗೆ ವಿರೋಧವಾಗಿ ನಡಿಯುತ್ತಾರೆ. ಅಧಿಪತಿಗಳು ಯಾಸೋನನು ಮೊದಲಾದವರಿಂದ ಹೊಣೆ ತಕ್ಕೊಂಡು ಅವರನ್ನು ಬಿಟ್ಟರು. ಆಗ ಸಹೋದರರು ರಾತ್ರಿಯಲ್ಲಿ ಪೌಲನನ್ನೂ ಸೀಲನನ್ನೂ ಬೆರೋಯಕ್ಕೆ ಕಳುಹಿಸಿದರು. ಅವರು ಸೇರಿ, ಯೆಹೂದ್ಯರ ಸಭೆಮನೆಗೆ ಹೋದರು. ಇವರು ಥೆಸ್ಸಲೊನೀಕೆಯವರಿಗಿಂತ ಸುಜನರಾಗಿದ್ದದರಿಂದ, ವಾಕ್ಯವನ್ನು ಪೂರ್ಣ

ಮನಸ್ಸಾಗಿ ಅಂಗೀಕರಿಸಿ, ಇವು ಹೀಗೋ ಯೆಂದು ದಿನದಿನಕ್ಕೆ ಬರಹಗಳನ್ನು ಶೋಧಿಸಿದರು. ಆದದರಿಂದ ಅವರಲ್ಲಿ ಅನೇಕರು ವಿಶ್ವಾಸಿಸಿದರು. ಆದರೆ ಥೆಸ್ಸಲೊನೀಕೆಯ ಯೆಹೂದ್ಯರು ಬೆರೋಯದಲ್ಲಿ ಪೌಲನು ದೇವರ ವಾಕ್ಯವನ್ನು ಪ್ರಸಂಗಿಸುತ್ತಾನೆಂದು ಕೇಳಿ, ಅಲ್ಲಿಗೂ ಬಂದು, ಸಮೂಹಗಳನ್ನು ಕದಲಿಸಿದರು. ಸಂಗಡಲೇ ಸಹೋದರರು ಪೌಲನನ್ನು ಅಥೇನೆಯವರೆಗೂ ಕರಕೊಂಡು ಹೋದರು.

ಮತ್ತು ಪೌಲನು ಅಥೇನೆಯಲ್ಲಿ ಇರುವಾಗ, ಆ ಪಟ್ಟಣವು ವಿಗ್ರಹಾಧೀನವಾಗಿರುವದನ್ನು ನೋಡಿದದರಿಂದ, ಅವನ ಆತ್ಮವು ಅವನಲ್ಲಿ ಉರಿಯಿತು. ಆದಕಾರಣ ಸಭೆಮನೆಯಲ್ಲಿ ಯೆಹೂದ್ಯರ ಸಂಗಡಲೂ ಭಕ್ತರ ಸಂಗಡಲೂ, ಸಂತೆಬೀದಿಯಲ್ಲಿ ದಿನದಿನ ಕಂಡವರ ಸಂಗಡಲೂ ಸಂಭಾಷಣೆ ಮಾಡಿದನು. ಆಗ ಕೆಲವರು,—ಈ ಹರಟೆಯವನು ಯೇನು ಹೇಳ ಬೇಕೆಂದಿದ್ದಾನೆ? ಯೆಂದೂ, ಕೆಲವರು,—ಪರದೈವಗಳನ್ನು ತಿಳಿಸುವವನಾಗಿ ಕಾಣಿಸುತ್ತಾನೆ ಯೆಂದೂ ಹೇಳಿದರು. ಯಾಕಂದರೆ ಅವನು ಯೇಸುವನ್ನೂ ಪುನರುತ್ಥಾನವನ್ನೂ ಅವರಿಗೆ ಪ್ರಸಂಗಿಸಿದನು. ಆಗಲವರು ಅವನನ್ನು ಅರೆಯೊಪಾಗಕ್ಕೆ ಕರಕೊಂಡು ಹೋಗಿ,—ನೀನು ಹೇಳುವ ಈ ಹೊಸ ಬೋಧನೆಯು ಯೇನೆಂದು ನಾವು ತಿಳಿಯ ಬಹುದೋ? ಯಾಕಂದರೆ ಅಪರೂಪವಾದವುಗಳನ್ನು ನಮ್ಮ ಕಿವಿಯಲ್ಲಿ ಬೀಳ ಮಾಡುತ್ತೀ; ಇವು ಯೇನಾದಾವೆಂದು ತಿಳಿಯ ಬೇಕೆಂದಿದ್ದೇವೆ, ಅಂದರು. ಯಾಕಂದರೆ ಅಥೇನೆಯವರೆಲ್ಲರಿಗೆ ನೂತನವಾದದ್ದೇನಾದರೂ ಮಾತಾಡುವದೂ ಕೇಳುವದೂ ಹೊರತು ಬೇರೆ ಯಾವದಕ್ಕೂ ಸಾವಕಾಶವಿಲ್ಲ. ಆಗ ಪೌಲನು ಅರೆಯೊಪಾಗದ ಮಧ್ಯದಲ್ಲಿ ನಿಂತುಕೊಂಡು ಹೇಳಿದ್ದೇನಂದರೆ,—ಅಥೇನೆಯವರಾದ ಜನರೇ! ನಾನು ಹಾದು ಬಂದು, ನಿಮ್ಮ ಆರಾಧನೆಗಳನ್ನು ನೋಡಿ, ತಿಳಿಯದ ದೇವರಿಗೆ ಯೆಂದು ಮೇಲೆ ಬರದಿರುವ ಪೀಠವನ್ನು ಸಹಾ ಕಂಡುಕೊಂಡೆನು; ಆದದರಿಂದ ನೀವು ತಿಳಿಯದೆ ಭಜಿಸುವವನನ್ನೇ ನಾನು ನಿಮಗೆ ತಿಳಿಸುತ್ತೇನೆ. ಲೋಕವನ್ನೂ ಅದರಲ್ಲಿ ಇರುವವುಗಳೆಲ್ಲವನ್ನೂ ಉಂಟು ಮಾಡಿದ ದೇವರು ತಾ



ನೇ ಪರಲೋಕಕ್ಕೂ ಭೂಲೋಕಕ್ಕೂ ಕರ್ತನಾಗಿದ್ದು, ಕೈಯಿಂದಾದ ಮಂದಿರಗಳಲ್ಲಿ ವಾಸ ಮಾಡನು. ತಾನೇ ಯೆಲ್ಲರಿಗೆ ಜೀವವನ್ನೂ ಉಸುರನ್ನೂ ಯೆಲ್ಲವುಗಳನ್ನೂ ಕೊಡುವವನಾಗಿ, ಯೇನಾದರೂ ಬೇಕಾದವನ ಹಾಗೆ ಮನುಷ್ಯರ ಕೈಗಳಿಂದ ಪೂಜಿಸಲ್ಪಡುವದಿಲ್ಲಾ. ಆತನು ಒಂದೇ ರಕ್ತದಿಂದ ಮನುಷ್ಯರ ಯೆಲ್ಲಾ ಜನಾಂಗಗಳನ್ನು ಉಂಟು ಮಾಡಿ, ಮುಂನೇಮಿಸಿದ ಕಾಲಗಳನ್ನೂ ಅವರ ನಿವಾಸದ ಮೇರೆಗಳನ್ನೂ ಗೊತ್ತು ಮಾಡಿ, ಅವರು ತಡವಿ, ಕರ್ತನನ್ನು ಕಂಡುಕೊಂಡಾರೇನೋ ಯೆಂದು ಆತನನ್ನು ಹುಡುಕುವ ಹಾಗೆ ಭೂಮಿಯ ಮೇಲ್ಭಾಗದಲ್ಲೆಲ್ಲಾ ನಿವಾಸವಾಗಿರ ಮಾಡಿದ್ದಾನೆ. ಆದಾಗ್ಯೂ ಆತನು ನಂಮಲ್ಲಿ ಯಾವನೊಬ್ಬನಿಗಾದರೂ ದೂರವಾದವನಲ್ಲಾ. ಯಾಕಂದರೆ ಆತನ ವಂಶದವರಾಗಿದ್ದೇವೆಂದು ನಿಮ್ಮ ಕವಿಗಳಲ್ಲಿ ಕೆಲವರು ಹೇಳಿದ ಪ್ರಕಾರ, ಆತನಲ್ಲಿ ಬದುಕುತ್ತೇವೆ, ಚರಿಸುತ್ತೇವೆ, ಇರುತ್ತೇವೆ. ಆದದರಿಂದ ನಾವು ದೇವರ ವಂಶವಾಗಿದ್ದರೆ, ದೈವವು ಮನುಷ್ಯನ ಚಮತ್ಕಾರದಿಂದಲೂ ಆಲೋಚನೆಯಿಂದಲೂ ಉಂಟಾದ ನಿರ್ಮಾಣವಾಗಿರುವ ಚಿಂನಕ್ಕಾದರೂ ಬೆಳ್ಳಿಗಾದರೂ ಕಲ್ಲಿಗಾದರೂ ಸಮಾನವಾಗಿದೆ ಯೆಂದು ನಾವು ನೆನಸ ಬಾರದು. ದೇವರು ಆ ಅಜ್ಞಾನದ ಕಾಲಗಳನ್ನು ಲಕ್ಷ್ಯ ಮಾಡದೆ ಇದ್ದನು; ಆದರೆ ಈಗ ಮಾನಸಾಂತರ ಪಡ ಬೇಕೆಂದು ಯೆಲ್ಲಾ ಕಡೆಯಲ್ಲಿರುವ ಯೆಲ್ಲಾ ಮನುಷ್ಯ

ರಿಗೆ ಅಪ್ಪಣೆ ಕೊಡುತ್ತಾನೆ. ಆದಕಾರಣ ತಾನು ನೇಮಿಸಿದ ಮನುಷ್ಯನಿಂದ ಲೋಕಕ್ಕೆ ನೀತಿಯಾಗಿ ನ್ಯಾಯ ತೀರಿಸುವದಕ್ಕಿರುವ ದಿವಸವನ್ನು ನಿಷ್ಕರ್ಷೆ ಮಾಡಿದ್ದಾನೆ. ಆತನನ್ನು ಸತ್ತವರೊಳಗಿಂದ ಯೆಬ್ಬಿಸಿ, ಯೆಲ್ಲರಿಗೆ ನಂಬಿಕೆ ಉಂಟು ಮಾಡಿದ್ದಾನೆ.—ಆದರೆ ಸತ್ತವರ ಪುನರುತ್ಥಾನವನ್ನು ಕುರಿತು ಕೇಳಿ, ಕೆಲವರು ಹಾಸ್ಯ ಮಾಡಿದರು; ಕೆಲವರು,—ಇದರ ವಿಷಯ ತಿರಿಗಿ ನಿನ್ನನ್ನು ಕೇಳುತ್ತೇವೆ, ಅಂದರು. ಹೀಗಾಗಿ ಪೌಲನು ಅವರ ಮಧ್ಯದಲ್ಲಿಂದ ಹೊರಟು ಹೋದನು. ಆದರೆ ಕೆಲವು ಜನರು ಅವನಿಗೆ ಕೂಡಿಕೊಂಡು ವಿಶ್ವಾಸಿಸಿದರು.

ಇವುಗಳಾದ ಮೇಲೆ ಪೌಲನು ಅಥೇನೆಯನ್ನು ಬಿಟ್ಟು, ಕೊರಿಂಥಕ್ಕೆ ಬಂದನು. ಮತ್ತು ಅಕ್ವಿಲನೆಂಬ ವೊಬ್ಬ ಯೆಹೂದ್ಯನನ್ನೂ ಅವನ ಹೆಂಡತಿಯಾದ ಪ್ರಿಸ್ಕಿಲ್ಲಳನ್ನೂ ಕಂಡು, ಅವರ ಬಳಿಗೆ ಬಂದನು; ಮತ್ತು ಅವನು ಅದೇ ಉದ್ಯೋಗಸ್ಥನಾದದರಿಂದ, ಅವರ ಬಳಿಯಲ್ಲಿ ಇದ್ದು, ಕೆಲಸ ಮಾಡಿದನು; ಯಾಕಂದರೆ ಅವರು ಗುಡಾರ ಮಾಡುವ ಉದ್ಯೋಗಸ್ಥರಾಗಿದ್ದರು. ಮತ್ತು ಪ್ರತಿ ಸಬ್ಬಥಿಗೆ ಅವನು ಸಭೆಮನೆಯಲ್ಲಿ ಸಂಭಾಷಣೆ ಮಾಡಿ, ಯೆಹೂದ್ಯರನ್ನೂ ಗ್ರೀಕರನ್ನೂ ಸಮ್ಮತಿ ಪಡಿಸಿದನು. ಇದಲ್ಲದೆ ವೊಂದು ದಿವಸದಲ್ಲಿ ಅವನು ಯೇಸುವು ಕ್ರಿಸ್ತನೇ ಯೆಂದು ಯೆಹೂದ್ಯರಿಗೆ ಸಾಕ್ಷಿ ಹೇಳಿದನು. ಆದರೆ ಅವರು ಯೆದುರಿಸಿ ದೂಷಿಸಿದಾಗ, ಅವನು ತನ್ನ ವಸ್ತ್ರಗಳನ್ನು ಝಾಡಿಸಿ, ಅವರಿಗೆ,—ನಿಮ್ಮ ರಕ್ತವು ನಿಮ್ಮ ತಲೆಯ ಮೇಲೆ ಇರಲಿ! ನಾನು ಶುದ್ಧನು! ಇಂದಿನಿಂದ ಜನಾಂಗಗಳ ಬಳಿಗೆ ಹೋಗುತ್ತೇನೆ ಯೆಂದು ಹೇಳಿ, ಅಲ್ಲಿಂದ ತೊಲಗಿ ಹೋದನು. ಮತ್ತು ಕೊರಿಂಥ್ಯರಲ್ಲಿ ಅನೇಕರು ಪೌಲನ ಮಾತುಗಳನ್ನು ಕೇಳಿ, ವಿಶ್ವಾಸಿಸಿ, ಸ್ನಾನ ಹೊಂದಿದರು. ಆಗ ಕರ್ತನು ದರ್ಶನದಲ್ಲಿ ಪೌಲನಿಗೆ,—ಭಯ ಪಡ ಬೇಡ! ಸುಮ್ಮನಿರದೆ ಮಾತಾಡು, ಯಾಕಂದರೆ ನಾನು ನಿನ್ನ ಸಂಗಡ ಇದ್ದೇನೆ; ನಿನಗೆ ಕೇಡು ಮಾಡುವದಕ್ಕೆ ವೊಬ್ಬನಾದರೂ ನಿನ್ನ ಮೇಲೆ ಕೈ ಹಾಕನು, ಯಾಕಂದರೆ ಬಹು ಜನರು ಈ ಪಟ್ಟಣದಲ್ಲಿ ನನಗೆ ಇದ್ದಾರೆ, ಯೆಂದು ಹೇಳಿದನು. ಈ

ಪ್ರಕಾರ ಅವನು ಒಂದು ವರುಷ ಆರು ತಿಂಗಳು ಇದ್ದು, ಅವರಲ್ಲಿ ದೇವರ ವಾಕ್ಯವನ್ನು ಬೋಧಿಸುತ್ತಾ ಬಂದನು. (ಆಗ ಥೆಸ್ಸಲೋನೀಕೆಯವರಿಗೆ ಮೊದಲನೇ ಯೆರಡನೇ ಪತ್ರಿಕೆಗಳನ್ನು ಬರದನೆಂದು ಕಾಣುತ್ತದೆ.) ತರುವಾಯ ಯೆಹೂದ್ಯರು ಯೇಕಮನಸ್ಸಾಗಿ ಪೌಲನ ಮೇಲೆ ಕೈ ಹಾಕಿ, ಅವನನ್ನು ಪ್ರತಿಧಾರಿಯಾದ ಗಲ್ಲಿಯೋನನ ಬಳಿಗೆ ತಂದು,—ಇವನು ನ್ಯಾಯಪ್ರಮಾಣಕ್ಕೆ ವಿರೋಧವಾಗಿ ದೇವರನ್ನು ಭಜಿಸ ಜನರನ್ನು ಸಮ್ಮತಿ ಪಡಿಸುತ್ತಾನೆ, ಯೆಂದು ಹೇಳಿದರು. ಆಗ ಪೌಲನು ಬಾಯಿ ತೆರೆಯುವದಕ್ಕೆ ಇರುವಾಗ, ಗಲ್ಲಿಯೋನನು ಯೆಹೂದ್ಯರಿಗೆ,—ಓ ಯೆಹೂದ್ಯರೇ, ನಿಂಮಲ್ಲಿರುವ ನ್ಯಾಯಪ್ರಮಾಣವನ್ನು ಕುರಿತಂಥಾ ತರ್ಕವಾಗಿದ್ದರೆ, ನೀವೇ ನೋಡಿಕೊಳ್ಳಿರಿ! ಇವುಗಳ ವಿಷಯ ನ್ಯಾಯಾಧಿಪತಿಯಾಗಿರ ನನಗೆ ಮನಸ್ಸಿಲ್ಲಾ, ಯೆಂದು ಹೇಳಿ, ಅವರನ್ನು ಪೀಠದ ಬಳಿಯಿಂದ ಹೊರಡಿಸಿದನು.

ಮತ್ತು ಪೌಲನು ಇನ್ನು ಬಹು ದಿವಸಗಳು ಕೊರಿಂಥದಲ್ಲಿ ಇದ್ದ ಮೇಲೆ, ಸಹೋದರರಿಂದ ಅಪ್ಪಣೆ ತೆಗದುಕೊಂಡು, ಹಡಗ ಮಾರ್ಗವಾಗಿ ಪ್ರಿಸ್ಕಿಲ್ಲಳ ಸಂಗಡಲೂ ಅಕ್ವಿಲನ ಸಂಗಡಲೂ ಎಫೆಸಕ್ಕೆ ಸೇರಿ, ಅವರನ್ನು ಅಲ್ಲಿ ಬಿಟ್ಟನು. ತರುವಾಯ ಸಭೆಮನೆಯಲ್ಲಿ ಪ್ರವೇಶಿಸಿ, ಯೆಹೂದ್ಯರ ಸಂಗಡ ಸಂಭಾಷಣೆ ಮಾಡಿದನು. ಆದರೆ ಹೆಚ್ಚು ಕಾಲ ತಮ್ಮ ಸಂಗಡ ಇರ ಬೇಕೆಂದು ಅವರು ಬೇಡಿಕೊಂಡಾಗ, ಅವನು ಒಪ್ಪದೆ,—ದೇವರ ಚಿತ್ತವಾದರೆ ತಿರಿಗಿ ನಿಮ್ಮ ಬಳಿಗೆ ಬರುವೆನು, ಯೆಂದು ಹೇಳಿ, ಅವರಿಂದ ಅಪ್ಪಣೆ ತೆಗದುಕೊಂಡು, ಎಫೆಸವನ್ನು ಬಿಟ್ಟು, ಹಡಗ ಮಾರ್ಗವಾಗಿ ಕೈಸರೈಯಕ್ಕೆ ಬಂದು, ಯೆರೂಸಲೇಮಿಗೆ ಯೇರಿ ಹೋಗಿ, ಸಭೆಯನ್ನು ವಂದಿಸಿ, ಅಂತಿಯೊಕ್ಯಕ್ಕೆ ಇಳಿದು ಹೋದನು.

೫೦. ಪೌಲನ ಮೂರನೇ ಪ್ರಸಂಗಪರ್ಯಟನೆ. ಎಫೆಸ. ಮಕೆದೋನ್ಯ. ಕೊರಿಂಥ. ತ್ರೋಯ. ಮಿಲೇತ.

(ಅಪೊ. ಕ್ರಿ. ೧೮, ೨೩–೨೮. ೧೯, ೧–೪೧. ೨೦, ೧–೩೮. ೨೧, ೧–೨೦.)

ಪೌಲನು ಸ್ವಲ್ಪ ಕಾಲ ಅಂತಿಯೊಖ್ಯದಲ್ಲಿ ಕಳೆದು, ಹೊರಟು, ಗಲಾತ್ಯ ಸೀಮೆಯನ್ನೂ ಫ್ರುಗ್ಯವನ್ನೂ ಕ್ರಮದಿಂದ ಸಂಚರಿಸಿ, ಶಿಷ್ಯರೆಲ್ಲರನ್ನು ಸ್ಥಿರ ಪಡಿಸಿದನು. ಆ ಸೀಮೆಗಳನ್ನು ಹಾದು, ಎಫೆಸಕ್ಕೆ ಬಂದನು. ಮತ್ತು ಅವನು ಸಭೆಮನೆಯಲ್ಲಿ ಪ್ರವೇಶಿಸಿ, ಮೂರು ತಿಂಗಳು ಸಂಭಾಷಿಸಿ, ದೇವರ ರಾಜ್ಯದವುಗಳ ವಿಷಯವಾಗಿ ಸಮ್ಮತಿ ಪಡಿಸುತ್ತಾ, ಧೈರ್ಯದಿಂದ ಮಾತಾಡಿದನು. ಆದರೆ ಕೆಲವರು ಕಠಿಣರಾಗಿ ವಿಶ್ವಾಸಿಸದೆ, ಸಮೂಹದ ಮುಂದೆ ಆ ಮಾರ್ಗವನ್ನು ನಿಂದಿಸುವಾಗ, ಅವನು ಅವರನ್ನು ಬಿಟ್ಟು, ತುರನ್ನನೆಂಬ ವೊಬ್ಬನ ಸಾಲೆಯಲ್ಲಿ ದಿನಾಲೂ ಸಂಭಾಷಣೆ ಮಾಡಿದನು. ಇದು ಯೆರಡು ವರುಷಗಳ ಪರ್ಯಂತರ ನಡೆದದರಿಂದ, ಆಸ್ಯದಲ್ಲಿ ವಾಸವಾಗಿರುವ ಯೆಹೂದ್ಯರೂ ಗ್ರೇಕರೂ ಯೆಲ್ಲರು ಕರ್ತನಾದ ಯೇಸುವಿನ ವಾಕ್ಯವನ್ನು ಕೇಳಿದರು. ಮತ್ತು ದೇವರು ಅಪರೂಪ ಬಲವಾದ ಕ್ರಿಯೆಗಳನ್ನು ಪೌಲನ ಕೈಯಿಂದ ನಡಿಸಿದ ಕಾರಣ, ಅವರು ಅವನ ಮೈಮೇಲಿನಿಂದ ಕೈವಸ್ತ್ರಗಳನ್ನೂ ನಡುಕಟ್ಟುಗಳನ್ನೂ ರೋಗಿಷ್ಟರ ಮೇಲೆ ತಂದು ಹಾಕಿದಾಗ, ರೋಗಗಳು ಅವರನ್ನು ಬಿಟ್ಟು ಹೋದವು; ದುರಾತ್ಮಗಳು ಅವರಿಂದ ಹೊರಟು ಹೋದವು; ಮತ್ತು ಕರ್ತನಾದ ಯೇಸುವಿನ ಹೆಸರು ಮಹಿಮೆ ಹೊಂದಿತು. ಮತ್ತು ವಿಶ್ವಾಸಿಸಿದವರಲ್ಲಿ ಅನೇಕರು ತಮ್ಮ ಕ್ರಿಯೆಗಳನ್ನು ಅರಿಕೆ ಮಾಡಿ, ತಿಳಿಸಲಾರಂಭಿಸಿದರು. ಮತ್ತು ಚಮತ್ಕಾರಗಳನ್ನು ನಡಿಸಿದವರಲ್ಲಿ ಬಹು ಮಂದಿ ತಮ್ಮ ಪುಸ್ತಕಗಳನ್ನು ತಂದು ಕೂಡಿಸಿ, ಯೆಲ್ಲರ ಮುಂದೆ ಸುಟ್ಟು ಬಿಟ್ಟರು. ಮತ್ತು ಅವುಗಳ ಕ್ರಯವನ್ನು ಲೆಕ್ಕ ಮಾಡಿ, ಅದು ಐವತ್ತು ಸಾವಿರ ಬೆಳ್ಳಿ ಹಣವೆಂದು ಕಂಡರು. ಈ ಪ್ರಕಾರ ಕರ್ತನ ವಾಕ್ಯವು ತ್ರಾಣವಾಗಿ ಬೆಳೆದು ಬಲಗೊಂಡಿತು. (ಅಲ್ಲಿಂದ ಪೌಲನು ಗಲಾತ್ಯದ ಸಭೆಗಳಿಗೆ ವೊಂದು ಪತ್ರಿಕೆಯನ್ನೂ, ಕೊರಿಂಥದಲ್ಲಿದ್ದ ಸಭೆಗೆ ಮೊದಲನೇ ಪತ್ರಿಕೆಯನ್ನೂ ಬರೆದನು.)

ಇವುಗಳು ಸಂಪೂರ್ಣವಾದ ಮೇಲೆ, ಪೌಲನು ಮಕೆದೋನ್ಯವನ್ನೂ ಅಕಾಯವನ್ನೂ ಹಾದು, ಯೆರೂಸಲೇಮಿಗೆ ಹೋಗುವದಕ್ಕೆ ನಿಶ್ಚಯಿಸಿಕೊಂಡು, ಅಲ್ಲಿಗೆ ಬಂದ ಮೇಲೆ ರೋಮವನ್ನು ಸಹಾ ನೋಡ ಬೇಕೆಂದು ಹೇಳಿದನು. ಮತ್ತು ತನಗೆ ಸೇವೆ ಮಾಡುವವರಲ್ಲಿ ತಿಮೊಥೆಯನೂ ಎರಸ್ತನೂ ಈ ಇಬ್ಬರನ್ನು ಮಕೆದೋನ್ಯಕ್ಕೆ ಕಳುಹಿಸಿ, ತಾನು ಸ್ವಲ್ಪ ಕಾಲ ಎಫೆಸದಲ್ಲಿ ನಿಂತನು. ಆದರೆ ಆ ಸಮಯದಲ್ಲಿ ಅಲ್ಲಿ ಬಹು ಕಳವಳ ಉಂಟಾಯಿತು; ಹ್ಯಾಗಂದರೆ ದೆಮೇತ್ರಿಯನೆಂಬ ಒಬ್ಬ ಅಕ್ಕಸಾಲಿಗನು ಅರ್ತೆಮಿಯ ಬೆಳ್ಳಿ ಗುಡಿಗಳನ್ನು ಮಾಡಿ, ಆ ಉದ್ಯೋಗಸ್ಥರಿಗೆ ಬಹಳ ಕೆಲಸ ಕೊಡುತ್ತಾ ಇದ್ದನು. ಅವನು ಇವರನ್ನೂ ಅದೇ ತರದ ಹಂಚಾಳರನ್ನೂ ಕೂಡಾ ಕರದು,—ಜನರೇ, ಈ ಕೆಲಸದಿಂದ ನಮಗೆ ಆದಾಯ ಉಂಟಾಗುತ್ತದೆಂದು ಬಲ್ಲಿರಿ; ಮತ್ತು ಈ ಪೌಲನು ಎಫೆಸದಲ್ಲಿ ಮಾತ್ರವಲ್ಲಾ, ಸ್ವಲ್ಪಕಡಿಮೆ ಸಮಸ್ತ ಆಸ್ಯದಲ್ಲಿ ಕೈಗಳಿಂದ ಆಗುವವುಗಳು ದೇವರುಗಳು ಅಲ್ಲವೆಂದು ಹೇಳಿ, ಬಹು ಸಮೂಹವನ್ನು ಸಮ್ಮತಿ ಪಡಿಸಿ ತಿರುಗಿಸಿ ಬಿಟ್ಟಿದ್ದಾನೆಂದು ನೋಡಿ ಕೇಳುತ್ತೀರಿ. ಇದರಿಂದ ಈ ನಮ್ಮ ಉದ್ಯೋಗವು ಅಸಡ್ಡೆಯಾಗುವದಲ್ಲದೆ, ಸಮಸ್ತ ಲೋಕವು ಭಜಿಸುವ ಮಹಾದೇವಿಯಾದ ಅರ್ತೆಮಿಯ ಮಂದಿರವು ಯೇನೂ ಇಲ್ಲವೆಂದು ಯೆಣಿಸಲ್ಪಟ್ಟು, ಅವಳ ಮಹಿಮೆಯು ನಾಶವಾಗುವ ಗಂಡಾಂತರವಾಯಿತು ಅಂದನು. ಅವರು ಇದನ್ನು ಕೇಳಿ, ಉಗ್ರದಿಂದ ತುಂಬಿದವರಾಗಿ,—ಎಫೆಸ್ಯರ ಅರ್ತೆಮಿಯು ದೊಡ್ಡವಳು! ಯೆಂದು ಕೂಗಿದರು. ಆಗ ಪಟ್ಣವೆಲ್ಲಾ ಗಲಿಬಿಲಿಯಿಂದ ತುಂಬಿತು. ಮತ್ತು ಜನರು ಯೇಕಮನಸ್ಸಾಗಿ ರಂಗಸ್ಥಾನಕ್ಕೆ ಓಡಿ ಹೋದರು. ಆದರೆ ಪೌಲನು ಜನರಲ್ಲಿ ಪ್ರವೇಶಿಸ ಬೇಕೆಂದಿದ್ದಾಗ, ಶಿಷ್ಯರು ಅವನನ್ನು ಬಿಡಲಿಲ್ಲಾ. ಹೀಗಿರಲಾಗಿ ಒಬ್ಬರು ಹೀಗೆ, ಒಬ್ಬರು ಹಾಗೆ ಕೂಗಿದರು. ಯಾಕಂದರೆ ಗುಂಪು ಗಲಿಬಿಲಿಯಾಗಿತ್ತು; ತಾವು ಕೂಡಿ ಬಂದ ಕಾರಣವೇನೆಂದು ಹೆಚ್ಚಾದ ಜನರು ತಿಳಿಯದೆ ಇದ್ದರು; ಮತ್ತು ಯೆಲ್ಲರೂ ಯೇಕಶಬ್ದದಿಂದ,—ಎಫೆಸ್ಯರ ಅರ್ತೆಮಿಯು ದೊಡ್ಡವಳು! ಯೆಂದು ಹೆಚ್ಚುಕಡಿಮೆ ಯೆರಡು ತಾಸು ಕೂಗಿದರು.

ಆ ಮೇಲೆ ಶಾನುಭೋಗನು ಸಮೂಹವನ್ನು ಶಾಂತ ಪಡಿಸಿ ಕಳುಹಿಸಿ ಬಿಟ್ಟನು. ಗುಬಾರು ನಿಂತ ಮೇಲೆ, ಪೌಲನು ಶಿಷ್ಯರನ್ನು ಕರದು ಅಪ್ಪಿಕೊಂಡು, ಮಕೆದೋನ್ಯಕ್ಕೆ ಹೋಗುವದಕ್ಕೆ ಹೊರಟನು. ಆ ಪ್ರಾಂತ್ಯಗಳನ್ನು ಸಂಚರಿಸಿ, ಬಹು ವಾಕ್ಯಗಳಿಂದ ಅವರನ್ನು ಯೆಚ್ಚರಿಸಿದನು. (ಈ ಪರ್ಯಟಣೆಯಲ್ಲಿ ಅವನು ಕೊರಿಂಥದಲ್ಲಿದ್ದ ಸಭೆಗೆ ಯೆರಡನೇ ಪತ್ರಿಕೆಯನ್ನು ಬರದನು.) ತರುವಾಯ ಅವನು ಗ್ರೀಕ ದೇಶಕ್ಕೂ ಕೊರಿಂಥ ಪಟ್ಟಣಕ್ಕೂ ಬಂದು, ಅಲ್ಲಿ ಮೂರು ತಿಂಗಳು ಕಳದನು. (ಅಲ್ಲಿಂದ ರೋಮದಲ್ಲಿದ್ದ ಸಭೆಗೆ ಪತ್ರಿಕೆಯನ್ನು ಬರದನು.) ತರುವಾಯ ಅವನು ಮಕೆದೋನ್ಯವನ್ನು ಪುನಹಾ ಹಾದು, ಹುಳಿ ಇಲ್ಲದ ರೊಟ್ಟಿಗಳ ದಿವಸಗಳಾದ ಮೇಲೆ ಫಿಲಿಪ್ಪಿಯಿಂದ ಹಡಗ ಮಾರ್ಗವಾಗಿ ಹೋಗಿ, ತ್ರೋಯಕ್ಕೆ ಶೇರಿದನು. ಅಲ್ಲಿ ಯೇಳು ದಿವಸ ಇದ್ದನು. ಮತ್ತು ವಾರದ ಮೊದಲನೇ ದಿವಸದಲ್ಲಿ ಶಿಷ್ಯರು ರೊಟ್ಟಿ ಮುರಿಯುವದಕ್ಕೆ ಕೂಡಿ ಬಂದಾಗ, ಪೌಲನು ಮಾರಣೇ ದಿವಸ ಹೊರಡ ಮನಸ್ಸಾಗಿದ್ದು, ಅವರಿಗೆ ಪ್ರಸಂಗ ಮಾಡಿ, ಮಧ್ಯರಾತ್ರಿಯ ಪರ್ಯಂತರ ವಾಕ್ಯವನ್ನು ವಿಸ್ತರಿಸುತ್ತ ಇದ್ದನು. ಮತ್ತು ಅವರು ಕೂಡಿಕೊಂಡಿರುವ ಉಪ್ಪರಿಗೆಯಲ್ಲಿ ಬಹು ದೀಪಗಳು ಇದ್ದವು. ಆದರೆ ಯೂತುಕನೆಂಬ ವೊಬ್ಬ ಯೌವನಸ್ಥನು ಕಿಟಕಿಯಲ್ಲಿ ಕೂತುಕೊಂಡು, ಗಾಢನಿದ್ದೆ ಹೋಗಿ, ಪೌಲನು ಬಹಳ ಹೊತ್ತು ಪ್ರಸಂಗ ಮಾಡುವಾಗ, ನಿದ್ರಾಭಾರದಿಂದ ಮೂರನೇ ಅಂತಸ್ತಿನಿಂದ ಕೆಳಗೆ ಬಿದ್ದು, ಸತ್ತವನಾಗಿ ಯೆತ್ತಲ್ಪಟ್ಟನು. ಆಗ ಪೌಲನು ಇಳಿದು, ಅವನ



ಮೇಲೆ ಬಿದ್ದು, ಅವನನ್ನು ಅಪ್ಪಿಕೊಂಡು, — ಕಳವಳ ಪಡ ಬೇಡಿರಿ, ಯಾಕಂದರೆ ಅವನ ಪ್ರಾಣವು ಅವನಲ್ಲಿ ಉಂಟು, ಅಂದನು. ಮತ್ತು ಅವನು ಯೇರಿ ಹೋಗಿ, ರೊಟ್ಟಿಯನ್ನು ಮುರಿದು, ಊಟ ಮಾಡಿ, ಬೆಳಗಿನ ಪರ್ಯಂತರ ಬಹಳ ಮಾತಾಡಿ, ಹಾಗೆಯೇ ಹೊರಟು ಹೋದನು. ಆಗಲವರು ಜೀವಿತನಾದ ಆ ಯೌವನಸ್ಥನನ್ನು ಕರಕೊಂಡು ಹೋಗಿ, ಅತ್ಯಧಿಕವಾದ ಆದರಣೆ ಪಟ್ಟರು.

ತ್ರೋಯದಿಂದ ಪೌಲನು ಹೊತ್ತು ಕಳೆಯದ ಹಾಗೆ ಎಫೆಸವನ್ನು ಬಿಟ್ಟು ಹೋಗ ನಿರ್ಣಯಿಸಿ, ಮಿಲೇತೆಗೆ ಹೋದನು; ಯಾಕಂದರೆ ತನಗೆ ಸಾಧ್ಯವಾದರೆ, ಪಂಚಾಶತ್ತಿನ ದಿವಸಕ್ಕೆ ಯೆರೂಸಲೇಮಿನಲ್ಲಿ ಇರ ಬೇಕೆಂದು ತ್ವರೆ ಪಡುತ್ತಿದ್ದನು. ಮತ್ತು ಮಿಲೇತೆಯಿಂದ ಎಫೆಸಕ್ಕೆ ಹೇಳಿ ಕಳುಹಿಸಿ, ಸಭೆಯ ಹಿರಿಯರನ್ನು ಕರಸಿದನು. ಇವರು ಅವನ ಬಳಿಗೆ ಬಂದಾಗ, ಅವರಿಗೆ ಹೇಳಿದ್ದೇನಂದರೆ, — ಇಗೋ, ನಾನು ಆತ್ಮದಲ್ಲಿ ಬಂಧಿಸಲ್ಪಟ್ಟವನಾಗಿ ಯೆರೂಸಲೇಮಿಗೆ ಹೋಗುತ್ತೇನೆ; ಬಂಧಗಳೂ ಉಪದ್ರಗಳೂ ನನಗೆ ಕಾದಿರುತ್ತವೆಂದು ಪರಿಶುದ್ಧಾತ್ಮವು ಪಟ್ಟಣ ಪಟ್ಟಣದಲ್ಲಿ ಸಾಕ್ಷಿ ಕೊಡುವದೇ ಹೊರತು ಅಲ್ಲಿ ನನಗೆ ಸಂಭವಿಸುವವುಗಳನ್ನು ಅರಿಯೆನು. ಆದರೆ ನಾನು ಯಾವದನ್ನಾದರು ಚಿಂತಿಸುವದಿಲ್ಲ; ನನ್ನ ಓಟವನ್ನೂ, ದೇವರ ಕೃಪೆಯ ಸುವಾರ್ತೆಗೆ ಸಾಕ್ಷಿ ಕೊಡುವದಕ್ಕೆ ಕರ್ತನಾದ ಯೇಸುವಿನಿಂದ ನಾನು ಹೊಂದಿದ ಸೇವೆಯನ್ನೂ ಸಂತೋಷದಿಂದ ಪೂರೈಸುವ ಹಾಗೆ, ನನ್ನ ಪ್ರಾಣವು ನನಗೆ ಪ್ರಿಯವೆಂದು ಯೆಣಿಸುವದಿಲ್ಲ. ಮತ್ತು ಈಗ ಇಗೋ, ನನ್ನ ಮುಖವನ್ನು ನೀವೆಲ್ಲರು ಇನ್ನೂ ನೋಡುವದಿಲ್ಲವೆಂದು ಬಲ್ಲೆನು; ಆದದರಿಂದ ನಾನು ಯೆಲ್ಲರ ರಕ್ತದ ವಿಷಯದಲ್ಲಿ ಶುದ್ಧನಾಗಿದ್ದೇನೆಂದು ಈ ದಿವಸದಲ್ಲಿ ನಿಮಗೆ ಸಾಕ್ಷಿ ಕೊಡುತ್ತೇನೆ; ಹ್ಯಾಗಂದರೆ ದೇವರ ಚಿತ್ತವನ್ನೆಲ್ಲಾ ನಾನು ನಿಮಗೆ ತಿಳಿಸದ ಹಾಗೆ ಹಿಂದೆಗೆಯಲಿಲ್ಲ. ಹೀಗಿರುವದರಿಂದ ದೇವರು ಸ್ವಂತ ರಕ್ತದಿಂದ ಕೊಂಡುಕೊಂಡ ಸಭೆಯನ್ನು ಮೇಯಿಸುವ ಹಾಗೆ, ಆ ಸಮಸ್ತ ಮಂದೆಗೂ ನಿಮಗೂ ಜಾಗ್ರತೆಯಿಂದ ನೋಡಿರಿ; ಮತ್ತು ನಾನು ಮೂರು ವರುಷ

ರಾತ್ರಿ ಹಗಲು ಕಣ್ಣೀರು ಹಾಕುತ್ತಾ, ಒಬ್ಬೊಬ್ಬನನ್ನು ಯೆಡೆಬಿಡದೆ ಯೆಚ್ಚರಿಸಿದೆನೆಂದು ಜ್ಞಾಪಕ ಮಾಡಿಕೊಳ್ಳಿರಿ. ಮತ್ತು ಸಹೋದರರೇ, ಈಗ ನಿಮ್ಮನ್ನು ಕಟ್ಟಲೂ, ಸಮಸ್ತ ಪರಿಶುದ್ಧರೊಳಗೆ ನಿಮಗೆ ಬಾಧ್ಯತೆಯನ್ನು ಕೊಡಲೂ ಶಕ್ತನಾದ ದೇವರಿಗೂ, ಆತನ ಕೃಪೆಯ ವಾಕ್ಯಕ್ಕೂ ನಿಮ್ಮನ್ನು ಒಪ್ಪಿಸುತ್ತೇನೆ. ಯಾವನ ಬೆಳ್ಳಿಯನ್ನಾದರೂ ಬಂಗಾರವನ್ನಾದರೂ ವಸ್ತ್ರವನ್ನಾದರೂ ನಾನು ಆಶಿಸಲಿಲ್ಲ; ಆದರೆ ನನ್ನ ಅವಶ್ಯಗಳಿಗೂ ನನ್ನ ಸಂಗಡ ಇದ್ದವರಿಗೂ ಈ ಕೈಗಳು ಸೇವಿಸಿದವೆಂದು ನೀವೇ ಬಲ್ಲಿರಿ. ಈ ಪ್ರಕಾರ ಕಷ್ಟ ಮಾಡಿ, ಬಲಹೀನರನ್ನು ಸಂರಕ್ಷಿಸಲೂ, ತೆಗೆದು ಕೊಳ್ಳುವದಕ್ಕಿಂತ ಕೊಡುವದು ಹೆಚ್ಚು ಭಾಗ್ಯವೆಂದು ಕರ್ತನಾದ ಯೇಸು ಹೇಳಿದ ಮಾತುಗಳನ್ನು ಜ್ಞಾಪಕ ಮಾಡಿಕೊಳ್ಳಲೂ ಬೇಕೆಂದು ನಿಮಗೆ ಯೆಲ್ಲಾ ತೋರಿಸಿದ್ದೇನೆ. — ಇವುಗಳನ್ನು ಹೇಳಿ ಮೊಣಕಾಲೂರಿಕೊಂಡು, ಅವರೆಲ್ಲರ ಸಂಗಡ ಪ್ರಾರ್ಥನೆ ಮಾಡಿದನು. ಆಗ ಯೆಲ್ಲರೂ ಬಹಳವಾಗಿ ಅತ್ತು, ಪೌಲನ ಕೊರಳಿನ ಮೇಲೆ ಬಿದ್ದು, ಅವನನ್ನು ಮುದ್ದಿಟ್ಟು, ನನ್ನ ಮುಖವನ್ನು ಇನ್ನು ನೋಡುವದಿಲ್ಲವೆಂದು ಅವನು ಹೇಳಿದ ಮಾತಿಗೆ ಮುಖ್ಯವಾಗಿ ವ್ಯಥೆ ಪಟ್ಟು, ಅವನನ್ನು ಹಡಗಕ್ಕೆ ಸಾಗಕಳುಹಿಸಿದರು.

ಪೌಲನು ಅವರನ್ನು ಬಿಟ್ಟ ಮೇಲೆ ಹಡಗವನ್ನು ಯೇರಿ, ಸುರ್ಯಕ್ಕೆ ಹೋಗಿ, ತೂರಿನಲ್ಲಿ ಇಳಿದನು. ಮತ್ತು ಶಿಷ್ಯರನ್ನು ಕಂಡುಕೊಂಡು ಅಲ್ಲಿ ಯೇಳು ದಿವಸ ಇದ್ದನು. ಆ ದಿವಸಗಳನ್ನು ಪೂರೈಸಿದ ಮೇಲೆ ಪ್ರಯಾಣಕ್ಕೆ ಹೊರಟು ಹೋಗುವಾಗ, ಹೆಂಗಸರೂ ಮಕ್ಕಳೂ ಸಹಿತವಾಗಿ ಅವರೆಲ್ಲರು ಅವನನ್ನು ಪಟ್ಣದ ಹೊರಗೆ ಸಾಗಕಳುಹಿಸಿದರು. ಮತ್ತು ಸಮುದ್ರದ ದಡದಲ್ಲಿ ಮೊಣಕಾಲೂರಿಕೊಂಡು, ಪ್ರಾರ್ಥನೆ ಮಾಡಿದರು. ತರುವಾಯ ಒಬ್ಬರನ್ನೊಬ್ಬರು ವಂದಿಸಲು, ಪೌಲನು ಹಡಗವನ್ನೇರಿದನು. ಅಲ್ಲಿಂದ ಅವನು ಕೈಸರೈಯಕ್ಕೆ ಬಂದು, ಆ ಯೇಳ್ವರಲ್ಲಿ ಒಬ್ಬನಾದ ಸುವಾರ್ತಿಕನಾಗಿರುವ ಫಿಲಿಪ್ಪನ ಮನೆಯಲ್ಲಿ ಪ್ರವೇಶಿಸಿ, ಅವನ ಬಳಿಯಲ್ಲಿ ಇದ್ದನು. ಅಲ್ಲಿ ಅವನು ಅನೇಕ ದಿವಸ ಇದ್ದಾಗ, ಯೆಹೂದದಿಂದ ಅಗಬನೆಂಬ ಒಬ್ಬ ಪ್ರ

ವಾದಿಯು ಇಳಿದು ಬಂದು, ಪೌಲನ ನಡುಕಟ್ಟನ್ನು ತೆಗದು, ತನ್ನ ಕೈಕಾಲುಗಳನ್ನು ಕಟ್ಟಿಕೊಂಡು, — ಈ ನಡುಕಟ್ಟು ಉಂಟಾದ ಮನುಷ್ಯನನ್ನು ಯೆಹೂದ್ಯರು ಯೆರೂಸಲೇಮಿನಲ್ಲಿ ಹೀಗೆಯೇ ಕಟ್ಟಿ, ಜನಾಂಗಗಳ ಕೈಗೆ ಒಪ್ಪಿಸುವರೆಂದು ಪರಿಶುದ್ಧಾತ್ಮವು ಹೇಳುತ್ತದೆ, ಅಂದನು. ಅವರು ಇವುಗಳನ್ನು ಕೇಳಿದ ಮೇಲೆ, ಅವನು ಯೆರೂಸಲೇಮಿಗೆ ಯೇರಿ ಹೋಗ ಬಾರದೆಂದು ಬೇಡಿಕೊಂಡರು. ಆಗ ಪೌಲನು ಪ್ರತ್ಯುತ್ತರವಾಗಿ, — ನೀವು ಅತ್ತು, ನನ್ನ ಹೃದಯವನ್ನು ಒಡಿಯುವದೇನು? ನಾನು ಯೆರೂಸಲೇಮಿನಲ್ಲಿ ಕರ್ತನಾದ ಯೇಸುವಿನ ನಿಮಿತ್ತ ಬಂಧಿಸಲ್ಪಡುವದಕ್ಕೆ ಮಾತ್ರವಲ್ಲ, ಸಾಯುವದಕ್ಕೂ ಸಿದ್ಧವಾಗಿದ್ದೇನೆ ಅಂದನು. ಅವನು ಸಮ್ಮತಿ ಪಡದೆ ಇರುವದರಿಂದ, — ಕರ್ತನ ಚಿತ್ತವೇ ಆಗಲಿ! ಯೆಂದು ಹೇಳಿ ಸುಮ್ಮನಿದ್ದರು. ಆ ದಿವಸಗಳು ಕಳದ ಮೇಲೆ ಪೌಲನು ಯೆರೂಸಲೇಮಿಗೆ ಯೇರಿ ಹೋದನು. ಅಲ್ಲಿಗೆ ಸೇರಿದಾಗ, ಸಹೋದರರು ಸಂತೋಷವಾಗಿ ಅವನನ್ನು ಅಂಗೀಕರಿಸಿದರು. ಮಾರನೇ ದಿವಸ ಪೌಲನು (ಕರ್ತನ ತಮ್ಮನಾದ) ಯಾಕೋಬನ ಬಳಿಗೆ ಹೋದನು. ಹಿರಿಯರೆಲ್ಲರೂ ಅಲ್ಲಿ ಕೂಡಿ ಬಂದರು. ಅವನು ಅವರನ್ನು ವಂದಿಸಿ, ತನ್ನ ಸೇವೆಯ ಮೂಲವಾಗಿ ದೇವರು ಜನಾಂಗಗಳಲ್ಲಿ ಮಾಡಿದವುಗಳನ್ನು ಒಂದೊಂದಾಗಿ ವಿವರಿಸಿದನು. ಅವರು ಕೇಳಿ, ಕರ್ತನನ್ನು ಮಹಿಮೆ ಪಡಿಸಿದರು.

---

೫೧. ಯೆರೂಸಲೇಮಿನಲ್ಲಿ ಪೌಲನನ್ನು ಶೆರೆಹಿಡಿಯುತ್ತಾರೆ. ಕೈಸರೈಯದಲ್ಲಿ ಪೌಲನು ಯೆರಡು ವರ್ಷ ಬಂಧನದವನು.

(ಅಪೊ. ಕೃ. ೨೧, ೨೦—೪೦. ೨೨, ೧—೩೦. ೨೩, ೧—೩೫. ೨೪, ೧—೨೭. ೨೫, ೧—೨೭. ೨೬, ೧—೩೨.)

ತರುವಾಯ ಪೌಲನು ದೇವಾಲಯದಲ್ಲಿ ಇದ್ದಾಗ, ಆಸ್ಯದವರಾದ ಯೆಹೂದ್ಯರು ಅವನನ್ನು ಕಂಡು, ಸಮೂಹವನ್ನೆಲ್ಲಾ ಕೂಡಿಸಿ, ಅವನ ಮೇ

ಲೆ ಕೈಗಳನ್ನು ಹಾಕಿ,—ಇಸ್ರಾಯೇಲ್ಯರಾದ ಜನರೇ, ಸಹಾಯ ಮಾಡಿರಿ! ಜನರಿಗೂ ನ್ಯಾಯಪ್ರಮಾಣಕ್ಕೂ ಈ ಸ್ಥಳಕ್ಕೂ ವಿರೋಧವಾಗಿ ಸರ್ವರಿಗೆ ಯೆಲ್ಲೆಲ್ಲಿಯೂ ಬೋಧಿಸುವ ಮನುಷ್ಯನು ಇವನೇ! ಯೆಂದು ಕೂಗಿದರು. ಆಗ ಪಟ್ಟವೆಲ್ಲಾ ಗಲಿಬಿಲಿಯಾಗಿ, ಜನರು ವೋಡಿ ಬಂದು, ಪೌಲನನ್ನು ಹಿಡಿದು, ದೇವಾಲಯದ ಹೊರಗೆ ಯೆಳದರು. ಸಂಗಡಲೇ ಬಾಗಲುಗಳು ಮುಚ್ಚಲ್ಪಟ್ಟವು. ಅವರು ಅವನನ್ನು ಕೊಂದು ಹಾಕುವದಕ್ಕೆ ಹುಡುಕುತ್ತಿರುವಾಗ, ಯೆರೂಸಲೇಮೆಲ್ಲಾ ಗಲಿಬಿಲಿ ಆಯಿತೆಂದು ಕಾವಲಿಯ ಸಹಸ್ರಾಧಿಪತಿಗೆ ವರ್ತಮಾನ ಬಂತು. ಇವನು ಸಂಗಡಲೇ ರಾಣುವೆಯವರನ್ನೂ ಶತಾಧಿಪತಿಗಳನ್ನೂ ಕರಕೊಂಡು, ಅವರ ಬಳಿಗೆ ವೋಡಿ ಬಂದನು. ಅವರು ಸಹಸ್ರಾಧಿಪತಿಯನ್ನೂ ರಾಣುವೆಯವರನ್ನೂ ನೋಡಿ, ಪೌಲನನ್ನು ಹೊಡಿಯುವದನ್ನು ಬಿಟ್ಟರು. ಆಗ ಸಹಸ್ರಾಧಿಪತಿಯು ಪೌಲನನ್ನು ಹಿಡಿದು, ಯೆರಡು ಸಂಕೋಲೆಗಳಿಂದ ಕಟ್ಟ ಬೇಕೆಂದು ಅಪ್ಪಣೆ ಕೊಟ್ಟು,—ಅವನು ಯಾರು? ಅವನು ಮಾಡಿದ್ದು ಯೇನು? ಯೆಂದು ಕೇಳಿದನು. ಸಮೂಹದಲ್ಲಿ ವೊಬ್ಬರು ಹೀಗೆ ವೊಬ್ಬರು ಹಾಗೆ ಕೂಗುವಾಗ, ಅವನು ಗುಬಾರಿನ ನಿಮಿತ್ತ ನಿಶ್ಚಯವನ್ನು ತಿಳಿಯಲಾರದೆ, ಅವನನ್ನು ಕೋಟೆಗೆ ತಕ್ಕೊಂಡು ಹೋಗ ಬೇಕೆಂದು ಅಪ್ಪಣೆ ಕೊಟ್ಟನು. ಅವನು ಮೆಟ್ಟುಗಳ ಪರ್ಯಂತರ ಬಂದಾಗ, ಸಮೂಹದ ಬಲಾತ್ಕಾರದ ನಿಮಿತ್ತ ರಾಣುವೆಯವರು ಅವನನ್ನು ಹೊತ್ತುಕೊಂಡು ಹೋಗ ಬೇಕಾಯಿತು. ಯಾಕಂದರೆ ಜನರ ಸಮೂಹವು,—ಅವನನ್ನು ತೆಗದು ಹಾಕು! ಯೆಂದು ಕೂಗುತ್ತಾ ಹಿಂಬಾಲಿಸಿತು. ಆದರೆ ಪೌಲನು ಕೋಟೆಯೊಳಗೆ ಶೇರುವದಕ್ಕಿರುವಾಗ, ಸಹಸ್ರಾಧಿಪತಿಗೆ,—ಜನರ ಸಂಗಡ ಮಾತಾಡುವದಕ್ಕೆ ನನಗೆ ಅಪ್ಪಣೆ ಆಗ ಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ, ಅಂದನು. ಅವನು ಅಪ್ಪಣೆ ಕೊಡಲು, ಪೌಲನು ಮೆಟ್ಟುಗಳ ಮೇಲೆ ನಿಂತುಕೊಂಡು, ಕೈಯಿಂದ ಜನರಿಗೆ ಸೌಜ್ಞೆ ಮಾಡಿ, ಇಬ್ರಿಯ ಭಾಷೆಯಲ್ಲಿ ಮಾತಾಡಲಾರಂಭಿಸಿದನು. ಅವನು ಇಬ್ರಿಯ ಮಾತಿನಲ್ಲಿ ತಮಗೆ ಪ್ರಸಂಗ ಮಾಡುವದನ್ನು ಕೇಳಿ, ಅವರು ಅತಿ

ಮೌನವಾದರು. ಆಗ ಅವನು ಅವರಿಗೆ ತಾನು ಪಿತೃಗಳ ನ್ಯಾಯಪ್ರಮಾಣಕ್ಕನುಸಾರ ಆಸಕ್ತಿ ಪಡುವವನಾಗಿದ್ದು, ಕ್ರಿಸ್ತನ ಮಾರ್ಗವನ್ನು ಮರಣದವರೆಗೂ ಹಿಂಸಿಸಿದ್ದನ್ನೂ, ದಮಸ್ಕದ ಸಮೀಪದಲ್ಲಿ ಕರ್ತನು ತನಗೆ ಕಾಣಿಸಿಕೊಂಡು, ತನ್ನನ್ನು ಜನಾಂಗಗಳ ಬಳಿಗೆ ದೂರ ಕಳುಹಿಸಿದ್ದನ್ನೂ ಹೇಳಿದನು. ಈ ಮಾತಿನ ಪರ್ಯಂತರ ಅವರು ಅವನಿಗೆ ಕಿವಿ ಕೊಟ್ಟು, ತಮ್ಮ ಶಬ್ದವನೆತ್ತಿ,—ಇಂಥವನನ್ನು ಭೂಮಿಯಿಂದ ತೆಗೆದು ಹಾಕು! ಅವನು ಬದುಕುವದು ಯುಕ್ತವಲ್ಲ! ಯೆಂದು ಕೂಗಿ, ವಸ್ತ್ರಗಳನ್ನು ಹರಕೊಂಡು, ಆಕಾಶಕ್ಕೆ ಧೂಳನ್ನೂ ಹಾಕಿದರು. ಆಗ ಸಹಸ್ರಾಧಿಪತಿಯು ಅವನನ್ನು ಕೋಟೆಯೊಳಗೆ ಕೊಂಡು ಹೋಗ ಆಜ್ಞಾಪಿಸಿ, ಅವರು ಇವನಿಗೆ ವಿರೋಧವಾಗಿ ಕೂಗುವ ಕಾರಣವೇನೆಂದು ತಿಳಿಯುವ ಹಾಗೆ, ಹೊಡದು ವಿಚಾರಿಸ ಬೇಕೆಂದು ಹೇಳಿದನು. ಆದದರಿಂದ ಅವನನ್ನು ಬಾರುಗಳಿಂದ ಕಟ್ಟುವಾಗ, ಪೌಲನು,—ರೋಮಿಯನಾದ ಮನುಷ್ಯನನ್ನು ನ್ಯಾಯ ತೀರಿಸದೆ ಹೊಡೆಯುವದು ನಿಮಗೆ ನ್ಯಾಯವೋ? ಯೆಂದು ಹತ್ತರ ನಿಂತಿರುವ ಶತಾಧಿಪತಿಗೆ ಹೇಳಿದನು. ಶತಾಧಿಪತಿಯು ಅದನ್ನು ಸಹಸ್ರಾಧಿಪತಿಗೆ ತಿಳಿಸಿ,—ನೀನು ಮಾಡಲಿಕ್ಕಿರುವದೇನೆಂದು ನೋಡು, ಯಾಕಂದರೆ ಈ ಮನುಷ್ಯನು ರೋಮಿಯನು! ಅಂದನು. ಆಗ ಸಹಸ್ರಾಧಿಪತಿಯು ಹತ್ತರ ಬಂದು,—ನೀನು ರೋಮಿಯನೋ? ಯೆಂದು ಅವನಿಗೆ ಹೇಳಿದಾಗ, ಅವನು,—ಹೌದು, ನಾನು ಅಂಥವನಾಗಿ ಹುಟ್ಟಿದೆನು, ಅಂದನು. ಹೀಗಿರುವದರಿಂದ ಅವನನ್ನು ವಿಚಾರಿಸುವದಕ್ಕೆ ಇದ್ದವರು ಸಂಗಡಲೇ ಅವನನ್ನು ಬಿಟ್ಟರು. ಮತ್ತು ಸಹಸ್ರಾಧಿಪತಿಯು ಅವನು ರೋಮಿಯನೆಂದು ತಿಳಿದು, ಅವನನ್ನು ಕಟ್ಟಿಸಿದದರಿಂದ ಭಯ ಪಟ್ಟನು.

ಮಾರಣೇ ದಿವಸ ಯೆಹೂದ್ಯರು ಅವನ ಮೇಲೆ ಹೇಳುವ ದೂರು ಯೇನೆಂದು ನಿಶ್ಚಯವಾಗಿ ತಿಳಿಯ ಇಚ್ಛಯಿಸಿ, ಅವನ ಬಂಧಗಳನ್ನು ಬಿಟ್ಟಿ, ಪ್ರಧಾನಯಾಜಕರನ್ನೂ ಅವರ ಸಮಸ್ತ ಸಭೆಯನ್ನೂ ಬರಲಾಜ್ಞಾಪಿಸಿ, ಪೌಲನನ್ನು ಅವರ ಮುಂದೆ ನಿಲ್ಲಿಸಿದನು. ಆಗ ಪೌಲನು ಮಂತ್ರಿಸಭೆಯ

ಮೇಲೆ ಕಣ್ಣಿಟ್ಟು, — ಸಹೋದರರಾದ ಜನರೇ, ನಾನು ಇಂದಿನ ವರೆಗೂ ಪೂರ್ಣ ಒಳ್ಳೇ ಮನಸ್ಸಾಕ್ಷಿಯಿಂದ ದೇವರ ಯೆದುರಿನಲ್ಲಿ ನಡದುಕೊಂಡಿದ್ದೇನೆ, ಅಂದನು. ಆಗ ಪ್ರಧಾನಯಾಜಕನಾದ ಅನನೀಯನು ಅವನ ಬಾಯಿ ಹೊಡಿಯ ಬೇಕೆಂದು ಅವನ ಹತ್ತರ ನಿಂತುಕೊಂಡವರಿಗೆ ಆಜ್ಞಾಪಿಸಿದನು. ಆದರೆ ಕಲಹವು ಬಹಳವಾದಾಗ, ಅವರು ಪೌಲನನ್ನು ಹರಿದು ಬಿಟ್ಟಾರೆಂದು ಸಹಸ್ರಾಧಿಪತಿಯು ಭಯ ಪಟ್ಟು, ರಾಣುವೆಯವರಿಗೆ, — ನೀವು ಇಳಿದು, ಅವನನ್ನು ಅವರ ಮಧ್ಯದಿಂದ ಹಿಡುಕೊಂಡು ಹೋಗಿ, ಕೋಟೆಗೆ ತರ ಬೇಕೆಂದು ಆಜ್ಞಾಪಿಸಿದನು. ಆ ರಾತ್ರೆಯಲ್ಲಿ ಕರ್ತನು ಅವನ ಹತ್ತರ ನಿಂತುಕೊಂಡು, — ಪೌಲನೇ, ಧೈರ್ಯವಾಗಿರು! ನೀನು ಯೆರೂಸಲೇಮಿನಲ್ಲಿ ನನ್ನ ವಿಷಯವಾಗಿ ಸಾಕ್ಷಿ ಕೊಟ್ಟ ಪ್ರಕಾರವೇ ರೋಮದಲ್ಲಿಯೂ ಸಾಕ್ಷಿ ಕೊಡ ಬೇಕು, ಅಂದನು.

ಬೆಳಗಾದ ಮೇಲೆ ನಾಲ್ವತ್ತು ಮಂದಿಗಿಂತ ಹೆಚ್ಚಾದ ಯೆಹೂದ್ಯರು ತಾವು ಪೌಲನನ್ನು ಕೊಲ್ಲುವ ಪರ್ಯಂತರ ಉಣ್ಣುವದೂ ಕುಡಿಯುವದೂ ಇಲ್ಲವೆಂದು ಶಪಥವನ್ನು ಮಾಡಿಕೊಂಡರು. ಅವರು ಪ್ರಧಾನಯಾಜಕರ ಬಳಿಗೂ ಹಿರಿಯರ ಬಳಿಗೂ ಬಂದು, ಇದನ್ನು ಹೇಳಿ, ಅವರಿಗೆ, — ಅವನ ವಿಷಯವಾದವುಗಳನ್ನು ಇನ್ನೂ ಚನ್ನಾಗಿ ತಿಳಿಯ ಬೇಕೆಂಬುವ ಹಾಗೆ ಅವನನ್ನು ನಾಳೆ ನಿಮ್ಮ ಬಳಿಗೆ ಇಳಿಸಿ ತರ ಬೇಕೆಂದು ನೀವು ಸಹಸ್ರಾಧಿಪತಿಗೆ ತಿಳಿಸ ಬೇಕು; ಅವನು ಸಮೀಪಿಸುವದಕ್ಕಿಂತ ಮುಂಚೆ ನಾವು ಅವನನ್ನು ಕೊಲ್ಲ ಸಿದ್ಧವಾಗಿದ್ದೇವೆ, ಅಂದರು. ಆದರೆ ಪೌಲನ ಸಹೋದರಿಯ ಮಗನು ಅವರು ಹೊಂಚುವದನ್ನು ಕೇಳಿ, ಕೋಟೆಯೊಳಗೆ ಹೋಗಿ, ಪೌಲನಿಗೆ ತಿಳಿಸಿದನು. ಆಗ ಪೌಲನು ಶತಾಧಿಪತಿಗಳಲ್ಲಿ ಒಬ್ಬನಿಗೆ ಈ ಯೌವನಸ್ಥನನ್ನು ಸಹಸ್ರಾಧಿಪತಿಯ ಬಳಿಗೆ ಕರಕೊಂಡು ಹೋಗ ಬೇಕೆಂದು ಹೇಳಿದನು. ಆಗ ಸಹಸ್ರಾಧಿಪತಿಯು ಅವನ ಕೈ ಹಿಡಿದು, ಯೇಕಾಂತವಾದ ಸ್ಥಳಕ್ಕೆ ಹೋಗಿ, — ನೀನು ನನಗೆ ತಿಳಿಸ ಬೇಕಾಗಿರುವದೇನು? ಯೆಂದು ಕೇಳಿದ್ದಕ್ಕೆ ಅವನು ಅವನಿಗೆ ಯೆಹೂದ್ಯರು ಹೊಂಚುವದನ್ನು ತಿಳಿಸಿದನು. ಆದದರಿಂದ

ಸಹಸ್ರಾಧಿಪತಿಯು,—ಇವುಗಳನ್ನು ಯಾರಿಗೂ ಹೇಳ ಬೇಡ, ಯೆಂದು ಯೆಚ್ಚರಿಸಿ, ಯೌವನಸ್ಥನನ್ನು ಕಳುಹಿಸಿ ಬಿಟ್ಟನು. ತರುವಾಯ ಅವನು ಶತಾಧಿಪತಿಗಳಲ್ಲಿ ಇಬ್ಬರನ್ನು ಕರದು, ರಾತ್ರೆ ಮೂರನೇ ತಾಸಿನಲ್ಲಿ ಕೈಸರೈಯಕ್ಕೆ ಹೋಗುವದಕ್ಕೆ ಇನ್ನೂರು ರಾಣುವೆಯವರನ್ನೂ, ಯೆಪ್ಪತ್ತು ರಾಹುತರನ್ನೂ, ಇನ್ನೂರು ಭಲ್ಲೆಯವರನ್ನೂ ಸಿದ್ಧ ಮಾಡಿರಿ! ಪೌಲನನ್ನು ಹತ್ತಿಸಿ, ಭದ್ರವಾಗಿ ಅಧಿಪತಿಯಾದ ಫೇಲಿಕ್ಸನ ಬಳಿಗೆ ತಕ್ಕೊಂಡು ಹೋಗುವದಕ್ಕೆ ಪಶುಗಳನ್ನು ಸಹಾ ಸಿದ್ಧ ಮಾಡ ಬೇಕು, ಅಂದನು. ಮತ್ತು ಅವನು ಫೇಲಿಕ್ಸನಿಗೆ ಕಾಗದವನ್ನು ಬರದನು. ಆದದರಿಂದ ಅವರು ಪೌಲನನ್ನು ರಾತ್ರೆಯಲ್ಲಿ ಕರಕೊಂಡು ಹೋಗಿ, ಕೈಸರೈಯಕ್ಕೆ ಬಂದು, ಕಾಗದವನ್ನು ಅಧಿಪತಿಗೆ ಕೊಟ್ಟು, ಪೌಲನನ್ನು ಸಹಾ ಅವನ ಮುಂದೆ ನಿಲ್ಲಿಸಿದರು. ಅಧಿಪತಿಯು ಕಾಗದವನ್ನು ವೋದಿ, ಪೌಲನಿಗೆ,—ನಿನ್ನ ಮೇಲೆ ದೂರು ಹೇಳುವವರು ಬಂದ ತರುವಾಯ ನಿನ್ನನ್ನು ಕೇಳುವೆನು, ಅಂದನು. ಮತ್ತು ನ್ಯಾಯಸ್ಥಾನದಲ್ಲಿ ಅವನನ್ನು ಕಾಯ ಬೇಕೆಂದು ಅಪ್ಪಣೆ ಕೊಟ್ಟನು.

ಐದು ದಿವಸಗಳ ಮೇಲೆ ಪ್ರಧಾನಯಾಜಕನಾದ ಅನನೀಯನೂ ಹಿರಿಯರೂ ಇಳಿದು ಹೋಗಿ, ಪೌಲನ ವಿಷಯವಾದವುಗಳನ್ನು ಅಧಿಪತಿಗೆ ತಿಳಿಸಿದರು. ಅವನು ಕರೆಯಲ್ಪಟ್ಟಾಗ, ಅವರು ಅವನ ಮೇಲೆ ದೂರು ಹೇಳಲಾರಂಭಿಸಿ,—ಇವನು ನಜರೇತಿನವರ ಪಾಷಂಡದಲ್ಲಿ ಮುಖ್ಯಸ್ಥನು! ಅವನು ದೇವಾಲಯವನ್ನು ಹಾಳೆ ಮಾಡುವದಕ್ಕೆ ಪ್ರಯತ್ನ ಮಾಡಿದನು; ನಾವು ಅವನನ್ನು ಹಿಡಿದು, ನಮ್ಮ ನ್ಯಾಯಪ್ರಮಾಣದ ಪ್ರಕಾರ ನ್ಯಾಯ ತೀರಿಸ ಬೇಕೆಂದಿದ್ದೆವು; ಆಗ ಸಹಸ್ರಾಧಿಪತಿಯಾದ ಲೂಸ್ಯನು ಬಂದು, ಬಹಳ ಬಲಾತ್ಕಾರವಾಗಿ ನಮ್ಮ ಕೈಗಳೊಳಗಿಂದ ಅವನನ್ನು ತೆಗದುಕೊಂಡು ಹೋದನು, ಅಂದರು. ಆಗ ಅಧಿಪತಿಯು ಪೌಲನನ್ನು ಮಾತಾಡುವದಕ್ಕೆ ಸೈಜ್ಞೆ ಮಾಡಿದಾಗ, ಅವನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,—ಅವರು ಈಗ ನನ್ನ ಮೇಲೆ ಹೇಳುವ ದೂರುಗಳಿಗೆ ದೃಷ್ಟಾಂತವನ್ನು ಕಾಡಲಾರದೆ ಇದ್ದಾರೆ; ಆದಾಗ್ಯೂ ನಾನು ನ್ಯಾಯಪ್ರಮಾಣದಲ್ಲಿಯೂ ಪ್ರವಾದಿಗಳಲ್ಲಿಯೂ ಬರ

ದಿರುವ ಯೆಲ್ಲವುಗಳನ್ನು ವಿಶ್ವಾಸಿಸಿ, ನೀತಿವಂತರೂ ಅನೀತಿವಂತರೂ ಆದ ಸತ್ತವರಿಗೆ ಪುನರುತ್ಥಾನವು ಆಗುವದೆಂದು ಅವರೇ ಅಂಗೀಕರಿಸಿದ ನಿರೀಕ್ಷೆಯನ್ನು ದೇವರಲ್ಲಿ ಇಟ್ಟು, ಅವರು ಪಾಷಂಡವೆಂದು ಹೇಳುವ ಮಾರ್ಗಕ್ಕೆ ಅನುಸರಣೆಯಾಗಿ ಪಿತೃಗಳ ದೇವರಿಗೆ ಸೇವೆ ಮಾಡುತ್ತೇನೆಂದು ನಿನಗೆ ಅರಿಕೆ ಮಾಡುತ್ತೇನೆ; ಮತ್ತು ದೇವರ ಕಡೆಗೂ ಮನುಷ್ಯರ ಕಡೆಗೂ ಯಾವಾಗಲೂ ಆತಂಕವಿಲ್ಲದ ಮನಸ್ಸಾಕ್ಷಿ ಇರ ಬೇಕೆಂಬುವದರಲ್ಲಿಯೇ ಅಭ್ಯಾಸ ಮಾಡಿಕೊಳ್ಳುತ್ತೇನೆ.—ಫೇಲಿಕ್ಸನು ಇವುಗಳನ್ನು ಕೇಳಿ, ಈ ಮಾರ್ಗದ ವಿಷಯವಾಗಿ ಚನ್ನಾಗಿ ತಿಳಿದವನಾಗಿದ್ದದರಿಂದ,—ಸಹಸ್ರಾಧಿಪತಿಯಾದ ಲೂಸ್ಯನು ಇಳಿದು ಬಂದಾಗ ನಿಮ್ಮ ಸಂಗತಿಯನ್ನು ಚನ್ನಾಗಿ ವಿಚಾರಿಸುವೆನು, ಯೆಂದು ಹೇಳಿ, ಅವರನ್ನು ತಡ ಮಾಡಿದನು. ಮತ್ತು ಪೌಲನನ್ನು ಸಡ್ಲು ಬಿಟ್ಟು, ಸ್ವಜನರಲ್ಲಿ ಯಾರಾದರೂ ಅವನಿಗೆ ಸೇವಿಸುವದಕ್ಕೂ ಅವನ ಬಳಿಗೆ ಬರುವದಕ್ಕೂ ಅಡ್ಡಿ ಮಾಡದೆ ಕಾಯ ಬೇಕೆಂದು, ಶತಾಧಿಪತಿಗೆ ಅಪ್ಪಣೆ ಕೊಟ್ಟನು.

ಕೆಲವು ದಿವಸಗಳ ಮೇಲೆ ಫೇಲಿಕ್ಸನು ಯೆಹೂದ್ಯಳಾದ ದ್ರುಸಿಲ್ಲಳೆಂಬ ತನ್ನ ಹೆಂಡತಿಯ ಸಂಗಡ ಬಂದು, ಪೌಲನನ್ನು ಕರಸಿ, ಕ್ರಿಸ್ತನಲ್ಲಿ ಇಡುವ ವಿಶ್ವಾಸವನ್ನು ಕುರಿತು ಅವನನ್ನು ಕೇಳಿದನು. ಆದರೆ ಅವನು ನೀತಿಯನ್ನೂ ಮಿತಿಯನ್ನೂ ಬರುವ ನ್ಯಾಯತೀರ್ವಿಕೆಯನ್ನೂ ಕುರಿತು ಪ್ರಸಂಗ ಮಾಡುವಾಗ, ಫೇಲಿಕ್ಸನು ಭಯಸ್ಥನಾಗಿ,—ಈಗ ಹೋಗು! ಸಮಯ ಸಿಕ್ಕುವಾಗ ನಿನ್ನನ್ನು ಕರಸುವೆನು, ಅಂದನು. ಇದಲ್ಲದೆ ಬಿಡುಗಡೆಯಾಗುವದಕ್ಕೆ ಪೌಲನು ತನಗೆ ಹಣ ಕೊಡುವನೆಂದು ನಿರೀಕ್ಷಿಸಿ, ಅನೇಕ ಸಾರಿ ಅವನನ್ನು ಕರಸಿ ಸಂಭಾಷಿಸಿದನು. ಆದರೆ ಯೆರಡು ವರುಷಗಳಾದ ಮೇಲೆ ಫೇಲಿಕ್ಸನಿಗೆ ಬದಲಾಗಿ ಫೆಸ್ತನು ಬಂದನು. ಫೇಲಿಕ್ಸನು ಯೆಹೂದ್ಯರನ್ನು ಮೆಚ್ಚಿಸ ಬೇಕೆಂದು ಇಚ್ಛಯಿಸಿ, ಪೌಲನನ್ನು ಬಂಧಕದಲ್ಲೇ ಬಿಟ್ಟನು.

ಫೆಸ್ತನು ಮೂರು ದಿವಸಗಳ ಮೇಲೆ ಕೈಸರ್ಯೆಯದಿಂದ ಯೆರೂಸಲೇಮಿಗೆ ಯೇರಿ ಹೋದನು. ಅಲ್ಲಿ ಪ್ರಧಾನಯಾಜಕರೂ ಯೆಹೂದ್ಯರ ಶ್ರೇಷ್ಠರೂ ಪೌಲನ ವಿಷಯವಾಗಿ ಅವನಿಗೆ ತಿಳಿಸಿ, ಅವನನ್ನು ಮಾರ್ಗದಲ್ಲಿ ಕೊಂ

ದು ಹೋಗ ಬೇಕೆಂದು ಹೊಂಚಿಕೊಂಡು,—ದಯ ಮಾಡಿ, ಅವನನ್ನು ಯೆರೂಸಲೇಮಿಗೆ ಕರಸ ಬೇಕು, ಯೆಂದು ಬೇಡಿಕೊಂಡರು. ಅದಕ್ಕೆ ಫೆಸ್ತನು ಪ್ರಶ್ನೋತ್ತರವಾಗಿ,—ಪೌಲನು ಕೈಸರ್ಯೆಯದಲ್ಲಿ ಕಾಯಲ್ಪಡ ಬೇಕು; ನಿಮ್ಮಲ್ಲಿ ಬರ ಬಲ್ಲವರು ನನ್ನ ಸಂಗಡ ಇಳಿದು ಬಂದು, ಈ ಮನುಷ್ಯನಲ್ಲಿ ಯೇನಾದರೂ ಇದ್ದರೆ, ಅವನ ಮೇಲೆ ತಪ್ಪು ಹೊರಿಸಲಿ, ಅಂದನು. ಅವನು ಕೈಸರ್ಯೆಯಕ್ಕೆ ಇಳಿದು ಹೋದ ಮಾರ್ಣೇ ದಿವಸ ಪೀಠದಲ್ಲಿ ಕೂತುಕೊಂಡು ಪೌಲನನ್ನು ತರ ಬೇಕೆಂದು ಆಜ್ಞಾಪಿಸಿದನು. ಅವನು ಬಂದ ಮೇಲೆ ಯೆರೂಸಲೇಮಿನಿಂದ ಬಂದ ಯೆಹೂದ್ಯರು ದೃಷ್ಟಾಂತ ಹೇಳಲಾರದ ಅನೇಕ ಕಠಿಣವಾದ ದೂರುಗಳನ್ನು ಪೌಲನಿಗೆ ವಿರೋಧವಾಗಿ ತಂದು, ಸುತ್ತಲೂ ನಿಂತುಕೊಂಡರು. ಆಗ ಫೆಸ್ತನು ಯೆಹೂದ್ಯರನ್ನು ಮೆಚ್ಚಿಸ ಬೇಕೆಂದು, ಪೌಲನಿಗೆ,—ನೀನು ಯೆರೂಸಲೇಮಿಗೆ ಯೇರಿ ಹೋಗಿ, ಅಲ್ಲಿ ನನ್ನ ಮುಂದೆ ಇವುಗಳ ವಿಷಯವಾಗಿ ನ್ಯಾಯ ತೀರಿಸಲ್ಪಡುವದಕ್ಕೆ ಮನಸ್ಸಾಗಿದ್ದೀಯೋ? ಯೆಂದು ಹೇಳಿದನು. ಅದಕ್ಕೆ ಪೌಲನು,—ಕೈಸರನ ಪೀಠದ ಮುಂದೆ ನಿಂತುಕೊಂಡಿದ್ದೇನೆ; ಇಲ್ಲಿಯೇ ನನಗೆ ನ್ಯಾಯ ತೀರಿಸಲ್ಪಡ ಬೇಕು; ಯೆಹೂದ್ಯರಿಗೆ ನಾನು ಯೇನೂ ಅನ್ಯಾಯ ಮಾಡಲಿಲ್ಲವೆಂದು ನಿನಗೂ ಚನ್ನಾಗಿ ತಿಳಿದದೆ; ಕೈಸರನಿಗೆ ಮೊರೆ ಇಡುತ್ತೇನೆ, ಅಂದನು. ಆಗ ಫೆಸ್ತನು ಆಲೋಚನೆಸಭೆಯ ಸಂಗಡ ಸಂಭಾಷಣೆ ಮಾಡಿ,—ಕೈಸರನಿಗೆ ಮೊರೆ ಇಡುತ್ತೀಯೋ? ಕೈಸರನ ಬಳಿಗೆ ಹೋಗ ಬೇಕು! ಯೆಂದು ಅಪ್ಪಣೆ ಕೊಟ್ಟನು.

ಕೆಲವು ದಿವಸಗಳಾದ ಮೇಲೆ ಅರಸನಾದ ಅಗ್ರಿಪ್ಪನೂ ಬೆರ್ನೀಕೆಯೂ ಫೆಸ್ತನನ್ನು ವಂದಿಸುವದಕ್ಕೆ ಕೈಸರ್ಯೆಯಕ್ಕೆ ಬಂದರು. ಫೆಸ್ತನು ಪೌಲನ ಸಂಗತಿಯನ್ನು ಅರಸನಿಗೆ ತಿಳಿಸಿದದರಿಂದ ಅಗ್ರಿಪ್ಪನು,—ಈ ಮನುಷ್ಯನನ್ನು ಕೇಳ ನನಗೂ ಮನಸ್ಸು ಉಂಟು, ಯೆಂದು ಫೆಸ್ತನಿಗೆ ಹೇಳಲಾಗಿ, ಅವನು,—ನಾಳೆ ಕೇಳ ಬಹುದು, ಅಂದನು. ಆದದರಿಂದ ಮಾರ್ಣೇ ದಿವಸ ಅಗ್ರಿಪ್ಪನೂ ಬೆರ್ನೀಕೆಯೂ ಬಹಳ ಆಟಹಾಸದಿಂದ ಬಂದು, ಸಹಸ್ರಾಧಿಪತಿಗಳ ಸಂಗಡಲೂ ಪಟ್ಟದ ಶ್ರೇಷ್ಠರ ಸಂಗಡಲೂ ಸಭಾಸ್ಥಾನದಲ್ಲಿ ಪ್ರವೇ

ತಿಸಿದಾಗ, ಫೆಸ್ತನು ಅಪ್ಪಣೆ ಕೊಟ್ಟದರಿಂದ ಪೌಲನು ತರಲ್ಪಟ್ಟನು. ಆಗ ಅ
ಗ್ರಿಪ್ಪನು, --ನಿನಗೋಸ್ಕರ ಮಾತಾಡುವದಕ್ಕೆ ನಿನಗೆ ಅಪ್ಪಣೆ ಉಂಟು, ಯೆಂ
ದು ಪೌಲನಿಗೆ ಹೇಳಲಾಗಿ, ಅವನು ಕೈ ಚಾಚಿ, ಉತ್ತರ ಕೊಟ್ಟದ್ದೇನಂದರೆ,—
ಅರಸನಾದ ಅಗ್ರಿಪ್ಪನೇ, ಈ ಹೊತ್ತು ನಿನ್ನ ಮುಂದೆ ಉತ್ತರ ಕೊಡುವದಕ್ಕಿ
ರುವದರಿಂದಲೂ, ಮುಖ್ಯವಾಗಿ ನೀನು ಯೆಹೂದ್ಯರಲ್ಲಿರುವ ಸಕಲ ಸಂಪ್ರ
ದಾಯಗಳನ್ನೂ ತರ್ಕಗಳನ್ನೂ ಅರಿತವನಾಗಿರುವದರಿಂದಲೂ, ನನ್ನನ್ನು ಭಾಗ್ಯ
ವಂತನೆಂದು ಯೆಣಿಸಿಕೊಳ್ಳುತ್ತೇನೆ. ನಮ್ಮ ಪಿತೃಗಳಿಗೆ ದೇವರಿಂದಾದ ವಾಗ್ದತ್ತ
ದ ನಿರೀಕ್ಷೆಗೋಸ್ಕರ ವಿಚಾರಿಸಲ್ಪಡುವವನಾಗಿ ನಿಂತುಕೊಂಡಿದ್ದೇನೆ. ನಜರೇತಿ
ನವನಾದ ಯೇಸುವಿನ ಹೆಸರಿಗೆ ವಿರೋಧವಾಗಿ ಅನೇಕ ಕಾರ್ಯಗಳನ್ನು ಮಾಡ
ಬೇಕೆಂದು ನಾನು ನನ್ನಲ್ಲಿ ನೆನಸಿಕೊಂಡೆನು. ಹೀಗಿರಲಾಗಿ ನಾನು ದಮಸ್ಕ
ಕ್ಕೆ ಹೋಗುವಾಗ, ಮಧ್ಯಾನ್ಹದಲ್ಲಿ, ಓ ಅರಸನೇ, ಆಕಾಶದಿಂದಾದ ದರ್ಶನ
ವನ್ನು ಕಂಡೆನು. ಅದಕ್ಕೆ ಅವಿಧೇಯನಾಗದೆ, ಮೊದಲು ದಮಸ್ಕದಲ್ಲಿರುವ
ವರಿಗೂ ಯೆರೂಸಲೇಮಿನವರಿಗೂ, ಆ ಮೇಲೆ ಸಮಸ್ತ ಯೆಹೂದ ದೇ
ಶದಲ್ಲಿಯೂ ಜನಾಂಗಗಳಿಗೂ, ಮಾನಸಾಂತರ ಪಟ್ಟು, ಮಾನಸಾಂತರಕ್ಕೆ ತಕ್ಕ
ಕ್ರಿಯೆಗಳನ್ನು ಮಾಡಿ, ದೇವರ ಕಡೆಗೆ ತಿರುಗ ಬೇಕೆಂದು ತಿಳಿಸಿದೆನು. ದೇ
ವರಿಂದ ಸಹಾಯವನ್ನು ಹೊಂದಿ, ಪ್ರವಾದಿಗಳೂ ಮೋಶೆಯೂ ಸಂಭವಿ
ಸುವದಕ್ಕೆ ಇರುತ್ತವೆಂದು ಹೇಳಿದವುಗಳೇ ಹೊರತು ಮತ್ತೇನೂ ಹೇಳದೆ,
ಹಿರಿಕಿರಿಯರಿಗೆ ಸಾಕ್ಷಿ ಕೊಟ್ಟು, ಇಂದಿನವರೆಗೂ ನಿಂತಿದ್ದೇನೆ. ಯೇನಂದರೆ ಕ್ರಿ
ಸ್ತನು ಶ್ರಮೆ ಪಟ್ಟು, ಸತ್ತವರೊಳಗಿಂದ ಯೆದ್ದ ಮೊದಲಿನವನಾಗಿ, ಜನರಿ
ಗೂ ಜನಾಂಗಗಳಿಗೂ ಬೆಳಕನ್ನು ತಿಳಿಸುವದಕ್ಕಿದ್ದಾನೆ.—ಅವನು ಈ ಮೆರೆಗೆ
ಪ್ರತಿವಾದ ಮಾಡುವಾಗ, ಫೆಸ್ತನು ಮಹಾ ಶಬ್ದದಿಂದ,—ಪೌಲನೇ, ಮ
ರುಳಾಗಿದ್ದಿ; ಬಹು ವಿದ್ಯೆಯು ನಿನ್ನನ್ನು ಮರುಳುಗೊಳಿಸುತ್ತದೆ! ಅಂದನು.
ಅದಕ್ಕೆ ಅವನು ಹೇಳಿದ್ದು,—ಶ್ರೀಮತ್ ಫೆಸ್ತನೇ, ನಾನು ಮರುಳಾಗಲಿಲ್ಲ;
ಸತ್ಯವೂ ಸ್ವಸ್ಥ ಬುದ್ಧಿಯೂ ಆದ ವಾಕ್ಯಗಳನ್ನು ನುಡಿಯುತ್ತೇನೆ; ಅರಸನು
ಇವುಗಳ ವಿಷಯ ತಿಳಿದವನಾಗಿದ್ದಾನೆ; ಇವುಗಳಲ್ಲಿ ವೊಂದಾದರೂ ಅವನಿಗೆ

ಮರೆಯಾದದ್ದಲ್ಲವೆಂದು ನಂಬುತ್ತೇನೆ; ಇದು ಮೂಲೆಯಲ್ಲಿ ನಡದದ್ದಲ್ಲ. ಅರಸನಾದ ಅಗ್ರಿಪ್ಪನೇ, ಪ್ರವಾದಿಗಳಲ್ಲಿ ವಿಶ್ವಾಸಿಸುತ್ತೀಯೋ? ವಿಶ್ವಾಸಿಸುತ್ತೀಯೆಂದು ಬಲ್ಲೆನು. ಆಗ ಅಗ್ರಿಪ್ಪನು ಪೌಲನಿಗೆ,—ನಾನು ಕ್ರಿಸ್ತನವನಾಗುವ ಹಾಗೆ ನನ್ನನ್ನು ಸ್ವಲ್ಪ ಕಡಿಮೆಯಾಗಿ ಸಮ್ಮತಿ ಪಡುತ್ತೀ, ಅಂದನು. ಆಗ ಪೌಲನು,—ನೀನು ಮಾತ್ರವಲ್ಲ, ಈ ಹೊತ್ತು ನನ್ನನ್ನು ಕೇಳುವವರೆಲ್ಲರೂ, ಈ ಬಂಧಗಳೇ ಹೊರತು ಸ್ವಲ್ಪ ಕಡಿಮೆಯಾಗಿ ಮಾತ್ರವಲ್ಲ, ಪೂರ್ಣವಾಗಿ ನನ್ನಂಥವರಾಗ ಬೇಕೆಂದು, ದೇವರ ಮುಂದೆ ಅಪೇಕ್ಷಿಸುತ್ತೇನೆ, ಅಂದನು. ಅವನು ಇವುಗಳನ್ನು ಹೇಳಿದ ಮೇಲೆ, ಅರಸನೂ ಅಧಿಪತಿಯೂ ಬೆರ್ನಿಕೆಯೂ ಅವರ ಸಂಗಡ ಕೂತುಕೊಂಡವರೂ ಯೆದ್ದರು. ಮತ್ತು ಅತ್ತಹೋಗಿ,—ಈ ಮನುಷ್ಯನು ಮರಣಕ್ಕಾದರೂ ಬಂಧಗಳಿಗಾದರೂ ಪಾತ್ರವಾದದ್ದೇನೂ ಮಾಡಲಿಲ್ಲ, ಯೆಂದು ವೊಬ್ಬರ ಸಂಗಡಲೊಬ್ಬರು ಮಾತಾಡಿದರು. ಮತ್ತು ಅಗ್ರಿಪ್ಪನು ಫೆಸ್ತನಿಗೆ,—ಈ ಮನುಷ್ಯನು ಕೈಸರನಿಗೆ ಮೊರೆ ಇಡದೆ ಇದ್ದರೆ, ಬಿಡಿಸಲ್ಪಡ ಬಹುದಾಗಿತ್ತು, ಅಂದನು.

---

೫೨. ಪೌಲನು ರೋಮಕ್ಕೆ ಮಾಡಿದ ಪ್ರಯಾಣ.

(ಅಪ್. ಕ್ರಿ. ೨೭, ೧—೪೪. ೨೮, ೧—೩೧.)

ಪೌಲನು ಇತಾಲ್ಯಕ್ಕೆ ಹಡಗ ಮಾರ್ಗವಾಗಿ ಹೋಗ ಬೇಕೆಂದು ನಿಶ್ಚಯಿಸಲ್ಪಟ್ಟಾಗ, ಅವನನ್ನೂ ಬೇರೆ ಕೆಲವು ಸೆರೆಯವರನ್ನೂ ಶತಾಧಿಪತಿಯಾದ ಯೂಲ್ಯನೆಂಬವನ ಕೈಗೆ ವೊಪ್ಪಿಸಿದರು. ಲೂಕನೂ ಅರಿಸ್ತಾರ್ಕನೂ ಪೌಲನ ಸಂಗಡ ಹೋದರು. ಅವರೆಲ್ಲರೂ ಹಡಗವನ್ನೇರಿ ಹೊರಟರು. ಮಾರನೇ ದಿವಸ ಸಿದೋನಿಗೆ ಸೇರಿದರು. ಯೂಲ್ಯನು ಪೌಲನಿಗೆ ಉಪಕಾರ ಮಾಡಿ, ಸ್ನೇಹಿತರ ಬಳಿಗೆ ಹೋಗಿ, ವಿಶ್ರಮಿಸಿಕೊಳ್ಳ ಬಹುದೆಂದು ಅಪ್ಪಣೆ ಕೊಟ್ಟನು. ಅಲ್ಲಿಂದ ಹೊರಟು, ಗಾಳಿಗಳು ಯೆದುರಾಗಿದ್ದಕಾರಣ, ಕಿಲಿಕ್ಯಕ್ಕೂ ಪಂಫೂಲ್ಯಕ್ಕೂ ಯೆದುರಾಗಿರುವ ಸಮುದ್ರವನ್ನು ದಾಟಿ, ಲೂಕ್ಯದಲ್ಲಿರು

ವ ಮುರಕ್ಕೆ ಬಂದರು. ಅಲ್ಲಿ ಶತಾಧಿಪತಿಯು ಇತಾಲ್ಯಕ್ಕೆ ಹೋಗುವ ಹಾಡಗವನ್ನು ಕಂಡು, ಅವರನ್ನು ಅದರ ಮೇಲೆ ಯೇರಿಸಿದನು. ಗಾಳಿಯು ಅವರನ್ನು ತಡೆಯುವಕಾರಣ, ಅವರು ಕ್ರೇತವೆಂಬ ದ್ವೀಪದ ಕಡೆಗೆ ಹಡಗವನ್ನು ನಡಿಸಿ, ಪ್ರಯಾಸದಿಂದ ಒಳ್ಳೇ ರೇವುಗಳೆಂಬ ಒಂದು ಸ್ಥಳಕ್ಕೆ ಬಂದರು. ಬಹು ಕಾಲ ಕಳದು, ಹಡಗದ ಪ್ರಯಾಣಕ್ಕೆ ಗಂಡಾಂತರವಾದದರಿಂದ, ಪೌಲನು ತನ್ನ ಸಂಗಡ ಇದ್ದವರನ್ನು ಯೆಚ್ಚರಿಸಿ, ಅವರಿಗೆ, —ಜನರೇ, ನಮ್ಮ ಪ್ರಯಾಣದಿಂದ ಹಡಗಕ್ಕೂ ಅದರ ಹೊರೆಗೂ ಮಾತ್ರವಲ್ಲ, ನಮ್ಮ ಪ್ರಾಣಗಳಿಗೆ ಸಹ ಮೋಸವೂ ಬಹು ನಷ್ಟವೂ ಆಗುವವೆಂದು ನೋಡುತ್ತೇನೆ, ಅಂದನು. ಆದರೆ ಶತಾಧಿಪತಿಯು, ಪೌಲನು ಹೇಳಿದ ಮಾತುಗಳಿಗಿಂತ ಹಡಗದ ಯಜಮಾನನು ಹೇಳುವದನ್ನು ನಂಬಿದನು. ಮತ್ತು ಹಿಮಕಾಲ ಕಳೆಯುವದಕ್ಕೆ ಆ ರೇವು ಒಳ್ಳೇದಲ್ಲಾದಕಾರಣ, ಅನೇಕರು ಈ ಸ್ಥಳವನ್ನು ಬಿಟ್ಟು, ಕ್ರೇತದ ಫಾಯಿನಿಕೆ ಯೆಂಬ ರೇವಿಗೆ ಸೇರಿ, ಹಿಮಕಾಲ ಕಳೆಯ ಬೇಕೆಂದು ಆಲೋಚನೆ ಹೇಳಿದರು. ದಕ್ಷಿಣ ಗಾಳಿ ಮೆಲ್ಲಗೆ ಬೀಸುವಾಗ, ಅವರು ಲಂಗರವನ್ನು ಯೆಳದು, ಕ್ರೇತೆಗೆ ಸಮೀಪವಾಗಿ ಹೋದರು. ಸ್ವಲ್ಪ ಹೊತ್ತಾದ ಮೇಲೆ ಬಿರು ಗಾಳಿಯು ಹಡಗಕ್ಕೆ ಯೆದುರಾಗಿ ಬಡಿಯಿತು. ಹಡಗವು ಸಹ ಸಿಕ್ಕಿಕೊಂಡು, ಗಾಳಿಯನ್ನು ಯೆದುರಿಸಲಾರದೆ ಇದ್ದದರಿಂದ, ಚುಕ್ಕಾಣಿ ಬಿಟ್ಟು ಹೊಯ್ಯಲ್ಪಟ್ಟರು. ಮತ್ತು ಕಲ್ಲುಸುಬಿನಲ್ಲಿ ಬಿದ್ದೇವೆಂದು ಭಯ ಪಟ್ಟು, ಪತಗಳನ್ನು ಇಳಿಸಿ, ಹಾಗೆ ಬಡೆಯಲ್ಪಟ್ಟು ಹೋದರು. ಮತ್ತು ಮಾರಣೇ ದಿವಸದಲ್ಲಿ ಹೊರೆಯನ್ನೂ, ಮೂರನೇ ದಿವಸದಲ್ಲಿ ಹಡಗದಲ್ಲಿದ್ದವರ ಸಾಮಗ್ರಿಗಳನ್ನೂ ಬಿಸಾಡಿ ಬಿಟ್ಟರು. ಮತ್ತು ಬಹು ದಿವಸಗಳಿಂದ ಸೂರ್ಯನನ್ನಾದರೂ ನಕ್ಷತ್ರಗಳನ್ನಾದರೂ ಕಾಣದೆ ಇದ್ದಾಗ, ರಕ್ಷಿಸಲ್ಪಡುವ ನಂಬಿಗೆ ಯೇನೂ ಕಾಣದೆ ಹೋಯಿತು. ಮತ್ತು ಬಹು ಕಾಲ ಅವರು ಆಹಾರವಿಲ್ಲದೆ ಇದ್ದಾಗ, ಪೌಲನು ಅವರ ಮಧ್ಯದಲ್ಲಿ ನಿಂತುಕೊಂಡು ಹೇಳಿದ್ದೇನಂದರೆ, —ಓ ಜನರೇ, ನನ್ನ ಮಾತು ಕೇಳಿ, ಕ್ರೇತೆಯನ್ನು ಬಿಟ್ಟು ಹೋಗದೆ ಇರ ಬೇಕಾಗಿತ್ತು; ಆದಾಗ್ಯೂ ಈಗ ಧೈ

ರ್ಯವಾಗಿರಿ ಯೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ; ಯಾಕಂದರೆ ಹಡಗದ ನಷ್ಟವೇ ಹೊರತು ನಿಮ್ಮೊಳಗೆ ಯಾರ ಪ್ರಾಣಕ್ಕೂ ನಷ್ಟವಾಗುವದಿಲ್ಲಾ; ಯಾಕಂದರೆ ನಾನು ವಶವಾಗಿದ್ದು ಸೇವಿಸುವ ದೇವರ ದೂತನು ಈ ರಾತ್ರೆ ನನ್ನ ಹತ್ತರ ನಿಂತುಕೊಂಡು,—ಪೌಲನೇ, ಭಯ ಪಡ ಬೇಡ! ನೀನು ಕೈಸರನ ಮುಂದೆ ನಿಲ್ಲ ಬೇಕು; ಮತ್ತು ಇಗೋ, ದೇವರು ನಿನ್ನ ಸಂಗಡ ಹಡಗದಲ್ಲಿರುವವರೆಲ್ಲರನ್ನು ನಿನಗೆ ದಯಪಾಲಿಸಿದ್ದಾನೆ, ಅಂದನು. ಆದದರಿಂದ ಜನರೇ, ಧೈರ್ಯವಾಗಿರಿ! ಯಾಕಂದರೆ ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ; ಆದರೆ ಒಂದು ದ್ವೀಪದಲ್ಲಿ ನಾವು ಬೀಳ ಬೇಕಾಗಿದೆ.—ತರುವಾಯ ಹದಿನಾಲ್ಕನೇ ರಾತ್ರೆ ಆದಾಗ, ಅವರು ಆದ್ರಿಯ ಸಮುದ್ರದಲ್ಲಿ ಅಲೆದು ಒಯ್ಯಲ್ಪಡುತ್ತಿರಲಾಗಿ, ಮಧ್ಯರಾತ್ರೆಯಲ್ಲಿ ನಾವಿಕರು ಒಂದು ದೇಶದ ಹತ್ತರ ಬಂದೆವೆಂದು ನೆನಸಿ, ಅಳತೇ ಗುಂಡನ್ನು ಹಾಕಿ, ಇಪ್ಪತು ಮಾರು ನೀರು ಯೆಂದು ಕಂಡರು. ಇನ್ನೂ ಸ್ವಲ್ಪ ದೂರ ಹೋದ ಮೇಲೆ ತಿರಿಗಿ ಹಾಕಿ, ಹದಿನೈದು ಮಾರು ನೀರು ಯೆಂದು ಕಂಡರು. ಆಗ ಕಾರಕಲಾದ ಸ್ಥಳದಲ್ಲಿ ಬಿದ್ದೇವೆಂದು ಭಯ ಪಟ್ಟು, ಹಿಂಭಾಗದಲ್ಲಿಂದ ನಾಲ್ಕು ಲಂಗರುಗಳನ್ನು ಹಾಕಿ, ಬೆಳಗಾಗ ಬೇಕೆಂದು ಅಪೇಕ್ಷಿಸಿದರು. ಮತ್ತು ಬೆಳಗಾಗುವಷ್ಟರಲ್ಲಿ ಪೌಲನು ಊಟ ಮಾಡ ಬೇಕೆಂದು ಯೆಲ್ಲರನ್ನು ಬೇಡಿಕೊಂಡು,—ಈ ಹೊತ್ತಿಗೆ ನೀವು ಯೇನೂ ಉಣ್ಣದೆ ಆಹಾರವಿಲ್ಲದೆ ಕಳದ ದಿವಸ ಹದಿನಾಲ್ಕು ಆಯಿತು; ಆದದರಿಂದ ನೀವು ಆಹಾರ ತಕ್ಕೊಳ್ಳ ಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ; ಇದು ನಿಮ್ಮ ಕ್ಷೇಮಕ್ಕೋಸ್ಕರ ಅವಶ್ಯವಾದದ್ದು; ಯಾಕಂದರೆ ನಿಮ್ಮಲ್ಲಿ ಯಾರ ತಲೆಯಿಂದಾದರೂ ಒಂದು ಕೂದಲು ಬೀಳುವದಿಲ್ಲಾ, ಅಂದನು. ಇವುಗಳನ್ನು ಹೇಳಿ, ರೊಟ್ಟಿಯನ್ನು ತೆಗದುಕೊಂಡು, ಯೆಲ್ಲರ ಮುಂದೆ ದೇವರಿಗೆ ಸ್ತೋತ್ರ ಮಾಡಿ, ಮುರಿದು, ತಿನ್ನಲಾರಂಭಿಸಿದನು. ಆಗ ಯೆಲ್ಲರೂ ಧೈರ್ಯ ಪಟ್ಟು, ತಾವು ಸಹಾ ಆಹಾರವನ್ನು ತಕ್ಕೊಂಡರು. ಹಡಗದಲ್ಲಿದ್ದವರೆಲ್ಲರೂ ಇನ್ನೂರು ಇಪ್ಪತ್ತಾರು ಮಂದಿಯಾಗಿದ್ದರು. ತೃಪ್ತಿಯಾದ ಮೇಲೆ ಧಾನ್ಯವನ್ನು

ಸಮುದ್ರದಲ್ಲಿ ಬಿಸಾಟು, ಹಡಗವನ್ನು ಹಗೂರ ಮಾಡಿದರು. ಬೆಳಗಾದ ಮೇಲೆ ಆ ಭೂಮಿಯ ಗುರ್ತನ್ನು ಅರಿಯದೆ ಇದ್ದರು. ಆದರೆ ಇಳಿಜಾರಾದ ಒಂದು ಕೊಲ್ಲಿಯನ್ನು ನೋಡಿ, ಸಾಧ್ಯವಾದರೆ ಹಡಗವನ್ನು ಅದರೊಳಗೆ ನೂಕ ಬೇಕೆಂದು ಇಚ್ಛಯಿಸಿದರು. ಆಗ ಲಂಗರುಗಳನ್ನು ಕೊಯಿದು, ದೊಡ್ಡ ಪಟವನ್ನು ಗಾಳಿಗೆ ಸರಿಯಾಗಿ ಯೆತ್ತಿ, ಹಡಗವನ್ನು ದಡದ ಕಡೆಗೆ ನಡಿಸಿದರು. ಆದರೆ ಹಡಗವು ಯೆರಡು ತೆರೆಗಳು ಕೂಡುವ ಸ್ಥಳದಲ್ಲಿ ಬಿದ್ದು ತಗಲಿಸಿದದರಿಂದ, ಮುಂಭಾಗವು ಸಿಕ್ಕಿಕೊಂಡು ಅಲ್ಲಾಡದೆ ನಿಂತಿತು; ಹಿಂಭಾಗವು ತೆರೆಗಳ ಬಲದಿಂದ ಬಿಟ್ಟು ಹೋಯಿತು. ಆಗ ರಾಣುವೆಯವರು ಸೆರೆಯವರಲ್ಲಿ ಯಾವನಾದರೂ ಈಜಿ ಓಡಿ ಹೋಗದ ಹಾಗೆ, ಅವರನ್ನು ಕೊಲ್ಲ ಬೇಕೆಂದು ಆಲೋಚನೆ ಹೇಳಿದರು. ಆದರೆ ಶತಾಧಿಪತಿಯು ಪೌಲನನ್ನು ಸಂರಕ್ಷಿಸ ಬೇಕೆಂದು, ಅವರ ಆಲೋಚನೆಗೆ ಅಡ್ಡಿ ಮಾಡಿ, ಈಜ ಬಲ್ಲವರು ಮೊದಲು ಧುಮುಕಿ, ಭೂಮಿಗೆ ಸೇರ ಬೇಕೆಂದೂ, ಮಿಕ್ಕಾದವರಲ್ಲಿ ಕೆಲವರು ಹಲಿಗೆಗಳ ಮೇಲೆಯೂ ಕೆಲವರು ಹಡಗದಿಂದ ಸೀಳುವ ತುಂಡುಗಳ ಮೇಲೆಯೂ ಸೇರ ಬೇಕೆಂದೂ ಅಪ್ಪಣೆ ಕೊಟ್ಟನು. ಈಪ್ರಕಾರ ಯೆಲ್ಲರೂ ರಕ್ಷಿಸಲ್ಪಟ್ಟು ಭೂಮಿಗೆ ಸೇರಿದರು. ಮತ್ತು ರಕ್ಷಿಸಿಕೊಂಡ ಮೇಲೆ, ಆ ದ್ವೀಪದ ಹೆಸರು ಮಿಲೇತೆ ಯೆಂದು ತಿಳುಕೊಂಡರು. ಅಲ್ಲಿರುವ ಜನರು ಅಪರೂಪವಾದ ದಯವನ್ನು ಅವರಿಗೆ ತೋರಿಸಿ, ಆಗ ಬೀಳುವ ಮಳೆಗೋಸ್ಕರವೂ ಛಳಿಗೋಸ್ಕರವೂ ಬೆಂಕಿ ಹೊತ್ತಿಸಿ, ಅವರೆಲ್ಲರನ್ನು ಸೇರಿಸಿಕೊಂಡರು. ಆದರೆ ಪೌಲನು ಕಟ್ಟಿಗೆ ರಾಶಿಯನ್ನು ಕೂಡಿಸಿ ಬೆಂಕಿಯ ಮೇಲೆ ಹಾಕುವಾಗ, ಒಂದು ಹಾವು ಶೆಖೆಯಿಂದ ಹೊರಗೆ ಬಂದು, ಅವನ ಕೈ ಕಚ್ಚಿತು. ಆ ದ್ವೀಪದವರು ಅವನ ಕೈಯಿಂದ ತೂಗಾಡುವ ಜಂತನ್ನು ನೋಡಿ,—ಈ ಮನುಷ್ಯನು ಕೊಲೆಗಾರನೇ ಸರಿ! ಇವನು ಸಮುದ್ರಕ್ಕೆ ತಪ್ಪಿಸಿಕೊಂಡಾಗ್ಯೂ, ನ್ಯಾಯವು ಅವನನ್ನು ಬದುಕಲೀಸದು, ಯೆಂದು ತಮ್ಮೊಳಗೆ ಹೇಳಿಕೊಂಡರು. ಆದರೆ ಅವನು ಆ ಜಂತನ್ನು ಬೆಂಕಿಯೊಳಗೆ ಝಾಡಿಸಿ ಹಾಕಿ, ಯೇನೂ ನಷ್ಟ ಪಡಲಿಲ್ಲಾ. ಅವನು ಬಾತು



ಹೋಗುವನೋ? ಇಲ್ಲವೇ ತಪ್ಪನೆ ಬಿದ್ದು ಸಾಯುವನೋ? ಯೆಂದು ಅವರು ಕಾದುಕೊಂಡರು. ಬಹಳ ಹೊತ್ತು ಕಾದುಕೊಂಡ ಮೇಲೆ ಅವನಿಗೆ ಯೇನೂ ಕೇಡು ಸಂಭವಿಸಲಿಲ್ಲವೆಂದು ನೋಡಿ,—ಅವನು ದೇವರು! ಅಂದರು. ಆ ಸ್ಥಳಕ್ಕೆ ಸಮೀಪವಾಗಿ ದ್ವೀಪದ ಶ್ರೇಷ್ಠನಾದ ಪೊಪ್ಲಿಯನೆಂಬವನ ಭೂಮಿ ಇತ್ತು. ಅವನು ಪೌಲನನ್ನೂ ಅವನ ಸಂಗಡ ಇದ್ದವರನ್ನೂ ಅಂಗೀಕರಿಸಿ, ಮೂರು ದಿವಸ ಉಪಚರಿಸಿ, ಆತಿಥ್ಯ ಮಾಡಿದನು. ಮತ್ತು ಪೊಪ್ಲಿಯನ ತಂದೆಯು ಜ್ವರದಿಂದಲೂ ಉಚ್ಚೋತದಿಂದಲೂ ಉಪದ್ರ ಪಟ್ಟು ಬಿದ್ದಿರಲಾಗಿ, ಪೌಲನು ಅವನ ಬಳಿಗೆ ಪ್ರವೇಶಿಸಿ, ಪ್ರಾರ್ಥನೆ ಮಾಡಿ, ಅವನ ಮೇಲೆ ಕೈಗಳನ್ನಿಟ್ಟು, ಅವನನ್ನು ಸ್ವಸ್ಥ ಮಾಡಿದನು. ಇದು ಸಂಭವಿಸಿದದರಿಂದ, ದ್ವೀಪದಲ್ಲಿದ್ದ ಮಿಕ್ಕಾದ ರೋಗಿಷ್ಟರು ಸಹಾ ಬಂದು ಗುಣವಾದರು. ಇವರು ಬಹಳ ಮಾನಗಳಿಂದ ಪೌಲನನ್ನು ಸನ್ಮಾನಿಸಿ, ಅವನು ಹೊರಡುವಾಗ ಬೇಕಾದವುಗಳನ್ನು ಅವನಿಗೆ ತಂದು ಕೊಟ್ಟರು.

ಮತ್ತು ಮೂರು ತಿಂಗಳು ಆದ ಮೇಲೆ ಆ ದ್ವೀಪದಲ್ಲಿ ಹಿಮಕಾಲವನ್ನು ಕಳೆದ ಹಡಗವನ್ನೇರಿ, ಹೊರಟು, ಸುರಕೂಸಕ್ಕೆ ಬಂದು, ಮೂರು ದಿವಸ ನಿಂತರು. ಮತ್ತು ದಕ್ಷಿಣ ಗಾಳಿ ಬೀಸುವಾಗ, ಹಾತಿಯೋಲಕ್ಕೆ ಬಂದರು.

ಅಲ್ಲಿ ಪೌಲನಿಗೆ ಸಿಕ್ಕಿದ ಸಹೋದರರು ತಮ್ಮ ಸಂಗಡ ಯೇಳು ದಿವಸ ಇರಬೇಕೆಂದು ಬೇಡಿಕೊಂಡರು. ಮತ್ತು ಈ ಪ್ರಕಾರ ಅವನು ರೋಮಕ್ಕೆ ಬಂದನು. ಅಲ್ಲಿರುವ ಸಹೋದರರು ಅವನ ಸಮಾಚಾರವನ್ನು ಕೇಳಿ, ಅವನಿಗೆದುರಾಗಿ ಹೊರಟು ಬಂದರು. ಪೌಲನು ಅವರನ್ನು ನೋಡಿ, ದೇವರಿಗೆ ಸ್ತೋತ್ರ ಮಾಡಿ, ಧೈರ್ಯಗೊಂಡನು. ಮತ್ತು ಅವನು ರೋಮಕ್ಕೆ ಬಂದಾಗ, ಶತಾಧಿಪತಿಯು ಸೆರೆಯವರನ್ನು ಸೈನ್ಯಾಧಿಪತಿಗೆ ಒಪ್ಪಿಸಿದನು. ಆದರೆ ತನ್ನನ್ನು ಕಾಯುವ ರಾಣುವೆಯವನ ಸಂಗಡ ಪ್ರತ್ಯೇಕವಾಗಿ ಇರಬಹುದೆಂದು ಪೌಲನಿಗೆ ಅಪ್ಪಣೆ ಆಯಿತು. ಮತ್ತು ಅವನು ಯೆರಡು ವರುಷಗಳು ಪೂರಾ ತಾನು ಮಾಡಿಕೊಂಡ ಬಾಡಿಗೇ ಮನೆಯಲ್ಲಿ ಇದ್ದು, ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಂಡು, ತಡೆ ಇಲ್ಲದೆ ಪೂರ್ಣ ಧೈರ್ಯದಿಂದ ದೇವರ ರಾಜ್ಯವನ್ನು ಸಾರಿ, ಕರ್ತನಾದ ಯೇಸುಕ್ರಿಸ್ತನ ವಿಷಯಗಳನ್ನು ಬೋಧಿಸುತ್ತಾ ಇದ್ದನು.

ಹೊಸ ಒಡಂಬಡಿಕೆಯ ಕಥೆಗಳ ಪೂರ್ಣೆ.

ಪೌಲನು ರೋಮದಲ್ಲಿ ಬಂಧನದಲ್ಲಿದ್ದಾಗ, ಕೆಲವು ಪತ್ರಿಕೆಗಳನ್ನು ಬರೆದನು. ಮೊದಲಾಗಿ ಅವನು ಒಂದು ಪತ್ರಿಕೆಯನ್ನು ಸಣ್ಣ ಆಸ್ಯದ ಕೊಲೊಸ್ಸೇ ಸಭೆಗೂ, ಮತ್ತೊಂದು ಅಲ್ಲಿರುವ ಫಿಲೆಮೋನನಿಗೂ, ಇನ್ನೊಂದು ಎಫೆಸದ ಸಭೆಗೂ ಬರೆದನು. ತರುವಾಯ ಫಿಲಿಪ್ಪಿಯರಿಗೆ ಸಹ ಒಂದು ಲೇಖನವನ್ನು ಕಳುಹಿಸಿದನು. ಬಂಧನದಿಂದ ಬಿಡುಗಡೆಯಾದ, ಅನಂತರದಲ್ಲಿ ಇಬ್ರಿಯರಿಗೆ, ಅಂದರೆ ಯೆಹೂದ್ಯ ಕ್ರೈಸ್ತರಿಗೆ ಇಬ್ರಿಯರಿಗೆಂಬ ಪತ್ರಿಕೆಯನ್ನು ಬರೆದನೆಂತ ತೋರುತ್ತದೆ. ಇದಾದ ಮೇಲೆ ತಿರಿಗಿ ಪರ್ಯಟಣಕ್ಕೆ ಆರಂಭ ಮಾಡಿ, ಕ್ರೇತ ಎಫೆಸ ಮಿಲೇತ ತ್ರೋಯ ಕೊರಿಂಥ ನಿಕಪೊಲಿ ಮುಂತಾದ ಸ್ಥಳಗಳಿಗೆ ಬಂದನು. ಕ್ರೇತದಲ್ಲಿ ತೀತನನ್ನೂ, ಹಾಗೆಯೇ ಎ

ಫೆಸದಲ್ಲಿ ತಿಮೊಥಿಯನನ್ನೂ, ಅಲ್ಲಿಯ ಸಭಾಕಾರ್ಯಗಳನ್ನು ಸಮ ಮಾಡುವದಕ್ಕೆ ಹಿಂದೆ ಬಿಟ್ಟನು. ಮುಂದೆ ಪ್ರಯಾಣ ಮಾಡುತ್ತಿರುವಾಗ ತೀತನ ಪತ್ರಿಕೆಯನ್ನೂ ತಿಮೊಥಿಯನ ೧ ನೇ ಪತ್ರಿಕೆಯನ್ನೂ ಬರದನು. ಕಡೆಯಲ್ಲಿ ಅವನ ಸಂವರ್ತನದ ಸುಮಾರು ೩೦ ನೇ ವರ್ಷದಲ್ಲಿ (ಕ್ರಿಸ್ತ ಶಕ ೬೬) ಯೆರಡನೇ ಸರ್ತಿ ಅವನಿಗೆ ರೋಮಿಯ ಬಂಧನ ಪ್ರಾಪ್ತಿಯಾಯಿತು. ಈ ಸಾರಿ ತಿಮೊಥಿಯನ ೨ ನೇ ಪತ್ರಿಕೆಯನ್ನು ಬರದನು. ಸ್ವಲ್ಪ ಕಾಲದ ಮೇಲೆ ಕೈಸರನ ಅಪ್ಪಣೆಯಿಂದ ಪೌಲನನ್ನು ತಲೆ ಹೊಯಿದರು. ಆ ಸಮಯದಲ್ಲಿ ಆ ಭಯಂಕರ ಕೋಪಭ್ರಷ್ಟನಾದ, ಕ್ರೈಸ್ತ ಹಿಂಸಕ ನೇರೋ ರೋಮಿಯ ಮಹಾರಾಜನಾಗಿದ್ದನು.

ಅದೇ ಸಮಯದಲ್ಲಿ ಪೌಲನು ರೋಮದಲ್ಲಿ ತನ್ನ ಹೋರಾಟವನ್ನು ತೀರಿಸಿದಾಗಲೇ, ಪೇತ್ರನು ಸಹ ಅಲ್ಲೇ ಸಾಕ್ಷಿಮರಣವನ್ನು ತಾಳಿದನು. ಇವನು ಪ್ರಸಂಗ ಪರ್ಯಟಣೆಯಲ್ಲಿ ಐಫ್ರಾತ್ ನದಿಯ ತೀರದಲ್ಲಿರುವ ಬಬಿಲೋನ್‌ಪಟ್ಟಣ ಪರ್ಯಂತರಕ್ಕೆ ಬಂದಿದ್ದನು. ಅಲ್ಲಿಂದ ಅವನು ಸಣ್ಣ ಆಸ್ಯದಲ್ಲಿ ಚದರಿ ಇರುವ ಯೆಹೂದ್ಯ ಕ್ರೈಸ್ತರಿಗೆ ೧ ನೇ ಪತ್ರಿಕೆಯನ್ನು ಬರದನು. ತರುವಾಯ ರೋಮಪಟ್ಟಣಕ್ಕೆ ಹೋಗಿ, ಅಲ್ಲಿಂದ ೨ ನೇ ಪತ್ರಿಕೆಯನ್ನು ಬರದನು. ಸ್ವಲ್ಪ ಕಾಲದ ಮೇಲೆ ಕ್ರಿಸ್ತನ ಶತ್ರುಗಳ ಕೈಯಿಂದ ಕ್ರೂಜೆಯಲ್ಲಿ ಜಡಿದವನಾಗಿ ಸತ್ತನು. ಈ ಪ್ರಕಾರ ಯೇಸುವು ಪುನರುತ್ಥಾನದ ಮೇಲೆ ಗೆನ್ನೇಜರೇತ್ ಸರೋವರ ತೀರದಲ್ಲಿ ಅವನಿಗೆ ಹೇಳಿದ ಮಾತು ಪೂರ್ಣ ಆಯಿತು. (ಪುಟ ೧೬೦ ನೋಡಿಕೋ.)

ಅಪೊಸ್ತಲರಲ್ಲಿ ಯೋಹಾನನ ಮತ್ತು ಮತ್ಥಾಯನ ವಿಷಯದಲ್ಲಿ ಸ್ವಲ್ಪ ಹೇಳತಕ್ಕದ್ದುಂಟು. ಯೋಹಾನನ ಪ್ರಸ್ಥಾಪ ಅಂತ್ಯದಲ್ಲಿ ಬರುವದು. ಮತ್ಥಾಯನು ಹೊಸ ಒಡಂಬಡಿಕೆಯ ಮೊದಲನೇ ಪುಸ್ತಕವನ್ನು ರಚಿಸಿದವನು. ಯೇಸುವಿನ ಶಿಷ್ಯನಾಗುವದಕ್ಕೆ ಕರೆಯಲ್ಪಟ್ಟ ಸಂಗತಿಯು ಪುಟ ೩೨ ಹೇಳಿಯದೆ. ಮೊದಲು ಸುಂಕದ ಶಾನಭೋಗನಾಗಿದ್ದದರಿಂದ, ಬರಹದಲ್ಲಿ ಗಟ್ಟಿಗನಾಗಿದ್ದನು. ಹೀಗಿರಲಾಗಿ ಮುಖ್ಯ ಯೆಹೂ

ದ್ದು ಕ್ರೈಸ್ತರಿಗೋಸ್ಕರ ಅವನು ಒಂದು ಪುಸ್ತಕವನ್ನು ಬರದು, ಕರ್ತನಾದ ಯೇಸುವಿನ ಸಹವಾಸದಲ್ಲಿ ಕಣ್ಣಾರೆ ಕಂಡದ್ದನ್ನೂ ಕಿವಿಯಿಂದ ಕೇಳಿದ್ದನ್ನೂ ತಾನೇ ಅನುಭವದಿಂದ ತಿಳಕೊಂಡದ್ದನ್ನೂ ಬರದಿಟ್ಟನು. ಯಾವಾಗ್ಯು ಯೆಲ್ಲಿ ಇದನ್ನು ಮಾಡಿದನೆಂಬದು ನಮಗೆ ತಿಳಿಯದು. ಆದಾಗ್ಯೂ ಲೂಕನು ತನ್ನ ಸುವಾರ್ತೆಯನ್ನು ಬರೆಯಲಾರಂಭಿಸಿದಾಗ, ಮತ್ಥಾಯನ ಸುವಾರ್ತೆಯು ಉಂಟಾಗಿ ಇರಲಿಲ್ಲವೆಂತಾ ತೋರುತ್ತದೆ.

ಉಳಿಕೆ ಅಪೋಸ್ತಲರ ವಿಷಯದಲ್ಲಿ ನಿಶ್ಚಯವಾದದ್ದೇನೊಂದೂ ತಿಳಿಯಬರಲಿಲ್ಲಾ. ಕರ್ತನ ಅಪ್ಪಣೆಯ ಮೇರೆಗೆ ಅವರು ಸುವಾರ್ತೆಯನ್ನು ಬೇರೆ ಪ್ರಾಂತ್ಯಗಳಲ್ಲಿಯೂ ದೇಶಗಳಲ್ಲಿಯೂ ಸಾರುವ ಬಗ್ಯೆ ಯೆರೂಸಲೇಮಿನಿಂದ ಹೊರಟು ಹೋದರು. ಆದರೆ ಅವರು ಯೆಲ್ಲಿ ಕೆಲಸ ಮಾಡಿದರು, ಹ್ಯಾಗೆ ಯಾವಾಗ್ಯೆ ಸತ್ತುಹೋದರು ಯಂಬದು ನಿಶ್ಚಯವಿಲ್ಲಾ. ಯೆರೂಸಲೇಮಿನಲ್ಲಿ ಕರ್ತನ ಸಹೋದರನಾದ ಯಾಕೋಬನು ಅಲ್ಲಿರುವ ಮಾತೃಸಭೆಯನ್ನು ನಡಿಸಿಕೊಂಡು ಇದ್ದನು. ಅವನ ದೋಷವಿಲ್ಲದ ನಡತೆಯ ದೆಸೆಯಿಂದ ಅವನಿಗೆ ನೀತಿವಂತನೆಂಬ ಹೆಸರು ಬಂತು. ಯೆಹೂದ್ಯರು ಅವನನ್ನು ಬಹಳವಾಗಿ ಸನ್ಮಾನಿಸಿದರು. ಯೆಹೂದ್ಯರ ಮಂತ್ರಿಸಭೆಯವರ ಹಗೆಗೆ ಪೌಲನನ್ನು ರೋಮಿಯ ಶತಾಧಿಪತಿಯು ತಪ್ಪಿಸಿದಂದಿನಿಂದ (೫೦ ನೇ ಕಥೆ ನೋಡಿಕೋ,) ಅವರ ಹಗೆಯು ಯೆರೂಸಲೇಮಿನಲ್ಲಿರುವ ಕ್ರೈಸ್ತ ಸಭೆಯ ಮೇಲೆಯೂ, ಮುಖ್ಯವಾಗಿ ಯಾಕೋಬನ ಮೇಲೆಯೂ ಬಹಳವಾಗಿ ಉರಿಯಿತು. ಈ ಉಪದ್ರಕಾಲದಲ್ಲಿ ಯಾಕೋಬನು ಯೆಹೂದ್ಯ ಕ್ರೈಸ್ತರಿಗೆ ತನ್ನ ಪತ್ರಿಕೆಯನ್ನು ಬರದನು. ಸ್ವಲ್ಪ ಕಾಲದ ಮೇಲೆ, ೬೨ ನೇ ವರ್ಷದ ಪಸ್ಕಹಬ್ಬದ ಸಮಯದಲ್ಲಿ ಪ್ರಧಾನಯಾಜಕನು ಅವನನ್ನು ದೇವಾಲಯದ ಶಿಖರಕ್ಕೆ ತಕ್ಕೊಂಡು ಹೋಗಿ, ಕೂಡಿ ಬಂದ ಜನರ ಮುಂದೆ ಕ್ರಿಸ್ತನನ್ನು ಶಪಿಸೆಂತಾ ಹೇಳಿದನು. ಆದರೆ ಅವನು ತನ್ನ ವಿಶ್ವಾಸದ ವಿಷಯದಲ್ಲಿ ಬಲವಾದ ಸಾಕ್ಷಿಯನ್ನು ಕೊಡಲಾಗಿ, ದೇವಾಲಯದ ಶಿಖರದಿಂದ ಅವನನ್ನು ಕೆಳಗೆ ದೂಡಿ ಕಲ್ಲೆಸದರು. ಆಗ್ಯೆ ಅವನು,—ಕರ್ತನಾದ ದೇವರೇ, ತಂದೆಯೇ, ನಾನು ಅ

ವರಿಗೋಸ್ಕರ ಬೇಡಿಕೊಳ್ಳುತ್ತೇನೆ; ಅವರು ತಾವು ಮಾಡುವದೇನೆಂಬದನ್ನು ಅರಿಯರು! ಯೆಂಬದಾಗಿ ಪ್ರಾರ್ಥಿಸಿ, ಪ್ರಾಣ ಬಿಟ್ಟನು.—ಇವನ ಸಹೋದರನಾದ ಯೂದನು ಬರದ ವೊಂದು ಸಣ್ಣ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿ ಅದೆ. ಆದರೆ ಈ ಯೂದನ ವಿಷಯದಲ್ಲಿ ನಮಗೆ ಬೇರೇನೂ ತಿಳಿಯದು.

ಇವರ ಹೊರತಾಗಿ ಅಪೋಸ್ತಲರ ಇಬ್ಬರು ಸಹಾಯಕರ ವಿಷಯ ಪ್ರಸ್ತಾವಿಸ ತಕ್ಕದ್ದು. ಇವರು ಬರದ ಪುಸ್ತಕಗಳು ಹೊಸ ಒಡಂಬಡಿಕೆಯಲ್ಲಿ ಅವೆ. ಇವರ್‍ಯಾರಂದರೆ—ಸುವಾರ್ತಿಕರಾದ ಮಾರ್ಕ ಮತ್ತು ಲೂಕ.

ಮಾರ್ಕನಿಗೆ ಯೋಹಾನನೆಂಬ ಹೆಸರು ಸಹ ಇತ್ತು. ಇವನು ಯೆರೂಸಲೇಮಿನ ಮರಿಯಳ ಮಗ. ಇವಳ ಮನೆಯಲ್ಲಿ ಅಲ್ಲಿಯ ಕ್ರೈಸ್ತರು ಮುಖ್ಯವಾಗಿ ಪ್ರಾರ್ಥನೆ ಮಾಡುವದಕ್ಕಿತ್ಯಾದಿ ಕೂಡಿ ಬಂದರು. (ಅಪೋ. ಕ್ರಿ. ೧೨, ೧೨.) ಇವನು ಬರ್ನಬನಿಗೆ ನೆಂಟನಾಗಿದ್ದನು. (ಕೊಲೊಸ್ಸೆ. ೪, ೧೦.) ಈ ಮಾರ್ಕನನ್ನು ಪೌಲನೂ ಬರ್ನಬನೂ ಹೆರೋದನ ಹಿಂಸೆಯ ತರುವಾಯ ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೂ ಮೊದಲನೇ ಪ್ರಸಂಗಪರ್ಯಟಣೆಗೂ ಕರಕೊಂಡು ಹೋದರು. (ಅಪೋ. ಕ್ರಿ ೧೨, ೨೫. ೧೩, ೫.) ಆದರೆ ಅವನು ಅವರನ್ನು ಪಂಫುಲ್ಯದ ಪೆರ್ಗೆಯಲ್ಲಿ ಬಿಟ್ಟು, ಯೆರೂಸಲೇಮಿಗೆ ತಿರಿಗಿ ಹೋದನು. (ಅಪೋ. ಕ್ರಿ. ೧೩, ೧೩.) ಮತ್ತೆ ಪೌಲನು ಮೊದಲನೇ ಸರ್ತಿ ರೋಮದಲ್ಲಿ ಬಂಧನದವನಾಗಿದ್ದಾಗ, ಮಾರ್ಕನು ತಿರಿಗಿ ಪೌಲನ ಬಳಿಯಲ್ಲಿದ್ದದ್ದು ಕಾಣುತ್ತದೆ. (ಕೊಲೊಸ್ಸೆ. ೪, ೧೦. ಫಿಲೆಮೊ. ೨೪.) ತರುವಾಯ ಅವನು ಬಬಿಲೋನಿನಲ್ಲಿ ಪೇತ್ರನ ಸಂಗಡಲಿದ್ದನು. (೧ ಪೇತ್ರ. ೫, ೧೩.) ಪೌಲನು ಯೆರಡನೇ ಸರ್ತಿ ಬಂಧನದಲ್ಲಿದ್ದಾಗ, ತಿಮೊಥೆಯನ ಪರಿಮುಖವಾಗಿ (೨ ತಿಮೊ. ೪, ೧೧.) ಮಾರ್ಕನನ್ನು ರೋಮಕ್ಕೆ ಕರಸಿದನು. ಆಗ್ಯೆ ಪೇತ್ರನ ಸಂಗಡ ರೋಮಕ್ಕೆ ಬಂದನೋಯೇನೋ? ಇಲ್ಲಿ ರೋಮದಲ್ಲಿ ಪೇತ್ರನು ಹೇಳಿದ ವೃತ್ತಾಂತಗಳಿಂದ ತನ್ನ ಸುವಾರ್ತೆಯನ್ನು ಬರದನಂತೆ.

ಲೂಕನು ಪರಜನ ಕ್ರೈಸ್ತನಾಗಿದ್ದನು. (ಸಮನ್ವಾಡು ಕೊಲೊ. ೪, ೧೪. ಮತ್ತು ೧೦. ೧೧.) ಉದ್ಯೋಗದಿಂದ ವೈದ್ಯನಾಗಿದ್ದನು. ಪೌಲನ ಯೆರಡನೇ ಪ್ರಸಂಗಪರ್ಯಟಣದಲ್ಲಿ ಅವನ ಸಂಗಡ ಲೂಕನು ತ್ರೋಯದಿಂದ ಫಿಲಿಪ್ಪಿಗೂ (ಅಪೊ. ಕ್ರಿ. ೧೬, ೯—೧೬), ಮೂರನೇ ಪ್ರಸಂಗಪರ್ಯಟಣದಲ್ಲಿ ಅವನ ಸಂಗಡ ಗ್ರೇಕದೇಶದಿಂದ ಯೆರೂಸಲೇಮಿಗೂ ಹೋದನು. (ಅಪೊ. ಕ್ರಿ. ೨೦, ೫—೨೧, ೧೭.) ಪೌಲನು ಯೆರಡು ವರ್ಷ ಪರ್ಯಂತರ ಕೈಸರೈಯದಲ್ಲಿ ಬಂಧನದವನಾಗಿದ್ದಾಗ, ಲೂಕನು ಸಹಾ ಅಲ್ಲಿಯೇ ವೊಂದು ವೇಳ್ಯ ವಾಸ ಮಾಡಿ, ಯೇಸುವಿನ ಚರಿತ್ರವೃತ್ತಾಂತಗಳನ್ನು ಕೂಡಿಸಿ, ತನ್ನ ಸುವಾರ್ತೆಯನ್ನು ಬರದಿಡುವದಕ್ಕೆ ಈ ವೇಳೆ ಸಮಯವನ್ನು ಪ್ರಯೋಗಿಸಿದನೆಂತ ತೋರುತ್ತದೆ. ಕೈಸರೈಯದಿಂದ ಅಪೊಸ್ತಲ ಪೌಲನ ಸಂಗಡ ರೋಮಕ್ಕೆ ಹೋಗಿ (ಅಪೊ. ಕ್ರಿ. ೨೭, ೧—೨೮, ೧೬.), ಆ ಬಂಧನದ ಕಾಲವೆಲ್ಲಾ ಅಲ್ಲಿಯೇ ಇದ್ದು (ಕೊಲೊ. ೪, ೧೪. ಫಿಲೆಮೊ. ೨೪.), ಅಪೊಸ್ತಲಚರಿತ್ರವನ್ನು ಬರದನು. ಯೆರಡನೇ ಬಂಧನಕಾಲದಲ್ಲಿ ಸಹಾ ಅವನು ಪೌಲನ ಸಂಗಡ ರೋಮದಲ್ಲಿ ಇದ್ದನು. (೨ ತಿಮೊ. ೪, ೧೧.)

ಆದರೆ ಈಗ ನಾವು ನಮ್ಮ ದೃಷ್ಟಿ ಯೆರೂಸಲೇಮು ಕಡೆಗೆ ತಿರುಗಿಸಿ, ೩೦ ನೇ ಕಥೆಯ ಪ್ರಕಾರ ಯೇಸುವು ಮುಂದಾಗಿ ಹೇಳಿದ ನ್ಯಾಯತೀರಿಕೆಯು ಯೆರೂಸಲೇಮುಪಟ್ಟಣದ ಮೇಲೆ ಹ್ಯಾಗೆ ಬಂತೆಂಬದನ್ನು ನೋಡುವಾ! ಆ ಜನಾಂಗದ ದುರಾವಸ್ಥೆಯು ವಿಪರೀತವಾಗುತ್ತಾ ಬಂತು. ಅದರ ಕಠಿಣತ್ವದಿಂದಲೂ, ಯೆಲ್ಲಾ ಕ್ರಮವನ್ನು ಅದು ಲಜ್ಜೆಯಿಲ್ಲದೆ ಮೀರುವದರಿಂದಲೂ, ತಿರಿಗಿ ತಿರಿಗಿ ರಕ್ತ ಪ್ರವಾಹವಾಯಿತು. ದೇಶದಲ್ಲಿ ಕದ್ದು ಸುಲುಕೊಳ್ಳುವವರು ಭಯಂಕರವಾಗಿ ಹುಟ್ಟಿದರು. ಯೆರೂಸಲೇಮಿನಲ್ಲಿ ಸಹಾ ಮೋಸದಿಂದ ಕೊಂದು ಹಾಕುವವರು ಯೆಲ್ಲಾ ಕಡೆಯಲ್ಲಿಯೂ ಇದ್ದರು. ಇವರು ಸಂಣ ಡೊಂಕಾಗಿರುವ ಕಠಾರಿಗಳನ್ನು ಮರೆಯಾಗಿಟ್ಟುಕೊಂಡು, ಮನಸ್ಸಿಗೆ ಬಂದ ಹಾಗೆ ಅನೇಕರನ್ನು ತಿವಿದು ಕೊಂದರು. ಇದಲ್ಲದೆ ಮೋಸಗಾರರೂ ಮರಳುಗೊಳಿಸುವವರೂ ಯೆದ್ದು, ತಾವೇ ಮೆಸ್ಸೀಯ ಯೆಂದು ಹೇಳಿ, ಅನೇಕರಿಗೆ ವಿ

ನಾಶಕ್ಕೆ ಕಾರಣವಾದರು. ರೋಮಿಯ ಅಧಿಪತಿಗಳು ಇಂಥಾ ಅನ್ಯಾಯಗಳನ್ನು ನಿಲ್ಲಿಸ ಶಕ್ತರಾಗಿರದೆ, ಕಠಿಣತ್ವದಿಂದಲೂ ಹಾಸ್ತ್ಯದಿಂದಲೂ ಜನರ ಕೋಪವನ್ನು ಹೊಟ್ಟಿಸಿದರು. ಮುಖ್ಯವಾಗಿ ಗೆಸ್ಸಿಯ ಫ್ಲೋರ ಯೆಂಬ ಅಧಿಪತಿಯು ಬಹಳ ದುಷ್ಟತನದಲ್ಲಿ (೬೫–೬೬ ವರ್ಷಗಳಲ್ಲಿ) ಅಧಿಕಾರ ನಡಿಸಿ, ಲೂಟಿ ಮಾಡುವವರಿಂದ ಕದ್ದುಕೊಂಡದರ ಪಾಲು ತಕ್ಕೊಂಡು, ಅವರಿಗೆ ಸಹಾಯ ಮಾಡಿದನು. ಹೀಗಿರಲಾಗಿ ಕಡೆಯಲ್ಲಿ ೬೬ ನೇ ವರ್ಷ ಯೆಹೂದ್ಯರು ರೋಮಿಯರಿಗೆ ವಿರೋಧವಾಗಿ ಕಟಕಾಯಿ ಮಾಡಿದರು. ಆಗ್ಯೆ ಕ್ರೈಸ್ತರು ಯೇಸುವಿನ ಮಾತನ್ನು (ಮತ್ತಾ. ೨೪, ೧೫–೧೬.) ನೆನಪು ಮಾಡಿಕೊಂಡು, ಪಟ್ಣವನ್ನು ಬಿಟ್ಟು, ಯೊರ್ದಾನಿನ ಮೂಡಲ ಕಡೆಯಲ್ಲಿರುವ ಪೆಲ್ಲಾ ಯೆಂಬಲ್ಲಿಗೆ ಓಡಿ ಹೋದರು. ಸುರ್ಯದ ರೋಮಿಯ ಸುಭೆದಾರನು ಸೈನ್ಯ ತಕ್ಕೊಂಡು, ದೇಶದೊಳಗೆ ನುಗ್ಗಿ, ಯೆಲ್ಲಾ ಕಡೆಯಲ್ಲಿಯೂ ಪಟ್ಣ ಊರುಗಳನ್ನು ಸುಟ್ಟು ಸೂರೆ ಮಾಡಿಸಿದನು. ಅವನು ಯೆರೂಸಲೇಮಿನ ದೇವಾಲಯ ಆಕ್ರಮಿಸಿಕೊಳ್ಳಲಿಕ್ಕೆ ಇರುವಾಗ್ಯೆ, ದಂಡು ತಿರುಗಿಸಲಿಕ್ಕೆ ಅಪ್ಪಣೆ ಕೊಟ್ಟನು. ಯಾಕೆ ಯೆಂಬದು ಇಂದಿನ ಪರ್ಯಂತರಕ್ಕೂ ತಿಳಿಯುವದಿಲ್ಲಾ. ಇದರಿಂದ ಧೈರ್ಯಗೊಂಡು, ಯೆಹೂದ್ಯರು ಅವನ ಮೇಲೆ ಬಿದ್ದು, ಅವನಿಗೆ ಬಹಳ ಅಪಜಯ ಮಾಡಿದರು. ಹೀಗಾಗಿ ಯೆಹೂದ್ಯರು ಯುದ್ಧ ಸಾಧನೆ ಮಾಡುವದಕ್ಕೂ, ರೋಮಿಯರು ಪ್ರತಿಫಲ ಕೊಡುವದಕ್ಕೂ ನಿಶ್ಚಯಿಸಿಕೊಂಡರು. ಆಗಲೆ ಘಟ್ಟಿಯಾಗಿದ್ದ ಯೆರೂಸಲೇಮಿನ ಕೋಟೆಗಳನ್ನು ಯೆಹೂದ್ಯರು ಹೆಚ್ಚು ಬಲ ಮಾಡಿದರು. ನೇರೋ ಮಹಾರಾಜನು ಯುದ್ಧದಲ್ಲಿ ಪ್ರವುಢನಾದ ಸೇನಾಧಿಪತಿ ವೆಸ್ಪಾಸ್ಯನನ್ನು ೬೦ ಸಾವಿರ ಮಂದಿಯ ಸಂಗಡ ಪಲೆಸ್ತೀನಕ್ಕೆ ಕಳುಹಿಸಿದನು. ಇವನು ಮೆಲ್ಲ ಮೆಲ್ಲಕ್ಕೆ ಯೆರೂಸಲೇಮಿಗೆ ಸಮೀಪವಾಗಿ, ಯೆಹೂದ್ಯರು ಯೆಲ್ಲಿಯೂ ವಶವಾಗಲೊಲ್ಲದಿರುವದರಿಂದ ದೇಶವನ್ನೆಲ್ಲಾ ಹಾಳು ಮಾಡಿ ಬಿಟ್ಟನು. ಇವನು ೬೮ ನೇ ವರ್ಷದಲ್ಲಿ ಮಹಾರಾಜನಾಗಲಾಗಿ, ರೋಮಕ್ಕೆ ತಿರಿಗಿ ಹೋಗ ಬೇಕಾಯಿತು. ಆಗ್ಯೆ ಅವನ ಮಗ ತೀತನು ದೇಶವನ್ನು ಸ್ವವಶ ಮಾಡಿಕೊಳ್ಳುವ ಕೆಲಸ ಮುಂದೆ

ನಡಿಸಿ, ಮಹಾ ಸೈನ್ಯ ತಕ್ಕೊಂಡು, ಯೆರೂಸಲೇಮಿನ ಹತ್ತರ ಬಂದನು. ಪಟ್ಟವು ಬಹು ಬಲವಾಗಿತ್ತು. ಹೊರಗೆ ಮೂರು ಘಟ್ಟಿಯಾದ ಊರಕೋಟೆಗಳನ್ನೂ, ಘಟ್ಟಿಯಾದ ಗೋಡೆಗಳನ್ನೂ ಮಾಡಿದ್ದರು. ಈ ಕೋಟೆಗಳು ಯಾವವೆಂದರೆ — ಉತ್ತರಪಶ್ಚಿಮದಲ್ಲಿ ಅಂತೋನಿಯ ಕೋಟೆ, ದಕ್ಷಿಣಪೂರ್ವದಲ್ಲಿ ದೇವಾಲಯಪರ್ವತದ ಕೋಟೆ, ದಕ್ಷಿಣಪಶ್ಚಿಮದಲ್ಲಿ ದಾವೀದನ ಕೋಟೆ. ತೀತನು ಪಟ್ಟಕ್ಕೆ ಮುತ್ತಿಗೆ ಹಾಕಿದಾಗಲೇ ಪಸ್ಕ ಹಬ್ಬ ಇರುತ್ತಿರಲಾಗಿ, ಸುಮಾರು ೧೫ ಲಕ್ಷಕ್ಕಿಂತಾ ಹೆಚ್ಚು ಮಂದಿ ಪಟ್ಟದಲ್ಲಿ ಕೂಡಿದ್ದರು. ತೀತನು ದಯೆಯಿಂದಲೂ ವಿಧಾನದಿಂದಲೂ ಅವರಿಗೆ ಕೈವಶವಾಗ ಬೇಕೆಂತಾ ತಿಳಿಸಿದನು. ಆದಕ್ಕೆ ಅವರು ಅವನನ್ನು ಧಿಕ್ಕರಿಸಿದರು. ಆಗ್ಯೆ ಕಠಿಣತ್ವದಿಂದಲೂ ಕ್ರೂರತ್ವದಿಂದಲೂ ಅವರನ್ನು ಸ್ವಲ್ಪ ಮೃದು ಮಾಡಲಿಕ್ಕೆ ನೋಡಿದನು. ಪಟ್ಟದಲ್ಲಿ ಸ್ವಲ್ಪ ಕಾಲದೊಳಗೆ ಅಹಾರ ಸಾಕಷ್ಟು ಇಲ್ಲದೆ, ಕಠಿಣವಾದ ಬರಗಾಲ ಉಂಟಾಯಿತು. ಯೆಷ್ಟು ಕ್ರಯ ಕೊಟ್ಟರೂ, ಆಹಾರ ಶಿಕ್ಕುವ ಹಾಗೆ ಇರಲಿಲ್ಲಾ. ಆಗ್ಯೆ ಜನರು, ಒಬ್ಬರು ಬಾಯಲ್ಲಿ ಕಚ್ಚಿದ್ದನ್ನು ಮತ್ತೊಬ್ಬರು ಯೆಳದು ತಿಂದರು. ಅನೇಕರು ಮನೆ ಬಾಗಲುಗಳನ್ನು ಒಡದು, ಯಾರಲ್ಲಿ ದವಸ ಉಂಟೆಂತಾ ನೆನಸಿದರೋ, ಅವರನ್ನು ಪೀಡಿಸಿದರು. ಒಂದು ತುಂಡು ರೊಟ್ಟಿಗೋಸ್ಕರ ಸ್ನೇಹಿತರು ಸ್ನೇಹಿತರನ್ನು ಕೊಂದರು. ಘನವುಳ್ಳ ಒಬ್ಬಳು ಯೆಹೂದ್ಯ ಸ್ತ್ರೀಯು ಮತಿಭ್ರಾಂತಳಾಗಿ, ತನ್ನ ಸ್ವಂತ ಮಗುವನ್ನು ತಿನ್ನಲಿಕ್ಕೆ ಕೊಂದಳು. ಅನೇಕರು ತಗಣಿಯನ್ನೂ ಹೇಲನ್ನೂ ತಿಂದರು, ಅಥವಾ ಡಾಲುಗಳ ಚರ್ಮ ಜಗಿದರು. ಅನೇಕ ಕುಟುಂಬಗಳು ಹಸಿವೆಯಿಂದ ಸತ್ತರು. ಅವರು ಬಹಳ ಬಚ್ಚಿ ಹೋಗಿ, ಕಡೆಯಲ್ಲಿ ಬೀಳ್ಳೋದು ಸಾಯ್ಯೋದು. ಮಿಕ್ಕಾದವರು ಗೋಡೆಗಳ ಹೊರಗೆ ಬದುಕಿಸಿಕೊಳ್ಳುವದಕ್ಕೆ ಹೋಗುವಾಗ್ಯೆ, ರೋಮಿಯರು ಬಹಳ ಜನರನ್ನು ಹಿಡಿದು, ಕ್ರೂಜೆಯಲ್ಲಿ ಕೊಂದರು. ಈ ಪ್ರಕಾರ ಪಟ್ಟದ ಸುತ್ತಲೂ ಕ್ರೂಜೆಗಳ ಕಾಡು ಯಂಬ ಹಾಗೆ ಆಯಿತು. ಕಡೆಯಲ್ಲಿ ಕ್ರೂಜೆಗಳಿಗೆ ಮರವೂ ಸ್ಥಳವೂ ಸಿಕ್ಕಲಿಲ್ಲಾ. ಯಾರನ್ನಾದರೂ ಕ್ರೂಜೆಗೆ ಹಾಕದೆ ಇದ್ದರೆ, ಅವರ ಕೈಗಳನ್ನು ಕಡಿದು, ಅಂಥವರನ್ನು ರೋಮಿಯರು ತಿರಿಗಿ ಪಟ್ಟ

ದಾಳಿಗೆ ಕಳುಹಿಸಿದರು. ಈ ಆಪತ್ತಿನ ಹೊತ್ತು ಪಟ್ಟಣದಲ್ಲಿಯೇ ನಿವಾಸಿಗಳು ಒಬ್ಬರ ಸಂಗಡಲೊಬ್ಬರು ಲಡಾಯಿ ಮಾಡಿದರು. ಅವರು ಮೂರು ಪಕ್ಷಗಳಾಗಿ ಕೊಂದು ಹಾಕಿದ ಹೆಣಗಳ ರಾಶಿಗಳ ಮೇಲೆ ನಿಂತು, ಲಡಾಯಿ ಮಾಡಿದರು. ಈ ಪ್ರಕಾರ ಮೂರು ತಿಂಗಳಲ್ಲಿ ಸುಮಾರು ೬ ಲಕ್ಷ ಹೆಣಗಳನ್ನು ಗೋಡೆಗಳ ಹೊರಗೆ ಬಿಸಾಡಿದರು. ಆದರೆ ಯೆಹೂದ್ಯರು ತಮ್ಮೊಳಗೆ ಈ ಪ್ರಕಾರ ಹೋರಾಡಿಕೊಂಡರೂ, ರೋಮಿಯರಿಗೆ ಅವರೆಲ್ಲರು ಒಟ್ಟಾಗಿ ಯದುರು ನಿಂತರು. ಯಾರಾದರೂ ಪಟ್ಟಣವನ್ನು ರೋಮಿಯರಿಗೆ ಬಿಟ್ಟು ಕೊಡುವ ಆಲೋಚನೆ ಹೇಳಿದರೆ, ಅವನನ್ನು ಕ್ಷಣದಲ್ಲಿ ಕೊಂದರು. ಒಂದು ಸರ್ತಿ ಅಸ್ತಮಾನಕಾಲದಲ್ಲಿ ರೋಮಿಯರು ಒಂದು ಕಡೆಯಲ್ಲಿ ಅಂತೋನ್ಯ ಕೋಟೆಯ ಕಡೆಗೆ ಗೋಡೆ ಕೆಡವಿ ಒಳಗೆ ನುಗ್ಗಿದರು. ಆದರೆ ಯೆಹೂದ್ಯರು ಬೆಳಗಾಗುವಷ್ಟರೊಳಗೆ ಮತ್ತೊಂದು ಗೋಡೆ ಕಟ್ಟಿದರು. ಕಡೆಯಲ್ಲಿ ರೋಮಿಯರಲ್ಲಿ ಒಬ್ಬನಾದರೂ ಜೀವ ಕೊಡಲಿಕ್ಕೆ ಸಿದ್ಧವಾಗಿರಲಿಲ್ಲ. ಆದರೆ ಸೇನಾನಾಯಕ ತೀತನು ಒಂದು ವಾದದಿಂದ ಅವರನ್ನು ಧೈರ್ಯ ಪಡಿಸಿದಾಗ, ೧೨ ಮಂದಿ ಯೇಣಿಗಳನ್ನಿಟ್ಟು, ಗೋಡೆಗಳನ್ನೇರಿ, ಸೈನ್ಯಕ್ಕೆ ಈ ಪ್ರಕಾರ ಮಾರ್ಗ ಮಾಡಲಿಕ್ಕೆ ನೋಡಿದರು. ಆದರೆ ಅವರೆಲ್ಲರು ಬಿದ್ದು ಹೋದರು. ಕಡೆಯಲ್ಲಿ ಬಡಗಲು ಕಡೆಯ ಪಟ್ಟಣದ ಭಾಗವನ್ನೂ ಅಂತೋನ್ಯ ಕೋಟೆಯನ್ನೂ ಕೈವಶ ಮಾಡಿಕೊಳ್ಳಲಿಕ್ಕೆ ಉಪಾಯವಾಯಿತು. ಆಗ್ಯೆ ಯೆಹೂದ್ಯರ ಒಂದು ಪಕ್ಷದವರು ದೇವಾಲಯವನ್ನೂ, ಮತ್ತೊಂದು ಪಕ್ಷದವರು ದಾವೀದನ ಕೋಟೆಯನ್ನೂ ಪಟ್ಟಿ ಮಾಡಿದರು. ತೀತನು ದೇವಾಲಯವನ್ನು ಉಳಿಸ ಬೇಕೆಂತಾ ಬಹಳವಾಗಿ ಅಪೇಕ್ಷಿಸಿ, ಅದಕ್ಕೇನಾದರೂ ಮಾಡ ಬಾರದೆಂತಾ ಖಂಡಿತವಾಗಿ ಅಪ್ಪಣೆ ಕೊಟ್ಟನು. ಆದರೆ ಒಬ್ಬ ರೋಮಿಯ ಶಿಪಾಯನು ಯೆಹೂದ್ಯರು ಬಲವಾಗಿ ಯೆದುರು ನಿಂತದರಿಂದ ಕೋಪಾಕ್ರಾಂತನಾಗಿ, ದೇವಾಲಯವನ್ನು ಹಾಳು ಮಾಡುವಾಗ್ಯೆ ಒಂದು ಉರಿಯುವ ಸೂಟೆಯನ್ನು ಒಳಗೆ ಬಿಸಾಡಿದನು. ಆಗಲೇ ಜ್ವಾಲೆ ಯೇರಿತು. ತೀತನು ಅದನ್ನು ನಂದಿಸ ಬೇಕೆಂತಾ ಬೇಡಿಕೊಂಡನು, ಅಪ್ಪಣೆ ಕೊಟ್ಟನು, ಗದರಿಸಿದನು; ಯೇನು ಮಾಡಿದರೂ, ಯೆಲ್ಲಾ ವ್ಯ

ರ್ಥವಾಯಿತು. ದೇವಾಲಯವು ನಾಶವಾಗಿ ಹೋಗುವದು ಅಸಾಧ್ಯವೆಂತ ನಂಬಿಕೊಂಡಿದ್ದ ಯೆಹೂದ್ಯರು, ಈ ಮಹಾ ಸುಂದರವಾದ ಆಲಯ ಸುಟ್ಟು ಬೂದಿಯಾಗುವದನ್ನು ಕಂಡು, ಬಹಳವಾಗಿ ಗೋಳಾಡಿದರು. ಅವರ ರಕ್ತವು ಪ್ರವಾಹದಂತೆ ಹಾವಟಿಗಳಿಂದ ಇಳಿದು ಬಂತು; ೬ ಸಾವಿರ ಮಂದಿ ತಮ್ಮ ರಕ್ಷಣೆಗೆ ವೊಂದು ಅದ್ಭುತವಾದೀತೆಂತ ನಂಬಿಕೊಂಡು, ಹೊಕ್ಕ ಮನೆಯ ಸಂಗಡ ಸುಟ್ಟು ಬೂದಿಯಾದರು. ಕೆಲವು ಸಪ್ತಕಗಳ ಮೇಲೆ ರೋಮಿಯರು ದಾವೀದನ ಕೋಟೆಯನ್ನು ಸಹ ತಕ್ಕೊಂಡಾಗ, ಯೆರೂಸಲೇಮುವೆಲ್ಲಾ (ಕ್ರಿಸ್ತ ಶಕ ೭೦ನೇ ಸೆಪ್ಟಂಬರ ೮ನೇ ದಿನ) ಸುಟ್ಟು, ಭಸ್ಮವಾಗಿ ನೆಲಸಮವಾಯಿತು. ಕರ್ತನ ವಾಕ್ಯದ ಪ್ರಕಾರ ಕಲ್ಲು ಕಲ್ಲಿನ ಮೇಲೆ ಉಳಿಯಲಿಲ್ಲ. ಸುಮಾರು ೧೧ ಲಕ್ಷ ಯೆಹೂದ್ಯರು ೪ ವರ್ಷದ ಭಯಂಕರ ಯುದ್ಧದಲ್ಲಿ ನಾಶವಾದರು. ಸುಮಾರು ೧೦ ಸಾವಿರ ಯೆಹೂದ್ಯರನ್ನು ರೋಮಿಯರು, ಅರ್ಧ ದಾಸರಾಗಿ ಮಾರಿದರು, ಅರ್ಧ ಜನರ ತಮಾಶೆಗೆ ಕಾಡು ಮೃಗಗಳ ಮುಂದೆ ಹಾಕಿ, ಅವುಗಳ ಸಂಗಡ ಜಗಳಾಡಿ ಸಾಯ ಮಾಡಿದರು. ತೀತನು ಈ ಯುದ್ಧ ತೀರಿಸಿ, ರೋಮದಲ್ಲಿ ಜಯೋತ್ಸವದಿಂದ ಪ್ರವೇಶ ಮಾಡಿದನು. ಆಗ್ಯೆ ದೇವಾಲಯದ ಸಮಸ್ತ ಉಪಕರ್ಣಗಳನ್ನು ತನ್ನ ಮುಂದೆ ಹೊರಿಸಿದನು. ಈ ಕಾರ್ಯದ ನೆನಪಿಗೆ ಮಾಡಿದ ಜಯತೋರಣವು ರೋಮದಲ್ಲಿ ಇಂದಿನ ಪರ್ಯಂತರಕ್ಕೂ ಉಂಟು; ಅದರಲ್ಲಿ ಜಯ ಮೆರವಣಿಗೆಯವರ ಮತ್ತು ದೇವಾಲಯದ ಉಪಕರ್ಣಗಳ ಚಿತ್ರಗಳು ಇರುತ್ತವೆ. ಈ ಪ್ರಕಾರ ಯೆಹೂದ್ಯರು ಯೇಸುವಿನ ಮರಣದಿವಸದಲ್ಲಿ ತಮ್ಮ ಮೇಲೆಯೂ ತಮ್ಮ ಮಕ್ಕಳ ಮೇಲೆಯೂ ಬರಲೆಂತ ಹೇಳಿದ ಶಾಪವು ಭಯಂಕರವಾಗಿ ಈಡೇರಿತು. (ಸಮನ್ವೀಡು ಪುಟ ೧೪೧.)

ಅಪೊಸ್ತಲರಲ್ಲಿ ಯೋಹಾನನೊಬ್ಬನೇ ಯೆರೂಸಲೇಮಿನ ವಿನಾಶಕಾಲದಲ್ಲಿ ಬದುಕಿದವನೆಂತ ತೋರುತ್ತದೆ. ಯುದ್ಧ ಆರಂಭವಾಗುವ ಸ್ವಲ್ಪ ಮುಂಚೆ ಅವನು ಎಫೆಸಕ್ಕೆ ಹೋಗಿ, ಅಲ್ಲಿ ದೀರ್ಘಾಯುಷ್ಯ ಹೊಂದಿದನು. ದೊಮಿತ್ಯನನೆಂಬ ಮಹಾರಾಜನ ಕಾಲದಲ್ಲಿ (೮೧ ಯಿಂದ ೯೬ನೇ ವರ್ಷವರೆಗೆ)

ಯೋಹಾನನು ಪತ್ಮಾಸ್ ಯೆಂಬ ಗ್ರೀಕಸಮುದ್ರದಲ್ಲಿರುವ ದ್ವೀಪಕ್ಕೆ ಗಡಿಪಾರಾದವನಾಗಿ, ಅಲ್ಲಿ ಪ್ರಕಟಣೆಯನ್ನು ಪಡಕೊಂಡು, ಕರ್ತನ ಅಪ್ಪಣೆಯ ಪ್ರಕಾರ ಅದನ್ನು ಬರದಿಟ್ಟನು. (ಪ್ರಕ. ೧, ೧೯.) ತರುವಾಯ ತಿರಿಗಿ ಎಫೆಸಕ್ಕೆ ಬರುವದಕ್ಕೆ ಉಪಾಯವಾಯಿತು. ಅಲ್ಲಿ ಮತ್ತೆ ಮಹಾ ವೃದ್ಧಾಪ್ಯದಲ್ಲಿ ತನ್ನ ಸುವಾರ್ತೆಯ ಪುಸ್ತಕವನ್ನೂ ಮೂರು ಪತ್ರಿಕೆಗಳನ್ನೂ ಬರದನು. ೧ನೇ ಪತ್ರಿಕೆಯು ವೊಂದುವೇಳ್ಳು ಸರ್ವ ಆಸ್ಯದ ಸಭೆಗಳಿಗೆ, ೨ನೇದೂ ೩ನೇದೂ ಸಭೆಯ ಇಬ್ಬರು ಜನರಿಗೆ. ಅವಸಾನಕಾಲದ ಸಮಯದಲ್ಲಿ ಕ್ರೈಸ್ತರು ಕೂಡಿ ಬರುವಲ್ಲಿಗೆ ನಡದು ಹೋಗಲಿಕ್ಕೆ ಅವನಿಂದ ಆಗಲಿಲ್ಲ; ಆದ್ದರಿಂದ ಅನೇಕ ಸರ್ತಿ ತನ್ನನ್ನು ಹೊರಿಸಿಕೊಂಡು ಬಂದನು. ಮತ್ತು ಬಹಳ ಮಾತಾಡುವದಕ್ಕೆ ತ್ರಾಣವಿಲ್ಲದಿರುವದರಿಂದ, ತಿರಿಗಿ ತಿರಿಗಿ,—ಮಕ್ಕಳೇ, ಒಬ್ಬರನ್ನೊಬ್ಬರು ಪ್ರೀತಿ ಮಾಡಿರಿ! ಯೆಂಬ ಮಾತನ್ನು ಹೇಳುತ್ತಾ ಇದ್ದನು.—ಕ್ರಿಸ್ತಶಕದ ೧೦೦ನೇ ವರ್ಷ ಎಫೆಸದಲ್ಲಿ ಸಾಧಾರಣವಾಗಿ ತೀರಿ ಹೋದನು.

ಆಪೊಸ್ತಲನಾದ ಯೋಹಾನನು ಮೃತವಾದ ಸ್ವಲ್ಪ ವರ್ಷಗಳ ಮೇಲೆ ಹೊಸ ವೊಡಂಬಡಿಕೆಯ ಬರಹಗಳನ್ನೆಲ್ಲಾ ಕೂಡಿಸಿ, ವೊಂದೇ ಪುಸ್ತಕ ಮಾಡಿದರು. ಇವುಗಳಲ್ಲಿ ಯೋಹಾನನ ಬರಹಗಳ ಹೊರತು ಯೆಲ್ಲಾ ಯೆರೂಸಲೇಮಿನ ವಿನಾಶದ ಮುಂಚೆ ಸುಮಾರು ೫೦ನೇ ವರ್ಷದಿಂದ ೭೦ನೇ ವೊಳಗೆ ಬರಿಯಲ್ಪಟ್ಟವು. ಅವುಗಳು ಪಾರಂಪರ್ಯವಾಗಿ ನಮಗೆ ತಲಪಿದ ಕ್ರಮ ಹ್ಯಾಗಂದರೆ,—

೧. ಮತ್ತಾಯನ ಸುವಾರ್ತೆ.
೨. ಮಾರ್ಕನ ಸುವಾರ್ತೆ.
೩. ಲೂಕನ ಸುವಾರ್ತೆ.
೪. ಯೋಹಾನನ ಸುವಾರ್ತೆ.
೫. ಅಪೊಸ್ತಲರ ಕ್ರಿಯೆಗಳು.
೬. ರೋಮಿಯರಿಗೆ ಪೌಲನ ಪತ್ರಿಕೆ.
೭. ಕೊರಿಂಥ್ಯರಿಗೆ ಪೌಲನ ೧ನೇ ಪತ್ರಿಕೆ.

೮. ಕೊರಿಂಥ್ಯರಿಗೆ ಪೌಲನ ೨ನೇ ಪತ್ರಿಕೆ.
೯. ಗಲಾತ್ಯರಿಗೆ ಪೌಲನ ಪತ್ರಿಕೆ.
೧೦. ಎಫೆಸೆಯರಿಗೆ ಪೌಲನ ಪತ್ರಿಕೆ.
೧೧. ಫಿಲಿಪ್ಪಿಯರಿಗೆ ಪೌಲನ ಪತ್ರಿಕೆ.
೧೨. ಕೊಲೊಸ್ಸೆಯರಿಗೆ ಪೌಲನ ಪತ್ರಿಕೆ.
೧೩. ಥೆಸ್ಸಲೊನೀಕೆಯರಿಗೆ ಪೌಲನ ೧ನೇ ಪತ್ರಿಕೆ.
೧೪. ಥೆಸ್ಸಲೊನೀಕೆಯರಿಗೆ ಪೌಲನ ೨ನೇ ಪತ್ರಿಕೆ.
೧೫. ತಿಮೊಥೆಯನಿಗೆ ಪೌಲನ ೧ನೇ ಪತ್ರಿಕೆ.
೧೬. ತಿಮೊಥೆಯನಿಗೆ ಪೌಲನ ೨ನೇ ಪತ್ರಿಕೆ.
೧೭. ತೀತನಿಗೆ ಪೌಲನ ಪತ್ರಿಕೆ.
೧೮. ಫಿಲೆಮೋನನಿಗೆ ಪೌಲನ ಪತ್ರಿಕೆ.
೧೯. ಇಬ್ರಿಯರಿಗೆ ಪೌಲನ ಪತ್ರಿಕೆ.
೨೦. ಯಾಕೋಬನ ಪತ್ರಿಕೆ.
೨೧. ಪೇತ್ರನ ೧ನೇ ಪತ್ರಿಕೆ.
೨೨. ಪೇತ್ರನ ೨ನೇ ಪತ್ರಿಕೆ.
೨೩ ಯೋಹಾನನ ೧ನೇ ಪತ್ರಿಕೆ.
೨೪. ಯೋಹಾನನ ೨ನೇ ಪತ್ರಿಕೆ.
೨೫. ಯೋಹಾನನ ೩ನೇ ಪತ್ರಿಕೆ.
೨೬. ಯೂದನ ಪತ್ರಿಕೆ.
೨೭. ಯೋಹಾನನಿಂದ ಬರಸಿದ ಪ್ರಕಟಣೆ.

ಈ ಇಪ್ಪತ್ತೇಳು ಗ್ರಂಥಗಳಲ್ಲಿ ಮೊದಲನೇ ಐದು ಚರಿತ್ರಪುಸ್ತಕಗಳು. ಮತ್ತೆ ಬರುವ ೨೧ ಪತ್ರಿಕೆಗಳಲ್ಲಿ ಪೌಲನು ೧೪, ಯಾಕೋಬನು ೧, ಪೇತ್ರನು ೨, ಯೋಹಾನನು ೩, ಯೂದನು ೧, ಬರೆದರು. ಕಡೇದು ಪ್ರಕಟಣೆ ಯೆಂಬದು ಪ್ರವಾದನೆಯ ಪುಸ್ತಕವಾಗಿರುತ್ತದೆ. ಹಳೇ ಒಡಂಬಡಿಕೆಯ ಹಾಗೆಯೇ ಈ ಬರಹಗಳೆಲ್ಲಾ ಸಹಾ ದೈವಶ್ವಾಸಿತವಾಗಿ, ಬೋಧನೆ

ಗೂ ಖಂಡನೆಗೂ ತಿದ್ದುಪಾಟಿಗೂ ನೀತಿಯ ಉಪದೇಶಕ್ಕೂ, ದೇವರ ಮನುಷ್ಯನು ಯೆಲ್ಲಾ ಸತ್ಕ್ರಿಯೆಗೆ ಸಿದ್ಧನಾಗಿ ಆಯತ್ತನಾಗುವದಕ್ಕೆ ಪ್ರಯೋಜನವಾಗಿದೆ. ಆದ್ದರಿಂದ ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಿಂದ ರಕ್ಷಣೆಗಾಗಿ ಅವುಗಳಿಂದ ಬೋಧನೆಯನ್ನು ತೆಗದುಕೋ. (೨ ತಿಮೊ. ೩, ೧೫—೧೭.)

ದೇವವಾಕ್ಯದ ಕಾಲಪಠ.

ಹಳೆ ಒಡಂಬಡಿಕೆ.

ಕ್ರಿಸ್ತಜನ್ಮದ ಮುಂಚಿನ ವರ್ಷ.		ವರ್ಷಗಳ ಸಂಖ್ಯೆ.
೪೦೦೪—೨೩೪೮.	ಮನುಷ್ಯಸೃಷ್ಟಿಯಿಂದ ಜಲಪ್ರಳಯದ ವರೆಗೆ. ” ”	೧೬೫೬.
೨೩೪೮—೧೯೧೭.	ಜಲಪ್ರಳಯದಿಂದ ಅಬ್ರಹಾಮನು ಮೊದಲನೇ ಸರ್ತಿ ಹೊರಟ ವರೆಗೆ. ”	೪೩೧.
೧೯೧೭—೧೪೮೭.	ಅಬ್ರಹಾಮನು ಮೊದಲನೇ ಸರ್ತಿ ಹೊರಟಂದಿನಿಂದ ಇಸ್ರಾಯೇಲ್ಯರು ಐಗುಪ್ತ ಬಿಟ್ಟು ಪ್ರಯಾಣ ಮಾಡಿದ ವರೆಗೆ. ” ” ”	೪೩೦.
೧೪೮೭—೧೦೦೭.	ಐಗುಪ್ತ ಬಿಟ್ಟು ಹೊರಟಂದಿನಿಂದ ಸಲಮೋನನು ದೇವಾಲಯ ಕಟ್ಟಲಿಕ್ಕೆ ಆರಂಭಿಸುವ ವರೆಗೆ. ” ” ” ”	೪೮೦.
೧೦೦೭—೬೦೩.	ದೇವಾಲಯ ಕಟ್ಟಲಿಕ್ಕೆ ಆರಂಭಿಸಿದಂದಿನಿಂದ ಬಬಿಲೋನಿನ ಶೆರೆಯ ವರೆಗೆ.	೪೦೪.
೬೦೩—೫೩೩.	ಬಬಿಲೋನಿನ ಶೆರೆಯ ಕಾಲ. ” ” ”	೭೦.
೫೩೩—೧.	ಬಬಿಲೋನಿನ ಶೆರೆಯ ಅಂತ್ಯದಿಂದ ಕ್ರಿಸ್ತಜನ್ಮದ ವರೆಗೆ. ”	೫೩೩.

ಹೊಸ ಒಡಂಬಡಿಕೆ.

ಕ್ರಿಸ್ತಜನ್ಮದಿಂದ.		
೧—೩೪.	ಕ್ರಿಸ್ತಜನ್ಮದಿಂದ ಆತನ ದಿವಾರೋಹಣದ ವರೆಗೆ. ” ”	೩೪.
೩೪—೬೦.	ದಿವಾರೋಹಣದಿಂದ ಪೌಲನು ರೋಮದಲ್ಲಿ ಮೊದಲನೇ ಸರ್ತಿ ಬಂಧನದವನಾದ ವರೆಗೆ.	೨೬.
೬೦—೭೦.	ಪೌಲನ ಮೊದಲನೇ ರೋಮಿಯ ಬಂಧನದಿಂದ ಯೆರೂಸಲೇಮಿನ ವಿನಾಶದ ವರೆಗೆ.	೧೦.
೭೦—೯೬.	ಯೆರೂಸಲೇಮಿನ ವಿನಾಶದಿಂದ ಮಹಾರಾಜ ದೋಮಿತಿಯನ ಮರಣದ ವರೆಗೆ. (ಇವನ ಕಾಲದಲ್ಲಿ ಪ್ರಕಟಣೆ ಬರಿಯಲ್ಪಟ್ಟಿತು.) ” ”	೨೬.

ಹೊಸ ಒಡಂಬಡಿಕೆ ವಿವರವಾದ ಕಾಲಪಠ.

ಕ್ರಿಸ್ತಶಕ. ೧.	ಕ್ರಿಸ್ತನು ಮಹಾರಾಜ ಔಗುಸ್ತನ ಕಾಲದಲ್ಲಿ ಹುಟ್ಟಿದನು.
೧೪.	ಮಹಾರಾಜ ಔಗುಸ್ತನ ಮರಣ.
೧೪—೩೭.	ಮಹಾರಾಜ ತಿಬೇರಿಯನು.
೩೦.	ಕ್ರಿಸ್ತನ ಸ್ನಾನ. ಉದ್ಯೋಗಾರಂಭ.
೩೦—೩೪.	ಯೇಸು ದೇಶದಲ್ಲಿ ಸಂಚಾರ ಮಾಡಿ ಬೋಧಿಸುತ್ತಾ ಅದ್ಭುತಗಳನ್ನು ಮಾಡುತ್ತಾ ಇದ್ದಾನೆ.
೩೪.	ಕ್ರಿಸ್ತನ ಮರಣ, ಪುನರುತ್ಥಾನ, ದಿವಾರೋಹಣ. ಪಂಚಾಶತ್ತಿನ ಹಬ್ಬ.
೩೫.	ಸ್ತೆಫನನ ಸಾಕ್ಷಿಮರಣ. ಕ್ರೈಸ್ತಹಿಂಸೆ.

೩೬. ಪೌಲನ ಸಂವರ್ತನ.
೩೭—೪೧. ಮಹಾರಾಜ ಕಲಿಗುಲ.
೩೯. ಸಂವರ್ತನದ ತರುವಾಯ ಮೊದಲನೇ ಸರ್ತಿ ಪೌಲನು ಯೆರೂಸಲೇಮಕ್ಕೆ ಬಂದನು.
೪೧—೫೪. ಮಹಾರಾಜ ಕ್ಲೌದ್ಯ.
೪೩. ಬರ್ನಬನು ಪೌಲನನ್ನು ತರ್ಸದಿಂದ ಅಂತಿಯೋಕ್ಯಕ್ಕೆ ಕರಕೊಂಡು ಹೋಗುತ್ತಾನೆ.
೪೪. ಹೆರೋದನು ಮಾಡಿದ ಹಿಂಸೆ. ಪೌಲನು ಬರ್ನಬನ ಸಂಗಡ ಯೆರೂಸಲೇಮಿಗೆ ಬರುತ್ತಾನೆ.
೪೫—೪೭. ಪೌಲನ ಮೊದಲನೇ ಪ್ರಸಂಗಪರ್ಯಟಣೆ.
೫೦. ಪೌಲನು ಮೂರನೇ ಸರ್ತಿ ಯೆರೂಸಲೇಮಿಗೆ ಅಪೋಸ್ತಲಕೂಟಕ್ಕೆ ಬರುತ್ತಾನೆ.
೫೧—೫೪. ಪೌಲನ ಯೆರಡನೇ ಪ್ರಸಂಗಪರ್ಯಟಣೆ. ಕೊರಿಂಥದಲ್ಲಿ ನಿವಾಸ. (೧ನೇ ೨ನೇ ಥೆಸ್ಸ.)
೫೪. ಪೌಲನು ನಾಲ್ಕನೇ ಸರ್ತಿ ಯೆರೂಸಲೇಮಿಗೆ ಬರುತ್ತಾನೆ.
೫೪—೬೮. ಮಹಾರಾಜ ನೆರೋ.
೫೫—೫೭. ಪೌಲನ ಮೂರನೇ ಪ್ರಸಂಗಪರ್ಯಟಣೆ. ಎಫೆಸದಲ್ಲಿಯೂ ಕೊರಿಂಥದಲ್ಲಿಯೂ ನಿವಾಸ. (ಗಲಾ. ೧ ಕೊರಿ. ೨ ಕೊರಿ. ರೋಮಿ.)
೫೮. ಪೌಲನು ಕಡೇ ಸರ್ತಿ ಯೆರೂಸಲೇಮಿಗೆ ಬರುತ್ತಾನೆ.
೫೮—೬೦. ಪೌಲನು ಕೈಸರೈಯದಲ್ಲಿ ಬಂಧನದವನು. (ಲೂಕ ಮತ್ತು ಮತ್ತಾಯನ ಸುವಾರ್ತೆಗಳು.)
೬೧—೬೩. ಪೌಲನು ಮೊದಲನೇ ಸರ್ತಿ ರೋಮದಲ್ಲಿ ಬಂಧನದವನು. (ಕೊಲೊ. ಫಿಲೆಮೊ. ಎಫೆ. ಫಿಲಿ. ಅಪೊ. ಕ್ರಿ.)
೬೨. ಯಾಕೋಬನು ಯೆರೂಸಲೇಮಿನಲ್ಲಿ ಮೃತವಾದನು. (ಯಾಕೊ.)
೬೩—೬೫. ಪೌಲನ ಕಡೇ ಪರ್ಯಟಣೆ. (ಇಬ್ರಿ. ತೀತ. ೧ ತಿಮೊ.)
೬೪. ನೆರೋವಿನ ಕಾಲದಲ್ಲಿ ರೋಮದಲ್ಲಿ ಮಹಾ ಕ್ರೈಸ್ತಹಿಂಸೆ.
೬೫. ಪೇತ್ರನು ಬಬಿಲೋನಿನಲ್ಲಿ. (೧ ಪೇತ್ರ.)
೬೬. ಪೌಲನೂ ಪೇತ್ರನೂ ರೋಮದಲ್ಲಿ ಮೃತವಾದರು. (೨ ತಿಮೊ. ೨ ಪೇತ್ರ. ಮಾರ್ಕನ ಸುವಾರ್ತೆ. ಯೂದನ ಪತ್ರಿಕೆ.)
೬೬—೭೦. ಯೆಹೂದಿಯುದ್ಧ.
೬೮—೬೯. ಬೇರೆ ಬೇರೆ ಮಹಾರಾಜರು.
೬೯—೭೯. ಮಹಾರಾಜ ವೆಸ್ಪಾಸ್ಯಾನ.
೭೦. ಯೆರೂಸಲೇಮಿನ ವಿನಾಶ.
೭೯—೮೧. ಮಹಾರಾಜ ತೀತ.
೮೧—೯೬. ಮಹಾರಾಜ ದೊಮಿತ್ಯಾನ.
೯೪. ಯೋಹಾನನು ಪತ್ಮೊಸ್ ದ್ವೀಪದಲ್ಲಿ ಪ್ರಕಟಣೆ ಹೊಂದಿದನು. (ಪ್ರಕಟಣೆ.)
೯೬—೧೦೦. ಯೋಹಾನನ ಮರಣ. (ಯೋ. ೧ ಯೋ. ೨ ಯೋ. ೩ ಯೋ.)

ಹೊಸ ಒಡಂಬಡಿಕೆಯ ಅನುಕ್ರಮಣಿಕೆಯು.

ಹೊಸ ವೊಡಂಬಡಿಕೆಯ ಅನುಕ್ರಮಣಿಕೆಯು.

ಹೊಸ ಒಡಂಬಡಿಕೆಯ ಅನುಕ್ರಮಣಿಕೆಯು.

BIBLE STORIES.

ದೇವವಾಕ್ಯದ್ವಿಪಂಚಾಶತಿ.

2.

NEW TESTAMENT.

ನವನಿರ್ಧಾರ.

ಮಂಗಳೂರಿನ ಮಿಶ್ಶನ್ ಛಾಪಖಾನೆ.

4th Edition.] ೧೮೫೭. [*4000 Copies.*